

# ಆತ್ಮ ಲಿಂಗಾರ್ಥ


ಗ್ರಂಥಕರ್ತ : **ತ್ರಿಮತ ಏಕೈಕ ಗುರುವು**


**ಆಧ್ಯಾತ್ಮಿಕ ಸಾಮ್ರಾಜ್ಯ ಚಕ್ರವರ್ತಿ, ಶತಾಧಿಕ ಗ್ರಂಥಕರ್ತ**

**ಇಂದೂ ಜ್ಞಾನ ಧರ್ಮಪ್ರದಾತ, ಸಂಚಲನಾತ್ಮಕ ರಚಯಿತ, ತ್ರೈತ ಸಿದ್ಧಾಂತ ಆದಿಕರ್ತ**

**ಶ್ರೀಶ್ರೀಶ್ರೀ ಆಚಾರ್ಯ ಪ್ರಬೋಧಾನಂದ ಯೋಗೀಶ್ವರರು**

ತೆಲುಗುನಿಂದ ಕನ್ನಡಕ್ಕೆ ಅನುವಾದ

**ಇಂದೂಶ್ರೀ ಕವಿತ, ಇಂದೂಶ್ರೀ ಶ್ರೀದೇವಿ**



ಗ್ರಂಥ ಮುದ್ರಣ

**ಇಂದೂ ಜ್ಞಾನ ವೇದಿಕೆ**

(Estd. in 1978 - Regd.No.: 168/2004)

ತ್ರೈತ ಶಕ : 39 ಪ್ರಥಮ ಮುದ್ರಣ : ನವೆಂಬರ್–2017

ಪ್ರತಿಗಳು : 1000 **ಬೆಲೆ.** /–

## ಇಂದೂ ಜ್ಞಾನವೇದಿಕೆ ಪ್ರಕಟಣೆಗಳು

01. ತ್ರೈತ ಸಿದ್ಧಾಂತ ಭಗವದ್ಗೀತೆ.
02. ಆಧ್ಯಾತ್ಮಿಕ ಪ್ರಶ್ನೆಗಳು–ಉತ್ತರಗಳು.
03. ಧರ್ಮ–ಅಧರ್ಮ.
04. ಇಂದೂತ್ವವನ್ನು ಕಾಪಾಡೋಣ.
05. ಯಜ್ಞಗಳು (ಸತ್ಯವಾ–ಅಸತ್ಯವಾ?)
06. ದೆವ್ವಗಳಹಾಗೂ–ಭೂತಗಳ ಯಥಾರ್ಥಸಂಘಟನೆಗಳು.
07. ಸತ್ಯಾನ್ವೇಷಿ ಕಥೆ.
08. ಮಂತ್ರ–ಮಹಿಮೆ (ಸತ್ಯವಾ–ಅಸತ್ಯವಾ)
09. ಶ್ರೀ ಕೃಷ್ಣನು ದೇವರಾ, ಭಗವಂತನಾ.
10. ಗೀತಾ ಪರಿಚಯ.
11. ಕಲಿಯುಗ (ಎಂದಿಗೂ ಯುಗಾಂತವಲ್ಲ).
12. ಜನನ ಮರಣ ಸಿದ್ಧಾಂತ.
13. ಮರಣ ರಹಸ್ಯ.
14. ಪುನರ್ಜನ್ಮ ರಹಸ್ಯ.
15. ತ್ರೈತಾಕಾರ ರಹಸ್ಯ (ತ್ರೈತಾಕಾರ ಬೆರ್ಮುಡಾ).
16. ಕಥೆಗಳ ಜ್ಞಾನ.
17. ಗಾದೆಗಳ ಜ್ಞಾನ.
18. ಒಗಟುಗಳಲ್ಲಿ ಜ್ಞಾನ.
19. ತತ್ತ್ವಗಳ ಜ್ಞಾನ.
20. ಬೈಗುಳಲ್ಲಿ ಜ್ಞಾನ–ಆಶೀರ್ವಾದಗಳಲ್ಲಿ ಅಜ್ಞಾನ.
21. ಗೀತಂ–ಗೀತ (ಹಾಡುಗಳ ಜ್ಞಾನ).
22. ತತ್ತ್ವಾರ್ಥ ಗೊಂಬೆಗಳ ಜ್ಞಾನ.
23. ದೇವಾಲಯ ರಹಸ್ಯಗಳು.
24. ಇಂದೂ ಸಂಪ್ರದಾಯಗಳು.
25. ನಮ್ಮ ಹಬ್ಬಗಳು. (ಹೇಗೆ ಮಾಡಬೇಕೋ ತಿಳಿದಿದೆಯಾ?)
26. ಜ್ಯೋತಿಷ್ಯಶಾಸ್ತ್ರ (ಶಾಸ್ತ್ರವಾ–ಅಶಾಸ್ತ್ರವಾ?)
27. ತಾಯಿ ತಂದೆ.
28. ಗುರುಪ್ರಾರ್ಥನಾ ಮಂಜರಿ.
29. ತ್ರೈತಾರಾಧನೆ.
30. ಸಮಾಧಿ.
31. ಪ್ರಬೋಧ.
32. ಸುಬೋಧ.
33. ಪ್ರಸಿದ್ಧಿ ಬೋಧನೆ.
34. ಸುಪ್ರಸಿದ್ಧಿಬೋಧನೆ.
35. ಶಿಲುಬೆ ದೇವರಾ?
36. ಮತಾತೀತ ದೇವರ ಮಾರ್ಗ.
37. ದೇವರ ಗುರುತು–963.
38. ಮತ–ಪಥ.
39. ಪ್ರಬೋಧಾನಂದ ನಾಟಕಗಳು.
40. ಇಂದೂ ಕ್ರೈಸ್ತವನಾ?
41. ನಿಗೂಢ ತತ್ತ್ವಾರ್ಥ ಬೋಧಿನಿ.
42. ಆತ್ಮ ಲಿಂಗಾರ್ಥ.
43. ನಾಸ್ತಿಕರು–ಆಸ್ತಿಕರು.
44. ಹೇತುವಾದ–ಪ್ರತಿವಾದ.
45. ಗುತ್ತಾ.
46. ಪ್ರಬೋಧ ತರಂಗಗಳು.
47. ತ್ರೈತ ಸಿದ್ಧಾಂತ.
48. ರೂಪ ಬದಲಾದ ಗೀತೆ.
49. ಉಪನಿಷತ್‌ಗಳಲ್ಲಿ ಲೋಪಗಳು.
50. ಪ್ರಥಮ ದೈವಗ್ರಂಥ ಭಗವದ್ಗೀತೆ.
51. ದ್ರಾವಿಡ ಬ್ರಾಹ್ಮಣ.
52. ತೀರ್ಪು.
53. ಕರ್ಮಪತ್ರ.
54. ಪ್ರವಕ್ತರು ಯಾರು?
55. ಧರ್ಮಶಾಸ್ತ್ರ ಯಾವುದು?
56. ಮತಾಂತರ ದೈವದ್ರೋಹ.
57. ತ್ರೈತಶಕ ಪಂಚಾಂಗ.
58. ತ್ರೈತ ಸಿದ್ಧಾಂತ ಆಧ್ಯಾತ್ಮಿಕ ಘಂಟು.
59. ಜೇಹಾದ್ ಎಂದರೇ ಯುದ್ಧವಾ?
60. ಮೂರು ಗ್ರಂಥಗಳು, ಇಬ್ಬರು ಗುರುಗಳು.
61. ದೇವರ ಜ್ಞಾನ ಕಬ್ಜಾ ಆಗಿದೆ.
62. ಅಜ್ಞಾನದಲ್ಲಿ ಉಗ್ರವಾದ ಬೀಜಗಳು.

## ಇಂದೂ ಜ್ಞಾನವೇದಿಕೆ ಪ್ರಕಟಣೆಗಳು

63. ವಾರ್ತಕನು-ವರ್ತಕನು.
64. ದೇವರ ಚಿಹ್ನೆ.
65. ನನ್ನದು ಲೋಚನೆ-ನಿನ್ನದು ಆಲೋಚನೆ
66. ಯಾವುದು ನಿಜವಾದ ಜ್ಞಾನ?
67. ಪ್ರತಿಮೆ X ವಿಗ್ರಹ - ದೈವ X ದೆವ್ವ.
68. ಮರಣದ ನಂತರ ಜೀವನ.
69. ಯಾವ ಮತದಲ್ಲಿ ಎಷ್ಟು ಮತ ದ್ವೇಷ.
70. ಸ್ವರ್ಗ ಇಂದ್ರಲೋಕವಾ! ನರಕ ಯಮರಾಜ್ಯವಾ!!
71. ದ್ವಿತೀಯ ದೈವಗ್ರಂಥದಲ್ಲಿ ರತ್ನ ವಾಕ್ಯಗಳು
72. ಅಂತಿಮ ದೈವಗ್ರಂಥದಲ್ಲಿ ಜ್ಞಾನವಾಕ್ಯಗಳು.
73. ಅಂತಿಮ ದೈವ ಗ್ರಂಥದಲ್ಲಿ ವಜ್ರವಾಕ್ಯಗಳು
74. ಹಿಂದೂ ಮತದಲ್ಲಿ ಸಿದ್ಧಾಂತಕರ್ತರು.
75. ಒಂದು ಮಾತು ಮೂರು ಗ್ರಂಥಗಳು.
76. ಲು ಎಂದರೇ ಏನು? (ತೆಲುಗು)
77. ಆದಿತ್ಯ.
78. ಗಿಡ ಮೊದಲಾ! ಬೀಜ ಮೊದಲಾ?
79. ಒಬ್ಬನೇ ಇಬ್ಬರು.
80. ಸಾಯಿಬಾಬಾ ದೇವರಾ! ಅಲ್ಲವಾ!
81. ಯೇಸು ಮರಣಿಸಿದ್ದಾನಾ? ಹತವಾಗಿದ್ದಾನಾ?
82. ದೇವರ ಆಗಮನಕ್ಕೆ ಇದು ಸಮಯವಲ್ಲವೇ!
83. ವಿಶ್ವ ವಿದ್ಯಾಲಯ
84. ಕೃಷ್ಣ ಮೂಸ (ಶ್ರೀ ಕೃಷ್ಣ ಮರಣದ ನಂತರ ಜೀವನ)
85. ಒರೆಗಲ್ಲು (ಗೀಟುರಾಯಿ)
86. ಮೂರು ದೈವ ಗ್ರಂಥಗಳು-ಮೂರು ಪ್ರಥಮ ವಾಕ್ಯಗಳು
87. ಹೇತುವಾದ ಪ್ರಶ್ನೆಗಳು-ಸತ್ಯವಾದ ಉತ್ತರಗಳು
88. ದೈವಗ್ರಂಥಗಳಲ್ಲಿ ಸತ್ಯಾಸತ್ಯ ವಿಚಕ್ಷಣೆ
89. ನಿನಗೆ ನನ್ನ ಲೇಖ
90. ಹಿಂದೂ ಮತದಲ್ಲಿಯೇ ಕುಲವಿವಕ್ಷ
91. ದೇವರ ಮುದ್ರೆ
92. ಬ್ರಹ್ಮ-ರಾವಣಬ್ರಹ್ಮ-ಭಗವಾನ್ ರಾವಣಬ್ರಹ್ಮ
93. ಧರ್ಮಚಕ್ರ
94. ಪ್ರಾಥಮಿಕ ಜ್ಞಾನ
95. ರಾಜಕೀಯ ರಾಜಕೀಯ
96. ಉಗ್ರವಾದ ಸತ್ಯಕ್ಕೋಸ್ಕರವೇ
97. ಒಬ್ಬ ವ್ಯಕ್ತಿಯಲ್ಲಿ ಎರಡು ಕೋನಗಳು
98. ಮಾನವತ್ವ
99. ದ್ಯಾನ - ಪ್ರಾರ್ಥನೆ - ನಮಾಜ್



## 04 ಯೋಗೀಶ್ವರರ ಸಂಚಲನಾತ್ಮಕ ತ್ರಿಮತ ಆಧ್ಯಾತ್ಮಿಕ ತೆಲುಗು ಪ್ರಸಂಗಗಳು

**DVD's**

01. ಸಂತಕಮು.
02. ಸಾಂಪ್ರದಾಯಮು.
03. ತ್ರೈತಶಕಮು.
04. ಕೋಡಿಮುಂಜು–ಪಾದರಸಮು.
05. ಯುಗಮು–ಯೋಗಮು.
06. ನೈಜಂ–ಸಹಜಂ.
07. ಆತ್ಮಕು ವೆಂಟ್ರುಕ ಗುರ್ತು.
08. ಪೈತ್ಯಂ–ಸೈತ್ಯಂ.
09. ಶೈವಮು–ವೈಷ್ಣವಮು.
10. ಇಂದೂಮಹಾಸಮುದ್ರಂ.
11. ಸೃಷ್ಠಿ–ಸೃಷ್ಠಿಕರ್ತ.
12. ಕಾಯ–ಪಂಡು–ಕಾಯ.
13. ಜ್ಞಾನಮು–ವಿಜ್ಞಾನಮು.
14. ವಾರ–ಮಾಸ–ವತ್ಸರ.
15. ಸೇಕೂವಲಿ–ಕೂಲಿಸೇವಾ.
16. ಧರ್ಮಮು–ಅಧರ್ಮಮು.
17. ಏಕ್‌ನಿರಂಜನ್–ಅಲಕ್‌ನಿರಂಜನ್.
18. ಗುರುವುಲೇನಿವಿದ್ಯ–ಗ್ರುಡ್ಡಿವಿದ್ಯ.
19. ಬಟ್ಟತಲ.
20. ಭಗವಂತುಡು.
21. ದ್ರಾವಿಡುಲು – ಆರ್ಯುಲು.
22. ಪ್ರಭುವು – ಪ್ರಭುತ್ವಂ.
23. ಭೂತಂ – ಮಹಾಭೂತಂ.
24. ಪ್ರಭು – ಪ್ರಜ.
25. ಯಾದವ್.
26. ಪುಸ್ತಕಮು–ಗ್ರಂಥಮು.
27. ವೆಲುಗುಬಂಟು.
28. ಪ್ರಕೃತಿ–ವಿಕೃತಿ.
29. ಮಾಟ–ಮಂದು.
30. ಏಕತ–ಏಕಾಗ್ರತ.
31. ಹರಿಕಾಲು–ಹರಿಚೇಯಿ.
32. ಪುಟ್ಟಗೋಸಿ–ಮೊಲತ್ರಾಡು.
33. 1 2 3 ಗುರುಪೌರ್ಣಮಿ.
34. ಚಮತ್ಕಾರ–ಆತ್ಮ.
35. ಕ್ಷಮಿಂಚರಾನಿ ಪಾಪಮು.
36. ಮಾಯಕುಡು– ಅಮಾಯಕುಡು.
37. ಮರಣಮು–ಶರೀರಮು.
38. ದ್ವಿತೀಯುಡು–ಅದ್ವಿತೀಯುಡು.
39. ಎದಮೀದಮುದ್ರ–
ತಲ್ಲಿ ತಂಡ್ರಿ ಗುರ್ತು.
40. ಸೇವಾಶಾತಮು.
41. ಬಯಟಿ ಸಮಾಜಂ–
ಲೋಪಲಿ ಸಮಾಜಂ.
42. ಶ್ರೀಕೃಷ್ಣಾಷ್ಟಮಿ.
43. ಪ್ರಪಂಚ ಶ್ರದ್ಧ–
ಪರಮಾತ್ಮ ಶ್ರದ್ಧ.
44. ತಲ್ಲಿ ತಂಡ್ರಿ
45. ದೇವುನಿ ಜ್ಞಾನಮು–
ಮಾಯ ಮಹತ್ಯಮು.
46. ಸಮಾಧಿ.
47. ತಲ್ಲಿ ತಂಡ್ರಿ –
ಗುರುವು ದೈವಮು.
48. ಕಲಿಯುಗಮು.
49. ಮತಮು–ಪಥಮು.
50. ದಿವ್ಯಖುರಾನ್–ಹದೀಸು.
51. ತಲ್ಲಿ.
52. ಪುಟ್ಟುಟ – ಗಿಟ್ಟುಟ.
53. ಗೋರು – ಗುರು.
54. ಆತ್ಮ.
55. ಕರ್ಮ ಮರ್ಮಮು.
56. ತಾತ.
57. ಗುರುಪೌರ್ಣಮಿ.
58. ಯೋಗೀಶ್ವರುಲ
ಜನ್ಮದಿನ ಸಂದೇಶಮು.
59. ಶ್ರೀಕೃಷ್ಣಜನ್ಮ ಮಧುರ.
60. ಇಂದುವು – ಹಿಂದುವು.
61. ಸ್ತ್ರೀ–ಪು/ಲಿಂಗಮು.
62. ಆತ್ಮಪನಿ.
63. ತ್ರೈತ ಸಿದ್ಧಾಂತಮು.
64. ದೇಶಂ ಮೋಸಂ –
ದೇಹಂ ಮೋಹಂ.
65. ಜೀರ್ಣ+ಆಶಯಮು.

# ಯೋಗೀಶ್ವರರ ಸಂಚಲನಾತ್ಮಕ ತ್ರಿಮತ ಆಧ್ಯಾತ್ಮಿಕ ತೆಲುಗು ಪ್ರಸಂಗಗಳು 05

**DVD's**

66. ಮೇಘಂ ಒಕಭೂತಂ–
    ರೋಗಂ ಒಕಭೂತಂ.
67. ದೇವುನಿಕಿ ಮತಮುನ್ನದಾ?
68. ಸಹಜ ಮರಣಂ–ತಾತ್ಕಾಲಿಕ ಮರಣಂ
69. ಅಧರ್ಮ ಆರಾಧನಲು.
70. ಏದಿ ಧರ್ಮಮು.
71. ನಿದರ್ಶ – ನಿರೂಪ.
72. ಪುಟ್ಟಿನರೋಜು ಎವ್ವರಿಕೀ ರಾದು.
73. ನಟಿಂಚೇ ಆತ್ಮ.
74. ಮೂಡು ಪುಟ್ಟುಕಲು–
    ರೆಂಡು ಜಾಗಾಲು.
75. ಶ್ರೀ ಕೃಷ್ಣುಡು ಎವರು?
76. ಸಂಚಿತ ಕರ್ಮ.
77. ಗುರುವು ಎವರು?
78. ಕರ್ಮಲೇನಿ ಕೃಷ್ಣುಡು–
    ಕರ್ಮಉನ್ನ ಕೃಷ್ಣುಡು.
79. ಭಯಂ.
80. ಸುಖಮು–ಆನಂದಮು.
81. ದಶ–ದಿಶಲು.
82. ಆಡಿಂಚೇ ಆತ್ಮ.
83. ಇಚ್ಛಾಧೀನ ಕಾರ್ಯಮುಲು–
    ಅನಿಚ್ಛಾಧೀನ ಕಾರ್ಯಮುಲು.
84. ಟಕ್ಕುಟಮಾರಾ, ಇಂದ್ರಜಾಲ
    ಮಹೇಂದ್ರಜಾಲ,
    ಗಜಕರ್ಣ ಗೋಕರ್ಣ.
85. ಸ್ವಾರ್ಥ ರಾಜಕೀಯಂ
    (ಸ್ವ+ಅರ್ಥ ರಾಜಕೀಯಂ).
86. ಮೂಡು ನಿರ್ಮಾಣಾಲು–ಒಕ ಪರಿಶುಭ್ರತ.
87. ಏದಿ ಶಾಸ್ತ್ರಮು?
88. ತೆಲುಗುಲೋ ಮೂಡು–
    ಆರು–ತೊಮ್ಮಿದಿ
89. 6–3=6
90. ಗುರ್ತಿಂಪಬಡನಿವಾಡು ಗುರುವು.
91. ಜ್ಞಾನಮು ದಗ್ಗರ ಜಾಗ್ರತ್ತ!
92. ಚಂದ್ರಾಕಾರಮು (ಬಟ್ಟತಲ).
93. ಮತಮುಲಲೋ ಪವಿತ್ರ ಯುದ್ಧಮು.
94. ಮೂಡು ಗ್ರಂಥಮುಲು.
95. ಏಡು ಆಕಾಶಮುಲು.
96. ದೈವಗ್ರಂಥಮು.
97. ಜ್ಞಾನಮು ಕಬ್ಜಾ ಅಯ್ಯಿಂದಿ.
98. ಭಕ್ತಿ–ಭಯಮು.
99. ಜ್ಞಾನಶಕ್ತಿ.
100. ಕಾಲಜ್ಞಾನ ವಾಕ್ಯಮುಲು.
101. ಅರ್ಥಮು–ಅಪಾರ್ಥಮು.
102. ತೋಲೇವಾಡು.
103. ಗುರು ಚಿಹ್ನಂ.
104. ಭಕ್ತಿ–ಶ್ರದ್ಧಲು.
105. ದೇವುಡು ಇದ್ದರಾ! ಒಕ್ಕರಾ!!
106. ಪುರುಷೋತ್ತಮ.
107. ಮತದ್ವೇಷಮು.
108. ನೀ ವೆನುಕ ವಾಡು.
109. ಗ್ರಂಥಮು – ಬೋಧ.
110. ಆಟ – ದೋಬೂಚುಲಾಟ.
111. ಪ್ರಜಲು – ಮಾನವುಲು.
112. ಆಸ್ತಿ – ದೋಸ್ತಿ
113. ದಂತಮು–ಅಂತಮು.
114. ಮಾಯ ಮರ್ಮಮು–ಆತ್ಮ ಧರ್ಮಮು
115. ಶ್ರೀಕೃಷ್ಣುಡು
     ಚನಿಪೋಯಾಡಾ? ಚಂಪಬಡ್ಡಾಡಾ?
116. ಅಂತಿಮ ದೈವಗ್ರಂಥಮುಲೋ ಪ್ರಥಮವಾಕ್ಯಮುಲು
117. ಅದುರು–ಬೆದುರು
118. ಶವಮು – ಶಿವಮು
119. ಧರ್ಮಚಕ್ರಮು
120. ಗ್ರಾಹಿತ ಶಕ್ತಿ
121. ಭೌತಿಕಮು – ಅಭೌತಿಕಮು
122. ದೇವುನಿ ಆಜ್ಞ ಮರಣಂ
123. ಮತ ಸಾಮರಸ್ಯಂ
124. ಮೋಕ್ಷಮು – ಮೋಸಮು
125. ಅಕ್ಷರ ಜ್ಞಾನಮು
126. ಲಲಾಜಲಮು
127. ದೈವ ಧರ್ಮಗಳು–ಮತಸಾಂಪ್ರದಾಯಗಳು
128. ಆಹಾರಮು ನೀಕಾ! ನೀ ಆತ್ಮಕಾ!!
129. ಮಾತ್ರ–ಮಂದು
130. ಕಾಲಚಕ್ರಂ
131. ಆಧ್ಯಾತ್ಮಿಕ ಪ್ರಶ್ನಲು–ಜವಾಬುಲು.

# ಇಂದೂ ಜ್ಞಾನವೇದಿಕೆ ಪುಸ್ತಕಗಳು ದೊರೆಯುವ ವಿಳಾಸ

## ಪ್ರಬೋಧಾಶ್ರಮ (ಶ್ರೀ ಕೃಷ್ಣಮಂದಿರ)

ಚಿನ್ನಪೊಡಮಲ (ಗ್ರಾ), ತಾಡಿಪತ್ರಿ (ಮಂ), ಅನಂತಪುರಂ (ಜಿಲ್ಲೆ). A.P

Cell : **ಲಕ್ಷ್ಮಿನಾರಾಯಣಾಚಾರಿ**–09440556968. **ವೆಂಕಟೇಶ್**–08096816963.

**(ಇಂದೂ ಜ್ಞಾನ ವೇದಿಕೆ ಸದಸ್ಯರು)**

**ಎ. ರಾಘವೇಂದ್ರ ಶ್ರೇಷ್ಠಿ**
ಹೊಸಪೇಟೆ, ಬಳ್ಳಾರಿ (ಜಿಲ್ಲೆ). K. A
Cell : 9611133635, 7619545963, 09440645005

**ಜಿ. ರಾಧಾಕೃಷ್ಣಾ ರೆಡ್ಡಿ**
ಪ್ರಬೋಧಾ ನಿಲಯ. ರಿಂಗ್ ರೋಡ್,
ಮರಲೂರು, ತುಮಕೂರು (ಜಿ).
ಪಿನ್–572150, Cell : 9448177812

**ಶಿವರಾಜ**
(ಸಾ)(ಕಿ) ಕುಕನೂರು, ಚಿಕ್ಕಸೂಗುರು (ತಾ),
ರಾಯಚೂರು (ಜಿ), Cell:98443 69516

**R.S. ವೀರಾಚಾರಿ**
ಕತ್ತರಗುಪ್ಪೆ, ಬೆಂಗಳೂರು–560085
Cell : 9036892829

**G. ಮನೋಹರ್**
ಮಲ್ಲಸಂದ್ರ, ಟಿ. ದಾಸರಹಳ್ಳಿ
ಬೆಂಗಳೂರು–560057
Cell : 7411459912, 9448452963.

**B. ವಾತ್ಸಲ್ಯ**
ರೈಲ್ವೇ ಸ್ಟೇಷನ್ ಹತ್ತಿರ,
ಪಿ.ಬಿ.ರೋಡ್, ದಾವಣಗೆರೆ–577002
Cell : 9901534677, 8880666529

**ಯೋಗೇಶ್.B**
ವಡ್ಡೇಪಾಲ್ಯಂ (ಗ್ರಾ),
ಕುಂದುರ್ಪಿ(ಮಂ),ಅನಂತಪುರ(ಜಿಲ್ಲಾ)
ಸೆಲ್: 9620193341, 9739228639

**ಬಸವರಾಜ ಅಂಗಡಿ**
(ಸಾ) ಪೋತ್ನಾಳ, (ತಾ) ಮಾನವಿ,
ರಾಯಚೂರು (ಜಿ) Cell :**9632418716**

**ಸೂರ್ಯ ಪ್ರಕಾಶ**
ಟೈಪ್ 'ಸಿ' (ಸಾ) (ಪೊ) ಶಕ್ತಿನಗರ
(ತಾ), ರಾಯಚೂರು (ಜಿ)
Cell : 9611183107, 9164886981

**ಲೀಲಾವತಿ**
ಜನತಾನಗರ,ತೊಣಚಿಕೊಪ್ಪಲ್,ಮೈಸೂರ್
Cell : 9141109799, 9986369118

**T.V. ರಮಣ**
NGR ಲೇಔಟ್, ರೂಪೇನಾ
ಅಗ್ರಹಾರ, ಬೆಂಗಳೂರು–560068.
Cell : 08970772028, 07411459912, 07406039453

**M. ನಾರಾಯಣರೆಡ್ಡಿ**
(Bsc census department retired supervisor)
ರಾಮಗುಂಡನಲ್ಲಿ ಪೋಸ್ಟ್, ವೈಟ್
ಫೀಲ್ಡ್ ರೋಡ್, ಬೆಂಗಳೂರು–066
Cell : 9482516023

**ಪ್ರಕಾಶ್ ರೆಡ್ಡಿ**
ಸೆಲ್:9845656774,9482516023

**ಯೋಗೇಶ್**
ಸೂಲನಾಯಕನಹಳ್ಳಿ (ಗ್ರಾಮ),
ತುಮಕೂರು (ಜಿಲ್ಲೆ).
ಸೆಲ್:8762523963,9740744424

# ಯೋಗೀಶ್ವರರ ಸಂಚಲನಾತ್ಮಕ ರಚನೆಗಳ ಸಾರಾಂಶ

1. ತ್ರೈತ ಸಿದ್ಧಾಂತ ಗ್ರಂಥಗಳಲ್ಲಿ ಅಕ್ಷರ ಸಮುದಾಯವೇ, ಆತ್ಮ ಸಮಾಚಾರವಾಗಿದೆ. ತ್ರೈತ ಸಿದ್ಧಾಂತ ಗ್ರಂಥಗಳಲ್ಲಿ ಕ್ಷಯ ಅಕ್ಷಯ ಸಮಾಚಾರ, ಪರಮಾತ್ಮನ ಸಮಾಚಾರ ಇದೆ.
2. ತ್ರೈತ ಸಿದ್ಧಾಂತ ಸಂಬಂಧ ಗ್ರಂಥಗಳನ್ನು ಭೌತಿಕವಾಗಿ ಬರೆದಿರುವುದು ಯೋಗೀಶ್ವರರು. ತ್ರೈತಸಿದ್ಧಾಂತ ಅನುಬಂಧ ಗ್ರಂಥಗಳಲ್ಲಿ ಅಭೌತಿಕವಾಗಿ ಯೋಗಶಕ್ತಿ ಇದೆ.
3. ತ್ರೈತ ಸಿದ್ಧಾಂತ ಇಂದೂ (ಹಿಂದೂ) ಧರ್ಮಗಳಲ್ಲಿ ವಿಪ್ಲವಾತ್ಮಕವಾದುದು. ತ್ರೈತ ಸಿದ್ಧಾಂತ ಗ್ರಂಥದಲ್ಲಿನ ಜ್ಞಾನ ಸಂಚಲನಾತ್ಮಕವಾದುದು, ಓದಿ ನೋಡಿರಿ.
4. ತ್ರೈತ ಸಿದ್ಧಾಂತ ಲೋಕದಲ್ಲಿ ಎಲ್ಲದಕ್ಕಿಂತ ದೊಡ್ಡದು. ತ್ರೈತ ಸಿದ್ಧಾಂತ ಗ್ರಂಥಗಳು ಎಲ್ಲಾ ಗ್ರಂಥಗಳನ್ನು ಮೀರಿರುವವು. ಅದರ ರಚನಗಾರ ಯೋಗಿಗಳಿಗೆ ಈಶ್ವರನಾದ ಯೋಗೀಶ್ವರನು.
5. ತ್ರೈತ ಸಿದ್ಧಾಂತ ಗ್ರಂಥಗಳು ಕಾಣಿಸಿದರೆ ದುಷ್ಟಶಕ್ತಿಗಳು ಭಯದಿಂದ ನಡುಗುತ್ತವೆ. ತ್ರೈತ ಸಿದ್ಧಾಂತ ಗ್ರಂಥಗಳನ್ನು ಹತ್ತಿರ ಇಟ್ಟುಕೊಂಡರೆ ಯೋಗಶಕ್ತಿಗೆ ತಾಳಲಾರದೆ ಭಯಪಟ್ಟು ಹೋಗುತ್ತವೆ.
6. ತ್ರೈತ ಸಿದ್ಧಾಂತ ಜ್ಞಾನ ಭಗವದ್ಗೀತೆ ನಂತರ ಹೇಳಲಾದ ಅತ್ಯುತ್ತಮ ಜ್ಞಾನ. ತ್ರೈತ ಸಿದ್ಧಾಂತ ಗ್ರಂಥದಲ್ಲಿ ಕೃಷ್ಣನು ಮೊದಲು ಹೇಳದ ಜ್ಞಾನವನ್ನೂ ಸಹ ಯೋಗೀಶ್ವರರು ಹೇಳಿದ್ದಾರೆ.
7. ತ್ರೈತ ಸಿದ್ಧಾಂತ ಜ್ಞಾನ ಮಾನವ ಜೀವನಕ್ಕೆ ದೊಡ್ಡ ಪ್ರಕಾಶವು. ತ್ರೈತ ಸಿದ್ಧಾಂತದ ಬೆಳಕಿನೊಳಗೆ ಹೋದವನಿಗೆ ಅದು ದೈವಶಕ್ತಿ ಎಂದು ತಿಳಿಯುತ್ತದೆ.
8. ತ್ರೈತ ಸಿದ್ಧಾಂತ ಭಗವದ್ಗೀತೆಯನ್ನು ಬರೆದಿರುವುದು ಯೋಗೀಶ್ವರರು. ಆದ್ದರಿಂದ ತ್ರೈತ ಸಿದ್ಧಾಂತ ಎಂದರೆ ಏನೋ, ಅದು ಎಷ್ಟು ದೊಡ್ಡದೋ ತಿಳಿದಿದೆ.
9. ತ್ರೈತ ಸಿದ್ಧಾಂತವನ್ನು ಕುರಿತು ತಿಳಿದರೆ, ಯೋಗೀಶ್ವರರ ಗ್ರಂಥಗಳನ್ನು ಓದಿದರೆ, ಯಾವ ಮತಸ್ಥನಾದರೂ ಒಪ್ಪಿಕೊಳ್ಳುತ್ತಾನೆ, ಅದನ್ನು ಆಚರಿಸುತ್ತಾನೆ.
10. ತ್ರೈತ ಸಿದ್ಧಾಂತವನ್ನು ಪ್ರತ್ಯಕ್ಷವಾಗಿ ಭಗವಂತನು ಹೇಳಿರುವುದು. ಆದ್ದರಿಂದ ಎಲ್ಲಾ ಮತಗಳ ಸಾರಾಂಶವು ತ್ರೈತ ಸಿದ್ಧಾಂತ ಗ್ರಂಥಗಳಲ್ಲಿ ಇದೆ.
11. ತ್ರೈತ ಸಿದ್ಧಾಂತ ಗ್ರಂಥಗಳು ವ್ಯಕ್ತಿ ಬರೆದಿರುವವು ಅಲ್ಲ, ವ್ಯಕ್ತಿಯಲ್ಲಿನ ಶಕ್ತಿ ಬರೆದಿರುವವು. ಆದ್ದರಿಂದ ಎಲ್ಲ ರಹಸ್ಯಗಳೇ ಓದಿ ತಿಳಿದುಕೊಳ್ಳಿ.
12. ತ್ರೈತ ಸಿದ್ಧಾಂತ ಭಗವದ್ಗೀತೆ, ಬೈಬಲ್, ಖುರಾನ್ ಗ್ರಂಥಗಳಲ್ಲಿ ಇದೆ. ಆದರೂ ಹಿಂದೂಗಳಿಗಾಗಲಿ, ಕ್ರೈಸ್ತವರಿಗಾಗಲಿ, ಮುಸ್ಲೀಮ್‌ರಿಗಾಗಲಿ ಆ ವಿಷಯ ತಿಳಿದಿಲ್ಲ.

ತಪ್ಪದೆ ಓದಿರಿ! ಓದಿಸಿರಿ!!

ಪ್ರಥಮ ದೈವ ಗ್ರಂಥ

# ತ್ರೈತ ಸಿದ್ಧಾಂತ ಭಗವದ್ಗೀತೆ

**(578 ಶ್ಲೋಕಗಳ ವಚನ ಗ್ರಂಥ)**

ಇದು ಆಧ್ಯಾತ್ಮಿಕ ವಿದ್ಯೆಯಲ್ಲಿ ವಿಪ್ಲವಾತ್ಮಕ ತಿರುವು ತಿರುಗಿದ ಭಗವದ್ಗೀತೆ. 55 ಶ್ಲೋಕಗಳಿಗೆ ಪೂರ್ತಿ ಭಾವ ಬದಲಾವಣೆಯೊಂದಿಗೆ ತಯಾರಾಗಿದೆ. ಮೂರು ಆತ್ಮಗ್ಗಳನ್ನು ಕುರಿತು ಶಾಸ್ತ್ರಾಧಾರದಿಂದ ವಿವರಿಸಿ ಬೋಧಿಸಿದ ಮೊಟ್ಟ ಮೊದಲ ಭಗವದ್ಗೀತೆ. ಮೊದಲು ಎಷ್ಟೋ ಜನರು ಬರೆದ ಭಗವದ್ಗೀತೆಗಳಿಗೆ ನೂರಕ್ಕೆ 90ರಷ್ಟು ವಿಭಿನ್ನ ಭಾವಗಳಿಂದ ಕೂಡಿಕೊಂಡಿದೆ. ಎಷ್ಟೋ ಪ್ರತ್ಯೇಕ ಅರ್ಥಗಳೊಂದಿಗೆ ದೇವರು ಹೇಳಿದ ನಿಜ ಭಾವಗಳನ್ನು ಹೇತುಬದ್ಧವಾಗಿ ವಿವರಿಸಿರುವುದು ಮತ್ತು ಹೇತುವಾದಿಗಳು ಸಹ ಖಂಡಿಸಲಾರದ ಭಗವದ್ಗೀತೆ ಇದು ಒಂದೇ. ಗರ್ಭಸ್ಥ ಶಿಶುವಿಗೆ ಪ್ರಾಣ ಇಲ್ಲ ಎನ್ನುವುದು, ಹತ್ಯೆಯನ್ನು ವಿವರಿಸಿ ಆತ್ಮಹತ್ಯೆಯಾಗಿ ಹಾಗೆಯೇ ಆತ್ಮಹತ್ಯೆಯನ್ನು ಹತ್ಯೆಯಾಗಿ ಹೇಳುವುದು, ಇಂತಹವು ಬಹಳ ಜನರಿಗೆ ಸಹಿಸಿಕೊಳ್ಳಲಾರದಂತಹ ವಿಪ್ಲವಾತ್ಮಕ ಹಾಗೂ ಸಂಚಲನ ವಿಷಯಗಳೆಷ್ಟೋ ಈ ಗ್ರಂಥದಲ್ಲಿ ಇವೆ. ಶ್ರೀಕೃಷ್ಣನ ಯಥಾರ್ಥ ಭಾವವನ್ನು ತಿಳಿಸಿ, ವಾಸ್ತವ ಜ್ಞಾನ ಪಥದಲ್ಲಿ ನಡೆಸಿ, ಮೋಕ್ಷಗಮ್ಯವನ್ನು ಸೇರಿಸುವುದು ಈ ಗ್ರಂಥ ರಾಜ.

**ರಚಿತ : ತ್ರಿಮತ ಏಕೈಕ ಗುರುವು, ತ್ರೈತ ಸಿದ್ಧಾಂತ ಆದಿಕರ್ತ ಶ್ರೀಶ್ರೀಶ್ರೀ ಆಚಾರ್ಯ ಪ್ರಬೋಧಾನಂದ ಯೋಗೀಶ್ವರರು**

# ರಚನೆಕಾರರ ಮೊದಲ ಮಾತು

ಈ ಗ್ರಂಥದಲ್ಲಿನ ಪದ್ಯಗಳು ಅಚೇಲ ಸಾಂಪ್ರದಾಯಕ್ಕೆ ಸೇರಿವೆ. ಈ ಅಚೇಲ ಸಾಂಪ್ರದಾಯ ಎಲ್ಲಿಯದೆಂದು ಕೆಲವರಿಗೆ ಪ್ರಶ್ನೆಬರಬಹುದು. ನಾವು ಹೇಳುವ **"ಅಚೇಲ"** ಪೂರ್ವದಲ್ಲಿತ್ತು. ಆ ದಿನದ ಅಚೇಲವೇ ಈ ದಿನ **"ಅಚಲ"** ಎನ್ನುವ ಪದವಾಗಿ ಬದಲಾವಣೆಯಾಗಿದೆ. ಅಚೇಲವೆಂದರೇ ಅರ್ಥವಿದೆ, ಆದರೆ ಅಚಲ ಎಂದರೇ ಅರ್ಥವೇ ಇಲ್ಲ. ಈದಿನ ಅಚಲ ಸಾಂಪ್ರದಾಯಿಗಳು ಬಹಳಜನ ಇದ್ದಾರೆ. ನಮ್ಮದು ಅಚಲಪೀಠವೆಂದು ಪ್ರತ್ಯೇಕವಾಗಿ ಪೀಠವನ್ನು ಏರ್ಪ ಡಿಸಿಕೊಂಡಿದ್ದಾರೆ. ಒಂದುದಿನ ಅಚಲ ಪೀಠಗುರು ನಮ್ಮೊಂದಿಗೆ ಬೇಟಿಯಾದಾಗ ಆತನನ್ನು ಪರಿಚಯ ಮಾಡಿಕೊಳ್ಳುತ್ತಾ ನಾವು ಅಚಲ ಪೀಠಗುರುಗಳೆಂದು ಹೇಳಿದ್ದಾರೆ. ಆಗ ಅಚಲ ಎಂದರೇ ಏನೆಂದು ನಾವು ಕೇಳಿದ್ದೇವೆ. ಅಚಲ ಎಂದರೇ ಚಲನೆ ಇಲ್ಲದಿರುವುದೆಂದು ಆತನು ಉತ್ತರಕೊಟ್ಟಿದ್ದಾನೆ. ಹಾಗಾದರೆ ಅಚಲ ಅನ್ನಬೇಕು, ಆದರೆ ನೀವು ಅಚಲ ಎನ್ನುತ್ತಿದ್ದೀರ. ಅಚಲದಲ್ಲಿ "ನ" ಇಲ್ಲದಂತೆ ಹೋಗಿದೆಯೆಂದು ಗುರುತು ಮಾಡಿದ್ದೇವೆ. ಆ ಮಾತಿಗೆ ಆ ಗುರುಗಳು ಸ್ವಲ್ಪ ಕಳವಳಗೊಂಡಿದ್ದಾರೆ. ಸರಿಯಾದ ಉತ್ತರ ಆತನ ಬಳಿ ಇಲ್ಲದಂತೆ ಹೋಗಿದೆ. ಒಂದು ದೊಡ್ಡ ಆಧ್ಯಾತ್ಮಿಕ ಪೀಠವೊಂದರ ಹೆಸರೇ ಅರ್ಥವಿಲ್ಲದ್ದಾಗಿ ಇರುವುದು ನಮಗೆ ಬಹಳ ಆಶ್ಚರ್ಯವನ್ನುಂಟುಮಾಡಿದೆ. ಅಚಲವೆಂದರೇ ಏನು? ಅದರ ನಿಜಸ್ವರೂಪವೇನೆಂಬ ವಿಷಯವನ್ನು ಪ್ರಜೆಗಳಿಗೆ ತಿಳಿಸುವ ಉದ್ದೇಶದಿಂದ **"ಆತ್ಮಲಿಂಗಾರ್ಥ"** ಎನ್ನುವ ಈ ಗ್ರಂಥವನ್ನು ಬರೆಯುವುದು ನಡೆದಿದೆ. ಈ ಗ್ರಂಥದಲ್ಲಿನ ಪದ್ಯಗಳು ನಾವು ಬರೆದಿರುವವಲ್ಲ. ಆದರೆ ಪದ್ಯಗಳಿಗೆ ಭಾವನೆಗಳೆಲ್ಲ ನಾವು ಬರೆದಿರುವವೇ. ಪದ್ಯಗಳಲ್ಲಿ ಕೂಡ ಅಚಲ ಎನ್ನುವ ಪದವನ್ನೇ ಬಳಸಿರುವುದು ಆಶ್ಚರ್ಯ. ನಮ್ಮ ಭಾವನೆಗಳಲ್ಲಿ ಮಾತ್ರ ನಾವು ಅಚಲದ ಬದಲು ಅಚೇಲ ಎಂದು ಬರೆದಿದ್ದೇವೆ. ಅಚೇಲ ಎಂದರೆ ಬಯಲು ಎಂದು ಅರ್ಥ. ಪರಮಾತ್ಮನನ್ನು ಏನೂ ಇಲ್ಲದ ಬಯಲಾಗಿ ವರ್ಣಿಸುತ್ತಾ ಹೇಳುವುದೇ ಕೆಲವರ ಉದ್ದೇಶವಾಗಿರುವುದರಿಂದ ಪೂರ್ವದಲ್ಲಿ **"ಬಟ್ಟೆಬಯಲು"** ಎನ್ನುವ ಪದಕ್ಕೆ ಸರಿಹೋಗುವ ಅರ್ಥದಿಂದ ಅಚೇಲ ಎಂದಿದ್ದಾರೆ. ಅಚೇಲ ಎನ್ನುವ ಪದವೊಂದರ ಅರ್ಥ ಸಾರಾಂಶ ಏನೋ ಸವಿವರವಾಗಿ ಕೆಳಗೆ ನೋಡೋಣ.

ಕಲಿಯುಗದಲ್ಲಿ ತಯಾರಾದ ಅನೇಕ ದೇವಾಲಯಗಳಲ್ಲಿ ಶ್ರೀ ರಂಗಪಟ್ಟಣದಲ್ಲಿನ ಶ್ರೀರಂಗನ ಆಲಯದ ಸಮೀಪದಲ್ಲಿ ಚಿದಂಬರ ರಹಸ್ಯವೆನ್ನುವುದು ಇದೆಯಂತೆ. ಅಲ್ಲಿಗೆ ಹೋದವರು ಶ್ರೀರಂಗನ ದೇವಾಲಯ ದರ್ಶಿಸಿದ ನಂತರ ಚಿದಂಬರ ರಹಸ್ಯವನ್ನು ನೋಡುವುದು ಪರಿಪಾಟವಾಗಿದೆ. ಆದರೆ ಇದು ರಹಸ್ಯವೆಂದು ಅದನ್ನು ಯಾರಿಗೂ ಹೇಳಬಾರದೆಂದು ಅಲ್ಲಿನ ಹಿರಿಯರು ಹೇಳಿ, ಉಳಿದವರಿಗೆ ತೋರಿಸುವುದು ನಡೆಯುತ್ತಿದೆ. ರಹಸ್ಯವೆನ್ನುವುದು ಹೇಳದಿರುವುದು ತೋರಿಸದಿರುವುದು ಆದರೂ ಹೇಳಬಾರದೆಂದು ತೋರಿಸುವುದರಲ್ಲಿ ಏನು ರಹಸ್ಯ ಇದೆಯೋ. ಅಲ್ಲಿ ಯಾರಿಗೂ ತಿಳಿಯದ ಯಾವುದೊ ಒಂದು ವಿಷಯ ಇರಲೇಬೇಕು ಆದ್ದರಿಂದಲೇ ಅದನ್ನು ರಹಸ್ಯ ಎನ್ನುತ್ತಿದ್ದೇವೆ. ಚಿದಂಬರ ರಹಸ್ಯವನ್ನು ಹೇಳಿದರೂ ಅರ್ಥವಾಗದಿರುವುದು, ನೋಡಿದರೂ ಅರ್ಥವಾಗದ ವಿಷಯ, ಆದ್ದರಿಂದ ಅದನ್ನು ಚಿದಂಬರ ರಹಸ್ಯ ಎಂದಿದ್ದಾರೆ. ಬಹಳ ಜನರಿಗೆ **"ಚಿದಂಬರ"** ಎನ್ನುವ ಹೆಸರಿನ ವಿವರ ತಿಳಿದಿಲ್ಲ. **ಚಿದ** ಎಂದರೇ **ವಸ್ತ್ರ, ಅಂಬರ** ಎಂದರೆ **ಆಕಾಶ**. ಈ ವಿಧವಾಗಿ ಚಿದಂಬರ ಎನ್ನುವ ಪದದಲ್ಲಿ ವಸ್ತ್ರ ಆಕಾಶ ಮತ್ತು ಬಟ್ಟೆ ಬಯಲು ಎಂದು ಅರ್ಥವಿದೆ. ಚಿದಂಬರ ರಹಸ್ಯ ಬಟ್ಟೆ ಬಯಲು ಎನ್ನುವ ವಾಕ್ಯವು ಕೂಡ ಇದೆ. ಶ್ರೀರಂಗ ಪಟ್ಟಣದಲ್ಲಿನ ಚಿದಂಬರವೇನೊ ಸ್ವಲ್ಪ ತಿಳಿದುಕೊಳ್ಳೋಣ.

ಭಗವದ್ಗೀತೆ ಸಾಂಖ್ಯ ಯೋಗ ಎನ್ನುವ ಅಧ್ಯಾಯದಲ್ಲಿ 22ನೇ ಶ್ಲೋಕದಲ್ಲಿ ಭಗವಂತನು **"ವಾಸಾಂಸಿ"** ಎನ್ನುವ ಪದವನ್ನುಪಯೋಗಿಸಿ ಶ್ಲೋಕವನ್ನು ಹೇಳಿದ್ದಾನೆ. ***"ವಾಸಾಂಸಿ ಜೀರ್ಣಾನಿ ಯಥಾ ವಿಹಾಯ ನವಾನಿ ಗೃಹ್ಣಾತಿ ನರೋಪರಾಣಿ, ತಥಾಶರೀರಾಣಿ ವಿಹಾಯ ಜೀರ್ಣಾ ನನ್ಯಾನಿ ಸಂಯಾತಿ ನವಾನಿ ದೇಹಿ"*** ಇದರಲ್ಲಿ ಹಳೆ ವಸ್ತ್ರವನ್ನು ಬಿಟ್ಟು ಹೊಸ ವಸ್ತ್ರವನ್ನು ಧರಿಸಿದಂತೆ, ಹಳೆ ಶರೀರವನ್ನು ಬಿಟ್ಟು ಹೊಸ ಶರೀರವನ್ನು ಜೀವಿಯು ಧರಿಸುತ್ತಿದ್ದಾನೆಂದು ಹೇಳಿದ್ದಾನೆ. ಇಲ್ಲಿ ಶರೀರವನ್ನು ಬಟ್ಟೆಗೆ ಹೋಲಿಸಿ ಹೇಳಿದ್ದಾನೆ. ವಸ್ತ್ರ ಎಂದರೂ, ಬಟ್ಟೆ ಎಂದರೂ, ಚೇಲ ಎಂದರೂ ಒಂದೇ ಅರ್ಥ. ಹಾಗೆಯೇ ಅಂಬರ ಎಂದರೂ, ಆಕಾಶ ಎಂದರೂ, ಬಯಲು ಎಂದರೂ ಒಂದೇ ಅರ್ಥ. ಅಲ್ಲಿ ದೇವಾಲಯದಲ್ಲಿ ಇರುವ ಚಿದಂಬರ

ರಹಸ್ಯವೆನ್ನುವುದು ಏನೆಂದು ಪರಿಶೀಲಿಸಿ ನೋಡಿದರೂ ಅಲ್ಲಿ ಒಂದು ದ್ವಾರಕ್ಕೆ ಅಡ್ಡವಾಗಿ ವಸ್ತ್ರವನ್ನು ನೇತಾಕಿರುತ್ತಾರೆ. ದ್ವಾರದೊಳಗೆ ಏನಿದೆಯೋ ಕಾಣಿಸದಂತೆ ಆ ವಸ್ತ್ರ ಕಟ್ಟಲ್ಪಟ್ಟಿರುತ್ತದೆ. ಒಳಗೆ ಏನಿರುವುದು ತಿಳಿದಿಲ್ಲ, ಆದ್ದರಿಂದ ಅದೇ ರಹಸ್ಯ. ಒಳಗೆ ಏನಿದೆಯೋ ನೋಡಬೇಕೆನ್ನುವವರು ಅಲ್ಲಿರುವವರನ್ನು ಕೇಳಿ ಅನುಮತಿ ತೆಗೆದುಕೊಳ್ಳಬೇಕಾಗಿರುತ್ತದೆ. ನೋಡಬೇಕೆಂದು ಕೊಳ್ಳುವವರಿಗೆ ತೋರಿಸುವವರಿರುತ್ತಾರೆ. ಅವರು ನೋಡುವವರಿಗೆ ಇಲ್ಲಿ ನೋಡಿರುವುದು ರಹಸ್ಯ, ಆದ್ದರಿಂದ ಯಾರಿಗೂ ಹೇಳಬಾರದೆಂದು ಹೇಳಿ ತೋರಿಸುತ್ತಿರುತ್ತಾರೆ.

ಎಷ್ಟೋಜನ ಚಿದಂಬರ ರಹಸ್ಯವನ್ನು ನೋಡಿದರೂ ನೋಡದಮುನ್ನ ಇರುವ ಆತುರತೆ ನೋಡಿದ ನಂತರ ಇರುವುದಿಲ್ಲ. ಏಕೆಂದರೇ ನೋಡಬೇಕೆಂದು ಕೊಂಡವರು ನೋಡದಮುನ್ನ ರಹಸ್ಯವನ್ನು, ಅಂದರೇ ನೋಡುವಂತಹದ್ದನ್ನು ಕುರಿತು ಏನೋ ಊಹಿಸಿಕೊಂಡಿರುತ್ತಾರೆ. ಯಾರೇನು ಊಹಿಸಿಕೊಂಡರೂ ಬಟ್ಟೆ ತೊಲಗಿಸುತ್ತಲೇ ಯಾರಿಗೂ ಏನು ಕಾಣಿಸದಿರುವುದೇ ಆಶ್ಚರ್ಯ. ಅಲ್ಲಿ ಒಂದು ದ್ವಾರ ಅದಕ್ಕೆ ಅಡ್ಡವಾಗಿ ಒಂದು ಬಟ್ಟೆ ಇದೆಯೆಂದುಕೊಂಡಿದ್ದೇವೆ ಅಲ್ಲವೆ! ನೋಡಬೇಕಾದವರಿಗೆ ದ್ವಾರದ ಮುಂದೆ ನಿಲ್ಲಿಸಿ ಬಟ್ಟೆ ತೆಗೆದು ತೋರಿಸುತ್ತಾರೆ. ಬಟ್ಟೆ ತೆಗೆದು ನೋಡುತ್ತಲೇ ಅಲ್ಲಿ ಯಾವ ವಸ್ತುವಾಗಲಿ, ಆಕಾರವಾಗಲಿ ಇಲ್ಲದಿರುವುದು ಆಶ್ಚರ್ಯವೇ ಆಗುತ್ತದೆ. ಮೇಲ್ಛಾವಣೆ ಇಲ್ಲದ ಆಕಾಶ ಮಾತ್ರ ಕಾಣಿಸುತ್ತದೆ. ಬಟ್ಟೆ ತೆಗೆದು ಅಲ್ಲಿ ಏನು ಇಲ್ಲವೇ ಎನ್ನುವಂತೆ ತೋರಿಸುವವರನ್ನು ಕೇಳಿದಾಗ, ಅವರು ಆಕಾಶದಕಡೆ ತೋರಿಸಿ ಇಲ್ಲಿ ನೀವು ನೋಡಬೇಕಾಗಿರುವುದು, ಕಾಣಿಸುವುದು ಇದೇಯೆಂದು ಹೇಳುತ್ತಾರೆ. ಏನು ಇಲ್ಲದಿರುವುದೇ ಚಿದಂಬರ ರಹಸ್ಯ. ಇಲ್ಲಿ ಏನು ಇಲ್ಲವೆಂದು ಹೇಳಿದರೆ ಯಾರು ಬರುವುದಿಲ್ಲ, ಆದ್ದರಿಂದ ನೀವು ಇದನ್ನು ರಹಸ್ಯವಾಗಿಟ್ಟು ಯಾರಿಗೂ ಹೇಳಬಾರದೆಂದು ತಿಳಿಸುತ್ತಾರೆ. ಹೇಳಿದರೆ ಏನಾಗುತ್ತದೋ, ಏನು ಕೆಡಕು ನಡೆಯುತ್ತದೋ ಎಂದು ನೋಡಿಬಂದವರು ಕೂಡ ಹೇಳುವುದಿಲ್ಲ. ಅಲ್ಲಿ ಆಚಾರವಿದ್ದರೂ ಅರ್ಥ ಇಲ್ಲದಂತೆ ಹೋಗಿದೆ. ಆಧ್ಯಾತ್ಮಿಕ ಪರವಾದ ಪರಮಾರ್ಥಿಕವಾದ ಅರ್ಥ ಹೇಳಿಕೊಳ್ಳದೆ, ಇಲ್ಲಿ ನೋಡಿರುವುದು ಯಾರಿಗೂ ಹೇಳಬೇಡವೆನ್ನುವುದು ತಪ್ಪು. ಯಾರು ಯಾರಿಗೆ

ಹೇಳಿದರೂ ಚಿದಂಬರ ಎನ್ನುವುದು ರಹಸ್ಯವೆನ್ನುವ ಅರ್ಥದಿಂದಲೇ ಇರುತ್ತದೆ. ಇಂತಹ ರಹಸ್ಯವಿದೆಯೆಂದು ತೋರಿಸುವ ವಿಧಾನವೇ ಚಿದ ಅಂಬರ.

ಜೀವಿಯು ಶರೀರದಲ್ಲಿರುವವರೆಗು ಮೋಕ್ಷವನ್ನು ಹೊಂದಲಾರನು. ಕರ್ಮ ಇಲ್ಲದಂತೆ ಮಾಡಿಕೊಂಡು ಶರೀರವನ್ನು ಹೊಂದದಂತೆ ಹೋದಾಗ ಪರಮಾತ್ಮನಲ್ಲಿ ಐಕ್ಯವಾಗಿಹೋಗುತ್ತಾನೆ. ಇತ್ತ ಶರೀರ ಅತ್ತ ಮೋಕ್ಷ ಎರಡೇ ಗಮ್ಯಗಳು ಜೀವಿಗೆ ಇವೆಯೆನ್ನುವುದು ಸತ್ಯ. ಶರೀರ ಇರುವವರೆಗು ದೇವರು ತಿಳಿಯುವುದಿಲ್ಲ. ಸಾವು ಹುಟ್ಟುಗಳಿರುವ ಶರೀರ ದೇವರಿಗು ನಿನಗು ಮಧ್ಯದಲ್ಲಿ ಅಡ್ಡವಾಗಿದೆ. ಜನ್ಮದಿಂದ ಪ್ರಾರಂಭವಾಗಿ ಸಾವಿನಲ್ಲಿ ಅಂತ್ಯವಾಗಿ ಪುನಃ ತಕ್ಷಣವೇ ಹುಟ್ಟಿನಿಂದ ಶರೀರ ಜೀವಿಗೆ ತಗಲಿಕೊಳ್ಳುತ್ತಿದೆ. ಶರೀರ ಬಟ್ಟೆಯಂತಹದ್ದೆಂದು ಹಳೆಬಟ್ಟೆ ಹೋಗುತ್ತಲೇ ಹೊಸ ಬಟ್ಟೆ ತಗಲಿಕೊಳ್ಳುತ್ತಿದೆಯೆಂದು ಗೀತೆಯಲ್ಲಿ ದೇವರು ಹೇಳಿದ್ದಾನೆ. ಆದ್ದರಿಂದ ಆ ಬಟ್ಟೆ ಇಲ್ಲದಿದ್ದರೆ ನೀನು ದೇವರಹತ್ತಿರಕ್ಕೆ ಸೇರಬಹುದೆಂದು, ಶರೀರವನ್ನು ಬಟ್ಟೆಯಾಗಿ ಪರಮಾತ್ಮನನ್ನು ಬಯಲಾಗಿ ತೋರಿಸಿದ್ದಾರೆ. ಶರೀರ ಬಟ್ಟೆ ಎಂದು, ಪರಮಾತ್ಮನನ್ನು ಬಯಲು ಎಂದು, ಶರೀರವನ್ನು, ಪರಮಾತ್ಮನನ್ನು ಬಟ್ಟೆ ಬಯಲಿಗೆ ಹೋಲಿಸಿದ್ದಾರೆ. ಬಟ್ಟೆ ತೆಗೆದಾಗಲೇ ಬಯಲು ಕಾಣಿಸುತ್ತದೆಂದು, ಶರೀರ ಇಲ್ಲದಿರುವಾಗಲೇ ದೇವರು ತಿಳಿಯುತ್ತಾನೆಂದು ತಿಳಿಸುವುದೇ ಚಿದಂಬರ ರಹಸ್ಯ. ಬಾಹ್ಯರ್ಥವಾಗಿ ಬಟ್ಟೆಯನ್ನು ಬಯಲನ್ನು ನೋಡಿದಲ್ಲಿಯೂ ಶರೀರಧಾರಿಗಳಾದ ಜೀವಿಗಳು ಪರಮಾತ್ಮನನ್ನು ತಿಳಿಯದಿದ್ದಾರೆಂದು ಹೇಳುವುದಕ್ಕೇ, ತಿಳಿಯದಿರುವುದು ರಹಸ್ಯವೆಂದು ಚಿದಂಬರಕ್ಕೆ ರಹಸ್ಯವೆನ್ನುವ ಪದವನ್ನು ಸೇರಿಸಿದ್ದಾರೆ. ಆ ವಿವರ ತಿಳಿಯದೆ ಇದು ರಹಸ್ಯ ಯಾರಿಗೂ ಹೇಳಬಾರದೆನ್ನುವುದರಲ್ಲಿ ಅರ್ಥವಿಲ್ಲ. ಚೇಲ ಎಂದರೇ ಸಮತ ಶರೀರ ಎಂದುಕೊಂಡಿದ್ದೇವೆ ಅಲ್ಲವೆ! ಸಾವಿನಿಂದ ಹೋಗುವ ಶರೀರ ಆ ಕ್ಷಣವೇ ಹುಟ್ಟುವುದರಿಂದ ಜೀವಿಗೆ ತಗಲಿಕೊಳ್ಳುತ್ತಿದೆ. ಆದ್ದರಿಂದ ಯಾವಾಗಲೂ ಬಯಲಿಗೆ ಹೋಲಿಸಲ್ಪಟ್ಟ ಪರಮಾತ್ಮಗೆ, ಚೇಲವಾಗಿ ಹೋಲಿಸಲ್ಪಟ್ಟ ಶರೀರ ಅಡ್ಡವಾಗಿದೆಯೆಂದು ತಿಳಿಸುವುದಕ್ಕೆ ಶ್ರೀರಂಗದಲ್ಲಿನ ಚಿದಂಬರವೆಂದು ತಿಳಿಯಬೇಕು. ಬಟ್ಟೆ ಅಡ್ಡವಾಗಿದ್ದಾಗ ಆಚೆ ಇರುವ ಬಯಲು ಎಂದಿಗೂ ಕಾಣಿಸುವುದಿಲ್ಲವೆಂದು ತಿಳಿಸುತ್ತಾ ನಿಮಗೆ ಶರೀರವೆನ್ನುವ ಚೇಲ

ಅಡ್ಡ ಇರುವುದರಿಂದ, ಬಯಲೆಂಬ ಪರಮಾತ್ಮ ತಿಳಿಯುವುದಿಲ್ಲವೆಂದು ತಿಳಿಸುವುದಕ್ಕಾಗಿ ರಹಸ್ಯವೆನ್ನುವುದರಲ್ಲಿ ಅರ್ಥವಿದೆ.

ಬಟ್ಟೆ ತೆಗೆದರೆ ಬಯಲು, ಬಟ್ಟೆ ತೆಗೆಯದೆಹೋದರೆ ಬಯಲು ಇಲ್ಲ. ಹಾಗೇ ಶರೀರ ಹೋದರೇನೆ ಮೋಕ್ಷವೆಂದು ತಿಳಿಸುತ್ತಾ, ಬಟ್ಟೆ ಇಲ್ಲದ ಸ್ಥಿತಿಯಾದುದ್ದನ್ನು ಅಚೇಲ ಎಂದಿದ್ದಾರೆ. ಚೇಲ ಎಂದರೆ ಬಟ್ಟೆ, ಅಚೇಲ ಎಂದರೆ ಶರೀರವಿಲ್ಲದ ಮೋಕ್ಷವೆಂದು ಹೇಳಿದ್ದಾರೆ. ಅಜ್ಞಾನದಲ್ಲಿದ್ದು ಶರೀರದೊಂದಿಗೆ ಜನ್ಮಗಳೆತ್ತುತ್ತಿರುವವರನ್ನು ಚೇಲರೆಂದು, ಜ್ಞಾನಹೊಂದಿ ಜನ್ಮವಿಲ್ಲದ ಸ್ಥಿತಿಯನ್ನು ಕೋರುತ್ತಿರುವವರನ್ನು ಅಚೇಲರೆಂದು ಪೂರ್ವದಲ್ಲಿ ಹಿರಿಯರನ್ನುತ್ತಿದ್ದರು. ಶರೀರವನ್ನು ಚೇಲವೆಂದು, ಮೋಕ್ಷವನ್ನು ಅಚೇಲವೆಂದು ಪೂರ್ವದಲ್ಲಿ ಕರೆಯುತ್ತಿದ್ದರು. ಮೋಕ್ಷಮಾರ್ಗವನ್ನು ಅಚೇಲವೆಂದು, ಅಜ್ಞಾನವನ್ನು ಚೇಲವೆಂದು ಕೂಡ ಕರೆಯುತ್ತಿದ್ದರು. ಜ್ಞಾನಮಾರ್ಗವಾದ ಅಚೇಲವೆನ್ನುವ ಪದ ಕಾಲಕ್ರಮವಾಗಿ ಅಚಲವಾಗಿ ಬದಲಾಗಿದೆ. ಜ್ಞಾನ ಮಾರ್ಗವನ್ನನುಸರಿಸುವವರು ಇಂದಿಗೂ ಇದ್ದಾರೆ. ಆದರೆ ಅವರು ನಮ್ಮದು ಅಚಲವೆನ್ನುವುದು ಅರ್ಥವಿಲ್ಲದ ಮಾತು. ಅವರು ನಮ್ಮದು ಅಚೇಲ ಎಂದು ಹೇಳಬಹುದು ಆದರೆ ಅಚಲವೆಂದು ಹೇಳಬಾರದು.

ಈ ಗ್ರಂಥದಲ್ಲಿ ಅಚೇಲವನ್ನೇ ಅಲ್ಲದೇ ಪ್ರಪಂಚದಲ್ಲಿನ ಅಜ್ಞಾನ ಪ್ರಜೆಗಳನ್ನು ಕುರಿತು, ಜ್ಞಾನಿಗಳನ್ನು ಕುರಿತು, ಗುರುಗಳನ್ನು ಕುರಿತು ಹೇಳುವುದಾಗಿದೆ. ಅಷ್ಟೇ ಅಲ್ಲದೆ ಜ್ಞಾನಸಾಧನೆ ಪದ್ಧತಿಗಳನ್ನು, ಜ್ಞಾನಿಗಳ ಬಗ್ಗೆ ಮೂರ್ಖರಿರುವ ಪದ್ಧತಿಗಳನ್ನು ಕೂಡ ತಿಳಿಸುವುದು ನಡೆದಿದೆ. ಮಾನವನಿಗೆ ಬೇಕಾದ ಜ್ಞಾನವನ್ನು ವರಸೆ ಕ್ರಮದಲ್ಲಿ ಹೇಳುತ್ತಾ ಕೊನೆಗೆ ಅಚೇಲವಾದ ಪರಮಾತ್ಮನನ್ನು ಕುರಿತು ವರ್ಣಿಸಿ ಹೇಳುವುದು ನಡೆದಿದೆ. ಕಪಟ ಗುರುಗಳನ್ನು, ಕಪಟ ಶಿಷ್ಯರನ್ನು ಕುರಿತು ಹೇಳುವುದಲ್ಲದೇ ನಿಜಗುರುವೊಂದರ ಬೆಲೆಯನ್ನು ಕೂಡ ಹೇಳುವುದಾಗಿದೆ. ಈ ಗ್ರಂಥ ಜಿಜ್ಞಾಸಿಗಳಾದವರಿಗೆ ಜ್ಞಾನಮಾರ್ಗದಲ್ಲಿ ಎಲ್ಲಾ ವಿಧಗಳಲ್ಲಿ ಉಪಯೋಗ ವಾಗುತ್ತದೆಂದು ಭಾವಿಸುತ್ತಿದ್ದೇವೆ.

ಇಂತಿ

**ಶ್ರೀಶ್ರೀಶ್ರೀ ಆಚಾರ್ಯ ಪ್ರಬೋಧಾನಂದ ಯೋಗೀಶ್ವರರು**

# ರಚನಕಾರರ ಎರಡನೆ ಮಾತು

ದೇವರು ಮನುಷ್ಯನೊಂದರ ಗಮ್ಯ. ಆ ಗಮ್ಯವನ್ನೇ ಮುಕ್ತಿ ಎಂದು ಕೂಡ ಕರೆಯುತ್ತಿದ್ದೇವೆ. ಮುಕ್ತಿಗಾಗಿ ಮನುಷ್ಯ ದೇವರನ್ನು ತಿಳಿಯುವ ಮಾರ್ಗಗಳನ್ನು ಏರ್ಪಡಿಸಿಕೊಂಡಿದ್ದಾನೆ. ದೇವರನ್ನು ಅನ್ವೇಷಿಸುವ ಮಾರ್ಗಗಳಲ್ಲಿ ಪ್ರಸ್ತುತ ಕಾಲದಲ್ಲಿ ಇಂದೂಮತದಲ್ಲಿ ಅದ್ವೈತ, ದ್ವೈತ ಎನ್ನುವ ಎರಡು ಪದ್ಧತಿಗಳು ಪ್ರಚಾರದಲ್ಲಿ ಇವೆ. ಅವುಗಳೊಂದಿಗೆ ಅವುಗಳಿಗೆ ಸ್ವಲ್ಪ ವಿಭಿನ್ನವಾದ **"ಅಚಲ"** ಎನ್ನುವ ಪದ್ಧತಿ ಕೂಡ ಸ್ವಲ್ಪ ಪ್ರಚಾರದಲ್ಲಿದೆ. ಒಬ್ಬ ಮನುಷ್ಯ ಆಧ್ಯಾತ್ಮಿಕದಲ್ಲಿ ಇದ್ದಾನೆಂದರೇ ಆತನು ಅದ್ವೈತವನ್ನಾಗಲಿ, ದ್ವೈತವನ್ನಾಗಲಿ, ಎರಡೂ ಅಲ್ಲದಿದ್ದರೆ ಅಚಲವನ್ನಾಗಲಿ ಅನುಸರಿಸುತ್ತಿರುತ್ತಾನೆ. ಅಚಲ ಎನ್ನುವ ಪದ್ಧತಿ ಸ್ವಲ್ಪ ಅದ್ವೈತಕ್ಕೆ ಹತ್ತಿರ ಹೋಲಿಕೆ ಇದ್ದರೂ ದ್ವೈತಕ್ಕೆ ಪೂರ್ತಿ ವಿಭಿನ್ನವಾಗಿಯೇ ಇದೆ. ಮನುಷ್ಯ ದೇವರನ್ನು ತಿಳಿಯುವುದಕ್ಕೆ ಅನುಸರಿಸುವ ಮಾರ್ಗಗಳಾದ ದ್ವೈತ, ಅದ್ವೈತಗಳು, ಅಚಲವಲ್ಲದೆ ಎಲ್ಲವುದಕ್ಕು ಆಶ್ಚರ್ಯವನ್ನುಂಟುಮಾಡುತ್ತಾ **"ತ್ರೈತ"** ಎನ್ನುವ ಮಾರ್ಗ ಕಂಡುಹಿಡಿಯಲ್ಪಟ್ಟಿದೆ. ದ್ವೈತ, ಅದ್ವೈತ, ಅಚಲಗಳಲ್ಲಿ ಇಲ್ಲದ ಶಾಸ್ತ್ರಬದ್ಧತೆ ತ್ರೈತದಲ್ಲಿರುವುದು ವಿಶೇಷವೆಂದು ಹೇಳಬಹುದು.

ಅದ್ವೈತವನ್ನು ಆದಿ ಶಂಕರಾಚಾರ್ಯನು ಪ್ರಕಟಿಸಿದಾಗ, ದ್ವೈತವನ್ನು ಮಧ್ವಾಚಾರ್ಯರು ಪ್ರಕಟಿಸಿದ್ದಾರೆ. ತ್ರೈತಸಿದ್ಧಾಂತ **ಆಚಾರ್ಯ ಪ್ರಬೋಧಾನಂದ ಯೋಗೀಶ್ವರರಿಂದ** ಪ್ರಕಟಿತವಾಗಿದೆ. ಇನ್ನು ಅಚಲವನ್ನು ಯಾರು ಪ್ರಕಟಿಸಿದ್ದರೋ ಸರಿಯಾದ ಸಮಾಚಾರವಿಲ್ಲ. ಅಚಲ ಸಾಂಪ್ರದಾಯ ನಿರ್ಮಾಪಕರ ಹೆಸರುಗಳು ಎರಡು ಮೂರು ಕೇಳಿಸುತ್ತಿರುವುದರಿಂದ ಖಚಿತವಾಗಿ ಯಾರು ಸ್ಥಾಪಿಸಿದ್ದಾರೋ ತಿಳಿಯದೆಹೋಗಿದೆ. ಈಗಲೇ ಹುಟ್ಟಿದ ತ್ರೈತ ಚಿಕ್ಕ ಸಸಿಯ ಸ್ಥಿತಿಯಲ್ಲಿರುವಾಗ, ನೂರು ವರ್ಷಗಳ ಪೂರ್ವದಲ್ಲಿ ಹುಟ್ಟಿದ ಅದ್ವೈತ, ದ್ವೈತಗಳು, ಅಚಲವು ಬೇರೂರಿದ ವೃಕ್ಷಗಳಂತೆ ಇವೆ. ದ್ವೈತಕ್ಕು, ಅದ್ವೈತಕ್ಕು ಸ್ವಲ್ಪ ಅರ್ಥ ಆಚರಣೆಗಳು ಇವೆ. ಅದ್ವೈತರು ಆಚರಣೆಯಲ್ಲಿ ವಿಭೂತಿ ಧರಿಸಿದರೆ, ವಿಶಿಷ್ಟಾದ್ವೈತರು ಮೂರು ನಾಮಗಳನ್ನು ಧರಿಸುತ್ತಿದ್ದಾರೆ. ಅದ್ವೈತರು ಪಂಚಾಕ್ಷರಿ ಮಂತ್ರವೆಂದರೇ, ವಿಶಿಷ್ಟಾ ದ್ವೈತರು ಅಷ್ಟಾಕ್ಷರಿ ಮಂತ್ರವೆನ್ನುತ್ತಿದ್ದಾರೆ. ಅಚಲದೊಳಗೆ ಬಂದರೆ ಅಚಲ ಎನ್ನುವ

ಪದಕ್ಕೆ ಅರ್ಥವಾಗಲಿ, ಆಚರಣೆಯ ಗುರುತಾಗಲಿ ಇಲ್ಲದಿರುವುದರಿಂದ ಕೆಲವರು ವಿಮರ್ಶಿಸುವುದಕ್ಕೆ ಅವಕಾಶವಿದೆ. ಪೂರ್ವದಲ್ಲಿ ಅಚಲವನ್ನು ಪ್ರತಿಪಾದಿಸಿದ ಹಿರಿಯರದ್ದು ಒಳ್ಳೆಯ ಉದ್ದೇಶವೇ ಆಗಿದ್ದು, ಪ್ರಜೆಗಳು ಸಂಪೂರ್ಣಜ್ಞಾನಿಗಳು ಆಗಬೇಕೆನ್ನುವ ತಾಪತ್ರಯ ಅವರಿಗಿರುತ್ತಿತ್ತು. ಕಾಲಗಮನದಲ್ಲಿ ಅಚಲವಾಗಿ ತಯಾರಾದ, ಪದ ಪೂರ್ವಕಾಲದಲ್ಲಿ ಅಚೇಲವಾಗಿದ್ದು ಎಷ್ಟೋ ಅರ್ಥದಿಂದ ಕೂಡಿಕೊಂಡು ಇರುತ್ತಿತ್ತು. ಅದರ ದೊಡ್ಡತನವನ್ನು ಈಗಿನಕಾಲದಲ್ಲಿ ಕಳೆದುಕೊಂಡಿರುವುದು ಸ್ವಲ್ಪ ದುಃಖಕರವಾದ ವಿಷಯ. ಆದ್ದರಿಂದ ಅದರ ಅರ್ಥವನ್ನು ಅದಕ್ಕೆ ಕೈಗೂಡಿಸುವ ಪ್ರಯತ್ನವೇ ನಮ್ಮ ಈ ರಚನೆಯಲ್ಲಿನ ಮುಖ್ಯ ಉದ್ದೇಶ. ನಾವು ತ್ರೈತ ಸಿದ್ಧಾಂತದವರಾಗಿದ್ದರೂ ಅಚಲವೊಂದರ ಪೂರ್ವದ ಉದ್ದೇಶವೇನೊ ನಮಗೆ ತಿಳಿದಿದೆ. ಆದ್ದರಿಂದ ಆ ವಿಷಯವನ್ನೇ ಈ ಗ್ರಂಥದಲ್ಲಿ ಬರೆಯುವುದು ನಡೆದಿದೆಯೆಂದು ತಿಳಿಸುತ್ತಿದ್ದೇವೆ.

ಇಂತಿ
ಇಂದೂ ಧರ್ಮಪ್ರದಾತ,
ಸಂಚಲನಾತ್ಮಕ ರಚನಕಾರ, ತ್ರೈತ ಸಿದ್ಧಾಂತ ಆದಿಕರ್ತ
**ಆಚಾರ್ಯ ಪ್ರಬೋಧಾನಂದ ಯೋಗೀಶ್ವರರು**

# ಆತ್ಮ ಎಂದರೆ ಯಾರು

ನಮ್ಮ ಶರೀರದಲ್ಲಿ ಮೂರು ಆತ್ಮಗಳು ಇವೆ. ಅವುಗಳೇ ಕ್ಷರನು, ಅಕ್ಷರನು, ಪುರುಷೋತ್ತಮನು. ಈ ಗ್ರಂಥದಲ್ಲಿ ಆ ಮೂವರು ಪುರುಷರನ್ನು ಜೀವಾತ್ಮ, ಆತ್ಮ, ಪರಮಾತ್ಮ ಎಂದು ಹೇಳುವುದು ಕೂಡಾ ನಡೆದಿದೆ. ಪ್ರತಿ ಪದ್ಯಭಾವದ ಮೊದಲಿನಲ್ಲಿ ಒಂದನೆ ಆತ್ಮವಾದ ಜೀವಾತ್ಮ, ಎರಡನೆ ಆತ್ಮವಾದ ಆತ್ಮವನ್ನು ಸಂಬೋಧಿಸುತ್ತಾ ಭಾವವನ್ನು ವ್ಯಕ್ತಪಡಿಸುವುದು ನಡೆದಿದೆ. ಪ್ರತಿ ಭಾವನೆಯಲ್ಲಿ ಸಂಬೋಧನೆಗೆ ಮೊದಲೆ ಆತ್ಮವೊಂದರ ಸ್ಥಿತಿ, ದೊಡ್ಡತನ,

ಪದ್ಧತಿಯನ್ನು ಕುರಿತು ಹೇಳುತ್ತಾ ಓ ಆತ್ಮಾ! ಕೇಳು ಎನ್ನುವುದು ನಡೆದಿದೆ. ಪ್ರತಿ ಸಂಬೋಧನೆ ಮುಂದೆ ಆತ್ಮವನ್ನು ಕುರಿತು ಹೇಳಿದ ವಾಕ್ಯಗಳು ಆತ್ಮವೊಂದರ ನಿಜಸ್ವರೂಪವನ್ನು ತೋರಿಸುತ್ತಿವೆ. ಇಲ್ಲಿಯವರೆಗು ಆತ್ಮವನ್ನು ಕುರಿತು ಹೇಳಿದ ವಾಕ್ಯಗಳು ಎಲ್ಲಿಯು ಇಲ್ಲದಿರುವುದರಿಂದ ಈ ಗ್ರಂಥದಲ್ಲಿ ಆತ್ಮ ಔನ್ನತ್ಯವನ್ನು ಓದುಗರು ಗುರುತಿಸುವುದಕ್ಕೆ ಅವುಗಳನ್ನು ಇಲ್ಲಿ ಪ್ರತ್ಯೇಕವಾಗಿ ಜೋಡಿಸುವುದು ನಡೆದಿದೆ. ಎಲ್ಲವನ್ನು ಒಂದುಸಲ ಕ್ರಮವಾಗಿ ಓದುವುದರಿಂದ ಇಲ್ಲಿಯವರೆಗು ಎಲ್ಲಿಯು ಗುರುತಿಸಲ್ಪಡದ ಎರಡನೆ ಆತ್ಮ ವಿಷಯ ಸ್ವಲ್ಪವಾದರೂ ಅವಗಾಹನೆಗೆ ಬರಬಲ್ಲದೆಂದು ಭಾವಿಸುತ್ತಿದ್ದೇವೆ.

1. ಸಮಸ್ತ ಜೀವರಾಶಿಗಳಲ್ಲಿ ಬೆರೆತಿರುವ ಓ ಆತ್ಮಾ! ಕೇಳು.
2. ಅಖಿಲ ಜೀವಿಗಳಲ್ಲಿ ಒಂದೇ ಚೈತನ್ಯವಾಗಿರುವ ಓ ಆತ್ಮಾ! ಕೇಳು.
3. ಗಾಳಿಯಲ್ಲಿ ಗಂಧ ಬೆರೆತು ಕಾಣಿಸದ ಹಾಗೆ, ಶರೀರದಲ್ಲಿ ಕಣ್ಣಿಗೆ ಕಾಣಿಸದೆ ಇರುವ ಓ ಆತ್ಮಾ! ಕೇಳು.
4. ಸಾಕ್ಷಿಯಾಗಿ ಎಲ್ಲ ಶರೀರಗಳಲ್ಲಿರುವ ನನ್ನಲ್ಲಿನ ಓ ಆತ್ಮಾ! ಕೇಳು.
5. ಶಕ್ತಿ ರೂಪದಲ್ಲಿ ಶರೀರವೆಲ್ಲವೂ ವ್ಯಾಪಿಸಿರುವ ಓ ಆತ್ಮಾ! ಕೇಳು.
6. ಸಮಸ್ತ ಜೀವಿಗಳಲ್ಲಿ ಕಾರ್ಯರೂಪವಾಗಿರುವ ಓ ಆತ್ಮಾ! ಕೇಳು.
7. ಸಮಸ್ತ ಜೀವಿಗಳಲ್ಲಿ ಚೈತನ್ಯವಾಗಿರುವ ಓ ಆತ್ಮಾ! ಕೇಳು.
8. ಮೂರು ಆತ್ಮಗಳಲ್ಲಿ ಎರಡನೆಯದಾದ ಓ ಆತ್ಮಾ! ಕೇಳು.
9. ಅಖಿಲ ಜೀವರಾಶಿಗಳಲ್ಲಿ ಎಲ್ಲ ಕೆಲಸಗಳು ಮಾಡಿಸುತ್ತಿರುವ ಓ ಆತ್ಮಾ! ಕೇಳು.
10. ಸಮಸ್ತ ಜೀವರಾಶಿಗಳಲ್ಲಿ ಚೈತನ್ಯ ರೂಪವಾಗಿ ಖಂಡಖಂಡಗಳಾಗಿ ಶರೀರದಲ್ಲಿ ವ್ಯಾಪಿಸಿರುವ ಓ ಆತ್ಮಾ! ಕೇಳು.
11. ಸರ್ವ ಜೀವರಾಶಿಗಳಲ್ಲಿ ನಿವಾಸಿಸುತ್ತಾ ಆಯಾ ಶರೀರ ಆಕಾರವನ್ನು ಹೊಂದಿರುವ ಓ ಆತ್ಮಾ! ಕೇಳು.
12. ಶರೀರವೆನ್ನುವ ಗುಡಿಯಲ್ಲಿ ದೀಪವಾಗಿ ಶರೀರವೆಲ್ಲದಕ್ಕೂ ಬೆಳಕನ್ನು ಕೊಡುತ್ತಿರುವ ಓ ಆತ್ಮಾ! ಕೇಳು.

13. ಸಮಸ್ತ ಶರೀರಗಳಲ್ಲಿ ಜೀವಿಯೊಂದಿಗೆ ಇರುತ್ತಾ, ಆ ಶರೀರಕ್ಕೆ ಶಕ್ತಿಯನ್ನು ಕೊಡುವ ಓ ಆತ್ಮಾ! ಕೇಳು.
14. ಮೂವರು ಪುರುಷರಲ್ಲಿ ಅಕ್ಷರ ಪುರುಷನಾಗಿ ಶರೀರದಲ್ಲಿರುವ ಓ ಆತ್ಮಾ! ಕೇಳು.
15. ಪ್ರತಿ ಶರೀರದಲ್ಲಿ ಜೀವಾತ್ಮಗಳಿಗೆ ಸಾಕ್ಷಿಯಾಗಿರುವ ಓ ಆತ್ಮಾ! ಕೇಳು.
16. ಇಂದ್ರಿಯಗಳಿಗೆ ಶಕ್ತಿಯನ್ನು ಕೊಡುವ ಓ ಆತ್ಮಾ! ಕೇಳು.
17. ಕೊಲಿಮೆ ಶಾಖಕ್ಕೆ ಗಾಳಿ ಚೀಲ, ಚೀಲಕ್ಕೆ ಕದಲಿಸುವ ಕಟ್ಟಿಗೆ, ಕಟ್ಟಿಗೆಗೆ ಕೊನೆಯಲ್ಲಿ ಕುಳಿತುಕೊಂಡು ಕದಲಿಸುತ್ತಿರುವ ವ್ಯಕ್ತಿ, ಹೇಗೆ ಅನುಸಂಧಾನವಾಗಿ ಇದ್ದಾರೋ ಹಾಗೆಯೇ ಶರೀರದಲ್ಲಿ ಮೂಗಿನಲ್ಲಿನ ಶ್ವಾಸಕ್ಕೆ ಶ್ವಾಸಕೋಶಗಳು, ಶ್ವಾಸ ಕೋಶಗಳಿಗೆ ಬ್ರಹ್ಮನಾಡಿ, ನಾಡಿಗೆ ಕೊನೆಯಲ್ಲಿದ್ದು ಎಲ್ಲವನ್ನು ಕದಲಿಸುವ ಓ ಆತ್ಮಾ! ಕೇಳು.
18. ಶರೀರದಲ್ಲಿ ಶ್ವಾಸವನ್ನು ನಡೆಸುವ ಓ ಆತ್ಮಾ! ಕೇಳು.
19. ಸಮಸ್ತ ಜೀವಿಗಳಲ್ಲಿ ಒಂದೇ ಕೆಲಸ ಮಾಡುತ್ತಿರುವ ಆತ್ಮಾ, ಜೀವಿಯಾದ ನಾನು ಹೇಳುವ ಮಾತು ಕೇಳು.
20. ಎರಡನೆ ಆತ್ಮವಾಗಿ ಶರೀರದಲ್ಲಿ ಎಲ್ಲ ಕೆಲಸಗಳು ಮಾಡುತ್ತಿರುವ ಓ ಆತ್ಮಾ! ಕೇಳು.
21. ಶರೀರದಲ್ಲಿ ನಿವಾಸವಿರುತ್ತಿರುವ ಮೂರು ಆತ್ಮಗಳಲ್ಲಿ ಅಹರ್ನಿಶೆಗಳು ಜೀವಿಯನ್ನು ಕಾದುಕೊಂಡಿರುವ ಓ ಎರಡನೆ ಆತ್ಮಾ! ಕೇಳು.
22. ಮೂವರು ಪುರುಷರಲ್ಲಿ ಮಧ್ಯದವನಾಗಿ ಪೂಜ್ಯನಾಗಿರುವ ಓ ಆತ್ಮಾ! ಕೇಳು.
23. ಸಮಸ್ತ ಸಜೀವ ಶರೀರಗಳಲ್ಲಿ ನಖ ಶಿಖ ಪರ್ಯಂತ ವ್ಯಾಪಿಸಿ ಶರೀರದಲ್ಲಿನ ಎಲ್ಲ ಅವಯವಗಳಿಂದ ಕೆಲಸಗಳು ಮಾಡಿಸುತ್ತಿರುವ ಓ ಆತ್ಮಾ! ಕೇಳು.
24. ಶರೀರದಲ್ಲಿನ ಜೀವಿಗೆ ಸಾಕ್ಷಿಯಾಗಿರುವ ಓ ಆತ್ಮಾ! ಕೇಳು.
25. ಹೂವಿನ ಹಾರದಲ್ಲಿ ಆಧಾರವಾಗಿ ಅಡಗಿರುವ ದಾರದ ಹಾಗೆ,

ಶರೀರದಲ್ಲಿ ಕಾಣಿಸದೆ ಶರೀರವೆಲ್ಲದಕ್ಕೂ ಆಧಾರವಾಗಿರುವ ಓ ಆತ್ಮಾ! ಕೇಳು.

26. ಶರೀರ ಅಂತರಂಗಗಳಲ್ಲಿ ಇದ್ದು ಜ್ಞಾನದಿಂದ ಹೊಗಳಿಕೆಗೆ ಪಾತ್ರವಾಗಿರುವ ಓ ಆತ್ಮಾ! ಕೇಳು.
27. ಸಮಸ್ತ ಜೀವ ಶರೀರಗಳಲ್ಲಿ ಮೂರು ಗುಣಗಳ ಮಧ್ಯೆ ಸಾಕ್ಷಿಯಾಗಿರುವ ಓ ಆತ್ಮಾ! ಕೇಳು.
28. ಅಖಿಲ ಜೀವಿಗಳಲ್ಲಿ ಕೂಡಿರುವ ಓ ಆತ್ಮಾ! ಕೇಳು.
29. ಸಮಸ್ತ ಜೀವರಾಶಿಗಳಲ್ಲಿರುವ ಮೂರು ಆತ್ಮಗಳಲ್ಲಿ ಮಧ್ಯದಲ್ಲಿರುವ ಓ ಆತ್ಮಾ! ಕೇಳು.
30. ಚಿಕ್ಕ ಇರುವೆಯಲ್ಲೂ, ದೊಡ್ಡ ಆನೆಯಲ್ಲೂ ಒಂದೇ ವಿಧಾನಹೊಂದಿ ಕರ್ಮವನ್ನು ಪಾಲಿಸುವ ಓ ಆತ್ಮಾ ಕೇಳು.
31. ಶರೀರದಲ್ಲಿನ ಎಲ್ಲ ಭಾಗಗಳಿಗೂ ಶಕ್ತಿಯನ್ನು ಕೊಡುತ್ತಾ ಯಾರಿಗೂ ತಿಳಿಯದಂತಿರುವ ಓ ಆತ್ಮಾ! ಕೇಳು.
32. ನನ್ನ ಶರೀರದಲ್ಲಿ ನನಗೆ ತಿಳಿಯದಂತೆ ನಿದ್ರೆಯಲ್ಲಿಯೂ ಎಚ್ಚರದಲ್ಲಿಯೂ ನನ್ನಲ್ಲಿ ಕೆಲಸ ಮಾಡುತ್ತಿರುವ ಓ ಆತ್ಮಾ! ಕೇಳು.
33. ಅದ್ವೈತಾದಿ ಮಹಾಮುನಿಗಳು ಶರೀರದಲ್ಲಿರುವುದು ನಾನು ಒಬ್ಬನೇಯೆಂದು ಹೇಳಿಕೊಳ್ಳುತ್ತಿದ್ದಲ್ಲಿಯು, ನೀನು ಮಾತ್ರ ಪ್ರತ್ಯೇಕವಾಗಿದ್ದು ಜೀವಿಯ ಕರ್ಮವನ್ನನುಸರಿಸಿ ಶರೀರವನ್ನು ಕದಲಿಸುತ್ತಾ, ನಡೆಯುವ ಯಾವಕರ್ಮಕ್ಕು ಜವಬ್ಧಾರಿಯಲ್ಲದ ಓ ಆತ್ಮಾ! ಕೇಳು.
34. ಶರೀರದಲ್ಲಿ ಅಣುವಣುವಿನಲ್ಲಿ ವ್ಯಾಪಿಸಿ ವಿಧಿಯನ್ನು ಅನುಸರಿಸಿ ಶಕ್ತಿಕೊಡುವ ಓ ಆತ್ಮಾ! ಕೇಳು.
35. ಶರೀರದಲ್ಲಿ ಬಾಹ್ಯ ಪ್ರಪಂಚದೊಂದಿಗೆ ಸಂಬಂಧ ಇಟ್ಟುಕೊಂಡು ಎಲ್ಲವೇಳೆಯಲ್ಲಿ ಕೆಲಸ ಮಾಡುತ್ತಿರುವ ಓ ಆತ್ಮಾ! ಕೇಳು.
36. ಶರೀರದಲ್ಲಿ ಸ್ವಲ್ಪವೂ ನಿದ್ರೆಯಿಲ್ಲದೆ ಯಾವಾಗಲೂ ಎಚ್ಚರಗೊಂಡು ಕೆಲಸ ಮಾಡುವ ಓ ಆತ್ಮಾ! ಕೇಳು.

37. ಒಂದೊಂದು ಶರೀರದಲ್ಲಿ ಒಂದೊಂದು ಆತ್ಮವಾಗಿ ಜೀವಾತ್ಮಗೆ ಜೊತೆ ಇರುವ ಓ ಆತ್ಮಾ! ಕೇಳು.
38. ಶರೀರಾಂತರ್ಗತವಾಗಿ ಬಾಹ್ಯ ದೃಷ್ಟಿಗೆ ಕಾಣಿಸದೆ, ಜೀವಾತ್ಮಗಳಾದ ಸ್ವಾಮಿಗಳು, ಮುನಿಗಳು ಕೂಡ ನಾನೇ ಆತ್ಮಯೆಂದು ತಿಳಿಯುವಂತೆ ಮಾಡಿ, ನೀನು ಮಾತ್ರ ಪ್ರತ್ಯೇಕವಾಗಿರುವ ಓ ಆತ್ಮಾ! ಕೇಳು.
39. ಜೀವಾತ್ಮಗು ಪರಮಾತ್ಮಗು ಮಧ್ಯದಲ್ಲಿರುವ ಓ ಆತ್ಮಾ! ಕೇಳು.
40. ಗಿಡದಲ್ಲಿ ತೇವಾಂಶ ವ್ಯಾಪಿಸಿದಂತೆ, ಶರೀರದಲ್ಲಿ ಶಕ್ತಿಯಾಗಿ ವ್ಯಾಪಿಸಿರುವ ಓ ಆತ್ಮಾ! ಕೇಳು.
41. ಕಬ್ಬಿಣದೊಂದಿಗೆ ಬೆರೆತ ಅಗ್ನಿಗು ಕೂಡ ಕೊಲಿಮೆ ಹತ್ತಿರ ಸೆಮಟಿಗೆ ಒಡತಗಳು ತಪ್ಪುವುದಿಲ್ಲವೆನ್ನುವಂತೆ, ಜೀವಿಯೊಂದಿಗೆ ಸೇರಿ ಶರೀರವೆಲ್ಲಾ ವ್ಯಾಪಿಸಿ ಆಗಾಗ ಹಸಿವಿಗೆ ಶಕ್ತಿಹೀನತೆ ಹೊಂದುತ್ತಿರುವ ಓ ಆತ್ಮಾ! ಕೇಳು.
42. ಶರೀರದಲ್ಲಿ ಬ್ರಹ್ಮನಾಡಿಯನ್ನು ಕೇಂದ್ರವಾಗಿ ಮಾಡಿಕೊಂಡು ಶರೀರವೆಲ್ಲಾ ವ್ಯಾಪಿಸಿರುವ ಓ ಆತ್ಮಾ! ಕೇಳು.
43. ಜೀವಾತ್ಮಗೆ ದೊಡ್ಡವನು, ಪರಮಾತ್ಮಗೆ ಚಿಕ್ಕವನಾದ ಓ ಆತ್ಮಾ! ಕೇಳು.
44. ಸಮಸ್ತ ಶರೀರಗಳಲ್ಲಿ ನಾಶವಾಗುವ ಜೀವಾತ್ಮದೊಂದಿಗೆ ಬೆರೆತು ನಿವಾಸ ಮಾಡುತ್ತಿರುವ ನಾಶವಾಗದ ಓ ಆತ್ಮಾ! ಕೇಳು.
45. ಶರೀರದಲ್ಲಿ ಮಾತ್ರ ಶಕ್ತಿಯಾಗಿರುವ ಓ ಎರಡನೆ ಆತ್ಮಾ! ಕೇಳು.
46. ಶರೀರದಲ್ಲಿ ಕರ್ಮಾನುಸಾರ ಕದಲಿಸುತ್ತಾ, ಕರ್ಮಾನುಸಾರ ರೋಗಗಳು ಉಂಟುಮಾಡುತ್ತಾ, ಅವುಗಳನ್ನು ಅನುಭವಿಸುವಂತೆ ಮಾಡುವ ಓ ಆತ್ಮಾ! ಕೇಳು.
47. ಶರೀರದಲ್ಲಿನ ಮೂರು ಆತ್ಮಗಳಲ್ಲಿ ಮಧ್ಯ ಆತ್ಮವಾಗಿ ಶರೀರವನ್ನು ನಡೆಸುವ ಶಕ್ತಿಯಿರುವ ಓ ಆತ್ಮಾ! ಕೇಳು.
48. ಶರೀರದಲ್ಲಿ ಯಾರು ಗುರುತಿಸಲಾರದ ವಿಧವಾಗಿ ಶರೀರ ಆಕೃತಿಯನ್ನು ಹೋಲಿರುವ ಓ ಆತ್ಮಾ! ಕೇಳು.

49. ಶರೀರದಲ್ಲಿನ ಬ್ರಹ್ಮನಾಡಿಯನ್ನು ಸ್ಥಾವರವಾಗಿ ಏರ್ಪಡಿಸಿಕೊಂಡು, ಶರೀರವೆಲ್ಲ ನಖ ಶಿಖ ಪರ್ಯಂತವು ವ್ಯಾಪಿಸಿ ಶರೀರಾಕೃತಿಯನ್ನು ಹೋಲಿರುವ ಓ ಆತ್ಮಾ! ಕೇಳು.
50. ಶರೀರದೊಳಗೆ ನಡೆಯುವ ಸಮಸ್ತ ಕಾರ್ಯಗಳಿಗು ಸಾಕ್ಷಿಯಾಗಿರುವ ಓ ಆತ್ಮಾ! ಕೇಳು.
51. ಅಕಾಲ ಮರಣ ಹೊಂದಿದವನಿಗೆ ಶರೀರ ಹೋದಲ್ಲಿಯು ಅದೇ ಶರೀರಾಕೃತಿ ಹೊಂದಿ, ಸೂಕ್ಷ್ಮವಾಗಿ ಕಾಣಿಸದೆ ಅವನ ಕರ್ಮಾನುಸಾರ ಆಡಿಸುವ ಓ ಆತ್ಮಾ! ಕೇಳು.
52. ಮರಣವಿದ್ದು ನಾಶವಿಲ್ಲದ ಓ ಆತ್ಮಾ! ಕೇಳು.
53. ಆಕಾಶದಲ್ಲಿರುವ ಸೂರ್ಯನೊಬ್ಬನೆ ಪ್ರಪಂಚವೆಲ್ಲವನ್ನು ತನ್ನ ಬೆಳಕಿನಿಂದ ಪ್ರಕಾಶಿಸುವಂತೆ ಮಾಡಿದಹಾಗೆ, ಬ್ರಹ್ಮನಾಡಿಯಲ್ಲಿದ್ದು ಶರೀರವೆಲ್ಲ ಚೈತನ್ಯವಾಗಿ ವ್ಯಾಪಿಸಿರುವ ಓ ಆತ್ಮಾ! ಕೇಳು.
54. ಶರೀರಗೃಹದಲ್ಲಿ ಯಜಮಾನನಾದ ಓ ಆತ್ಮಾ! ಕೇಳು.
55. ಹೃದಿ ಮಧ್ಯದಲ್ಲಿ ನಿವಾಸ ಮಾಡುತ್ತಾ ಸೂತ್ರದಾರಿಯಾಗಿದ್ದು, ಜೀವಿಯಪಾತ್ರದಾರಿಯಾಗಿ ಆಡಿಸುವ ಓ ಆತ್ಮಾ! ಕೇಳು.
56. ಸಮಸ್ತ ಜೀವಿಗಳಲ್ಲಿ ಏಕ ಕಾರ್ಯಸ್ವರೂಪನಾದ ಓ ಆತ್ಮಾ! ಕೇಳು.
57. ಪುರುಷರಲ್ಲಿ ಎರಡನೆಯವನಾದ ಓ ಅಕ್ಷರ ಪುರುಷನೆ! ಕೇಳು.
58. ಸಮಸ್ತ ಜೀವಿಗಳಲ್ಲಿ ಚಲನ ಶಕ್ತಿಕೊಡುವ ಓ ಆತ್ಮಾ! ಕೇಳು.
59. ಮುಂದೆ ನೀನಿದ್ದು, ನಿನ್ನಿಂದೆ ಜೀವಿಯನ್ನು ಇಟ್ಟುಕೊಂಡ ಓ ಆತ್ಮಾ! ಕೇಳು.
60. ಪರಮಾತ್ಮವನ್ನು ಪಕ್ಕದಲ್ಲಿಟ್ಟುಕೊಂಡು ಜೀವಿಯೊಂದಿಗೆ ಬೆರೆತಿದ್ದು ಶರೀರದೊಂದಿಗೆ ಕೆಲಸಗಳು ಮಾಡುವ ಓ ಆತ್ಮಾ! ಕೇಳು.
61. ಎಲ್ಲಾ ಜೀವಿಗಳಲ್ಲಿ ಬೇರೆ ಬೇರೆಯಾಗಿ ಬೆರೆತಿರುವ ಓ ಆತ್ಮಾ! ಕೇಳು.
62. ಶರೀರದ ಹೊರಗಡೆ ಇಲ್ಲದೆ ಒಳಗೆ ಮಾತ್ರ ಚೈತನ್ಯವಾಗಿರುವ ಓ ಆತ್ಮಾ! ಕೇಳು.

63. ಅಖಿಲ ಜೀವಿಗಳಲ್ಲಿ ಬೆರೆತಿರುವ ಓ ಆತ್ಮಾ! ಕೇಳು.
64. ಮೂರು ಗುಣಗಳಿಗೆ ಪ್ರತ್ಯೇಕವಾಗಿರುವ ಓ ಆತ್ಮಾ! ಕೇಳು.
65. ಜೀವಿಗಳ ಪಕ್ಕದಲ್ಲಿಯೇ ಇರುವ ಓ ಆತ್ಮಾ! ಕೇಳು.
66. ಕಾದ ಕಬ್ಬಿಣದಲ್ಲಿ ಅಗ್ನಿಯಿರುವಂತೆ ಸಮಸ್ತ ಜೀವಿಗಳ ಶರೀರಗಳಲ್ಲಿ ಒಳಗೊಂಡಿರುವ ಓ ಆತ್ಮಾ! ಕೇಳು.
67. ಸೂರ್ಯನೊಬ್ಬನು ಈ ಲೋಕವನ್ನು ಪ್ರಕಾಶಿಸುವಂತೆ ಮಾಡಿದಹಾಗೆ, ಶರೀರವೆಲ್ಲವನ್ನು ನೀನೊಬ್ಬನೆ ಪ್ರಕಾಶಿಸುವಂತೆ ಮಾಡುವ ಓ ಆತ್ಮಾ! ಕೇಳು.
68. ನಾಶರಹಿತನಾಗಿ ನಾಶವಾಗುವ ಜೀವಾತ್ಮದೊಂದಿಗೆ ಬೆರೆತಿರುವ ಓ ಆತ್ಮಾ! ಕೇಳು.
69. ಮಣಿಗಳ ಮಧ್ಯದಲ್ಲಿ ದಾರವಿದ್ದಂತೆ, ಜೀವಿಗಳ ಶರೀರಮಧ್ಯದಲ್ಲಿ ಶರೀರವೆಲ್ಲದಕ್ಕು ಆಧಾರವಾಗಿರುವ ಓ ಆತ್ಮಾ! ಕೇಳು.
70. ಎಡಬಿಡದಂತೆ ಎಲ್ಲಕಾಲದಲ್ಲಿಯೂ ಜೀವಿಯೊಂದಿಗೆ ಬೆರೆತಿರುವ ಓ ಆತ್ಮಾ! ಕೇಳು.
71. ಚರ ಪ್ರಕೃತಿಯಾದ ಶರೀರವೆಲ್ಲ ವ್ಯಾಪಿಸಿರುವ ಓ ಆತ್ಮಾ! ಕೇಳು.
72. ಪಂಚಭೂತ ನಿರ್ಮಾಣವಾದ ಶರೀರಕ್ಕೆ ಆಧಾರವಾಗಿರುವ ಓ ಆತ್ಮಾ! ಕೇಳು.
73. ಪರಮಾತ್ಮ ಅಲ್ಲದೆ, ಜೀವಾತ್ಮ ಅಲ್ಲದೆ ಕೇವಲ ಆತ್ಮವಾಗಿ, ಜೀವಾತ್ಮದೊಂದಿಗೆ ಶರೀರದಲ್ಲಿರುವ ಓ ಆತ್ಮಾ! ಕೇಳು.
74. ಮೊದಲನೆಯದಾದ ಜೀವಾತ್ಮಗು, ಮೂರನೆಯದಾದ ಪರಮಾತ್ಮಗು ಮಧ್ಯ ಸಂಧಾನವಾಗಿರುವ ಓ ಎರಡನೆ ಆತ್ಮಾ! ಕೇಳು.
75. ಕಾದ ಕಬ್ಬಿಣದಲ್ಲಿ ಕಬ್ಬಿಣವೆಲ್ಲವೂ ಅಗ್ನಿ ವ್ಯಾಪಿಸಿರುವಂತೆ, ಶರೀರವೆಲ್ಲ ವ್ಯಾಪಿಸಿರುವ ಓ ಆತ್ಮಾ! ಕೇಳು.
76. ಪರಮಾತ್ಮ ಪಾಲಿಸುವ ವಿಶ್ವವೆನ್ನುವ ಸಾಮ್ರಾಜ್ಯದಲ್ಲಿ, ಶರೀರವೆನ್ನುವ ಸಾಮಂತ ರಾಜ್ಯಕ್ಕೆ ರಾಜನಾದ ಓ ಆತ್ಮಾ! ಕೇಳು.
77. ಪ್ರಪಂಚವೆಲ್ಲದಕ್ಕೂ ಇರುವ ಮೂವರು ಪುರುಷರಲ್ಲಿಯೂ ಮಧ್ಯ

ಪುರುಷನಾಗಿ ಅಕ್ಷರ ಪುರುಷನೆಂದು ಹೆಸರು ಪಡೆದು, ಕ್ಷರ ಪುರುಷನ ಹತ್ತಿರ ನಿಂತ ಓ ಆತ್ಮಾ! ಕೇಳು.

78. ಶರೀರದಲ್ಲಿ ಸಕಲೇಂದ್ರಿಯಗಳಿಗೂ ಶಕ್ತಿಯನ್ನು ಕೊಡುವ ಓ ಆತ್ಮಾ! ಕೇಳು.

79. ಬ್ರಹ್ಮ, ಕಾಲ, ಕರ್ಮ, ಗುಣ ಚಕ್ರಗಳಿಗೆ ಆಧಾರವಾಗಿರುವ ಓ ಆತ್ಮಾ! ಕೇಳು.

80. ಜ್ಞಾನಿಗಳಲ್ಲಿಯೂ, ಅಜ್ಞಾನಿಗಳಲ್ಲಿಯೂ, ಮೂರ್ಖರಲ್ಲಿಯೂ, ಬುದ್ಧಿವಂತರಲ್ಲಿಯೂ, ಒಳ್ಳೆಯವರಲ್ಲಿಯೂ, ಕೆಟ್ಟವರಲ್ಲಿಯೂ, ಎಲ್ಲ ಮತದವರಲ್ಲಿಯೂ ಒಂದೇ ಪದ್ಧತಿಹೊಂದಿ, ಒಂದೇ ವಿಧವಾಗಿ ರಾಗ (ಪ್ರೀತಿ) ಆಗಲಿ, ದ್ವೇಷವಾಗಲಿ ಇಲ್ಲದಂತೆ ವರ್ತಿಸುವ ಓ ಆತ್ಮಾ! ಕೇಳು.

81. ಪುರುಷಾಕೃತಿಯಾದ ಈಶ್ವರಲಿಂಗದ ಮೇಲೆ ಮೂವರು ಪುರುಷರ ಗುರುತಾಗಿರುವ ಮೂರು ವಿಭೂತಿ ರೇಖೆಗಳಲ್ಲಿ ಮಧ್ಯೆ ರೇಖೆಯಾಗಿ ಗುರುತಿಸಲ್ಪಟ್ಟಿರುವ ಓ ಆತ್ಮಾ! ಕೇಳು

82. ಶರೀರದಲ್ಲಿಯೇ ದೃಷ್ಟಿಯನ್ನು ನಿಲ್ಲಿಸಿ ನಿನ್ನನ್ನು ತಿಳಿಯಬೇಕೆಂದು ಪ್ರಯತ್ನಿಸುವ ಯೋಗಿಗಳಿಗೆ ತಿಳಿಯುವ ಓ ಎರಡನೆಯ ಆತ್ಮಾ! ಕೇಳು.

83. ಹೂವಿನ ಮಾಲೆಗೆ ಆಧಾರವಾದ ದಾರದ ಹಾಗೆ, ಶರೀರಕ್ಕೆ ಆಧಾರವಾಗಿರುವ ಓ ಆತ್ಮಾ! ಕೇಳು.

84. ಸಕಲ ಶರೀರಗಳಲ್ಲಿ ಮೂರವಸ್ಥೆಗಳಲ್ಲಿ ಚೈತನ್ಯವನ್ನು ಕೊಡುವ ಓ ಆತ್ಮಾ! ಕೇಳು.

85. ಪಾಪ ಮಾಡುವಾಗ, ಪುಣ್ಯ ಮಾಡುವಾಗ ಒಂದೇ ವಿಧವಾಗಿ ಶರೀರಕ್ಕೆ ಶಕ್ತಿಯನ್ನು ಕೊಟ್ಟು, ಯಾವ ಕರ್ಮ ಅಂಟದಂತೆ ಇರುವ ಓ ಆತ್ಮಾ! ಕೇಳು.

86. ಭುವಿಯಲ್ಲಿ ಎಷ್ಟು ಜೀವರಾಶಿಗಳಿವೆಯೋ ಅವೆಲ್ಲವುಗಳಲ್ಲಿ ಎಲ್ಲಾ ಆತ್ಮಗಳಾಗಿ ವಿಭಜಿಸಲ್ಪಟ್ಟು, ಪರಮಾತ್ಮ ಪ್ರತಿನಿಧಿಯಾಗಿ ಪ್ರಕೃತಿಯಲ್ಲಿ ಬೆರೆತು ಶರೀರದಲ್ಲಿ ಕೆಲಸ ಮಾಡುತ್ತಿರುವ ಓ ಆತ್ಮಾ! ಕೇಳು.

87. ಯಾವ ವಿಷಯದೊಂದಿಗೆ ಸಂಬಂಧ ಇಲ್ಲದಂತೆ ಶರೀರದಲ್ಲಿನ ಕರ್ಮ ಪ್ರಕಾರ ಶರೀರವನ್ನು ನಡೆಸುವ ಓ ಆತ್ಮಾ!. ಕೇಳು.
88. ಶರೀರದಲ್ಲಿನ ಬ್ರಹ್ಮನಾಡಿವೊಂದರ ಏಳು ದ್ವಾರಗಳ ಮೂಲಕ ಮತ್ತು ಗ್ರಂಥಿಗಳೊಂದರ ಏಳು ದ್ವಾರಗಳ ಮೂಲಕ ಶರೀರವನ್ನು ಪಾಲಿಸುವ ಓ ಆತ್ಮಾ! ಕೇಳು.
89. ಸಮಸ್ತ ಜೀವರಾಶಿಗಳ ಬುದ್ಧಿಗೆ ಸಮಾನವಾಗಿ ಅರ್ಥವಾಗುವ ಓ ಆತ್ಮಾ! ಕೇಳು.
90. ಅಯಮಾತ್ಮ ಬ್ರಹ್ಮವೆಂದು ಸಮಸ್ತ ಯೋಗಿಗಳಿಂದ ಉಚ್ಚರಿಸಲ್ಪಡುವ ಓ ಆತ್ಮ! ಕೇಳು.
91. ಜಾಗ್ರತೆ, ಸ್ವಪ್ನ, ನಿದ್ರೆ ಎನ್ನುವ ಮೂರವಸ್ಥೆಗಳಿಗೆ ಸಾಕ್ಷಿಯಾಗಿರುವ ಓ ಆತ್ಮಾ! ಕೇಳು.
92. ಮೂರು ಆತ್ಮಗಳಲ್ಲಿ ಮಧ್ಯ ಆತ್ಮವಾಗಿ, ಸಮಸ್ತ ಯೋಗಿಗಳಿಂದ ಆರಾಧಿಸಲ್ಪಡುವ ಓ ಆತ್ಮಾ! ಕೇಳು.
93. ಶರೀರದಲ್ಲಿನ 25 ಭಾಗಗಳಿಗೆ ಅತೀತವಾಗಿದ್ದು ಶರೀರವೆಲ್ಲದಕ್ಕೂ ಶಕ್ತಿಯನ್ನು ಕೊಡುವ ಓ ಆತ್ಮಾ! ಕೇಳು.
94. ಪರಮಾತ್ಮಗಿಂತ ಕಡಿಮೆಯವನಾಗಿ, ಜೀವಾತ್ಮಗಿಂತ ಹೆಚ್ಚಿನವನಾಗಿರುವ ಓ ಆತ್ಮಾ! ಕೇಳು.
95. ಮನೆಯಲ್ಲಿ ವಿದ್ಯುತ್ ಶಕ್ತಿಯಂತೆ, ಶರೀರದಲ್ಲಿ ಚೈತನ್ಯ ಶಕ್ತಿಯಾಗಿರುವ ಓ ಆತ್ಮಾ! ಕೇಳು.
96. ಯೋಗಿಗಳಲ್ಲಿಯೂ, ಭೋಗಿಗಳಲ್ಲಿಯೂ ಸಮಾನ ವೃತ್ತಿ ಹೊಂದಿರುವ ಓ ಆತ್ಮಾ! ಕೇಳು.
97. ಶರೀರದಲ್ಲಿ ಅಣುವಣುವಿನಲ್ಲಿ ವ್ಯಾಪಿಸಿ ಶರೀರಾಂತರ್ಗತ ಕೆಲಸಗಳಿಗೆ ಕಾರಣ ಶಕ್ತಿಯಾಗಿರುವ ಓ ಆತ್ಮಾ! ಕೇಳು.
98. ಅಂಡಜ, ಪಿಂಡಜ, ಉದ್ಭಿಜಗಳಾದ ಮೂರು ವಿಧಗಳ ಜೀವರಾಶಿಗಳಲ್ಲಿ ಯಾವ ಜೀವರಾಶಿಯಲ್ಲಾಗಲಿ ಒಂದೇ ಸಿದ್ಧಾಂತ, ಒಂದೇ

ನಿರ್ಣಯವಾಗಿ, ಒಂದೇ ಪದ್ಧತಿಯಾಗಿ ಕೆಲಸಮಾಡುವ ಓ ಆತ್ಮಾ! ಕೇಳು.

99. ಜೀವಾತ್ಮ ಯಾವ ಶರೀರದಲ್ಲಿ ಪ್ರವೇಶಿಸಿದರೂ ಅದರ ಹಿಂದೆ ಆ ಶರೀರದಲ್ಲಿ ಪ್ರವೇಶಿಸಿ ಅಲ್ಲಿ ಕರ್ಮದ ಪ್ರಕಾರ ಏನು ನಡೆಯಬೇಕೋ, ಆ ಕೆಲಸಗಳನ್ನು ಶರೀರದ ಮೂಲಕ ಮಾಡಿಸುವ ಓಆತ್ಮಾ! ಕೇಳು.

100. ಶರೀರದಲ್ಲಿ ಕೆಲಸ ನೀನು ಮಾಡಿ ಫಲವನ್ನು ಜೀವಾತ್ಮನಿಗೆ ಒದಗಿಸುವ ಓ ಆತ್ಮಾ! ಕೇಳು.

101. ಶರೀರದಲ್ಲಿನ ಪ್ರಾಣಕ್ಕೆ ಆಧಾರವಾಗಿ ಆಡಿಸುತ್ತಿರುವ ಓ ಆತ್ಮಾ! ಕೇಳು.

102. ನಾನು ಹುಟ್ಟಿದಾಗಿನಿಂದ ನನ್ನಲ್ಲಿ ಎಲ್ಲ ಕೆಲಸಗಳಿಗೆ ಸಾಕ್ಷಿಯಾಗಿದ್ದು ಪ್ರಾರಬ್ಧವನ್ನು ನನ್ನಿಂದ ಅನುಭವಿಸುವಂತೆ ಮಾಡುವ ಓ ಆತ್ಮಾ! ಕೇಳು.

103. ಶರೀರವೆನ್ನುವ ರಥಕ್ಕೆ ಸಾರಥಿಯಾಗಿದ್ದು, ಇಂದ್ರಿಯಗಳೆನ್ನುವ ಕುದುರೆಗಳನ್ನು ಓಡಿಸುವ ಸಾರಥಿಯಾಗಿ ಶರೀರ ರಥವನ್ನು ಅದಿಷ್ಟಿಸಿರುವ ಜೀವಿಗೆ ಸುಖ ದುಃಖಗಳೆನ್ನುವ ಅನೇಕ ಪ್ರದೇಶಗಳನ್ನು ತೋರಿಸುತ್ತಿರುವ ಓ ಆತ್ಮಾ! ಕೇಳು.

104. ಗಿಡಕ್ಕೆ ತೊಗಟೆ ಅನುಬಂಧವಾಗಿ ಇರುವಹಾಗೆ ಶರೀರದಲ್ಲಿನ ಜೀವಾತ್ಮನಿಗೆ ಶಕ್ತಿ ರೂಪದಲ್ಲಿ ಅನುಬಂಧವಾಗಿರುವ ಓ ಆತ್ಮಾ! ಕೇಳು.

105. ಸಂಸಾರವೆನ್ನುವ ನಾಟಕಕ್ಕೆ ಪರಮಾತ್ಮ ಸೂತ್ರಧಾರಿಯಾದಾಗ, ನಾಟಕವನ್ನು ವೀಕ್ಷಿಸುತ್ತಾ ನಾಟಕದಲ್ಲಿನ ಭಾವನೆಗಳನ್ನು ಅನುಭವಿಸುವ ಪ್ರೇಕ್ಷಕನು ಜೀವಿಯಾದಾಗ ನಾಟಕವನ್ನು ಆಡುವ ಓ ಆತ್ಮಾ! ಕೇಳು.

106. ಶರೀರದಲ್ಲಿ ನೀನು ಮಾಡುತ್ತಿದ್ದರೂ ಜೀವಾತ್ಮ ತಾನು ಮಾಡಿದ ಹಾಗೆ ತಿಳಿದರೆ, ಆ ಕೆಲಸದಲ್ಲಿನ ಕರ್ಮವನ್ನು ಜೀವಾತ್ಮನಿಗೆ ಅಂಟಿಸುವ ಓ ಆತ್ಮಾ! ಕೇಳು.

107. ಶರೀರದಲ್ಲಿ ಪ್ರಾರಬ್ಧ ಕರ್ಮದ ಪ್ರಕಾರ ಸುಖ ದುಃಖಗಳನ್ನು ಆಡಿಸುತ್ತಾ, ಅಹಂ ಹೊಂದಿದ ಜೀವಾತ್ಮ ಪಾಲಿಗೆ ಚಿತ್ರಗುಪ್ತನಾಗಿ, ಆಗಾಮಿ ಕರ್ಮವನ್ನು ಅಂಟಿಸುವ ಓ ಆತ್ಮಾ! ಕೇಳು.

108. ಒಳ್ಳೆಯ ಕೆಟ್ಟ ಕರ್ಮಗಳೆನ್ನುವ ತಾರತಮ್ಯ ಇಲ್ಲದಂತೆ ಆಚರಿಸುತ್ತಾ, ಪಾಪ ಪುಣ್ಯಗಳಿಗೆ ಸಂಬಂಧವಿಲ್ಲದ ಓ ಆತ್ಮಾ! ಕೇಳು.
109. ಅಜ್ಞಾನಿಗಳಲ್ಲಿ ಪ್ರಾರಬ್ಧವನ್ನು ಅನುಭವಿಸುವಂತೆ ಮಾಡುತ್ತಾ ಆಗಾಮಿ ಕರ್ಮವನ್ನು ಅಂಟಿಸುತ್ತಾ, ಜ್ಞಾನ ತಿಳಿದ ಯೋಗಿಗಳಲ್ಲಿ ಪ್ರಾರಬ್ಧವನ್ನು ಅನುಭವಿಸುವಂತೆ ಮಾಡುತ್ತಾ ಆಗಾಮಿ ಕರ್ಮವನ್ನು ಅಂತ್ಯ ಮಾಡುತ್ತಿರುವ ಓ ಆತ್ಮಾ! ಕೇಳು.
110. ಶರೀರ ಯಂತ್ರಾಂಗದಲ್ಲಿ 24 ಭಾಗಗಳನ್ನು ಒಬ್ಬ ಜೀವಿಗೋಸ್ಕರ ನಡೆಸುತ್ತಾ ಪರಮಾತ್ಮನಿಗೆ ಬಂಟನಂತೆ ನಿಂತಿರುವ ಓ ಆತ್ಮಾ! ಕೇಳು.
111. ಶರೀರದಲ್ಲಿ ನೀನು ಏನು ಮಾಡುತ್ತಿರುವುದು ಯಾರಿಗೂ ತಿಳಿಸದಂತೆ ನಿದ್ರಿಸುವ ಸಮಯದಲ್ಲಿ ಸಹ ಶ್ವಾಸವನ್ನು ನಡೆಸುತ್ತಿದ್ದೀಯ. ಅಂತಹ ನಿನ್ನ ಇರುವಿಕೆಯನ್ನು ತಿಳಿಯದೆ ಎಲ್ಲಾ ನಾನೇ ಮಾಡುತ್ತಿದ್ದೇನೆಂದು ಜೀವಿಯು ಭ್ರಮಿಸುತ್ತಿದ್ದರೂ, ಯಾವ ಕೆಲಸವನ್ನು ಜೀವಿಗೆ ಬಿಡದೆ ಎಲ್ಲ ಕೆಲಸಗಳನ್ನು ಎಷ್ಟೋ ಸಹನೆಯಿಂದ ಮಾಡುತ್ತಿರುವ ಓ ಆತ್ಮಾ! ಕೇಳು.
112. ಶರೀರದಲ್ಲಿ ಹೊರತು ಹೊರಗೆ ಎಲ್ಲೂ ಯಾವ ವಸ್ತುವಿನಲ್ಲಿಯೂ ಇಲ್ಲದ ಓ ಆತ್ಮಾ! ಕೇಳು.
113. ಶರೀರದಲ್ಲಿ ಬುದ್ಧಿಗೆ ತಿಳಿಯದ ವಿದ್ಯೆಗಳಾದ (ಪ್ರಾಣಿ) ಚಿಕ್ಕಂದಿನಲ್ಲಿಯೇ ನೀರಿನಲ್ಲಿ ಈಜುವುದು, ಕರು ಹಾಲಿನ ಕೆಚ್ಚಲನ್ನು ಗುರುತಿಸುವುದನ್ನು, ಐದು ವರ್ಷಗಳ ಚಿಕ್ಕ ವಯಸ್ಸಿನ ಮನುಷ್ಯನಿಗೆ ಪಾಂಡಿತ್ಯ ಉಂಟಾಗುವುದು ಮುಂತಾದವುಗಳನ್ನು ತಿಳಿಸುತ್ತಾ ಏನೂ ತಿಳಿಯದಂತಿರುವ ಓ ಆತ್ಮಾ! ಕೇಳು.
114. ಜೀವಿಯು ಧರಿಸಿದ ಶರೀರ ಎಷ್ಟು ಪರಿಮಾಣವಿರುತ್ತದೊ ಅಷ್ಟೇ ದಪ್ಪ, ಅಷ್ಟೇ ಎತ್ತರ ಹೊಂದಿ ಆ ಶರೀರ ಆಕೃತಿಯನ್ನು ಹೊಂದಿರುವ ಓ ಆತ್ಮಾ! ಕೇಳು.
115. ಶರೀರದಲ್ಲಿ ಎಲ್ಲೆಡೆ ವ್ಯಾಪಿಸಿದ್ದು ಕರ್ಮ ಇದ್ದರೆ ಕೈಯ್ಯಲ್ಲಿಯೋ

ಕಾಲಿನಲ್ಲಿಯೋ ಶಕ್ತಿ ಇಲ್ಲದಂತೆ ಮಾಡಿ ಅಂಗವಿಕಲನಾಗಿ ಕಾಣಿಸುವಂತೆ ಮಾಡುತ್ತಾ, ಜೀವಿಗೆ ಕರ್ಮವನ್ನು ಅನುಭವಿಸುವಂತೆ ಮಾಡುವ ಓ ಆತ್ಮಾ! ಕೇಳು.

116. ಶರೀರದಲ್ಲಿ ಪ್ರಾರಬ್ಧ ಕರ್ಮವನ್ನು ಜೀವಿಯಿಂದ ಅನುಭವಿಸುವಂತೆ ಮಾಡುವ ಯಮಧರ್ಮರಾಜನಾಗಿ, ಅಹಮ್ ಇರುವವನಿಗೆ ಆಗಾಮಿ ಕರ್ಮವನ್ನು ತಲೆಗೇರಿಸುವುದರಲ್ಲಿ ಚಿತ್ರಗುಪ್ತನಾಗಿ ಚಲಾವಣೆ ಆಗುವ ಓ ಆತ್ಮಾ! ಕೇಳು.

117. ಮರಣದಲ್ಲಿಯೂ, ಹುಟ್ಟುವಿಕೆಯಲ್ಲಿಯೂ ಜೀವಿಯ ಹಿಂದೆ ಇದ್ದು, ಮರಣದಿಂದ ಹುಟ್ಟುವವರೆಗು ಗುಣಗಳನ್ನು ಜೀವಿಯನ್ನು ಕರ್ಮ ಸಮುದಾಯವನ್ನು ತೆಗೆದುಕೊಂಡು ಬರುತ್ತಿರುವ ಓ ಆತ್ಮಾ! ಕೇಳು.

118. ಶರೀರದಲ್ಲಿ ಎಲ್ಲ ಕೆಲಸಗಳನ್ನು ಮಾಡುತ್ತಾ ಯಾವೊಂದು ಕೆಲಸವನ್ನು ಸಹ ನಾನು ಮಾಡಿದ್ದೇನೆಂದು ಹೊರಗೆ ತಿಳಿಸದೆ, ಎಷ್ಟೋ ವಿಜ್ಞಾನ ಪರಿಕರಗಳನ್ನು ಕಂಡುಹಿಡಿಸುವ ಯೋಚನೆಯನ್ನು ಕೊಟ್ಟರೂ, ಏನೂ ತಿಳಿಯದ ಜೀವಿಯು ನಾನು ಕಂಡು ಹಿಡಿದಿದ್ದೇನೆಂದು ಹೇಳಿಕೊಳ್ಳುತ್ತಿದ್ದರೂ ಸುಮ್ಮನೆ ನೋಡುತ್ತಿರುವ ಓ ಆತ್ಮಾ! ಕೇಳು.

119. ಸಾವಿನಲ್ಲಿಯೂ, ಹುಟ್ಟುವಿಕೆಯಲ್ಲಿಯೂ ಸಾಕ್ಷಿ ಭೂತನಾಗಿ, ಆ ಸಮಯದಲ್ಲಿ ಏನು ನಡೆಯುತ್ತಿದೆಯೋ ಯಾರಿಗೂ ತಿಳಿಯದ ರಹಸ್ಯವನ್ನು ತಿಳಿದ ಓ ಆತ್ಮಾ! ಕೇಳು.

120. ಗಿಡದಲ್ಲಿ ಗಿಡದ ಆಕೃತಿಯನ್ನು ಹೋಲಿದ್ದು, ಪ್ರಾಣಿಯಲ್ಲಿ ಪ್ರಾಣಿ ಆಕೃತಿಯನ್ನು ಹೋಲಿದ್ದು, ಮನುಷ್ಯನಲ್ಲಿ ಮನುಷ್ಯ ಆಕೃತಿಯನ್ನು ಹೋಲಿದ್ದು ಅನೇಕ ಶರೀರಗಳಲ್ಲಿ ಆ ಶರೀರಗಳ ಹಾಗೆ ಅನೇಕ ಆಕಾರಗಳು ಹೊಂದಿರುವ ಓ ಆತ್ಮಾ! ಕೇಳು.

# ಆತ್ಮ ಲಿಂಗಾರ್ಥ

ಈ ಗ್ರಂಥದಲ್ಲಿ ಪ್ರತಿ ಪದ್ಯದ ಕೊನೆಯಲ್ಲಿ **"ಅಖಿಲ ಜೀವಸಂಗ ಆತ್ಮಲಿಂಗ"** ಎಂದು ಹೇಳಲ್ಪಟ್ಟಿದೆ ಇದರ ಅರ್ಥವೇನೆಂದರೇ! ಎಲ್ಲಾ ಜೀವರಾಶಿಗಳಲ್ಲಿ ಬೆರೆತಿರುವ ಓ ಆತ್ಮಾ ಎನ್ನುವುದೇ. **"ದ್ವಾ ವಿಮೌ ಪುರುಷಾ *ಲೋಕೇ*"** ಎನ್ನುವ ಗೀತಾ ವಾಕ್ಯದ ಪ್ರಕಾರ ನಮ್ಮ ಶರೀರದಲ್ಲಿ ಎರಡು ಆತ್ಮಗಳಿವೆ. ಒಂದು ಜೀವಾತ್ಮ, ಎರಡನೆಯದು ಆತ್ಮ. ಜೀವಾತ್ಮ ಒಂದು ಶರೀರದಲ್ಲಿ ಮಾತ್ರ ವ್ಯಾಪಿಸಿದೆ. ಆತ್ಮ ಎಲ್ಲಾ ದೇಹಗಳಲ್ಲಿ ವ್ಯಾಪಿಸಿದೆ. ಈ ಗ್ರಂಥದಲ್ಲಿ ಪದ್ಯಗಳು ಹೇಳಿದವನು ಕೂಡ ಮನುಷ್ಯನೇ, ಆತನ ಶರೀರದಲ್ಲಿ ಕೂಡ ಆತ್ಮವಿದೆ. ತಾನು ಹೇಳುವ ವಿಷಯಗಳು ಇತರರಿಗೆ ಹೇಳದಂತೆ, ತನ್ನಲ್ಲಿರುವ ಆತ್ಮಗೇ ಹೇಳಿಕೊಂಡಂತೆ ಪದ್ಯಗಳ ಕೊನೆಯಲ್ಲಿ **"ಅಖಿಲ ಜೀವಸಂಗ ಆತ್ಮಲಿಂಗ"** ಎಂದಿದ್ದಾರೆ. ಹೀಗೆ ಹೇಳುವುದರಿಂದ ಇತರರಿಗೆ ಇಷ್ಟವಾದರೆ ಈ ಮಾರ್ಗವನ್ನು ಅನುಸರಿಸುತ್ತಾರೆ, ಕಷ್ಟವಾದರೆ ಬಿಡುತ್ತಾರೆ, ಆದರೆ ಸರಿಹೋಗದವರು ದೂಷಿಸುವುದಿಲ್ಲ. ಈ ಗ್ರಂಥದಲ್ಲಿ ಅಜ್ಞಾನಿಗಳಲ್ಲಿನ ಅಂದಕಾರವನ್ನು ತೋರಿಸುತ್ತಾ ಜ್ಞಾನ ಮಾರ್ಗಗಳನ್ನು ಹೇಳುವುದಾಗಿದೆ. ಹಾಗಿರುವಾಗ ಪ್ರಜೆಗಳನ್ನು ಉದ್ದೇಶಿಸಿ ಹೇಳಿದಂತೆ ಕಾಣಿಸಿದರೂ, ಸ್ವಲ್ಪಜನರಿಗೆ ವಿರುದ್ಧವಾಗಿರುತ್ತದೆ. ಆದ್ದರಿಂದ ಹೇಳುವ ವಿಷಯ ಪ್ರಜೆಗಳಿಗೇ ಆದರೂ ಕೊನೆಯ ವಾಕ್ಯ ತನ್ನಲ್ಲಿನ ಆತ್ಮಗೇ ಹೇಳಿಕೊಂಡಂತೆ ಬರೆಯಲ್ಪಟ್ಟಿದೆ.

**ಆ ॥ ಶ್ರೀ ಪರಶಿವ ನೀಡು ಶೃಂಗಾರ ತತ್ತ್ವಂಬು**
**ನಿನ್ನ ಮಹಿಮೆಯನ್ನು ವಿಶೇಷವಾಗಿ**
**ನಾನು ಹೇಳುವೆನು ನಿನ್ನ ಕೃಪೆಯಿಂದ**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಸಮಸ್ತ ಜೀವರಾಶಿಗಳಲ್ಲಿ ಬೆರೆತಿರುವ ಓ ಆತ್ಮಾ! ಕೇಳು, ನಮಗಿಂತ ಪರವಾಗಿರುವವನೆ! ಆತ್ಮಗಿಂತ ಬೇರೆಯಾಗಿರುವ ಓ ಪರಮಾತ್ಮ! ನಿನ್ನೊಂದರ ಮಹಿಮಾ ವಿಶೇಷವನ್ನು, ಅಂದವಾದ ವಿಧಾನವನ್ನು ನಿನ್ನ ಕೃಪಾಕಟಾಕ್ಷದಿಂದ ನಾನು ಹೇಳಲ್ಪಟ್ಟಿದ್ದೇನೆ.

**ಆ ॥ ನೀತಿ ಭಕ್ತಿಯೋಗ ನಿಜವೆಲ್ಲ ಗುರುಮೂರ್ತಿ**
**ಹೇಳಿ ಶತಕವೀಗೆ ಮಾಡಿದ್ದಾನೆ**
**ಎರಡು ಇದನ್ನು ನೋಡಿ ರಕ್ತಿಗಾ ನೀವೆಲ್ಲ**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಅಖಿಲ ಜೀವಿಗಳಲ್ಲಿ ಒಂದೇ ಚೈತನ್ಯವಾಗಿರುವ ಆತ್ಮಾ! ನನ್ನಲ್ಲಿರುವ ಶ್ರೀ ಗುರುದೇವನೇ ನನ್ನಿಂದ ನೀತಿ ಭಕ್ತಿ ಯೋಗಗಳನ್ನು ಬರೆಯಿಸಿ ಶತಕವಾಗಿ ಮಾಡಿಸಿದ್ದಾನೆ. ನೀವೆಲ್ಲರು ಸಂತೋಷದಿಂದ ಇದನ್ನು ತಿಳಿದುಕೊಳ್ಳಿರಿ.

**ಆ ॥ ಶಂಕ ಹಿಡಿಯಬೇಡಿ ಶಾಸ್ತ್ರಜ್ಞನನ್ನು ಕಂಡು**
**ತಪ್ಪುಗಳನ್ನು ಲೆಕ್ಕಿಸದೆ**
**ಮನಸ್ಸು ನಿಲ್ಲಿಸಿ ಇದರ ಮರ್ಮವನ್ನು ತಿಳಿಯಿರಿ**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ:–** ಗಾಳಿಯಲ್ಲಿ ಗಂಧ ಬೆರೆತು ಕಾಣಿಸದಹಾಗೆ, ಶರೀರದಲ್ಲಿ ಕಣ್ಣಿಗೆ ಕಾಣಿಸದೆ ಇರುವ ಓ ಆತ್ಮಾ! ಕೇಳು. ತಪ್ಪು ಹಿಡಿಯಬೇಡ ಶಾಸ್ತ್ರಗಳ ತಿಳಿದವನನ್ನು ನನ್ನ ಮೇಲೆ ಸರಿಹೋಗದ ಭಾವದೊಂದಿಗೆ ಇದು ಕೆಲಸಕ್ಕೆಬಾರದ ವಿಷಯವೆನ್ನಬೇಡಿ. ಮನಸ್ಸನ್ನು ಈ ವಿಷಯದ ಮೇಲೆ ಲಗ್ನಮಾಡಿ ನಾನು ಹೇಳುವ ಮರ್ಮಗಳನ್ನು ತಿಳಿದುಕೊಳ್ಳಿರಿ.

**ಆ ॥ ತಪ್ಪು ಎಣಿಸುತ್ತಾರೆ ತಪಸ್ವಿಕರಿಗಾದರು**
**ಧರಣಿ ಜನರಿಗಿರುವ ಧರ್ಮವದೇ**
**ಅದಕ್ಕಾಗಿಯೇ ನಾನು ನನ್ನದೇ ಹೇಳಿದೆನು**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ:–** ಸಾಕ್ಷಿಯಾಗಿ ಎಲ್ಲಾ ಜೀವಿಗಳಲ್ಲಿರುವ ನನ್ನಲ್ಲಿನ ಆತ್ಮಾ! ಕೇಳು. ದೊಡ್ಡ ತಪಸ್ವಿಕರಿಗಾದರು, ಯೋಗಿಗಳಿಗಾದರು, ಪ್ರಜೆಗಳು ತಪ್ಪುಗಳನ್ನು ಹುಡುಕುತ್ತಿರುತ್ತಾರೆ. ಯಾವ ವಿಷಯ ಅವರಿಗೆ ತಿಳಿಯದಿದ್ದರೂ ಇತರರನ್ನು

ಕುರಿತು ವಿಮರ್ಶಿಸಿ ತಪ್ಪಾಗಿ ಮಾತನಾಡುವುದು ಭೂಮಿ ಮೇಲೆ ಪ್ರಜೆಗಳಿಗೆ ದೊಡ್ಡ ಅಭ್ಯಾಸವಾಗಿ, ಅದೇ ಅವರಿಗೆ ಮುಖ್ಯ ಧರ್ಮವಾಗಿದೆ. ಆದ್ದರಿಂದ ನನ್ನನ್ನು ತಪ್ಪು ಹಿಡಿಯಬೇಡಿ, ಒಳ್ಳೆಯ ಮನಸ್ಸಿನಿಂದ ನನ್ನಬೋಧನೆಯನ್ನು ಕೇಳಿರೆಂದು ಮೊದಲೇ ಹೇಳಿಕೊಳ್ಳುತ್ತಿದ್ದೇನೆ.

**ಆ ॥ ನನಗೆ ಭಯವಿಲ್ಲ ನನ್ನನ್ನು ನೀವೇನೆಂದರು**
**ನನ್ನಂದವರು ನನಗೆ ನನ್ನಾತ್ಮಪ್ರಿಯರು**
**ಇರುವುದು ಇದ್ದಂತೆ ಊಹಿಸಿ ಹೇಳುತ್ತೇನೆ**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ:–** ಶಕ್ತಿ ರೂಪದಲ್ಲಿ ಶರೀರವೆಲ್ಲವೂ ವ್ಯಾಪಿಸಿರುವ ಓ ಆತ್ಮಾ! ಕೇಳು. ನಾನು ಹೇಳಿದ ವಿಷಯಗಳು ನಿಮಗೆ ಸರಿಹೋಗದೆ ನನ್ನನ್ನು ನೀವೇನೆಂದರು ನನಗೆ ಭಯವಿಲ್ಲ. ನನ್ನನ್ನು ಯಾರು ಏನೆಂದರು ನನಗೆ ಅವರು ಆತ್ಮಪ್ರಿಯರೇ. ಪ್ರಪಂಚದಲ್ಲಿನವರಿಗೆ ಭಯಪಡದೆ ಇರುವ ಸತ್ಯವನ್ನು ಇದ್ದಂತೆ ಹೇಳುವುದು ನನ್ನ ಕರ್ತವ್ಯ.

**ಆ ॥ ಕ್ರಮವಾಗಿ ನಾನು ವರ್ಣಿಸುವೆನು ಪದ್ಯಗಳನ್ನು**
**ಸರಸರಾದರೆ ಇದರ ಕ್ರಮವು**
**ಹೆತ್ತವರಿಗೆಲ್ಲ ಉಂಟಾಗುತ್ತದೆ ಸೌಖ್ಯವು**
**ಅಖಿಲ ಜೀವಸಂಗ ಆತ್ಮಲಿಂಗ**

**ಭಾವಾರ್ಥ :–** ಸಮಸ್ತ ಜೀವಿಗಳಲ್ಲಿ ಚೈತನ್ಯವಾಗಿರುವ ಆತ್ಮಾ! ನನ್ನಮಾತು ಕೇಳು. ಆತ್ಮ ವಿಷಯಗಳನ್ನು ಇರುವುದಿದ್ದಂತೆ ಕ್ರಮವಾಗಿ, ಪದ್ಯರೂಪವಾಗಿ ಹೇಳುತ್ತಿದ್ದೇನೆ. ಇದರ ಮೇಲೆ ಅಭಿಲಾಷೆ ಇರುವವರು ನಾನು ಹೇಳಿದ ವಿಷಯಗಳನ್ನು ತಿಳಿದುಕೊಂಡರೆ ಪ್ರಕೃತಿಗಿಂತ ಮೀರಿದ ಆತ್ಮಸುಖ ಉಂಟಾಗುತ್ತದೆ.

**ಆ ॥ ಮೊದಲು ಜಗವು ಇಲ್ಲದೆ ಮೂರು ಎಲೆಗಳ ಗಿಡ**
**ತುದಿಯಲ್ಲಿ ಕೊಂಬೆಗಳೈದು ತೂಗಾಡಿ**
**ಕೊಂಬೆ ಕೊಂಬೆಗಳಲ್ಲಿ ಕೋಟಿ ಕಾಯಿಗಳು ಕಾದಿವೆ**
**ಅಖಿಲ ಜೀವಸಂಗ ಆತ್ಮಲಿಂಗ**

**ಭಾವಾರ್ಥ :–** ಸಮಸ್ತ ಜೀವಿಗಳಲ್ಲಿ ಚೈತನ್ಯವಾಗಿರುವ ಓ ಆತ್ಮಾ! ಕೇಳು. ಪ್ರಪಂಚ ಇಲ್ಲದ ಸಮಯದಲ್ಲಿ ನಮಗೆ ಕಾಣಿಸುವುದು ಏನುಯಿಲ್ಲ. ಕೊನೆಗೆ ಶೂನ್ಯವಾದ ಆಕಾಶ ಕೂಡ ಇಲ್ಲ. ಅದು ಅವ್ಯಕ್ತವಾದ ಪರಿಶುದ್ಧ ಪರಮಾತ್ಮಮಾತ್ರ ಇರುವ ಸ್ಥಿತಿ. ಆ ಸ್ಥಿತಿ ಎಂಥಾದ್ದೊ ಯಾರೂ ಊಹಿಸುವುದಾಗಲಿ, ಅಂದಾಜು ಹಾಕುವುದಾಗಲಿ, ಯೋಚಿಸುವುದಕ್ಕಾಗಲಿ ಸಾಧ್ಯವಾಗುವುದಿಲ್ಲ. ಅಂತಹ ಅಗಮ್ಯವಾದ, ಅಗೋಚರವಾದ, ಅವ್ಯಕ್ತವಾದ ಸ್ಥಿತಿಯಿಂದ ಮೂರು ಆತ್ಮಗಳು ವಿಭಜಿಸಲ್ಪಟ್ಟಿವೆ. ಅವುಗಳೇ ಪರಮಾತ್ಮ, ಆತ್ಮ, ಜೀವಾತ್ಮ, ನಂತರ ಹುಟ್ಟಿರುವುದು ಪ್ರಕೃತಿ. ಪ್ರಕೃತಿಯನ್ನು ವಿಭಜಿಸಿ ನೋಡಿದರೆ ಐದು ಭಾಗಗಳಾಗಿದೆ. ದೈವದಿಂದ ಹುಟ್ಟಿದ ಪಂಚಭೂತಗಳು ಒಂದೊಂದು ಐದು ಭಾಗಗಳಾಗಿ ವಿಭಜಿಸಲ್ಪಟ್ಟು ಒಟ್ಟಾರೆ ಇಪ್ಪತ್ತೈದು ಭಾಗಗಳಾಗಿವೆ. ಆ ಇಪ್ಪತ್ತೈದು ಭಾಗಗಳಿಗು ಶರೀರಗಳು ತಯಾರಾಗಿ ಜೀವಿಗಳ ನಿವಾಸಯೋಗ್ಯವಾಗಿ ಬದಲಾಗಿವೆ. ಎಷ್ಟೋ ಕೋಟಿ ಗಳಿರುವ ಜೀವರಾಶಿಗಳಿಗೆ ಪ್ರಕೃತಿವೊಂದರ ಶರೀರಗಳೇ ನಿವಾಸಗಳಾಗಿವೆ.

ಏನೂ ಅಲ್ಲದ ಅವ್ಯಕ್ತದಿಂದ ಮೂರು ಭಾಗಗಳ ಆತ್ಮಗಳು ಹುಟ್ಟಿವೆ. ಆದ್ದರಿಂದ ಮೇಲಿನ ಪದ್ಯದಲ್ಲಿ ಮೊದಲು ಜಗವಿಲ್ಲದೆ ಮೂರು ಎಲೆಗಳ ಗಿಡ ಎಂದಿದ್ದಾರೆ. ಪರಮಾತ್ಮನಿಂದ ಪಂಚಭೂತಗಳು ಹುಟ್ಟಿವೆ ಆದ್ದರಿಂದ ತುದಿಯಲ್ಲಿ ಕೊಂಬೆಗಳೈದು ತೂಗಾಡಿ ಎಂದಿದ್ದಾರೆ. ಅಸಂಖ್ಯಾತಗಳಾದ ಸಮಸ್ತ ಜೀವರಾಶಿಗಳು ಪ್ರಕೃತಿಯಿಂದ ಸ್ಥೂಲವಾಗಿ ಹುಟ್ಟುತ್ತಿವೆ. ಆದ್ದರಿಂದ ಈ ಪದ್ಯದಲ್ಲಿ ಕೊಂಬೆ ಕೊಂಬೆಯಲ್ಲಿ ಕೋಟಿ ಕಾಯಿಗಳು ಕಾದಿವೆ ಎಂದು ಅತಿ ದೊಡ್ಡ ಸಂಖ್ಯೆಯನ್ನು ಹೇಳಿದ್ದಾರೆ. ಈ ಪದ್ಯದ ಸಾರಾಂಶವೆಲ್ಲವೂ ಮೂರು ಆತ್ಮ ಗಳೊಂದರ ಹುಟ್ಟುವಿಕೆಯನ್ನು ಮತ್ತು ಜಗತಿಯನ್ನು ಕುರಿತು ಹೇಳಲ್ಪಟ್ಟಿದೆಯೆಂದು ತಿಳಿಯಬೇಕು.

**ಆ ॥ ಏನು ಚಿತ್ರವದು ಹೇಗೆ ಸೃಷ್ಟಿಸಿದನೊ**
**ಪತ್ರೆಯೊಂದು ಇಲ್ಲ ಫಲವು ಇಲ್ಲ**
**ಬೇರು ಇಲ್ಲ ನೋಡವಂತವರಿಗೀ ಜಾಡು**
**ಅಖಿಲ ಜೀವಸಂಗ ಆತ್ಮಲಿಂಗ**

**ಭಾವಾರ್ಥ :–** ಮೂರು ಆತ್ಮಗಳಲ್ಲಿ ಎರಡನೆಯದಾದ ಓ ಆತ್ಮಾ! ಕೇಳು. ಪರಮಾತ್ಮ ಎಷ್ಟೋ ವಿಚಿತ್ರವಾಗಿ ವಿಶ್ವವನ್ನು ತಯಾರುಮಾಡಿ ಪ್ರಪಂಚದಲ್ಲಿ ಜಗತಿಯಾದ ಶರೀರಗಳನ್ನು ಸೃಷ್ಠಿಸಿದ್ದಾನೆ. ಪಂಚಭೂತಗಳಾದ ಪ್ರಪಂಚವನ್ನು, ಜೀವಚೈತನ್ಯ ಹೊಂದಿರುವ ಶರೀರಗಳಾದ ಜಗತಿಯನ್ನು ಸೇರಿಸಿ ವಿಶ್ವ ಎನ್ನುತ್ತೇವೆ. ವಿಶ್ವ ಬದಲಾವಣೆಯಾಗದ ಮರಣ ಹೊಂದದ ಪಂಚಭೂತಗಳೊಂದಿಗು ಮತ್ತು ಬದಲಾವಣೆ ಹೊಂದುತ್ತಿರುವ ಮರಣ ಹೊಂದುತ್ತಿರುವ ಶರೀರಗಳೊಂದಿಗು ತುಂಬಿದೆ. ವಿಶ್ವ ಹೇಗೆ ಹುಟ್ಟಿದೆಯೆಂದು ನೋಡಿದರೆ ಸ್ವಲ್ಪವೂ ಅದರ ಜಾಡಾಗಲಿ ಆಧಾರವಾಗಲಿ ದೊರೆಯುವುದಿಲ್ಲ. ವಿಶ್ವ ಹುಟ್ಟುವುದಕ್ಕೆ ಕಾರಣವಾದ ಕರ್ಮವಿಲ್ಲ ಕರ್ಮಕ್ಕೆ, ಕಾರಣವಾದ ಕಾರ್ಯವು ಇಲ್ಲ. ಎಷ್ಟೋ ದೊಡ್ಡದಾಗಿರುವ ಭೂಮಿ, ಆಕಾಶ ಅವುಗಳ ಮಧ್ಯದಲ್ಲಿರುವ ಭಯಂಕರವಾದ ಗಾಳಿ, ಅಗ್ನಿ, ನೀರು ಏನುಯಿಲ್ಲದ ಏನು ಅಲ್ಲದ ಸ್ಥಿತಿಯಿಂದ ಹುಟ್ಟುವುದು ಬಹಳ ವಿಚಿತ್ರ. ಸ್ಥೂಲವಾದ ಕಣ್ಣಿಗೆ ಕಾಣಿಸುವ ಆಕಾಶ, ಗಾಳಿ, ಅಗ್ನಿ, ನೀರು, ಭೂಮಿ ಹೇಗೆ ಹುಟ್ಟಿವೆಯೋ ಯೋಚಿಸಿದವರಿಗೆ ಎಳ್ಳಷ್ಟು ಕೂಡ ಅರ್ಥವಾಗುವುದಿಲ್ಲ. ಎಲ್ಲದಕ್ಕು ಮೂಲಪುರುಷನಾದ ದೈವದಿಂದ ಹುಟ್ಟಿದ ವಿಶ್ವವೊಂದರ ಹುಟ್ಟನ್ನು ಕುರಿತು ಯಾರು ತಿಳಿದುಕೊಳ್ಳಲಾರರು. ವಿಶ್ವದ ಹುಟ್ಟನ್ನು ತಿಳಿಯುವುದಕ್ಕೆ ಯಾವ ಆಧಾರ ಇಲ್ಲ. ಆದ್ದರಿಂದ ಪತ್ರೆಯೊಂದು ಇಲ್ಲ, ಫಲವಿಲ್ಲ, ಬೇರು ಇಲ್ಲ, ನೋಡುವವರಿಗೀ ಜಾಡು ಎಂದು ಪದ್ಯದಲ್ಲಿ ಹೇಳಿದ್ದಾರೆ. ಎಷ್ಟೋ ಬಲವಾದ ಗಾಳಿಯನ್ನು, ಎಲ್ಲವನ್ನು ಸುಟ್ಟುಹಾಕುವ ಅಗ್ನಿಯನ್ನು, ಎಷ್ಟೋ ಶಕ್ತಿ ಇರುವ ನೀರನ್ನು, ಚಿಕ್ಕ ರೇಣುವಿನಿಂದ ಭೂಮಂಡಲ, ನಕ್ಷತ್ರ ಮಂಡಲದ ವರೆಗು ಯಾವ ಸೈನ್ಸಿಗು ಸಿಗದ ಆಧಾರದಿಂದ ಪರಮಾತ್ಮ ಹುಟ್ಟಿಸಿರುವುದು ಆಲೋಚಿಸಿದರೂ ಅರ್ಥವಾಗದ ದೊಡ್ಡ ವಿಚಿತ್ರ ವಿಷಯವಾಗಿದೆ.

**ಆ ॥ ಪ್ರಣವದಲ್ಲೈದು ಪ್ರಾಣಾಕ್ಷರಗಳುಟ್ಟಿ**
**ಜಗಗಳಾದವಯ್ಯ ಜತನ ವಾಗುತ್ತಾ**
**ಅದು ಜೀವವಾಯಿತು ಆ ಮೇಲಿನದು ಶಿವವಾಯಿತು**
**ಅಖಿಲ ಜೀವಸಂಗ ಆತ್ಮಲಿಂಗ**

**ಭಾವಾರ್ಥ :–** ಅಖಿಲ ಜೀವರಾಶಿಗಳಲ್ಲಿ ಎಲ್ಲಾ ಕೆಲಸಗಳು ಮಾಡಿಸುತ್ತಿರುವ ಓ ಆತ್ಮಾ! ಕೇಳು. ಏನು ಇಲ್ಲದ ಏನೂ ಅಲ್ಲದ ಸ್ಥಿತಿಯಿಂದ ಮೊದಲು ಪ್ರಕೃತಿ ಹುಟ್ಟಿದೆಯೆಂದು ತಿಳಿದುಕೊಂಡಿದ್ದೇವೆ. ಪ್ರಕೃತಿಯಿಂದ ಐದು ಭಾಗಗಳು ಸೀಳಿಹೋಗಿವೆ. ಅವುಗಳೇ ಆಕಾಶ, ಗಾಳಿ, ಅಗ್ನಿ, ನೀರು, ಭೂಮಿ ಎನ್ನುವವು. ಪ್ರಕೃತಿ ವಿಭಜಿಸಲ್ಪಟ್ಟು ಪ,ರ,ಕ,ರು,ತಿ ಎನ್ನುವ ಬೀಜಾಕ್ಷರಗಳಾಗಿ ತಯಾರಾಗಿ, ಆ ಜೀಜಗಳಿಗೆ ಮರಣಿಸದ ಬದಲಾವಣೆಯಾಗದ ಐದು ವಸ್ತುಗಳು ಅಚರ ಪ್ರಕೃತಿ ಎನ್ನುವ ಹೆಸರಿನಿಂದ ಪ್ರಪಂಚವಾಗಿ ತಯಾರಾಗಿವೆ. ಪ್ರಪಂಚ ರೂಪವಾಗಿರುವ ಆಕಾಶ "ಪ" ನಿಂದ, ಗಾಳಿ "ರ" ನಿಂದ, ಅಗ್ನಿ "ಕ"ನಿಂದ, ನೀರು "ರು"ನಿಂದ, ಭೂಮಿ "ತಿ" ಯಿಂದ ಹುಟ್ಟಿವೆ. ಇದನ್ನೇ ಬದಲಾವಣೆ ಹೊಂದದ ಅಚರ ಪ್ರಕೃತಿ ಎನ್ನುತ್ತಿದ್ದೇವೆ. ಬದಲಾವಣೆಹೊಂದುತ್ತಾ ಮರಣ ಹೊಂದುವ ಪ್ರಕೃತಿ ಮತ್ತೊಂದು ಇದೆ. ಅದನ್ನೇ ಚರ ಪ್ರಕೃತಿ ಎನ್ನುತ್ತಿದ್ದೇವೆ. ಅಚರ ಪ್ರಕೃತಿಯನ್ನು ಪ್ರಪಂಚ ಎನ್ನುವ ಹೆಸರಿನಿಂದ ಕರೆದರೆ, ಚರ ಪ್ರಕೃತಿಯನ್ನು ಜಗತಿ ಎಂದು ಕರೆಯುತ್ತಿದ್ದೇವೆ. ಜಗತಿ ಜೀವ ರೂಪವಾದ ಶರೀರಗಳಾಗಿದೆ.

ಜೀವರೂಪವಾದ ಜಗತಿ ಪ್ರಕೃತಿಯಿಂದ ಹುಟ್ಟಿರುವುದೇ. ಅದು ಹೇಗೆಂದರೆ ಪ್ರಕೃತಿ ಐದು ಬೀಜಾಕ್ಷರಗಳಾಗಿ ವಿಭಾಗವಾಗಿ ಅವುಗಳಿಗೆ ಪಂಚಭೂತ ಗಳೆನ್ನುವ ಪ್ರಪಂಚ ತಯಾರಾಗಿದೆಯೆಂದು ತಿಳಿದುಕೊಂಡಿದ್ದೇವೆ. ಪ್ರಕೃತಿ ವಿಭಾಗವಾದ ಐದು ಬೀಜಾಕ್ಷರಗಳಿಂದ ಸ್ವಲ್ಪ ಬದಲಾವಣೆಯಾದ ಮತ್ತೊಂದು ಐದು ಬೀಜಾಕ್ಷರಗಳು ಹುಟ್ಟಿವೆ ಅವುಗಳೆ **ನ,ಮಃ,ಶಿ,ವಾ,ಯ**. ಮೊದಲು ಹುಟ್ಟಿದ ಐದು ಬೀಜಾಕ್ಷರಗಳಾದ "ಪ" ನಿಂದ "ನ", "ರ" ನಿಂದ "ಮಃ", "ಕ" ನಿಂದ "ಶಿ", "ರು" ನಿಂದ "ವಾ", "ತಿ" ನಿಂದ "ಯ" ಎನ್ನುವವು ತಯಾರಾಗಿವೆ.

**ಪ ರ ಕ ರು ತಿ – ಅಚರ ಪ್ರಕೃತಿ (ಪ್ರಪಂಚ)**

**ನ ಮಃ ಶಿ ವಾ ಯ – ಚರ ಪ್ರಕೃತಿ (ಜಗತಿ)**

ಅಚರ ಪ್ರಕೃತಿಯಾದ ಆಕಾಶ, ಗಾಳಿ, ಅಗ್ನಿ, ನೀರು, ಭೂಮಿ ಎನ್ನುವವು ಬೇರೆ ಬೇರೆ ಭಾಗಗಳಾಗಿವೆ. ಚರ ಪ್ರಕೃತಿಯಾದ ಜಗತಿ ಪಂಚಭೂತಗಳು ಸೇರಿ ಏರ್ಪಟ್ಟಿದೆ. ಪಂಚಭೂತಗಳಾದ ಪ್ರಕೃತಿಗೆ ಪರಮಾತ್ಮ ಸೇರುವುದರಿಂದ ಅಚರ, ಚರವಾದ ಎರಡು ಪ್ರಕೃತಿಗಳಿಗೆ ಚೈತನ್ಯ ಬಂದಿದೆ. ಎರಡು ಪ್ರಕೃತಿಗಳಲ್ಲಿ ವಿಭಾಗವಾಗಿರುವ ಆಕಾಶ, ಗಾಳಿ, ಅಗ್ನಿ, ನೀರು, ಭೂಮಿಗೆ ಚೈತನ್ಯ ಏರ್ಪಟ್ಟಾಗ, ಹಾಗೇ ಇಪ್ಪತ್ತೈದು ಭಾಗಗಳಾಗಿ ವಿಭಾಗವಾಗಿ ಒಂದರೊಂದಿಗೆ ಒಂದು ಬೆರೆತಿರುವ ಚರ ಪ್ರಕೃತಿಗೆ ಚೈತನ್ಯದೊಂದಿಗೆ ಜೀವ ಏರ್ಪಟ್ಟಿದೆ. ಚರ ಪ್ರಕೃತಿ ಶರೀರರೂಪವಾಗಿ ಅಸಂಖ್ಯಾತವಾಗಿರುತ್ತಾ ಅನೇಕ ಜೀವರಾಶಿಗಳು ನಿವಾಸಿಸುವುದಕ್ಕೆ ಆಧಾರವಾಗಿದೆ. ಪರಮಾತ್ಮ ಅಂಶ ಆತ್ಮವಾಗಿ ಮತ್ತು ಜೀವಾತ್ಮವಾಗಿ ವಿಭಜಿಸಲ್ಪಟ್ಟು ಪ್ರಕೃತಿ ಶರೀರಗಳಲ್ಲಿರುತ್ತಾ ಪ್ರಪಂಚವೆಲ್ಲಾ ಜಗತಿಯಾಗಿ ವ್ಯಾಪಿಸಿದೆ. ಪರಮಾತ್ಮ ಜೀವರೂಪವಾದ ಶರೀರಗಳಲ್ಲಿಯೇ ಅಲ್ಲದೆ ಮರಣವಿಲ್ಲದ ಆಕಾಶ, ಗಾಳಿ, ಅಗ್ನಿ, ನೀರು, ಭೂಮಿಯಲ್ಲಿ ಕೂಡ ವ್ಯಾಪಿಸಿದೆ. ಆದರೆ ಇದರಲ್ಲಿ ಒಂದು ಪ್ರತ್ಯೇಕತೆ ಇದೆ. ಅದು ಏನೆಂದರೇ! ಶರೀರಗಳು ಹೊಂದಿರುವ ಪ್ರಕೃತಿಯಲ್ಲಿ ಜೀವವೇ ಅಲ್ಲದೇ ಆತ್ಮ ಕೂಡ ಇದೆ. ಪಂಚ ಭೂತಗಳಾದ ಆಕಾಶ, ಗಾಳಿ, ಅಗ್ನಿ, ನೀರು ಭೂಮಿಯಲ್ಲಿ ಆತ್ಮವಿದೆ, ಆದರೆ ಪ್ರತ್ಯೇಕಿಸಿ ನಮ್ಮಂತೆ ಕರ್ಮವಿರುವ ಜೀವಾತ್ಮ ಇಲ್ಲ. ಅವಶ್ಯಬಂದಾಗ ಅವುಗಳಲ್ಲಿ ಕರ್ಮವಿಲ್ಲದ ಜೀವಾತ್ಮ ತನ್ನ ಪಾತ್ರ ಪೋಷಿಸಬಲ್ಲನು. ಜೀವರಾಶಿಗಳ ಶರೀರಗಳಲ್ಲಿ ಹಾಗಲ್ಲದೆ ಒಂದೊಂದು ಶರೀರಕ್ಕೆ ಒಂದೊಂದು ಕರ್ಮವಿರುವ ಜೀವಾತ್ಮ ನಿಗಧಿಸಲ್ಪಟ್ಟಿವೆ.

ಶರೀರವಿರುವ ಜೀವರಾಶಿಗಳಿಗೆ ಕರ್ಮ ಗುಣಗಳಿದ್ದು ಮರಣ ಕೂಡ ಇದೆ. ಮರಣದಲ್ಲಿ ಆತ್ಮ ಕರ್ಮ ಗುಣಗಳನ್ನು ಜೀವಿಯನ್ನು ಮತ್ತೊಂದು

ಶರೀರಕ್ಕೆ ತೆಗೆದುಕೊಂಡು ಹೋಗುತ್ತಾನೆ. ಅಷ್ಟೇಅಲ್ಲದೆ ಕರ್ಮ ಪ್ರಕಾರ ಜೀವಿಯು ಅನುಭವಿಸುವುದಕ್ಕೆ ಎಲ್ಲಾ ಕೆಲಸಗಳು ಆತ್ಮವೇ ಮಾಡಬೇಕಾಗಿದೆ. ಆದ್ದರಿಂದ ಶರೀರಗಳಲ್ಲಿ ಜೀವಿಯೊಂದಿಗೆ ಆತ್ಮ ಇರಬೇಕಾದ ಅವಶ್ಯಕತೆ ಇದೆ. ಪಂಚ ಭೂತಗಳು ಭೂಮಿ ಮೇಲಿರುವ ಜೀವರಾಶಿಗಳು ಕೆಲಸ ಮಾಡಿದಂತೆ ಮಾಡುವುದಾಗಲಿ, ಕರ್ಮ ಸಂಪಾದಿಸಿಕೊಳ್ಳುವುದಾಗಲಿ ಇರುವುದಿಲ್ಲ. ಆದ್ದರಿಂದ ಐದು ಭೂತಗಳಲ್ಲಿ ನಮ್ಮಂತೆ ಕರ್ಮವಿರುವ ಜೀವಾತ್ಮ ಇರಬೇಕಾದ ಅವಶ್ಯಕತೆ ಇಲ್ಲ. ಕೆಲವು ಅತ್ಯವಶ್ಯಕ ಪರಿಸ್ಥಿತಿಗಳಲ್ಲಿ ಮಾತ್ರ ಜೀವಾತ್ಮ ತನ್ನ ಪಾತ್ರವನ್ನು ಪೋಷಿಸಬಲ್ಲದು. ಆದ್ದರಿಂದ ಅವುಗಳನ್ನು ಭೂತಗಳೆನ್ನುತ್ತಿದ್ದೇವೆ. ಭೂತ ಎಂದರೇ ಆಧ್ಯಾತ್ಮಿಕ ಪರಿಭಾಷೆಯಲ್ಲಿ ಜೀವಿಯೆಂದು ಅರ್ಥ.

ಜೀವರೂಪವಾದ ಪ್ರಕೃತಿಯಲ್ಲಿ ಪರಮಾತ್ಮ ಅಂಶದಿಂದ ಆತ್ಮ ಶರೀರದಲ್ಲಿ ಪ್ರತ್ಯೇಕವಾಗಿರುತ್ತಾ, ಶರೀರದಲ್ಲಿ ಕದಲಿಕೆಗೆ ಕಾರಣವಾಗಿರುವಾಗ, ಪ್ರಕೃತಿ ಭಾಗಗಳಲ್ಲಿನ ಆಕಾಶದೊಂದಿಗೆ ಪರಮಾತ್ಮ ಅಂಶ ಸೇರುವುದರಿಂದ ಜೀವಾತ್ಮ ಏರ್ಪಟ್ಟಿದೆ. ಪ್ರಕೃತಿಯಲ್ಲಿನ ಸ್ವಲ್ಪ ಅಂತರ್ಭಾಗವಾಗಿರುವುದರಿಂದ ಜೀವಾತ್ಮ ದೈವತ್ವವನ್ನು ಕಳೆದುಕೊಂಡು ಪ್ರಕೃತಿ ತತ್ತ್ವವನ್ನು ಹೊಂದಿದೆ. ಸ್ವಲ್ಪ ದೈವತ್ವ, ಸ್ವಲ್ಪ ಪ್ರಕೃತಿ ತತ್ತ್ವ ಹೊಂದಿರುವುದರಿಂದ ಅತ್ತ ಇತ್ತ ಅಲ್ಲದ ನಪುಂಸಕತ್ವವನ್ನು ಹೊಂದಿದೆ. ಜೀವಾತ್ಮಗಿಂತ ಪ್ರತ್ಯೇಕವಾಗಿರುವ ಆತ್ಮ ಪ್ರಕೃತಿ ಭಾಗಗಳೊಂದಿಗೆ ಸೇರದೆ ಪ್ರತ್ಯೇಕವಾಗಿರುವುದರಿಂದ ಅದು ದೈವವಾಗಿ ಭಾವಿಸಲ್ಪಡುತ್ತಿದೆ. ಆದ್ದರಿಂದ ಪದ್ಯದಲ್ಲಿ ಅದು ಜೀವವಾಯಿತು ಎಂದು ಪ್ರಕೃತಿಯೊಂದಿಗೆ ಬೆರೆತಿರುವ ಜೀವಾತ್ಮವನ್ನು ಉದ್ದೇಶಿಸಿ ಹೇಳಿದ್ದಾರೆ. ಆ ಮೇಲಿನದ್ದು ದೈವವಾಯಿತು ಎಂದು ಜೀವಾತ್ಮಗಿಂತ ಭಿನ್ನವಾಗಿ ಶರೀರವನ್ನದಿಷ್ಟಿಸಿ ಶಿರೋಭಾಗದಲ್ಲಿ ನಿವಾಸಿಸುತ್ತಿರುವ ಆತ್ಮವನ್ನು ಉದ್ದೇಶಿಸಿ ಹೇಳಿದ್ದಾರೆ. ಪ್ರಪಂಚವನ್ನು ಜಗತಿಯನ್ನು ಎರಡನ್ನು ಉದ್ದೇಶಿಸಿ ಐದು ಪ್ರಾಣಾಕ್ಷರಗಳು ಹುಟ್ಟಿ ಜಗಗಳಾದ ವಯ್ಯ ಎಂದಿದ್ದಾರೆ.

**ಆ ॥ ಮಾಯೆ ತಿಳಿಯಬಾರದು ಮಾಯ ಮೂಲವಿಲ್ಲ**
**ಮಾಯೆ ವಾಯು ರೂಪವಾಯಿತು**
**ಮಮತೆ ಜತೆಹುಟ್ಟಿತು ಮಹಾದಹಂಕಾರವು**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ:–** ಸಮಸ್ತ ಜೀವರಾಶಿಗಳಲ್ಲಿ ಚೈತನ್ಯರೂಪವಾಗಿ ಖಂಡ ಖಂಡಗಳಾಗಿ ಶರೀರದಲ್ಲಿ ವ್ಯಾಪಿಸಿರುವ ಓ ಆತ್ಮಾ! ಕೇಳು. ಸೃಷ್ಠಿ ಎಲ್ಲವೂ ಪರಮಾತ್ಮ ತುಂಬಿರುವಾಗ, ಜಗತಿಯೆಲ್ಲವೂ ಮಾಯೆ ತುಂಬಿದೆ. ಸರ್ವ ವಿಶ್ವವೆಲ್ಲವನ್ನು ಪರಮಾತ್ಮ ಸೃಷ್ಠಿಸಿದಾಗ ಅದರಲ್ಲಿ ಜಗತ್ತಿನಷ್ಟು ಮಾಯೆಯನ್ನು ಪ್ರಕೃತಿ ಸೃಷ್ಠಿಸಿದೆ. ಪ್ರಕೃತಿಯಿಂದ ಹುಟ್ಟಿರುವುದನ್ನು ಮಾಯೆ ಎಂದು ಒಂದು ಮತದಲ್ಲಿ ಕರೆದಾಗ, ಮತ್ತೊಂದು ಮತದಲ್ಲಿ ಸಾತಾನ್ ಎಂದು, ಮತ್ತೊಂದು ಮತದಲ್ಲಿ ಸೈತಾನ್ ಎಂದೂ ಕರೆಯುತ್ತಿದ್ದಾರೆ. ಕೆಲವರು ಮಾಯೆಯನ್ನು ಸ್ತ್ರೀಗೆ ಸಮಾನವಾಗಿ ಹೋಲಿಸಿದಾಗ, ಕೆಲವರು ಪುರುಷನಿಗೆ ಹೋಲಿಸಿದ್ದಾರೆ. ವಾಸ್ತವಕ್ಕೆ ಮಾಯೆ ಸ್ತ್ರೀ ಸಂಬಂಧವಾದುದು. ಪ್ರಕೃತಿ ಅಂಶವಾದ್ದರಿಂದ ಮಾಯೆಯನ್ನು ಸ್ತ್ರೀ ಎನ್ನುವುದೇ ಸಮಂಜಸ. ಮಾಯೆಗೆ ಒಂದು ಪ್ರತ್ಯೇಕವಾದ ರೂಪವಿಲ್ಲ. ಮಾಯೆ ಗುಣಗಳ ರೂಪದಲ್ಲಿ ಎಲ್ಲರಲ್ಲಿದೆ. ಅದು ಯಾರಿಗೂ ಕಾಣಿಸುವುದಲ್ಲ. ಎಂತಹವರಾದರೂ ಅದರ ವಿಧಾನವನ್ನು ಪೂರ್ತಿ ಗ್ರಹಿಸಲಾರರು. ಯಾರಾದರೂ ಅದನ್ನು ತಿಳಿಯಬೇಕೆಂದರೇ ದುಸ್ಸಾಧ್ಯ, ಯಾರಿಗೂ ಅರ್ಥವಾಗುವುದಿಲ್ಲ. ಮಾಯೆ ಮನುಷ್ಯರ ಮೇಲೆ ದಾಳಿ ಮಾಡುತ್ತಿದ್ದರೂ, ದೊಡ್ಡ ಜ್ಞಾನಿಗಳು ಸಹಿತವು ಇದು ಮಾಯೆ ಕೆಲಸವೆಂದು ತಿಳಿಯಲಾರರು. ಆದ್ದರಿಂದಲೇ ಮೇಲಿನ ಪದ್ಯದಲ್ಲಿ ಮಾಯೆ ತಿಳಿಯುವುದಿಲ್ಲ, ಮಾಯೆಗೆ ಮೂಲವಿಲ್ಲ ಎಂದಿದ್ದಾರೆ. ಮಾಯೆ ಕಣ್ಣಿಗೆ ಕಾಣಿಸುವ ರೂಪ ಇಲ್ಲದಿರುವುದು, ಆದ್ದರಿಂದ ಈ ಪದ್ಯದಲ್ಲಿ ಮಾಯೆ ವಾಯು ರೂಪವಾಯಿತು ಎಂದಿದ್ದಾರೆ. ಮಾಯೆ ಶರೀರದಲ್ಲಿ ಗುಣಗಳ ವಿಧಾನದಿಂದ ಇದೆ. ಆದ್ದರಿಂದ ಮಮತೆ ಜೊತೆಹುಟ್ಟಿತು ಮಹದಹಂಕಾರ ಎಂದು ಹೇಳಿದ್ದಾರೆ.

**೮ ॥ ಐದು ಯ್ಯೆದು ಇಪ್ಪತ್ತೈದಾದ ಮಾಯೆಗೆ**
**ದೊರೆತನಂಬು ಬಂತು ದುರಿತ ಮೆಚ್ಚಿ**
**ಭ್ರಾಂತಿ ಯೆಲ್ಲ ಮಾಯೆ ಬ್ರಹ್ಮಾಂಡ ವಂತಾಯಿತು**
**ಅಖಿಲ ಜೀವಸಂಗ ಆತ್ಮಲಿಂಗ.**

ಭಾವಾರ್ಥ : ಸರ್ವ ಜೀವರಾಶಿಗಳಲ್ಲಿ ನಿವಾಸಿಸುತ್ತಾ, ಆಯಾ ಶರೀರ ಆಕಾರವನ್ನು ಹೊಂದಿರುವ ಓ ಆತ್ಮಾ! ಕೇಳು. ಪ್ರಕೃತಿ ಎರಡು ಭಾಗಗಳಾಗಿ ಅದರಲ್ಲಿ ಒಂದು ಐದು ಭಾಗಗಳಾಗಿ ಸೀಳಿಹೋಗಿ ಅಚರ ಪ್ರಕೃತಿಯಾಗಿ, ಮತ್ತೊಂದು ಐದು ಐದು ಭಾಗಗಳಾಗಿ ಸೀಳಿ ಇಪ್ಪತ್ತೈದು ಭಾಗಗಳಾಗಿ ಒಂದಕ್ಕೊಂದು ಬೆರೆತು ಚರ ಪ್ರಕೃತಿಯಾಗಿ ತಯಾರಾಗಿದೆ. ಚಲಿಸುವ ಈ ಪ್ರಕೃತಿಯಲ್ಲಿಯೇ ಹೇಗೆ ಹುಟ್ಟಿವೆಯೊ ತಿಳಿಯದೆ, ಅದರ ಮೂಲಯಾವಮಾತ್ರ ಅರ್ಥವಾಗದೆ ಗುಣಗಳು ತಯಾರಾಗಿವೆ. ಗುಣಗಳೆಲ್ಲವನ್ನು ಸೇರಿಸಿ ಮಾಯೆ ಎಂದು ಕರೆಯುತ್ತಿದ್ದೇವೆ. ಯಾವವಿಧವಾಗಿ ತಯಾರಾಗಿದೆಯೋ ತಿಳಿಯದ ಮಾಯೆ ಶರೀರದಲ್ಲಿಯೇ ಇರುತ್ತಾ ಅದರ ಪ್ರಭಾವವನ್ನು ಶರೀರದ ಮೇಲೆ ಅದರಲ್ಲಿನ ಜೀವಿಯ ಮೇಲೆ ತೋರಿಸುತ್ತಿದೆ. ಆದ್ದರಿಂದ ಈ ಪದ್ಯದಲ್ಲಿ ಐದು ಐದು ಇಪ್ಪತ್ತೈದಾದ ಮಾಯೆಗೆ ದೊರೆತನಂಬು ಬಂದಿದೆ ಎಂದಿದ್ದಾರೆ.

ನಾಳೆ ಎಂಬಮಾತು ನಿಜವಾದರೂ ಅದು ಕಾಣಿಸುವುದಿಲ್ಲ. ನಾಳೆ ಎನ್ನುವ ಮಾತು ಭಾವನೆಯಿಂದ ತಿಳಿದುಕೊಳ್ಳಬೇಕಾಗಿರುವುದು, ಆದ್ದರಿಂದ ನಾಳೆ ಎನ್ನುವುದು ಭಾವನೆಯಿಂದ ಕೂಡಿದ ಭ್ರಾಂತಿ ಎನ್ನಬಹುದು. ಇರುವುದು ಇಲ್ಲದಂತೆ, ಇಲ್ಲದ್ದು ಇರುವಂತೆ ಭಾವಿಸಿಕೊಳ್ಳುವುದನ್ನು ಭ್ರಾಂತಿ ಎನ್ನುತ್ತೇವೆ. ಮಾಯೆ ಇದ್ದು ಕಣ್ಣಿಗೆ ಕಾಣಿಸದಂತಿದೆ. ಕಾಣಿಸದ ಮಾಯೆಯನ್ನು, ದೃಷ್ಟಿಗೆ ತಿಳಿಯದ ಮಾಯೆಯನ್ನು ಭಾವನೆಗೆ ಇರುವಂತೆ ತಿಳಿದುಕೊಳ್ಳುವುದನ್ನು ಭ್ರಾಂತಿ ಎನ್ನುತ್ತೇವೆ. ಸ್ಥೂಲವಲ್ಲದ ಸೂಕ್ಷ್ಮವಾದ ಮಾಯೆಯನ್ನು ಈ ಪದ್ಯದಲ್ಲಿ ಭ್ರಾಂತಿಯೆಲ್ಲ ಮಾಯೆ ಎಂದಿದ್ದಾರೆ. ತಲೆಯಲ್ಲಿ ಸ್ವಲ್ಪವಿರುವ ಭ್ರಾಂತಿಯುತ ಮಾಯೆ ಎಲ್ಲಾ ಶರೀರಗಳಲ್ಲಿ ಒಳಗೊಂಡಿದೆ. ಎಲ್ಲಾ ಶರೀರಗಳು ಪ್ರಪಂಚವೆಲ್ಲ ತುಂಬಿವೆ. ಪ್ರಪಂಚವನ್ನು ಬ್ರಹ್ಮಾಂಡವೆಂದು ಕೂಡ ಕರೆಯುತ್ತಿರುತ್ತಾರೆ.

ಪರಮಾತ್ಮನಿಂದ ಹುಟ್ಟಲ್ಪಟ್ಟಿದೆ ಆದ್ದರಿಂದ ಪ್ರಪಂಚವನ್ನು ಬ್ರಹ್ಮಾ ಅಂಡ ಎನ್ನುತ್ತಿದ್ದರು. ಬ್ರಹ್ಮ ಎಂದರೇ ಪರಮಾತ್ಮ (ದೊಡ್ಡದು) ಎಂದು, ಅಂಡ ಎಂದರೆ ಮೊಟ್ಟೆ ಎಂದು ಅರ್ಥ. ಕೋಳಿ ಇದ್ದಂತಿದ್ದು ಒಂದುಸಲ ಮೊಟ್ಟೆಯನ್ನಿಟ್ಟಂತೆ, ಪರಮಾತ್ಮ ಇಲ್ಲದ ಪ್ರಪಂಚವನ್ನು ಒಂದುಸಲ ಕಾಣಿಸುವಂತೆ ಮಾಡಿದ್ದಾನೆ. ಮೊಟ್ಟೆ ಕೋಳಿಗೆ ಹುಟ್ಟಿದೆ ಆದ್ದರಿಂದ ಕೋಳಿಮೊಟ್ಟೆ ಎನ್ನುವಂತೆ, ಪ್ರಪಂಚ ಪರಮಾತ್ಮಗೆ ಹುಟ್ಟಿದೆ, ಆದ್ದರಿಂದ ಬ್ರಹ್ಮ ಮೊಟ್ಟೆ ಅಥವಾ ಬ್ರಹ್ಮಾಂಡ ಎನ್ನುತ್ತಿದ್ದೇವೆ. ಪ್ರಪಂಚವೆಲ್ಲ ತುಂಬಿರುವ ಜೀವರಾಶಿಗಳಲ್ಲಿ ಮಾಯೆ ಇದ್ದು ಕಾಣಿಸಿದಂತಿದೆ. ಆದ್ದರಿಂದ ಮಾಯೆ ಪ್ರಪಂಚವೆಲ್ಲ ಜೀವರಾಶಿಗಳಲ್ಲಿ ತುಂಬಿದೆಯೆಂದು ತಿಳಿಯುತ್ತಿದೆ. ಈ ವಿಷಯವನ್ನೇ ಭ್ರಾಂತಿಯಷ್ಟು ಮಾಯೆ ಬ್ರಹ್ಮಾಂಡದಷ್ಟಾಯಿತು ಎಂದಿದ್ದಾರೆ.

**ಆ ॥ ವಾಹ್ವ ಅದರಶಕ್ತಿ ಯಾರಿಗು ಅರ್ಥವಾಗುವುದಿಲ್ಲ.**
**ವಿಸ್ತರಿಸಿ ಬ್ರಹ್ಮ ವಿಷ್ಣು ಶಿವುರನ್ನನುಸರಿಸಿ**
**ಭ್ರಾಂತಿ ಇಟ್ಟು ಬಲವೆಲ್ಲ ನುಂಗಿಹಾಕಿತು**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಶರೀರವೆನ್ನುವ ಗುಡಿಯಲ್ಲಿ ದೀಪವಾಗಿ ಶರೀರವೆಲ್ಲವುದಕ್ಕು ಬೆಳಕನ್ನು ಕೊಡುತ್ತಿರುವ ಓ ಆತ್ಮಾ! ಕೇಳು. ಮಾಯೆವೊಂದರ ಶಕ್ತಿ ಎಂಥಾದ್ದೊ ಯಾರಿಗು ಅರ್ಥವಾಗುವುದಿಲ್ಲ. ಪ್ರಪಂಚದಲ್ಲಿ ಅದರ ನಾಯಕತ್ವದಲ್ಲಿ ಎಲ್ಲರನ್ನು ಸಿಲುಕಿಸಿಕೊಂಡು ಅಧಿಕಾರ ಚಲಾಯಿಸುತ್ತಿದೆ. ಮಾಯೆವೊಂದರ ಶಕ್ತಿ ಜಗತಿಯೆಲ್ಲ ವ್ಯಾಪಿಸಿ ಯೋಗಿಗಳಲ್ಲಿ ದೊಡ್ಡ ಯೋಗಿಗಳಾದ ವಿಷ್ಣು, ಈಶ್ವರ, ಬ್ರಹ್ಮರನ್ನು ಕೂಡ ತನ್ನ ಭ್ರಮೆಯಲ್ಲಿ ಮುಳುಗಿಸಿ, ಅವರನ್ನು ಕೂಡ ಯೋಗಭ್ರಷ್ಟರನ್ನು ಮಾಡುತ್ತಿದೆ. ತ್ರಿಮೂರ್ತಿಗಳನ್ನು ಕೂಡ ತನ್ನ ಭ್ರಾಂತಿಯಲ್ಲಿ ಬೀಳುವಂತೆ ಮಾಡಿ ದೇವರ ಮಾರ್ಗದಲ್ಲಿ ಬಲಹೀನರನ್ನು ಮಾಡುತ್ತಿದೆ. ಎಷ್ಟು ದೊಡ್ಡವರನ್ನಾದರೂ ತಾನು ಅಂದುಕೊಂಡರೆ ಜ್ಞಾನ ಬಲವನ್ನು ಕಳೆದು ಕೊಳ್ಳುವಂತೆ ಮಾಡಿ ಅಜ್ಞಾನಮಾರ್ಗದಲ್ಲಿ ನಡೆಸಬಲ್ಲದು. ಆದ್ದರಿಂದ ಮಾಯೆ

ಒಂದರ ಬಲವನ್ನು ಒಂದು ವಿಧವಾಗಿ ಪ್ರಶಂಸಿಸಬೇಕಾಗಿದ್ದೆ. ಎಂತಹವರನ್ನಾದರೂ ಮಾರ್ಗವನ್ನು ತಪ್ಪಿಸುವ ಮಾಯೆ ದೊಡ್ಡದೇ ಅಲ್ಲವೆ!

**ಆ ॥ ಬಲ ತಪ್ಪಿದಂತಹ ಬ್ರಹ್ಮಾದಿ ಮೂರ್ತಿಗಳು**
**ವ್ಯಾಕುಲತೆ ಹೊಂದಿ ಎದ್ದು ಕನವರಿಸಿ**
**ಸೃಷ್ಠಿರೂಪು ಧರಿಸಿತು ಚಿಂತಿಸಿ ಚಿಂತಿಸಿ**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಸಮಸ್ತ ಶರೀರಗಳಲ್ಲಿ ಜೀವಿಯೊಂದಿಗೆ ಇದ್ದೂ ಆ ಶರೀರಕ್ಕೆ ಶಕ್ತಿಯನ್ನುಕೊಡುವ ಓ ಆತ್ಮಾ! ಕೇಳು. ವಿಷ್ಣು, ಈಶ್ವರ, ಬ್ರಹ್ಮ ಎನ್ನುವ ತ್ರಿಮೂರ್ತಿಗಳು ಕೂಡ ಮಾಯೆ ಪ್ರಭಾವಕ್ಕೆ ತಮ್ಮ ಯೋಗಬಲವನ್ನು ಕಳೆದುಕೊಂಡು, ಪುನಃ ಸ್ವಲ್ಪ ಕಾಲಕ್ಕೆ ಎಚ್ಚರ ಗೊಂಡವರಾಗಿ, ಕನಸಿನಿಂದ ಎದ್ದವನು ಸತ್ಯವನ್ನು ತಿಳಿದುಕೊಂಡಂತೆ ನಾನು ಇಲ್ಲಿಯವರೆಗು ಮಾಯೆ ಭ್ರಮೆಯಲ್ಲಿ ಮುಳಿಗಿದ್ದೆನೆಂದು ತಿಳಿದವರಾಗಿ, ಇನ್ನು ಮಾಯೆಯಲ್ಲಿ ಬೀಳದೆ ಪರಮಾತ್ಮನನ್ನೇ ಚಿಂತಿಸಿ ಚಿಂತಿಸಿ, ಸಂಪೂರ್ಣ ಯೋಗಿಗಳಾಗಿ ವಿಶ್ವರೂಪವಾದ ಪರಮಾತ್ಮನಲ್ಲಿಯೇ ಐಕ್ಯವಾದರು.

ಎಂತಹ ದೊಡ್ಡ ಯೋಗಿಗಳಾದರು ಮಾಯೆ ಪ್ರಭಾವಕ್ಕೆ ತಪ್ಪದೆ ಯೋಗಭ್ರಷ್ಟರಾಗುತ್ತಾರೆಂದು ಈ ಪದ್ಯ ತಿಳಿಸುತ್ತಿದೆ. ದೈವಮಾರ್ಗದಿಂದ ಮಾಯೆ ಪ್ರಭಾವಕ್ಕೆ ತಪ್ಪಿದವರಾದಲ್ಲಿಯೂ, ತಮ್ಮ ಪಟ್ಟುಬಿಡದೆ ಪುನಃ ಚೇತರಿಸಿಕೊಂಡು, ಮಾಯೆ ಪ್ರಭಾವಕ್ಕೆ ಮೋಸಹೋಗಿದ್ದೇವೆಂದು ತಿಳಿದು, ತಪ್ಪಿಹೋದ ಮಾರ್ಗವನ್ನು ಪುನಃ ಆಶ್ರಯಿಸಿ ಮೋಕ್ಷವನ್ನು ಹೊಂದಬೇಕು. ಮೋಕ್ಷವನ್ನು ಮೇಲಿನ ಪದ್ಯದಲ್ಲಿ ಸೃಷ್ಠಿರೂಪ ಎಂದಿದ್ದಾರೆ. ಸೃಷ್ಠಿ ಎಂದರೇ ವಿಶ್ವ ಸೃಷ್ಠಿರೂಪ ಎಂದರೇ ವಿಶ್ವರೂಪ ಎಂದು ಅರ್ಥ. ವಿಶ್ವವೆಲ್ಲ ವ್ಯಾಪಿಸಿರುವುದು ಪರಮಾತ್ಮ. ಪರಮಾತ್ಮನಲ್ಲಿ ಐಕ್ಯವಾಗಿ ಹೋಗುವುದನ್ನು ವಿಶ್ವವ್ಯಾಪ್ತಿ ಹೊಂದುವುದೆಂದು ಅಥವಾ ಸೃಷ್ಠಿರೂಪದಲ್ಲಿ ಬೆರೆತುಹೋಗುವುದೆಂದು ಹೇಳಬಹುದು. ಮಾಯೆಯಿಂದ ಚೇತರಿಸಿಕೊಳ್ಳದವನು ಮೋಕ್ಷವನ್ನು ಹೊಂದಲಾರನು.

**ಆ ॥ ಪಂಚ ಬೆಳದಿಂಗಳಾದ ಪಂಜರಂಬಿದಿ ಯಹ**
**ಒಳ್ಳೆಯ ಗಿಳಿ ಇದರಲ್ಲಿ ನಿವಾಸ ಮಾಡುತ್ತಿದೆ**
**ಮಾತನಾಡುತ್ತದಯ್ಯ ಮಾಣಿಕ್ಯಗಳ ಮಾತು**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಮೂವರು ಪುರುಷರಲ್ಲಿ ಅಕ್ಷರ ಪುರುಷನಾಗಿ ಶರೀರದಲ್ಲಿರುವ ಓ ಆತ್ಮಾ! ಐದು ಭಾಗಗಳಾದ ಆಕಾಶ, ಗಾಳಿ, ಅಗ್ನಿ, ನೀರು, ಭೂಮಿ ಯಿಂದ ತಯಾರಾದ ಶರೀರವಿದು, ಇದರಲ್ಲಿ ಪಕ್ಷಿಯಂತೆ ಎಗರಿಹೋಗುವ ವಾಯುವು (ಶ್ವಾಸ) ನಿವಾಸಮಾಡುತ್ತಿದೆ. ಆ ಗಾಳಿ ಶ್ವಾಸರೂಪದಲ್ಲಿ ಮೂಗಿನ ರಂಧ್ರಗಳ ಮುಖಾಂತರ ಚಲಿಸುತ್ತಾ ವಿಚಿತ್ರ ಶಬ್ದ ಮಾಡುತ್ತಿದೆ.

**ವಿಶೇಷಾರ್ಥ** : ನಮ್ಮ ಶರೀರ ಪಂಚಭೂತ ನಿರ್ಮಿತವಾದುದು. ಆದ್ದರಿಂದ ಶರೀರವನ್ನೇ ಪಂಚರಂಗಿನ ಪಂಜರವೆಂದು ಹೇಳುವುದಾಗಿದೆ. ಶರೀರದಲ್ಲಿ ಗಾಳಿ ನಿವಾಸವಾಗಿರುವುದರಿಂದ ಶರೀರವನ್ನು ಪಂಜರವೆನ್ನುವುದು ನಡೆದಿದೆ. ಆಕಾಶದೊಂದಿಗೆ (ಶೂನ್ಯದೊಂದಿಗೆ) ತುಂಬಿರುವ ಮೂಗಿನ ರಂಧ್ರಗಳಲ್ಲಿ ಎಗರುತ್ತಿರುವ ಶ್ವಾಸವನ್ನು ಪಕ್ಷಿಯಾಗಿ ಹೇಳುವುದಾಗಿದೆ. ಅನೇಕ ಗ್ರಂಥಗಳಲ್ಲಿ ಕೂಡ ಶ್ವಾಸವನ್ನು ಹಂಸವೆಂದು ಹೇಳಿದ್ದಾರೆ. ಶ್ವಾಸ ಚಲಿಸುವವೇಳೆ ಏರ್ಪಡುವ ಶಬ್ದ ಎಷ್ಟೋ ಬೆಲೆಯುಳ್ಳ ಅರ್ಥದಿಂದ ಕೂಡಿದೆ. ಆದ್ದರಿಂದ ಮಾಣಿಕ್ಯದೊಂದಿಗೆ ಸಮಾನವಾಗಿ ಹೋಲಿಸುವುದಾಗಿದೆ.

**ಆ ॥ ಗಿಳಿ ಮಾತುಗಳಲ್ಲಿ ಚಿತ್ರವಾಗಿವೆ**
**ಮಾತಿನೊಳಗೆ ಮಾತು ಒಳಗೊಂಡಿದೆ**
**ಹೊಳಪು ಹುಟ್ಟುವಂತೆ ವಹಿಸುತ್ತಿದೆ**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಪ್ರತಿ ಶರೀರದಲ್ಲಿ ಜೀವಾತ್ಮಗಳಿಗೆ ಸಾಕ್ಷಿಯಾಗಿರುವ ಓ ಆತ್ಮಾ! ಕೇಳು. ಶ್ವಾಸ ಪಕ್ಷಿಯಂಥಾದ್ದು ಎಂದಿದ್ದೇವೆ ಅಲ್ಲವೆ! ಆ ಪಕ್ಷಿ ಮಾಡುವ ಶಬ್ದ

ಬಹಳ ವಿಚಿತ್ರವಾಗಿದೆ. ಆ ಶಬ್ದ ಶರೀರದಲ್ಲಿ **"ಸೋಹಂ"** ಆಗಿ ಕೇಳಿಸುತ್ತಿದೆ. ಆ **"ಸೋಹಂ"** ಶಬ್ದದೊಳಗೆ **"ಓಂ"** ಎನ್ನುವ ಶಬ್ದ ಒಳಗೊಂಡಿದೆ. ಅದರ ವಿಷಯ ತಿಳಿದವರು ಓಂ ಎನ್ನುವಶಬ್ದವು ಆತ್ಮದಿಂದ ಬರುತ್ತಿದೆಯೆಂದು ಓಂ ಕಾರಕ್ಕೆ ಮೂಲವಾದ ಆತ್ಮವನ್ನು ಹೊಂದಬೇಕೆಂದು ಅಂದುಕೊಳ್ಳುತ್ತಾರೆ.

**ವಿಶೇಷಾರ್ಥ :– "ಸೋಹಂ"**ನಲ್ಲಿಯೇ **"ಓಂ"** ಒಳಗೊಂಡಿದೆ. ಆದ್ದರಿಂದ "ಮಾತಿನೊಳಗಿನ ಮಾತು" ಎಂದು ಪದ್ಯದಲ್ಲಿ ಹೇಳಿದ್ದಾರೆ.

**ಆ ||** **ಹೊಳಪು ಹೊಂದಿದರಯ್ಯ ವನಿತೆಯರು ಗಂಡಸರು**
**ಪರಮ ಗಿಳಿಗಾಗಿ ಓಡಿಹೋಗಿ**
**ಹಿಡಿಯಲಾರದೆ ಕೊನೆಗೆ ಭ್ರಾಂತಿಗಳ ಪಾಲಾದರು**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಇಂದ್ರಿಗಳಿಗೆ ಶಕ್ತಿ ಕೊಡುವ ಓ ಆತ್ಮಾ! ಕೇಳು. **"ಓಂ"** ಕಾರವನ್ನು ತಿಳಿದ ಸ್ತ್ರೀ, ಪುರುಷರೆಲ್ಲರು ಅದು ಯಾವ ಶಕ್ತಿಯಿಂದ ಉದ್ಭವಿಸುತ್ತಿದೆಯೋ ಆ ಶಕ್ತಿಯನ್ನು ತಿಳಿದುಕೊಳ್ಳುವುದಕ್ಕೆ ಆಸೆಹೊಂದಿ ಪ್ರಯತ್ನ ಮಾಡುತ್ತಿದ್ದಾರೆ. ಆತ್ಮ ಶಕ್ತಿಯನ್ನು ತಿಳಿದುಕೊಳ್ಳದೆ ಕೊನೆಗೆ ಬಹಳಜನ ಮಾಯೆಯಲ್ಲಿಯೇ ಮುಳುಗಿಹೋಗಿದ್ದಾರೆ.

**ಆ ||** **ಪಟ್ಟ ತರವಲ್ಲ ಪಾತಾಳದಂತಹ**
**ಬ್ರಹ್ಮ ಪಟ್ಟಣಕ್ಕೆ ವ್ಯಾಪಿಸಿದೆ**
**ಭ್ರಮೆಗಳು ಬಿಟ್ಟು ಅದರ ಪ್ರಾಪ್ತಿಯನ್ನು ಕಾಣಬೇಕು.**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ:–** ಕೊಲಿಮೆ ಶಾಖಕ್ಕೆ ಗಾಳಿಚೀಲ, ಚೀಲಕ್ಕೆ ಕದಲಿಸುವ ಕಟ್ಟಿಗೆ. ಕಟ್ಟಿಗೆಗೆ ಕೊನೆಯಲ್ಲಿ ಕುಳಿತುಕೊಂಡು ಕದಲಿಸುತ್ತಿರುವ ವ್ಯಕ್ತಿ ಹೇಗೆ ಅನುಸಂಧಾನವಾಗಿ ಇದ್ದಾರೋ, ಹಾಗೇ ಶರೀರದಲ್ಲಿ ಮೂಗಿನಲ್ಲಿನ ಶ್ವಾಸಕ್ಕೆ ಶ್ವಾಸಕೋಶಗಳಿಗೆ, ಶ್ವಾಸಕೋಶಗಳಿಗೆ ಬ್ರಹ್ಮನಾಡಿ ನಾಡಿಗೆ ಕೊನೆಯಲ್ಲಿ ಎಲ್ಲವನ್ನು

ಕದಲಿಸುವ ಓ ಆತ್ಮಾ! ಶ್ವಾಸವನ್ನು ಚಲಿಸುವಂತೆ ಮಾಡುವ ಶಕ್ತಿ ನಮ್ಮ ಶರೀರದಲ್ಲಿ ಬ್ರಹ್ಮನಾಡಿಯಲ್ಲಿ ಒಳಗೊಂಡಿದೆ. ಬ್ರಹ್ಮನಾಡಿಯಲ್ಲಿರುವ ಶಕ್ತಿಯೇ ಶ್ವಾಸಕ್ಕೆ ಕಾರಣ ಅದೇ ಶ್ವಾಸಕ್ಕಿಂತ ಬೇರೆಯಾಗಿ ಅದಕ್ಕೆ ಆಧಾರವಾಗಿದೆ. ಆದ್ದರಿಂದ ಅದನ್ನು ಪರಮ ಗಿಳಿ ಎಂದು ಕರೆಯುತ್ತಿದ್ದೇವೆ. ಆ ಪರಮ ಗಿಳಿ ಎನ್ನುವ ಶಕ್ತಿ ಬ್ರಹ್ಮನಾಡಿ ಕೊನೆಯ ಭಾಗದಿಂದ ಮೇಲೆ ಕಪಾಳ ಸ್ಥಾನದವರೆಗು ವ್ಯಾಪಿಸಿದೆ. ಆ ಶಕ್ತಿಯನ್ನು ತಿಳಿದುಕೊಳ್ಳಬೇಕೆಂದರೆ ಪ್ರಪಂಚ ಭ್ರಮೆಗಳನ್ನು ಬಿಟ್ಟು, ಎಲ್ಲಾ ವಿಷಯಗಳನ್ನು ಮನಸ್ಸಿನಿಂದ ಮರೆಸಬೇಕು. ಹಾಗೆ ಮಾಡಿದಾಗಲೇ ಶ್ವಾಸಕ್ಕಿಂತ ಪರವಾಗಿರುವ ಶಕ್ತಿ, ಶ್ವಾಸವನ್ನು ನಡೆಸುವ ಆ ಆತ್ಮಶಕ್ತಿ ಮತ್ತು ಬ್ರಹ್ಮನಾಡಿಯಲ್ಲಿ ಆಧಾರ ಕಮಲದಿಂದ ಸಹಸ್ತ್ರಾರ ಕಮಲದವರೆಗು ವ್ಯಾಪಿಸಿರುವ ಶಕ್ತಿ ತಿಳಿಯುತ್ತದೆ. ಅದೇ ಆತ್ಮದರ್ಶನವೆಂದು ಹೇಳಬಹುದು.

**ಆ ॥ ಸಾಧ್ಯಪಡುವುದಿಲ್ಲ ಎಷ್ಟು ಸಾಮಂತನಾದರು**
**ಸತ್ಯಶಾಂತ ಸಮರ ಸಾತ್ಮನಾದರೆ**
**ಮೋಹ ವಿರುತ್ತದಯ್ಯ ಮೋಕ್ಷ ಕಾಂತಾಮಣಿ**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ:–** ಶರೀರದಲ್ಲಿ ಶ್ವಾಸವನ್ನು ನಡೆಸುವ ಓ ಆತ್ಮಾ!ಕೇಳು. ಬ್ರಹ್ಮನಾಡಿ ಯಲ್ಲಿರುವ ಆತ್ಮಶಕ್ತಿ ನಮಗಿರುವ ಧನಿಕತ್ವಕ್ಕಾಗಲಿ, ಸಾರ್ವಭೌಮತ್ವಕ್ಕಾಗಲಿ ಒಳಗಾಗುವುದಲ್ಲ, ತಿಳಿಯುವುದಲ್ಲ. ಗುಣಗಳೆಲ್ಲವನ್ನು ಶಾಂತಗೊಳಿಸಿದವರಿಗೆ, ಎಲ್ಲಾ ಜೀವಿಗಳಲ್ಲಿರುವ ಆತ್ಮ ಸಮವಾಗಿದೆ ಎನ್ನುವ ಭಾವನೆ ಇರುವವರಿಗೆ, ಚೈತನ್ಯವಾದ ಆತ್ಮ ತಿಳಿಯುತ್ತದೆ. ನಂತರ ಮೋಕ್ಷ ಹೊಂದಬಹುದು. ಮೋಕ್ಷವೆನ್ನುವ ಕನ್ಯೆ ಧನಿಕರಿಗೆ ಒಳಗಾಗುವುದಿಲ್ಲ. ಜ್ಞಾನಿಗಳಿಗೆ ಮಾತ್ರ ತನ್ನ ಸುಖವನ್ನು ನೀಡಬಲ್ಲಳು. ಅವರೊಂದಿಗೆ ಸೇರಿ ಪರಮ ಸುಖವನ್ನನು ಭವಿಸುವಂತೆ ಮಾಡುತ್ತಾಳೆ.

**ಆ ॥ ಶಾಂತಿ ಮತಿಯನ್ನು ಹೊಂದಿ ಚಾದಸ್ತಗಳನ್ನು ಬಿಟ್ಟು**
**ಚಿಂತೆತೀರುವ ಗುರುವಿನ ಸೇವೆ ಮಾಡಿ**
**ಪಟ್ಟುಹಿಡಿದು ಮುಕ್ತಿ ಪದ್ಧತಿಯನ್ನು ಕಾಣಬೇಕು**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಸಮಸ್ತ ಜೀವಿಗಳಲ್ಲಿ ಒಂದೇ ಕೆಲಸ ಮಾಡುತ್ತಿರುವ ಆತ್ಮಾ ಜೀವಿಯಾದ ನಾನು ಹೇಳುವ ಮಾತು ಕೇಳು. ಮನಸ್ಸಿನಲ್ಲಿ ಆಲೋಚನೆಗಳನ್ನು ಸೇರಿಸದೆ ಉಪವಾಸಗಳು, ವ್ರತಗಳು, ಯಜ್ಞಗಳೆಂದು ಚಾದಸ್ತಗಳ ಕೆಲಸ ಮಾಡದೆ, ಶರೀರದಲ್ಲಿನ ಮನಸ್ಸೊಂದರ ಚಿಂತೆಗಳೆಲ್ಲ ಹೋಗುವಂತೆ ಗುರುವಿನಿಂದ ಜ್ಞಾನ ತಿಳಿದವನಾಗಿ ಗುರುವಿನೊಂದರ ಸೇವೆ ಮಾಡುತ್ತಾ, ಮಾಯೆ ದಾಳಿಗೆ ಸಹಿಸಿಕೊಂಡು ಪ್ರಯತ್ನವನ್ನು ಗಟ್ಟಿಯಾಗಿ ಮಾಡುತ್ತಾ ಮೋಕ್ಷವನ್ನು ಪಡೆಯಬೇಕು. ಹಾಗಲ್ಲದೆ ದೇವರು ಹೇಳಿದಂತೆ ಯೋಗ ಆಚರಿಸದೆ ಯಜ್ಞಗಳೆಂದು, ವೇದಧ್ಯಾಯನಗಳೆಂದು, ತಪಸ್ಸುಗಳೆಂದು ಧರ್ಮವಲ್ಲದ ಕೆಲಸಗಳು ಮಾಡುತ್ತಿದ್ದರೂ ಎಂದಿಗೂ ಮೋಕ್ಷವನ್ನು ಹೊಂದಲಾರರು.

**ಆ ॥ ಮುಕ್ತಿಕಾಂತ ಎಷ್ಟು ಮೂರ್ಖಳೋ ಆದರೆ**
**ದಿಟ್ಟತನವನ್ನು ಬೆಳೆಸಿದರು ಸಿದ್ಧಿಯಾದರು**
**ಸಿಕ್ಕದಯ್ಯ ಅಲ್ಪ ಬೇಸರ ಮತಿಗಳಿಗೆ**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಎರಡನೆ ಆತ್ಮವಾಗಿ ಶರೀರದಲ್ಲಿ ಎಲ್ಲಾ ಕೆಲಸಗಳು ಮಾಡುತ್ತಿರುವ ಓ ಆತ್ಮಾ! ಕೇಳು. ಮೋಕ್ಷ ಎಂಬುದನ್ನು ಬಹಳಜನ ಆಶಿಸುತ್ತಿರುತ್ತಾರೆ. ಆದ್ದರಿಂದ ಮೋಕ್ಷವನ್ನು ಒಬ್ಬ ಮುಕ್ತಿಕಾಂತಳಂತೆ ಹೋಲಿಸಿ ಹೇಳಿಕೊಳ್ಳೋಣ. ಒಬ್ಬ ಸ್ತ್ರೀ ಸ್ನೇಹ ಬೇಕೆಂದರೆ ಸಿನಿಮಾದಲ್ಲಿ ಹೀರೋಗಳಂತೆ ಎಷ್ಟೋ ತಾಪತ್ರಯ ಬೀಳಬೇಕಾಗಿದೆ. ಹಾಗೆಂದು ಹೀರೋಯಿನ್‌ನಂತೆ ಸುಲಭವಾಗಿ ಮುಕ್ತಿಕಾಂತ ಸಿಗುವಳಲ್ಲ. ಎಷ್ಟೋ ಸತ್‌ಪ್ರವರ್ತನೆಗಳಿದ್ದರೂ, ಎಷ್ಟೋ ಭಕ್ತಿ ಕೆಲಸಗಳು ಮಾಡಿ ತೋರಿಸಿದರೂ, ನೀನು ಹೊರತು ನನ್ನ ದೃಷ್ಟಿಯಲ್ಲಿ ಯಾರು

ಇಲ್ಲವೆಂದರೂ, ಮುಕ್ತಿ ಅಷ್ಟು ಸುಲಭವಾಗಿ ಬರುವುದಲ್ಲ. ಆದ್ದರಿಂದ ಬಹಳಜನ ದೈವಮಾರ್ಗದಲ್ಲಿ ನಡೆದು ತಾವು ಅಂದುಕೊಂಡಂತೆ ಮುಕ್ತಿ ಲಭಿಸಲಿಲ್ಲವೆಂದು ಬೇಸರಗೊಂಡು, ಸಿಗದ ದ್ರಾಕ್ಷಿ ಹುಳಿ ಎನ್ನುವಂತೆ ದೈವವನ್ನು ನಿಂದಿಸಿದವರು ಕೂಡ ಇದ್ದಾರೆ.

ದೇವರನ್ನು ತಿಳಿದುಕೊಳ್ಳುವುದೇ ಮುಕ್ತಿ, ದೇವರಲ್ಲೈಕ್ಯವಾಗುವುದೇ ಮುಕ್ತಿ. ದೇವರನ್ನು ತಿಳಿದುಕೊಳ್ಳುವುದು ಅಷ್ಟು ಸುಲಭವಲ್ಲ. ದೇವಾಲಯಗಳಲ್ಲಿ ಪ್ರತಿಮೆ ಸುತ್ತಾ ಮಾಯೆ ಆವರಣವೊಂದರ ಗುರುತಾಗಿ ಪ್ರಭಾವಳಿ ಇರುವಂತೆ ದೇವರ ಸುತ್ತಲೂ ಮಾಯೆ ಇದೆ. ದೇವರನ್ನು ಸೇರಬೇಕೆಂದುಕೊಂಡವರೆಲ್ಲರನ್ನು, ದೇವರ ಸುತ್ತಲೂ ಇರುವ ಮಾಯೆ, ಎಷ್ಟೋ ಸಮಸ್ಯೆಗಳಿಟ್ಟು ಕೊನೆಗೆ ಅವನಲ್ಲಿನ ಸಹನೆ ನಶಿಸುವಂತೆ ಮಾಡುತ್ತದೆ. ಹಾಗಿರುವಾಗ ಕೆಲವರು ಬೇಸರಗೊಂಡು ದೇವರ ಮಾರ್ಗವನ್ನೇ ಬಿಟ್ಟುಹಾಕುತ್ತಾರೆ. ಆದ್ದರಿಂದ ಮುಕ್ತಿ ಎನ್ನುವುದು ಸುಲಭವಾಗಿ ದೊರೆಯುವುದು ಅಲ್ಲವೆಂದು ಹಿರಿಯರು ಹೇಳಿದ್ದಾರೆ. ಎಷ್ಟು ಕಷ್ಟಗಳು ಬಂದರೂ, ಎಷ್ಟೋ ಮನೋ ಚೋದನೆಗಳು ಬಂದರೂ ಛಲಬಿಡದೆ ಪ್ರಯತ್ನಿಸುವವನನ್ನು ಮಾಯೆ ಏನು ಮಾಡಲಾರದು. ಮುಕ್ತಿ ತಪ್ಪದೆ ಲಭಿಸುತ್ತದೆ.

**ಆ ॥ ತಾಮಸವನ್ನು ಬಿಡದೆ ತತ್ತ್ವವು ಕಾಣಿಸುವುದಿಲ್ಲ**
**ರಾಜಸವನ್ನು ಬಿಡದೆ ಬರುವುದಿಲ್ಲ ಮುಕ್ತಿ**
**ಸಾತ್ತ್ವಿಕ ಮೋಕ್ಷ ಸಾಧನವಾಗಿದ್ದು**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ:–** ಶರೀರಗಳಲ್ಲಿ ನಿವಾಸವಿರುತ್ತಿರುವ ಮೂರು ಆತ್ಮಗಳಲ್ಲಿ ಅಹರ್ನಿಶೆಗಳು ಜೀವಿಯನ್ನು ಕಾದುಕೊಂಡಿರುವ ಓ ಆತ್ಮಾ! ಕೇಳು. ಇಸ್ಲಾಂ ಮತದಲ್ಲಿ ಸೈತಾನ್ ಎಂದು ಹೇಳಲ್ಪಡುವುದು ಮತ್ತು ಕ್ರೈಸ್ಥವಮತದಲ್ಲಿ ಸಾತಾನ್ ಎಂದು ಹೇಳಲ್ಪಟ್ಟಿದೆ, ಇಂದೂಮತದಲ್ಲಿ ಮಾಯೆ ಎನ್ನುವ ಹೆಸರಿನಿಂದ ಹೇಳಲ್ಪಡುತ್ತಿದೆ. ಸರ್ವಸೃಷ್ಠಿಗೆ ಅಧಿಪತಿಯಾದ ಪರಮಾತ್ಮನೇ ಮಾಯೆಯನ್ನು ಸೃಷ್ಠಿಸಿದ್ದಾನೆ. ಜಗತ್ತಿನಲ್ಲಿನ ಸರ್ವ ಜೀವರಾಶಿಗಳನ್ನು ಅವುಗಳ ಕರ್ಮಾನುಸಾರ

ನಡೆಸುವುದಕ್ಕೆ ಮಾಯೆಯನ್ನು ಪರಿಕರದಂತೆ ದೇವರು ಇಟ್ಟುಕೊಂಡಿದ್ದಾನೆ. ಸರ್ವ ಜಗತ್ತನ್ನು ನಡೆಸುವ ಯಂತ್ರಾಂಗದಲ್ಲಿ ಮಾಯೆ ಪಾತ್ರ ಸ್ವಲ್ಪ ಮತ್ತು ಆತ್ಮಪಾತ್ರ ಸ್ವಲ್ಪ ಶರೀರದಲ್ಲಿ ಇರುವಂತೆ ದೇವರು ಮಾಡಿದ್ದಾನೆ. ಆತ್ಮ ಶರೀರಕ್ಕೆ ಶಕ್ತಿ ಆರೋಗ್ಯವನ್ನು ಕರ್ಮಪ್ರಕಾರ ಕೊಟ್ಟಾಗ, ಮಾಯೆ ಮನುಷ್ಯನ ಸಾಮಾಜಿಕ ಜೀವನದಲ್ಲಿ ಲಗ್ನವಾಗುವಂತೆ, ದೇವರಕಡೆ ಆಧ್ಯಾತ್ಮಿಕ ಜೀವನದಕಡೆ ಲಗ್ನವಾಗ ದಂತೆ ಮಾಡುತ್ತಿದೆ. ಮಾಯೆ ನಮ್ಮ ಶರೀರದಲ್ಲಿ ಹೇಗಿದೆ ಯೆಂದರೇ!

ಮಾಯೆ ಮೂರು ಭಾಗಗಳಾಗಿ, ಮೂರು ಗುಣಗಳೆನ್ನುವ ಹೆಸರಿನಿಂದಿದೆ. ಮೂರು ಗುಣಭಾಗಗಳಲ್ಲಿ ಒಂದೊಂದು ಭಾಗ 108 ಭಾಗಗಳಾಗಿ ವಿಭಜಿಸಲ್ಪಟ್ಟಿದೆ. ಆ ಗುಣಭಾಗಗಳ ಹೆಸರುಗಳು ಒಂದು ತಾಮಸ, ಎರಡು ರಾಜಸ, ಮೂರು ಸಾತ್ತ್ವಿಕ ಎಂದು ಇವೆ.

ಮಾಯೆಗೆ ಸಂಬಂಧಿಸಿದ ಮೂರು ಗುಣಭಾಗಗಳನ್ನು ಬಿಟ್ಟಾಗ ಮೋಕ್ಷವನ್ನು ಹೊಂದುವುದಕ್ಕೆ ಸಾಧ್ಯವಾಗುತ್ತದೆ. ಸಾತ್ತ್ವಿಕವೆನ್ನುವುದು ಉಳಿದ ಎರಡು ಗುಣಭಾಗಗಳಿಗಿಂತ ಸ್ವಲ್ಪ ಉತ್ತಮವಾದುದಾಗಿದ್ದು ಭಕ್ತಿ ಮಾರ್ಗ ವನ್ನುಂಟುಮಾಡುತ್ತದೆ. ಸಾತ್ತ್ವಿಕ ಚಿಂತನೆಯಿಂದ ಸ್ವಲ್ಪ ಭಕ್ತಿಮಾರ್ಗ ಕಲ್ಪಿಸಿ ನಾನು ಮೋಕ್ಷ ಮಾರ್ಗದಲ್ಲಿದ್ದೇನೆಂದು ಭ್ರಮಿಸುವಂತೆ ಮಾಡುತ್ತದೆ. ನಿಜವಾದ ದೇವರ ಮಾರ್ಗ ತೋರಿಸುವುದು ಯಾವ ಗುಣವಲ್ಲ. ಆದ್ದರಿಂದ ಸಾತ್ತ್ವಿಕ ಗುಣದಿಂದ ಉಂಟಾದ ವಿಶ್ವಾಸ ಮಾರ್ಗ ಪರಮಾತ್ಮದ್ದಲ್ಲದೆ, ಉಳಿದ ಅನ್ಯದೇವತೆಗಳದ್ದಾಗಿರುತ್ತದೆ. ಅದು ಭಕ್ತಿಮಾರ್ಗವೇ ಆದರೂ ಸೃಷ್ಠಿಕರ್ತನಾದ ಪರಮಾತ್ಮ ಒಂದರ ಮಾರ್ಗ ಅಲ್ಲವೆಂದು ತಿಳಿಯಬೇಕು. ಸಾತ್ತ್ವಿಕ ಮೋಕ್ಷಸಾಧನೆಯಾದಂತೆ ಭ್ರಮಿಸುವಂತೆ ಮಾಡುತ್ತಿರುತ್ತದೆ. ಹಾಗೇ ರಾಜಸದಲ್ಲಿನ ಗುಣಗಳನ್ನು, ತಾಮಸ ಗುಣಗಳನ್ನು ಬಿಡದಿದ್ದರೇ ನಿಜದೈವಮಾರ್ಗ ತಿಳಿಯುವುದಿಲ್ಲ.

ಕೆಲವರು ತಪಸ್ಸುಗಳಿಗು, ಸಿದ್ದಿಗಳಿಗು ಸಾತ್ತ್ವಿಕ ಗುಣಗಳಿದ್ದು ಅನ್ಯ ದೇವತಾರಾಧಕರಾಗಿರುವುದರಿಂದ, ಮತ್ತೆಕೆಲವರು ಸಾತ್ತ್ವಿಕ ಭ್ರಮೆಯಲ್ಲಿ ಬಿದ್ದು

ಯಜ್ಞಗಳು ಮಾಡುವುದರಿಂದ ಪೂರ್ತಿ ಮೋಕ್ಷ ಹೊಂದಲಾರದೆ ಹೋಗುತ್ತಿದ್ದಾರೆ. ಸಾತ್ತ್ವಿಕ ಮೋಕ್ಷಸಾಧನೆಯೆಂದು ಭ್ರಮಿಸುವಂತೆ ಮಾಡುವುದರಿಂದ ಮತ್ತು ರಾಜಸದ ಹೆಸರು ಪ್ರಖ್ಯಾತಿಗಳ ಮೇಲೆ ಭ್ರಮೆಯನ್ನು ಉಂಟುಮಾಡುವುದರಿಂದ, ತಾಮಸ ಎಲ್ಲದಕ್ಕು ಕಡಿಮೆ ಗುಣವಾಗಿರುವುದರಿಂದ, ಮೂರು ಗುಣಭಾಗಗಳು ಮಾಯೆಗೆ ಪ್ರತಿರೂಪವಾಗಿ ನಿಂತಿವೆ, ಆದ್ದರಿಂದ ಅವುಗಳನ್ನು ಬಿಡದೆ ಮುಕ್ತಿ ದೊರೆಯುವುದಿಲ್ಲ.

**ಆ ॥ ಮನಸ್ಸನ್ನು ಜಾರಿಬಿಟ್ಟು ಮಮಕಾರವಣಚದೆ**
**ಮುನಿಗಳು ಕೆಲವರು ಭ್ರಮೆ ಮುಳುಗಿದ್ದಾರೆ**
**ನರನು ಸ್ಥಿರವಕಾಣಲು ನಂಬಬಾರದಾ ಮಾತು**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಮೂವರು ಪುರುಷರಲ್ಲಿ ಮಧ್ಯದವನಾಗಿ ಪೂಜ್ಯನಾಗಿರುವ ಓ ಆತ್ಮಾ! ಕೇಳು. ನರನು ತನ್ನ ಶರೀರದಲ್ಲಿನ ಅಂತರಂಗವನ್ನು ತಿಳಿಯದೆ, ತನ್ನ ಶರೀರದಲ್ಲಿನ ಅಂತರಂಗ ಭಾಗಗಳನ್ನು ಗುರುತಿಸದೆ, ಹೊರಗಿನ ಪ್ರಪಂಚದ ಕೆಲಸಗಳಲ್ಲಿ ಲಗ್ನವಾಗಿಹೋಗಿದ್ದಾನೆ. ಸಾಧಾರಣ ಮನುಷ್ಯನಲ್ಲದೆ ಸ್ವಲ್ಪ ಜ್ಞಾನವಿರುವ ಮುನಿಗಳು ಕೂಡ ತಮ್ಮಲ್ಲಿನ ಮನಸ್ಸೊಂದರ ವಿವರ ಪೂರ್ತಿಯಾಗಿ ತಿಳಿಯದೆ ತಮ್ಮ ಛಲದಿಂದ ಮನಸ್ಸನ್ನು ಜಾರಿಬಿಟ್ಟುಕೊಳ್ಳುತ್ತಿದ್ದಾರೆ. ಮನಸ್ಸು ಚಲಿಸುವ ಸ್ವಾಭಾವವಿರುವುದು. ಅದರ ಚಲನೆಯೆಲ್ಲವು ಗುಣವಿಷಯಗಳ ಮೇಲೆಯೇ ಇರುತ್ತದೆ. ಎಷ್ಟೋ ಗುಣವಿಷಯಗಳನ್ನು ತಂದೊಡ್ಡುವ ಮನಸ್ಸನ್ನು ಜಯಿಸಲಾರದೆ ಮತ್ತು ನಾನು ಎನ್ನುವ ಅಹಂ ಹೊಂದಿ, ನನ್ನದು ನನ್ನವರೆನ್ನುವ ವಿಷಯಗಳನ್ನು ಬಿಡದೆ, ಗುಣಗಳ ಭ್ರಮೆಯಲ್ಲಿ ಮುಳುಗಿ ಹೋಗಿದ್ದಾರೆ. ಶರೀರದಲ್ಲಿನ ಮನಸ್ಸನ್ನು ಅಹಮ್‌ನ್ನು ಮುಖ್ಯವಾಗಿ ಜಯಿಸಬೇಕಾಗಿದೆ. ಏಕೆಂದರೆ ಮನಸ್ಸು ಗುಣ ವಿಷಯಗಳ ಮೇಲೆ ಹೋಗಿ ಜ್ಞಾಪಕ ತಂದಾಗ, ಅಹಂ ಅವುಗಳಲ್ಲಿನ ಕರ್ಮವನ್ನು ಅಂಟಿಸುತ್ತಿದೆ. ಇವುಗಳನ್ನು ಜಯಿಸಿದರೆ ಗೀತೆಯಲ್ಲಿ ಹೇಳಲ್ಪಟ್ಟ ಬ್ರಹ್ಮಯೋಗ, ಕರ್ಮಯೋಗ ಎರಡು ಆಚರಿಸಿದಂತಾಗುತ್ತದೆ. ಆದರೆ ಇವು ಅಷ್ಟು ಸುಲಭವಾದವಲ್ಲ, ದೊಡ್ಡ ಮುನಿಗಳು ಸಹಿತ ಇವುಗಳ

ವಿವರ ತಿಳಿಯದೆ ಭ್ರಮೆಯಲ್ಲಿ ಮುಳುಗಿ ಹೋಗಿದ್ದಾರೆ, ಇನ್ನು ಸಾಧಾರಣವ್ಯಕ್ತಿ ಮನಸ್ಸನ್ನು ಜಯಿಸಿದ್ದಾನೆಂದರೇ ಆ ಮಾತನ್ನು ನಂಬುವುದಕ್ಕೆ ಸಾಧ್ಯವಿಲ್ಲ.

**ಆ ॥ ಮೊದಲು ಮನಸ್ಸು ಜಯಿಸುವುದು ಮುಖ್ಯಯೋಗವೆಂದು**
**ತಿಳಿಯಲಾರದೆ ಧರಣಿ ಸಂದರ್ಶಿಸಿದರೂ**
**ಕುದುರದೆ ಮನಸ್ಸು ನಾಯಿಯಂತೆ ಚಲಿಸುತ್ತದೆ**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ:–** ಸಮಸ್ತ ಸಜೀವ ಶರೀರಗಳಲ್ಲಿ ನಖ ಶಿಖ ಪರ್ಯಂತರ ವ್ಯಾಪಿಸಿ, ಶರೀರದಲ್ಲಿನ ಎಲ್ಲಾ ಅವಯಗಳಿಂದ ಕೆಲಸಗಳು ಮಾಡಿಸುತ್ತಿರುವ ಓ ಆತ್ಮಾ! ಕೇಳು. ಮನಸ್ಸನ್ನು ಜಯಿಸುವುದರಿಂದ ಯೋಗ ಲಭಿಸುತ್ತದೆಂದು, ಆತ್ಮ ತಿಳಿಯುತ್ತದೆಂದು ಮುಖ್ಯವಾದ ಕಾರ್ಯ ಅದೇಯೆಂದು, ನಮ್ಮ ಶರೀರದಲ್ಲಿ ನಮ್ಮೊಂದಿಗೆ ಆತ್ಮ ಪರಮಾತ್ಮ ನಿವಾಸ ಇವೆಯೆಂದು, ಮೊದಲು ಆತ್ಮವನ್ನು ತಿಳಿಯುವುದರಿಂದ ಕರ್ಮನಾಶವಾಗಿ ಪರಮಾತ್ಮ ತಿಳಿಯುತ್ತಾನೆ. ಈ ವಿಧಾನ ತಿಳಿಯದೆ ಮನಸ್ಸಿನ ತಂಟೆಗೆ ಹೋಗದೆ, ತನ್ನ ಶರೀರದಲ್ಲಿ ಹುಡುಕದೆ, ಭೂಮಿ ಮೇಲೆ ದೇವರನ್ನು ತಿಳಿದುಕೊಳ್ಳುವ ಸಲುವಾಗಿ, ಎಷ್ಟು ತೀರ್ಥ ಯಾತ್ರೆಗಳು ಮಾಡಿದರೂ, ಎಷ್ಟು ಪುಣ್ಯಕ್ಷೇತ್ರಗಳು ಸಂದರ್ಶಿಸಿದರೂ, ನಮ್ಮಲ್ಲಿನ ಮನಸ್ಸು ಮಾತ್ರ ನಿಲ್ಲದೆ ನಾಯಿಯಂತೆ ನೆಲೆ ಇಲ್ಲದ್ದಾಗಿ ಚಲಿಸುತ್ತಲೇ ಇರುತ್ತದೆ. ಮನಸ್ಸು ನಿಲ್ಲದ್ದು ಆತ್ಮವೊಂದರ ಅನುಭೂತಿ ಯಾರಿಗು ತಿಳಿಯುವುದಿಲ್ಲ.

**ಆ ॥ ನಾಯಿಯಂತ ಮನಸ್ಸು ಸಿಂಬೆಯ ಮಾಡಿ**
**ನಿತಲೆ ಮಧ್ಯೆ ದೃಷ್ಟಿ ನಿಲ್ಲಿಸಿದರೇ**
**ಪಟುತರೈಕ್ಯ ಬ್ರಹ್ಮ ಭಾವವು ಉಂಟಾಗುತ್ತದೆ**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಶರೀರದಲ್ಲಿನ ಜೀವಿಗೆ ಸಾಕ್ಷಿಯಾಗಿರುವ ಓ ಆತ್ಮಾ! ಕೇಳು. ಮನಸ್ಸೊಂದರ ವಿಷಯ ಅದರ ಮೇಲೆ ಧ್ಯಾಸ ಇಲ್ಲದವರಿಗೆ ತಿಳಿಯುವುದಿಲ್ಲ. ಮನಸ್ಸಿನ ಮೇಲೆ ಬುದ್ಧಿ ಲಗ್ನಮಾಡಿ ನೋಡಿದಾಗ, ಮನಸ್ಸು ಯಾವ ವಿಷಯದ

ಮೇಲೆ ನಿಲ್ಲದೆ ವಿಷಯಗಳನ್ನು ಬದಲಿಸಿ ಬದಲಿಸಿ ಬುದ್ದಿಗೆ ತೋರಿಸುತ್ತಿರುತ್ತದೆ. ಇಂದ್ರಿಯ ವಿಷಯಗಳು ಬೇಡವೆಂದು, ಸ್ವಲ್ಪಸಮಯ ಪ್ರಪಂಚ ವಿಷಯಗಳನ್ನು ತೋರಿಸಬೇಡವೆಂದು ಮನಸ್ಸಿಗೆ ಬುದ್ಧಿ ಎಷ್ಟು ಹೇಳಿದರೂ, ಮನಸ್ಸು ಮಾತ್ರ ತನ್ನ ಅಭ್ಯಾಸದ ಪ್ರಕಾರ ಪಂಚಭೂತಗಳಿಗು, ಪಂಚೇಂದ್ರಿಯಗಳಿಗು ಸಂಬಂಧಿಸಿದ ವಿಷಯಗಳನ್ನೇ ಮನನ ಮಾಡುತ್ತಿರುತ್ತದೆ. ಅನೇಕ ವಿಷಯಗಳ ಮೇಲೆ ಸಂಚರಿಸುವುದರಿಂದ ಮನಸ್ಸನ್ನು ಚಂಚಲ ಹೊಂದಿದ ನಾಯಿಗೆ ಸಮಾನವಾಗಿ ಹೋಲಿಸಿ ಹೇಳಿದ್ದಾರೆ. ನಾಯಿಯಂತ ಚಲನೆ ಹೊಂದಿದ ಮನಸ್ಸನ್ನು, ಅಭ್ಯಾಸದಿಂದ ವಿಷಯಚಿಂತನೆಗಳ ಮೇಲೆ ಹೋಗದಂತೆ ಮಾಡಿ, ಮನೋ ದೃಷ್ಠಿಯನ್ನು ಕಣ್ಣ ಹುಬ್ಬುಗಳ ಮಧ್ಯೆ ತಲೆಯೊಳಗಿನ ಮಧ್ಯಭಾಗದಲ್ಲಿ ನಿಲ್ಲಿಸಿದರೆ, ಅಲ್ಲಿರುವ ಬ್ರಹ್ಮನಾಡಿಯಲ್ಲಿನ ಆತ್ಮವೊಂದರ ವಿಷಯ ತಿಳಿಯುತ್ತದೆ. ಮನಸ್ಸೊಂದರ ಕರ್ತವ್ಯ ಅಹರ್ನಿಶೆಗಳು ಬುದ್ಧಿಗೆ ಯಾವುದೊ ಒಂದು ವಿಷಯವನ್ನು ತಿಳಿಸುವುದು. ಅದಕ್ಕೆ ಮೊದಲಿನಿಂದ ಹೊರಗಿನ ಪ್ರಪಂಚ ವಿಷಯಗಳನ್ನು ತಿಳಿಸುವುದು ಅಭ್ಯಾಸವಾಗಿದೆ. ಮನಸ್ಸೊಂದರ ಆ ಅಭ್ಯಾಸವನ್ನು ಬಿಡಿಸಿ ಒಳಗಿನ ಆತ್ಮ ವಿಷಯಗಳ ಮೇಲಕ್ಕೆ ಗಮನ ಹರಿಸುವುದೇ ಯೋಗ ಎನ್ನುತ್ತೇವೆ.

**ಆ ॥ ಆಗ ಆತ್ಮನಲ್ಲಿ ಅಧಿಕ ವಿಶ್ರಾಂತಿಯನ್ನು**
**ಹೊಂದಿ ಚಂಚಲದಲ್ಲಿ ನಿಂತುಹೋಗಿ**
**ಗಾಳಿಯಿಲ್ಲದ ದೀಪವಾಗಿ ಪ್ರಕಾಶಿಸುವ**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಹೂವಿನಹಾರದಲ್ಲಿ ಆಧಾರವಾಗಿ ಅಡಗಿರುವ ದಾರದಂತೆ ಶರೀರದಲ್ಲಿ ಕಾಣಿಸದೆ ಶರೀರಕ್ಕೆಲ್ಲ ಆಧಾರವಾಗಿರುವ ಓ ಆತ್ಮಾ! ಕೇಳು. ಮನಸ್ಸೊಂದರ ಚಂಚಲತೆ ನಿಂತುಹೋದಾಗ ಗಾಳಿ ಇಲ್ಲದಕಡೆ ದೀಪ ಕದಲದೆ ಬೆಳಗಿದಂತೆ, ಮನಸ್ಸಿಗೆ ಒಂದು ಸ್ಥಿರತ್ವ ಕೂಡ ಇಲ್ಲದೆ ಕದಲಿಕೆಗಳು ಶೂನ್ಯವಾಗಿಹೋಗುತ್ತವೆ. ಅಂತಹ ಸಮಯದಲ್ಲಿ ಹೊರಗಿನ ಜ್ಞಾನೇಂದ್ರಿಯ ಗಳಿಂದ ಬರುವ ಸಮಾಚಾರವನ್ನು ಮನಸ್ಸು ಸ್ವೀಕರಿಸುವುದಾಗಲಿ, ಒಳಗಿನ

ಬುದ್ಧಿಗೆ ಸೇರಿಸುವುದಾಗಲಿ ನಡೆಯುವುದಿಲ್ಲ. ಹಾಗೆ ಮನೋಸ್ತಬ್ದತೆ ಏರ್ಪಟ್ಟಾಗ ಬುದ್ಧಿ ಮುಖಾಂತರ ಜೀವಿಯು ಅನುಭವಿಸುವ ವಿಷಯ ಇಲ್ಲದಂತೆಹೋಗಿ, ಹೆಚ್ಚು ವಿಶ್ರಾಂತಿ ಏರ್ಪಡುತ್ತಿದೆ. ಎಚ್ಚರದಲ್ಲಿ ಯಾವಾಗಲೂ ಏನೊ ಒಂದು ಅನುಭವಿಸುತ್ತಾ, ಸ್ವಲ್ಪವೂ ವಿಶ್ರಾಂತಿ ಇಲ್ಲದ ಜೀವಿಗೆ ವಿಶ್ರಾಂತಿ ಉಂಟಾಗುವುದು, ಮನೊಸ್ತಬ್ದತೆ ಉಂಟಾದ ಒಂದು ಬ್ರಹ್ಮಯೋಗದಲ್ಲಿಯೇ ಸಾಧ್ಯವಾಗುತ್ತದೆ. ಪದ್ಯದಲ್ಲಿ ಆತ್ಮಗೆ ಅರ್ಥ ಮೊದಲ ಆತ್ಮವಾದ ಜೀವಾತ್ಮಯೆಂದು ಮಾಡಿ ಕೊಳ್ಳಬೇಕು.

**ಆ ॥ ದೃಷ್ಠಿ ನಿಲ್ಲದಿದ್ದರೆ ಸುಖವೆಂದು ಕಾಣಿಸುವುದಿಲ್ಲ**
**ಮನಸ್ಸು ನಿಲ್ಲಿಸದಿದ್ದರು ಮಮತೆ ಬಿಡುವುದಿಲ್ಲ**
**ದೃಷ್ಠಿ ಮನಸ್ಸನ್ನುಂಟಿ ನೋಡುತ್ತದಯ್ಯ ಸುಜ್ಞಾನಿ**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಶರೀರಾಂತರ್ಗತಗಳಲ್ಲಿದ್ದು ಜ್ಞಾನದಿಂದ ಹೊಗಳಲ್ಪಡುವ ಓ ಆತ್ಮ! ಕೇಳು. ನಮ್ಮ ಶರೀರದಲ್ಲಿ ಐದು ದೃಷ್ಠಿಗಳಿವೆ. ಕಣ್ಣಿಗೆ ಮಾತ್ರ ಒಂದು ದೃಷ್ಠಿಯಿದೆ. ಉಳಿದ ನಾಲ್ಕು ದೃಷ್ಠಿಗಳೆಲ್ಲಿವೆಯೆಂದು ಆಶ್ಚರ್ಯ ಪಡಬೇಕಾದ ಅಗತ್ಯವಿಲ್ಲ. ಕಣ್ಣಿಗೆ ದೃಶ್ಯವನ್ನು ನೋಡುವ ದೃಷ್ಠಿಯಿದ್ದರೆ, ನಾಲಿಗೆಗೆ ರುಚಿಯನ್ನು ನೋಡುವ ದೃಷ್ಠಿಯಿದೆ. ಮೂಗಿಗೆ ವಾಸನೆಯನ್ನು ನೋಡುವ ದೃಷ್ಠಿಯಿದೆ. ಹಾಗೆ ಕಿವಿ, ಚರ್ಮಗಳಿಗು ಶಬ್ದ, ಸ್ಪರ್ಶಗಳನ್ನು ಗ್ರಹಿಸುವ ದೃಷ್ಠಿ ಇದೆಯೆಂದು ತಿಳಿಯಬೇಕು. ಐದು ಜ್ಞಾನೇಂದ್ರಿಯಗಳಿಗಿರುವ ಐದು ಗ್ರಾಹಿತಶಕ್ತಿಗಳನ್ನು ಐದು ದೃಷ್ಠಿಗಳಾಗಿ ಮೇಲಿನ ಪದ್ಯದಲ್ಲಿ ಹೇಳಿದ್ದಾರೆ. ದೃಷ್ಠಿ ನಿಲ್ಲದಿದ್ದರೆ ಸುಖವೆಂದು ಕಾಣಿಸುವುದಿಲ್ಲ ಎನ್ನುವುದರಲ್ಲಿ ಐದು ಇಂದ್ರಿಯಗಳನ್ನು ಅಡಗಿಸದಿದ್ದರೆ ಯೋಗವಿಷಯ ತಿಳಿಯುವುದಿಲ್ಲವೆಂದು ಅರ್ಥ. ಐದು ಇಂದ್ರಿಯಗಳನ್ನು ಆಧಾರ ಮಾಡಿಕೊಂಡು ತಿರುಗುತ್ತಿರುವ ಮನಸ್ಸನ್ನು, ಒಳಗಿನ ಗುಣಗಳ ಮನನದಿಂದ ನಿಲ್ಲಿಸದೆಹೋದರೆ, ನಾನು ಎನ್ನುವ ಅಹಂ ಬಿಡುವುದಿಲ್ಲ. ಆದ್ದರಿಂದ ಬ್ರಹ್ಮಜ್ಞಾನ ತಿಳಿದ ಸುಜ್ಞಾನಿ ಹೊರಗಿನ ಇಂದ್ರಿಯ ವಿಷಯಗಳನ್ನು, ಒಳಗಿನ ಗುಣಗಳ ವಿಷಯಗಳೆರಡನ್ನು ಮನಸ್ಸಿಗೆ ಸೇರಿಸದೆ, ಮಧ್ಯದಲ್ಲಿರುವ

ಬ್ರಹ್ಮನಾಡಿಯಲ್ಲಿನ ಆತ್ಮವನ್ನು ನೋಡುವಂತೆ ಮಾಡುತ್ತಿರುತ್ತಾನೆ. ಅತ್ತ ಹೊರಗಿನ ಇಂದ್ರಿಯಗಳನ್ನು, ಇತ್ತ ಒಳಗಿನ ಗುಣಗಳನ್ನು ಎರಡನ್ನು ಅಂಟಿಕೊಂಡು, ಅವುಗಳವರೆಗು ವ್ಯಾಪಿಸಿರುವ ಆತ್ಮವನ್ನು ತಿಳಿಯುವುದರಿಂದ, ಪದ್ಯದಲ್ಲಿ ದೃಷ್ಠಿ ಮನಸ್ಸನ್ನು ಅಂಟಿನೋಡಯ್ಯ ಸುಜ್ಞಾನಿ ಎಂದಿದ್ದಾರೆ.

**ಆ ॥ ಎರಡು ಗಿರಿಗಳ ಮಧ್ಯೆ ರೇವತಿ ಎನ್ನುವ ಚುಕ್ಕೆ(ನಕ್ಷತ್ರ)**
**ಚುಕ್ಕೆ ನಡುವೆ ಇರುವ ಸುಧಪುರಂಬು**
**ಪುರದಂತಹ ನೋಡಿ ಪುರುಹರನಲ್ಲಿರುವನು**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಸಮಸ್ತ ಜೀವ ಶರೀರಗಳಲ್ಲಿ ಮೂರು ಗುಣಗಳ ಮಧ್ಯೆ ಸಾಕ್ಷಿಯಾಗಿರುವ ಓ ಆತ್ಮಾ! ಕೇಳು. ನಮ್ಮ ಶರೀರದಲ್ಲಿ ಸೂರ್ಯಚಂದ್ರನಾಡಿಗಳ ಮಧ್ಯೆ ಬ್ರಹ್ಮನಾಡಿ ಇದೆ. ಆ ಬ್ರಹ್ಮನಾಡಿಯಲ್ಲಿ ನಾಶರಹಿತವಾದ ಶಕ್ತಿ ಅಡಗಿದೆ. ಮನಸ್ಸನ್ನು ಬ್ರಹ್ಮನಾಡಿಯಲ್ಲಿನ ಶಕ್ತಿಯಲ್ಲಿ ಐಕ್ಯ ಮಾಡಿದರೆ ನಿಜವಾದ ಆತ್ಮ ತಿಳಿಯಬಲ್ಲದು.

**ವಿಶೇಷಾರ್ಥ :–** ಎರಡು ಗಿರಿಗಳೆಂದರೇ ನಮ್ಮ ಶರೀರದಲ್ಲಿನ ಸೂರ್ಯಚಂದ್ರ ನಾಡಿಗಳೆಂದು ತಿಳಿಯಬೇಕು. ಶರೀರದಲ್ಲಿ ಉಳಿದ ನಾಡಿಗಳೆಲ್ಲವುಗಳಿಗಿಂತ ಇವು ದೊಡ್ಡದಾಗಿವೆ. ಆದ್ದರಿಂದ ಇವುಗಳನ್ನು ಬೆಟ್ಟಗಳಿಗೆ ಹೋಲಿಸಿ ಹೇಳಿದ್ದಾರೆ. ಸೂರ್ಯಚಂದ್ರನಾಡಿಗಳ ಮೇಲ್ಭಾಗದಿಂದ ವ್ಯಾಪಿಸಿರುವ ಬ್ರಹ್ಮನಾಡಿಯನ್ನು ಬೆಟ್ಟಗಳ ಮೇಲೆ ನಕ್ಷತ್ರವಾಗಿ ಹೇಳುವುದಾಗಿದೆ. ನಕ್ಷತ್ರಗಳಲ್ಲಿ ರೇವತಿಯೆನ್ನುವ ನಕ್ಷತ್ರ ಹೆಚ್ಚು ಪ್ರಕಾಶ ಇರುವುದು. ಹಾಗೇ ಬ್ರಹ್ಮನಾಡಿ ನಾಡಿಗಳೆಲ್ಲವುಗಳಿಗಿಂತ ಪ್ರಶಕ್ತಿ ಇರುವುದು. ಆದ್ದರಿಂದ ಬ್ರಹ್ಮನಾಡಿಯನ್ನು ರೇವತಿ ಚುಕ್ಕೆಯಾಗಿ ಹೋಲಿಸುವುದಾಗಿದೆ. ಬ್ರಹ್ಮನಾಡಿಯೊಳಗೆ ಚೈತನ್ಯಶಕ್ತಿ ಇದೆ. ಅದೇ ನಾಶವಿಲ್ಲದ ಆತ್ಮಶಕ್ತಿ ಆದ್ದರಿಂದ ಅದನ್ನು ಅಮೃತ ಪುರವಾಗಿ ಹೋಲಿಸುವುದಾಗಿದೆ. ಆ ಶಕ್ತಿಯಲ್ಲಿ ಐಕ್ಯವಾದವನಿಗೆ ಆತ್ಮಯೆಂದರೆ ಏನೊ ಯಾರೋ ತಿಳಿಯುತ್ತದೆ. ಆದ್ದರಿಂದ ಪುರದಲ್ಲಿ ನೋಡು ಪುರಹರನಲ್ಲಿರುತ್ತಾನೆಂದು ಆತ್ಮವನ್ನು ಹೇಳಿದ್ದಾರೆ.

ಬ್ರಹ್ಮನಾಡಿಯಲ್ಲಿನ ಚೈತನ್ಯಕ್ಕೆ ಕಾರಣವಾದವನೇ ಆತ್ಮ. ಆದ್ದರಿಂದ ಆತ್ಮ ಪುರಹರನೆಂದು ಕರೆಯಲ್ಪಡುತ್ತಾನೆ.

**ಆ ॥ ಮನಸ್ಸು ನಿಲ್ಲಿಸಿ ಯಮನ ಮರ್ಮವು ತಿಳಿದರೆ**
**ತನ್ನ ಪುರಾಕೃತಂಬು ತಪ್ಪಿಹೋಗಿ**
**ಪರಮ ಯೋಗಕ್ಕೆ ದಾರಿ ಕಲ್ಪಿಸು**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಅಖಿಲ ಜೀವಿಗಳೊಂದಿಗೆ ಕೂಡಿರುವ ಓ ಆತ್ಮಾ! ಕೇಳು. ಅತಿ ಧೃಡವಾದ, ಬಲವಾದ, ನೀಚವಾದ ಮತ್ತು ಚಂಚಲವಾದ ಮನಸ್ಸನ್ನು ನಿಲ್ಲಿಸಿ ಜಗತಿಗೆ ಯಮನಾದ ಆತ್ಮವನ್ನು ತಿಳಿದುಕೊಂಡರೆ, ತನ್ನ ಪೂರ್ವಜನ್ಮಗಳಲ್ಲಿ ಮಾಡಿಕೊಂಡ ಕರ್ಮವೆಲ್ಲವೂ ತೊಲಗಿಹೋಗಿ ಮರುಜನ್ಮ ಇಲ್ಲದಂತೆ ಹೋಗುತ್ತದೆ. ಜನ್ಮಕ್ಕೆ ಕಾರಣವಾದುದು ಕರ್ಮ. ಕರ್ಮ ಎಂದರೆ ಪಾಪಪುಣ್ಯಗಳು. ಪುಣ್ಯದಿಂದ ಸುಖ, ಪಾಪದಿಂದ ಕಷ್ಟಗಳು ಸಂಭವಿಸುತ್ತಿರುತ್ತವೆ. ಪಾಪ ಪುಣ್ಯಗಳು ಮಿಶ್ರಮವಾದ ಪಕ್ಷದಲ್ಲಿ ಜೀವನದಲ್ಲಿ ಕಷ್ಟ ಸುಖಗಳು ಮಿಶ್ರಮವಾಗಿ ಸಂಭವಿಸುತ್ತವೆ. ಆದ್ದರಿಂದ ಯಮಲೋಕವೆಲ್ಲಿರುವುದು, ಯಮನು ಎಲ್ಲಿರುವುದು, ಯಮಕಿಂಕರರು ಎಲ್ಲಿದ್ದಾರೆನ್ನುವ ವಿಷಯ ತಿಳಿದುಕೊಂಡರೆ, ಹಿಂದಿನ ಜನ್ಮದಲ್ಲಿ ಮಾಡಿಕೊಂಡ ಪಾಪ ಪುಣ್ಯಗಳನ್ನು ಅನುಭವಿಸದೆ ತಪ್ಪಿಸಿಕೊಳ್ಳಬಹುದು.

ಮನಸ್ಸನ್ನು ನಿಲ್ಲಿಸಿದಲ್ಲಿ ಆತ್ಮವನ್ನು ತಿಳಿದುಕೊಳ್ಳುವುದಕ್ಕೆ ಸಾಧ್ಯವಾಗುತ್ತಿದೆ. ಆತ್ಮವನ್ನು ತಿಳಿದುಕೊಳ್ಳುವ ಅವಕಾಶ ಲಭಿಸಿದ ನಂತರ ಅದರ ಮಹಿಮೆ ತಿಳಿಯುತ್ತದೆ. ಆಗ ಆತ್ಮವೇ ಯಮನಾಗಿದ್ದಾನೆನ್ನುವ ಯಥಾರ್ಥ ತಿಳಿಯುತ್ತದೆ. ಮನಸ್ಸನ್ನು ನಿಲ್ಲಿಸಿ ಆತ್ಮ ಮರ್ಮವನ್ನು ತಿಳಿದುಕೊಂಡವನಿಗೆ ಜ್ಞಾನಾಗ್ನಿ ಪ್ರಜ್ವಲಿಸುತ್ತದೆ. ಆ ಅಗ್ನಿ ಪೂರ್ವಜನ್ಮಗಳಲ್ಲಿ ಮಾಡಿಕೊಂಡ ಕರ್ಮಗಳೆಲ್ಲವನ್ನು ಸುಟ್ಟುಹಾಕುತ್ತದೆ. ಕರ್ಮಗಳೆಲ್ಲವನ್ನು ಸುಟ್ಟು ಹಾಕಿಕೊಂಡವನು ಯೋಗವನ್ನು ಬಿಟ್ಟು ಪರಯೋಗ ದಲ್ಲಿ ಸೇರುತ್ತಿದ್ದಾನೆ. ಅಂದರೇ ಶರೀರವನ್ನು ಬಿಟ್ಟು ಪರಮಾತ್ಮನಲ್ಲಿ ಐಕ್ಯವಾಗಿ ಹೋಗುತ್ತಾನೆ.

**ವಿಶೇಷಾರ್ಥ :–** ಶರೀರದಲ್ಲಿ ಕಾಲಚಕ್ರದಲ್ಲಿರುವ ನವಗ್ರಹಗಳನ್ನು ಕರ್ಮಕ್ಕೆ ಅನುಗುಣವಾಗಿ ಚಲಿಸುವಂತೆ ಮಾಡುತ್ತಾ, ಜೀವಿಗಳ ಮೇಲೆ ನವಗ್ರಹಗಳ ಮೂಲಕ ಕರ್ಮವನ್ನು ಅನುಭವಿಸುವಂತೆ ಮಾಡುವವನು ಆತ್ಮ. ಆದ್ದರಿಂದ ಆತ್ಮವನ್ನು ಯಮನಿಗೆ ಹೋಲಿಸಲಾಗಿದೆ. ಆತ್ಮವನ್ನು ತಿಳಿಯುವುದೇ ಯಮನ ಮರ್ಮ ತಿಳಿಯುವುದೆಂದು ಹೋಲಿಸಿ ಹೇಳಿದ್ದಾರೆ.

ಜೀವಿಯು ಶರೀರದಲ್ಲಿ ಇರುವಾಗಲೇ ಯೋಗ ಮಾಡಲಾಗುತ್ತದೆ. ಶರೀರವನ್ನು ಬಿಟ್ಟನಂತರ ಪರಮಾತ್ಮನಲ್ಲಿ ಐಕ್ಯವಾಗಿಹೋಗುತ್ತಾನೆ. ಶರೀರ ಇಲ್ಲದೇ ದೇವರಲ್ಲಿ ಐಕ್ಯವಾಗುವುದನ್ನು ಪರಯೋಗವೆಂದು (ಪರಮ ಯೋಗವೆಂದು) ಹೇಳಲ್ಪಟ್ಟಿದೆ. ಪರಯೋಗವೆಂದರೇ ಯೋಗಕ್ಕಿಂತ ಪ್ರತ್ಯೇಕವಾದು ದೆಂದು ಅರ್ಥ. ಆತ್ಮಗಿಂತ ಪರವಾಗಿರುವ ಪರಮಾತ್ಮನಲ್ಲಿ ಐಕ್ಯವಾಗುವುದನ್ನೇ ಯೋಗಕ್ಕಿಂತ ಪರವಾಗಿರುವ ಪರಮಯೋಗವೆನ್ನುತ್ತಿದ್ದೇವೆ.

**ಆ ॥ ಮಂಡಲಗಳ ಮೂರರ ಮಧ್ಯೆ ಷೋಡಶ**
**ಕಳೆಯನ್ನು ಪೂರ್ಣ ಚಂದ್ರಕಾಂತಿಯಿದ್ದು**
**ಕಾಂತಿಯಲ್ಲಿ ಮನಸ್ಸು ಸೇರಿದರೆ ಯೋಗವು**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಸಮಸ್ತ ಜೀವರಾಶಿಗಳಲ್ಲಿರುವ ಮೂರು ಆತ್ಮಗಳಲ್ಲಿ ಮಧ್ಯದಲ್ಲಿರುವ ಓ ಆತ್ಮಾ! ಕೇಳು. ಪ್ರಪಂಚದಲ್ಲಿ ಜನರ ಜನಗಣತಿಯಾಗಲಿ ಅಥವಾ ವಿಸ್ತೀರ್ಣ ಲೆಕ್ಕಾಚಾರದ ಆಧಾರವಾಗಾಗಲಿ ಹೋಬಳಿ ಎಂದು ಸ್ವಲ್ಪ ಏರಿಯಾವನ್ನು ಕರೆಯುತ್ತಿದ್ದೇವೆ. ಶರೀರದೊಂದಿಗೆ ನಿವಾಸಿಸುವ ನಾವು ಇಂತಹ ಹೋಬಳಿಯಲ್ಲಿದ್ದೇವೆಂದು ಹೇಳಿಕೊಳ್ಳುವುದಕ್ಕೆ ಅಡ್ರಸ್ಸು(ವಿಳಾಸ) ಇದೆ. ಶರೀರದೊಂದಿಗಿರುವ ನಮಗೆ ಭೂಮಿ ಮೇಲೆ ಇಂತಹ ಪ್ರದೇಶವೆಂದು ಹೇಳಿಕೊಂಡಂತೆ, ಶರೀರದೊಳಗೆ ಜೀವಾತ್ಮನಾದ ನಾವು ನಿವಾಸಿಸುವ ಅಡ್ರಸ್ಸು ಕೂಡ ಇದೆ. ಮೇಲೆ ಇಂತಹ ಊರಿನಲ್ಲಿ ನಿವಾಸಿಸುತ್ತೇವೆನ್ನುವಂತೆ, ಒಳಗು ಕೂಡ ಇಂತಹ ಊರಿನಲ್ಲಿ ನಿವಾಸಿಸುತ್ತಿದ್ದೇವೆಂದು ಹೇಳಬಹುದು. ಜನ

ಸಂಖ್ಯೆಯನ್ನನುಸರಿಸಿ, ವಿಸ್ತೀರ್ಣವನ್ನನುಸರಿಸಿ ಹೊರಗೆ ಹೋಬಳಿಗಳನ್ನು ನಿರ್ಣಯಿಸಿ ಏರ್ಪಡಿಸಿದಂತೆ, ಶರೀರದೊಳಗು ಕೂಡ ಗುಣಗಳ ಸಂಖ್ಯೆಯನ್ನನು ಸರಿಸಿ, ಅವುಗಳಿಗಿರುವ ವಿಸ್ತೀರ್ಣವನ್ನನುಸರಿಸಿ, ಮೂರು ಹೋಬಳಿಗಳು ಏರ್ಪಡಿಸಲ್ಪಟ್ಟಿವೆ. 108 ಗುಣಗಳ ಸಂಖ್ಯೆಯನ್ನನುಸರಿಸಿ ಅವುಗಳಿಗೆ ಸ್ವಲ್ಪ ವಿಸ್ತೀರ್ಣ ನಿರ್ಣಯಿಸಲ್ಪಟ್ಟಿದೆ. ಅದನ್ನೇ ಶರೀರದಲ್ಲಿನ ಹೋಬಳಿ ಅನ್ನುತ್ತಿದ್ದೇವೆ. ಇಂತಹ ಹೋಬಳಿಗಳು ಮೂರು ಇವೆ. ಈ ಮೂರು ಹೋಬಳಿಗಳು ಒಂದರ ನಂತರ ಒಂದು ಚಕ್ರದಂತೆ ಸುತ್ತಳತೆಹೊಂದಿವೆ. ಇವುಗಳನ್ನೇ ತ್ರಿಗುಣ ಮಂಡಲಗಳೆಂದು ಕರೆಯುತ್ತಿದ್ದೇವೆ. ಈ ಮೂರು ಹೋಬಳಿಗಳ ಮಧ್ಯದಲ್ಲಿ ಆತ್ಮ ನಿವಾಸವಿರುತ್ತಿದೆ. ಆತ್ಮ ನಿವಾಸವಾದ ಸ್ಥಳವನ್ನು, ಗುಣಗಳು ನಿವಾಸವಾದ ಮೂರು ಮಂಡಲಗಳ ಸ್ಥಳವನ್ನು, ನವಿಲುಗರಿಯಲ್ಲಿ ನಾಲ್ಕು ದುಂಡನೆ ಭಾಗಗಳಾಗಿ ನೋಡಬಹುದು. ಶರೀರದಲ್ಲಿನ ಗುಣಗಳನ್ನು ಆತ್ಮವೊಂದರ ಪ್ರತ್ಯೇಕತೆಯನ್ನು ತಿಳಿಸುವ ಜೋಡಣೆ ಒಂದು ನವಿಲುಗರಿಗೆ ಮಾತ್ರವೇ ಇದೆ. ಆದ್ದರಿಂದ ಶ್ರೀಕೃಷ್ಣನು ನವಿಲುಗರಿಯನ್ನು ತನ್ನ ತಲೆಮೇಲೆ ಧರಿಸಿ, ಇವು ತಲೆಯಲ್ಲಿವೆಯೆಂದು ತೋರಿಸಿದ್ದಾನೆ.

ಮೂರು ಗುಣಗಳ ಮಧ್ಯದಲ್ಲಿ ಆತ್ಮ ನಿವಾಸವಾಗಿದೆ. ಮೂರು ಗುಣಗಳ ಮಧ್ಯದಲ್ಲಿರುವ ಆತ್ಮ ಪ್ರಕಾಶವಂತವಾಗಿ ತನ್ನ ಪ್ರಕಾಶವನ್ನು ಶರೀರವೆಲ್ಲ ವ್ಯಾಪಿಸುವಂತೆಮಾಡುತ್ತಿದೆ. ಜ್ಞಾನಕ್ಕೆ ಕೇಂದ್ರ ಆತ್ಮವೆಂದು ಹಿರಿಯರು ಹೇಳಿದಂತೆ ಜ್ಞಾನದಿಂದ ತಿಳಿಯಲ್ಪಡುವುದು ಕೂಡಾ ಆತ್ಮವೇ. ಆದ್ದರಿಂದ ಆತ್ಮವನ್ನು ಜ್ಞಾನಕ್ಕೆ ಚಿಹ್ನೆಯಾದ ಚಂದ್ರನೊಂದಿಗೆ ಹೋಲಿಸಿ ಆತ್ಮ ವ್ಯಾಪಿಸಿದ ಶಕ್ತಿಯನ್ನು ಚಂದ್ರಕಾಂತಿಯೊಂದಿಗೆ ಹೋಲಿಸಿದ್ದಾರೆ. ಪ್ರಕಾಶಿಸುವ ರತ್ನವು ಹದಿನಾರು ಹೊಳಪುಗಳೊಂದಿಗೆ ಇರುತ್ತದೆ. ಪೂರ್ವದಲ್ಲಿ ರತ್ನವನ್ನು ಸಾಣೆ ಹಿಡಿದರೆ ಹದಿನಾರು (ಸಮತಲವಾಗಿ) ಸಾಣೆ ಹಿಡಿಯುತ್ತಿದ್ದರು. ರತ್ನವನ್ನು ಹೇಗೆ ತಿರುಗಿಸಿದರೂ ಹೊಳೆಯುತ್ತದೆ. ಅದರಿಂದ ಷೋಡಶ ಕಳೆಗಳರತ್ನ ವೆನ್ನುತ್ತಿದ್ದರು. ಹದಿನಾರು ಒಳಪುಗಳನ್ನು ಪೂರ್ತಿ ಕಾಂತಿಯಾಗಿ ಹೇಳುತ್ತಿದ್ದರು. ಹಾಗೇ ಆತ್ಮವೊಂದರ ಜ್ಞಾನ ಕೂಡ ಪೂರ್ಣ ಪ್ರಕಾಶಹೊಂದಿದ ಚಂದ್ರಕಾಂತಿಗೆ

ಸಮಾನವಾಗಿ ಹೇಳಲ್ಪಟ್ಟಿದೆ. ಶರೀರದೊಳಗಿನ ಆತ್ಮದಲ್ಲಿ ಮನಸ್ಸು ಲಗ್ನ ಮಾಡಿದಾಗ ಬ್ರಹ್ಮಯೋಗವಾಗುತ್ತದೆ. ಆ ವಿಷಯವನ್ನು ಹೇಳುತ್ತಾ ಕಾಂತಿಯಲ್ಲಿ ಮನಸ್ಸು ಬೆರೆತರೆ ಯೋಗ ಎಂದಿದ್ದಾರೆ. ಮೂರು ಗುಣಗಳಿಗಿಂತ ಮುಖ್ಯ ವಾದುದು ಅವುಗಳ ಮಧ್ಯದಲ್ಲಿರುವ ಆತ್ಮವೆಂದು, ಅದರಲ್ಲಿಯೇ ಲಗ್ನ ವಾಗಬೇಕೆಂದು, ಅದನ್ನೇ ತಿಳಿಯಬೇಕೆಂದು ತಿಳಿಸುವುದಕ್ಕಾಗಿಯೇ ನವಿಲುಗರಿ ಯಲ್ಲಿ ಮೂರು ಆವರಣಗಳ ಮಧ್ಯದಲ್ಲಿರುವ ಬಣ್ಣ ಬಹಳ ಗಾಢವಾಗಿ, ಕಪ್ಪಗೆ ಕಾಣಿಸುತ್ತಾ ಗುರುತಾಗಿದೆ. ಮೇಲಿನ ಪದ್ಯ ಬ್ರಹ್ಮಯೋಗವನ್ನು ಕುರಿತು ಹೇಳಿರುವುದೆಂದು ತಿಳಿಯಬೇಕು.

**೩ ॥ ಮೂರು ಹಳ್ಳಗಳು ಉಕ್ಕಿ ಮುಲ್ಲೋಕಗಳು ಕುಗ್ಗಿ**
**ಮುಳುಗಿಸಿ ಸಾವಿರ ಸಂಗಮೂಲ ವೇನೊ**
**ತಿಳಿಯಲಾರದ ಯೋಗಿ ಘನನೇಗಾದನಯ್ಯ**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಚಿಕ್ಕ ಇರುವೆಯಲ್ಲಿಯು, ದೊಡ್ಡ ಆನೆಯಲ್ಲಿಯು ಒಂದೇ ವಿಧಾನ ಹೊಂದಿ ಕರ್ಮವನ್ನು ಪಾಲಿಸುವ ಓ ಆತ್ಮಾ! ಕೇಳು, ತಾಮಸ, ರಾಜಸ, ಸಾತ್ತ್ವಿಕ ಎನ್ನುವ ಮೂರು ದೊಡ್ಡ ನದಿಗಳು ನಮ್ಮ ಶರೀರದಲ್ಲಿಯೇ ಇವೆ. ಮೂರು ಲೋಕಗಳಾಗಿ ವಿಭಜಿಸಲ್ಪಟ್ಟಿರುವ ತಾಮಸರು, ರಾಜಸರು, ಸಾತ್ತ್ವಿಕರು ಎನ್ನುವ ಪ್ರಜೆಗಳು ಗುಣಗಳೆನ್ನುವ ನದಿ ಪ್ರವಾಹಗಳಿಗೆ ತಾಳಲಾರದೆ ಅವುಗಳಲ್ಲಿ ಮುಳುಗಿ ಹೋಗುತ್ತಿದ್ದಾರೆ. ಎಲ್ಲರನ್ನು ಮುಳುಗಿಸುವ ಮೂರು ಗುಣಗಳೆನ್ನುವ ಮಾಯೆಯನ್ನು ಮುಳುಗಿಸಿಹಾಕುವ ಆತ್ಮ ಕೂಡ ಅಲ್ಲಿಯೇ ಎಲ್ಲದಕ್ಕು ಮಧ್ಯದಲ್ಲಿದೆ. ಮೂರು ಗುಣಗಳಲ್ಲಿ ಮುಳುಗಿಹೋದ ಅವರ್‍ಯಾರಿ ಗಾದರೂ ಜ್ಞಾನದ ಮೂಲಕ ತಿಳಿಯುವುದು ಮಧ್ಯದಲ್ಲಿರುವ ಆತ್ಮ. ಯಾರಾದರೂ ಮೂರು ಗುಣಗಳನ್ನು ಬಿಟ್ಟರೆ ಸೇರುವ ಸ್ಥಳ ಆತ್ಮವೇ. ಆದ್ದರಿಂದ ಎಲ್ಲರಿಗು ಸಂಗಮೂಲವು ಆತ್ಮವಾಗಿದೆ. ಆತ್ಮ ಮೂರಕ್ಕು ಮಧ್ಯದಲ್ಲಿರುವ ತ್ರಿವೇಣಿ ಸಂಗಮದಂತಾದ್ದು. ಸೂರ್ಯ, ಚಂದ್ರ, ಬ್ರಹ್ಮನಾಡಿಗಳು ಸೇರುವಸ್ಥಳ ದಲ್ಲಿರುವ

ಆತ್ಮವನ್ನು ತಿಳಿಯಲಾರದವನು ಎಂದಿಗೂ ಬ್ರಹ್ಮಯೋಗಿ ಆಗಲಾರನು. ಶರೀರದಲ್ಲಿನ ಆತ್ಮವನ್ನು ತಿಳಿಯದವನು ಘನನಾಗಲಾರನು.

**ಆ ॥ ಮಾತುಗಳು ಬಹುಕಲಿತು ಮರ್ಮಜ್ಞರನ್ನು ತಿಳಿದು**
**ಅವರೊಂದಿಗೆ ಭೇದ ವಾದವಾಡಿ**
**ಆನೆಯನ್ನು ನಾಯಿ ಕಚ್ಚಲೋಗುವ ಚೆಂದವು**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಶರೀರದಲ್ಲಿನ ಎಲ್ಲಾ ಭಾಗಗಳಿಗು ಶಕ್ತಿ ಕೊಡುತ್ತಾ ಯಾರಿಗು ತಿಳಿಯದಂತಿರುವ ಓ ಆತ್ಮಾ! ಕೇಳು. ಮರ್ಮಜ್ಞರು ಎಂದರೇ ಮರ್ಮವನ್ನು ತಿಳಿದವರು ಅಥವಾ ರಹಸ್ಯವನ್ನು ತಿಳಿದವರೆಂದು ಹೇಳಬಹುದು. ಪ್ರಪಂಚದಲ್ಲಿ ಎಲ್ಲದಕ್ಕಿಂತ ದೊಡ್ಡ ರಹಸ್ಯ, ತನ್ನ ಶರೀರದಲ್ಲಿ ಅಡಗಿರುವ ಆತ್ಮವನ್ನು ತಿಳಿಯುವುದು. ತಾನು ತನ್ನ ಶರೀರದಲ್ಲಿಯೇ ಹುಡುಕಿ, ತನಗೆ ತಿಳಿಯದಂತೆ ತನಗಿಂತ ಭಿನ್ನವಾಗಿ ಅಥವಾ ತನಗಿಂತ ಬೇರೆಯಾಗಿ ಶರೀರದಲ್ಲಿರುತ್ತಾ, ಶರೀರ ಕಾರ್ಯಗಳೆಲ್ಲ ತನಗೆ ತಿಳಿಯದೆಯೇ ಮಾಡುತ್ತಿರುವ ಆತ್ಮವನ್ನು ತಿಳಿಯುವುದು, ಪ್ರಪಂಚದಲ್ಲಿ ಎಲ್ಲದಕ್ಕಿಂತ ದೊಡ್ಡ ರಹಸ್ಯವನ್ನು ತಿಳಿದಂತಾಗುತ್ತದೆ. ಅಜ್ಞನು ಎಂದರೇ ತಿಳಿದವನು ಎಂದು ಅರ್ಥ. ಮರ್ಮಜ್ಞನು ಎಂದರೇ ಆತ್ಮವನ್ನು ತಿಳಿದವನೆಂದೇ ಹೇಳಬಹುದು. ತನಗಿಂತ ಪ್ರತ್ಯೇಕವಾಗಿ ಯಾರಿಗೂ ತಿಳಿಯದಂತೆ ಜನ್ಮಜನ್ಮಗಳಿಗು ತನ್ನ ಹಿಂದಿರುವ ಆತ್ಮವನ್ನು ತಿಳಿದವರನ್ನು ನೋಡಿ, ಕೆಲವರು ಮಾತುಗಳು ಹೆಚ್ಚಾಗಿ ಕಲಿತವರು, ಕವಿಗಳು, ಭಾಷಾ ಪಂಡಿತರು ತಮ್ಮ ವಾಕ್‌ಚಾತುರ್ಯದಿಂದ ಆತ್ಮಜ್ಞರೊಂದಿಗೆ ಬೇಧವಾದ ಮಾಡುತ್ತಿರುತ್ತಾರೆ. ಮಾತುಗಳ ನೈಪುಣ್ಯತೆ ಇಲ್ಲದ ಯೋಗಿಗಳ ಹತ್ತಿರ ತಮ್ಮಲ್ಲಿನ ಪಾಂಡಿತ್ಯವೆಲ್ಲವನ್ನು ಹೊರ ಸುರಿಯುತ್ತಿದ್ದಾರೆ. ಸಾವಿರಜನ ಪಂಡಿತರು ತಿಳಿಯದ ಆತ್ಮವನ್ನು ಊಹಿಸಿಕೊಂಡು, ಕೊನೆಗೆ ತಾನೆ ಆತ್ಮಯೆಂದು, ಸಾಧನೆ ಫಲ ಅದೇಯೆಂದು, ಒಬ್ಬರ ನಂತರ ಮತ್ತೊಬ್ಬರು ಹೇಳುತ್ತಿದ್ದಾರೆ. ಸತ್ಯ ತಿಳಿಯದವರು ಹೇಗೆ ಎಷ್ಟು ಹೇಳಿದರೂ, ಅವರಿಗೆ ಆತ್ಮ ರಹಸ್ಯವಾದುದೇ ಆಗುತ್ತಿದೆ. ಆತ್ಮವನ್ನು ತಿಳಿದವನು ಒಬ್ಬನಿದ್ದರೂ ಅವನು ಸಾವಿರಜನರ ವಾದನೆಯನ್ನಾದರು

ಒಪ್ಪಿಕೊಳ್ಳುವುದಿಲ್ಲ. ತನಗೆ ರಹಸ್ಯ ತಿಳಿದಿರುವುದರಿಂದ ಒಬ್ಬ ಬ್ರಹ್ಮಯೋಗಿಗೆ ಹೊರತು ಆತ್ಮ ಯಾರಿಗು ತಿಳಿದಿಲ್ಲವೆಂದು ತಿಳಿದವನು, ತಾನು ಬೇರೆ ಆತ್ಮ ಬೇರೆಯಾಗಿ ಶರೀರದಲ್ಲಿ ಇದ್ದೇನೆಂದು, ಶರೀರದೊಳಗೆ ನಡೆಯುವ ಕೆಲಸಗಳನ್ನು ತಾನು ಸ್ವಲ್ಪವೂ ಮಾಡಲಿಲ್ಲವೆಂದು, ಶರೀರವೆಲ್ಲ ಆತ್ಮ ವ್ಯಾಪಿಸಿರುವಾಗ ಶರೀರದಲ್ಲಿ ಸೂಜಿಯ ಮೊನೆಯಷ್ಟು ಸ್ಥಳದಲ್ಲಿ ಮಾತ್ರವೇ ತಾನು ಇದ್ದೇನೆಂದು ಹೇಳುತ್ತಾನೆ. ಅಂತಹ ಮರ್ಮಜ್ಞರ ಬಳಿ ಪಂಡಿತರು ತೋರಿಸುವ ಪಾಂಡಿತ್ಯ, ಆನೆ ಮುಂದೆ ನಾಯಿ ಬೊಗಳಿದಂತೆಂದು ತಿಳಿಯಬೇಕು.

**ಆ ॥ ಮಾತನಾಡಿದಂತೆ ಪುನಃ ವೇದ ಸಿದ್ಧಾಂತ**
**ಮಾರ್ಗದಲ್ಲಿ ಮನಸ್ಸು ನಡೆಸಲಾರದೆ**
**ಮಾತು ಕುಂಬಾರಮನೆಯ ಮಸಿಸೋರೆ ಚಂದಂಬು**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ನನ್ನ ಶರೀರದಲ್ಲಿ ನನಗೆ ತಿಳಿಯದಂತೆ ನಿದ್ರೆಯಲ್ಲಿಯೂ, ಎಚ್ಚರದಲ್ಲಿಯು ನನ್ನಲ್ಲಿ ಕೆಲಸ ಮಾಡುತ್ತಿರುವ ಓ ಆತ್ಮಾ! ಕೇಳು. ಕೆಲವರು ಕೆಲವು ಪುಸ್ತಕಗಳು ಓದಿಯೋ, ಅಥವಾ ಕೆಲವರ ಬೋಧಕರ ಮಾತುಗಳು ಕೇಳಿಯೋ, ಆಧ್ಯಾತ್ಮಿಕವನ್ನು ಸ್ವಲ್ಪ ತಿಳಿದು ಅದನ್ನು ಮಾತುಗಳ ರೂಪವಾಗಿ ಮಾತನಾಡುತ್ತಿರುತ್ತಾರೆ. ಇನ್ನೊಬ್ಬ ವ್ಯಕ್ತಿಯ ಬಾಯಿ ಮುಚ್ಚಿಸುವ ಸಾಮರ್ಥ್ಯ ತನ್ನ ಮಾತುಗಳಲ್ಲಿ ಇದ್ದರೂ, ತನ್ನದು ನಿಜವಾದ ಜ್ಞಾನವೇ ಆದಲ್ಲಿಯೂ, ಅದನ್ನು ಆಚರಣೆಯಲ್ಲಿ ಇಟ್ಟಾಗಲೇ ಜ್ಞಾನಮಾರ್ಗದಲ್ಲಿ ನಡೆದಂತಾಗುತ್ತದೆ. ಉದಾಹರಣೆಗೆ ಜ್ಞಾನ ವಿಷಯಗಳಲ್ಲಿ ಪ್ರಪಂಚಕ್ಕೆಲ್ಲ, ಪ್ರಜೆಗಳಿಗೆಲ್ಲ ಅಧಿಪತಿಯಾದ ದೇವರು ಇದ್ದಾನೆಂದು, ಆ ದೇವರನ್ನು ಹೊರತು ಉಳಿದವರನ್ನು ಆರಾಧಿಸಬಾರದೆಂದು, ಮಾತುಗಳ ರೂಪದಲ್ಲಿ ವಾದಿಸಿ ಶಾಸ್ತ್ರಬದ್ಧವಾದ ಜ್ಞಾನವೆನಿಸಿಕೊಂಡವನು, ತಾನು ಮಾತ್ರ ನಿಜವಾದ ದೇವರ ಧ್ಯಾಸ ಮರೆತು ಚಿಕ್ಕ ಚಿಕ್ಕ ಚಿಲ್ಲರೆ ದೇವತೆಗಳನ್ನು ಪೂಜಿಸುವುದರಲ್ಲಿ ಪಾಲುಹಂಚಿಕೊಳ್ಳುವುದು, ಊರಿನ ಯಜಮಾನನಾದ್ದರಿಂದ ಮೊದಲ ಪೂಜೆ ನನ್ನ ಮುಖಾಂತರವೆ ನಡೆಯಬೇಕೆಂದು ಅಂದುಕೊಳ್ಳುವುದು, ಇಲ್ಲದಿದ್ದರೆ ಚಿಲ್ಲರೆ ದೇವತೆಗಳ

ಪೂಜೆಗಳಿಗೆ ಚಂದಾಕೊಡುವುದು ಮುಂತಾದದವು ನೋಡಿದರೆ, ಅವನಿಗೆ ತಿಳಿದ ಜ್ಞಾನ ಸರಿಯಾದುದಾದರೂ, ಅದು ಮಾತನಾಡುವವರೆಗೇ ಹೊರತು ಆಚರಣೆವರೆಗು ಇಲ್ಲವೆಂದು ತಿಳಿಯುತ್ತಿದೆ. ಒಂದು ಅಡುಗೆಯನ್ನು ಮಾಡುವ ವಿಧಾನ ತಿಳಿದಷ್ಟು ಮಾತ್ರಕ್ಕೆ ನಮ್ಮ ಹಸಿವು ತೀರುವುದಿಲ್ಲ. ತಿಳಿದ ವಿಧಾನದ ಪ್ರಕಾರ ಮಾಡಿದಾಗ ಅದನ್ನು ತಿನ್ನುತ್ತೇವೆ ಹಸಿವು ತೀರುತ್ತದೆ. ಹಾಗಲ್ಲದೆ ಅಕ್ಕಿಯನ್ನು ನೆನೆಸಿಟ್ಟು ರುಬ್ಬಿ ಸೋಡಾಪುಡಿ ಬೆರೆಸಿ ಅಗಲವಾದ ಎಂಚಿನ ಮೇಲೆ ಅಗಲವಾಗಿ ರುಬ್ಬಿದ ಹಿಟ್ಟನ್ನು ಹೊಯ್ದು ಹರಡಿದರೆ, ಒಲೆಯ ಅಗ್ನಿಗೆ ಎಂಚು ಬಿಸಿಯಾಗಿ ಹಿಟ್ಟು ಸುಟ್ಟು ದೋಸೆ ಆಗುತ್ತದೆಂದು ತಿಳಿದು, ರುಬ್ಬುವು ದರಲ್ಲಿಯು ಸೋಡಾಪುಡಿ ಬೆರೆಸುವುದರಲ್ಲಿಯೂ, ಕೊನೆಗೆ ಎಂಚಿನ ಮೇಲೆ ಸುಡುವುದರಲ್ಲಿಯೂ ಅನುಭವ ಇದ್ದಾಗಲೇ ದೋಸೆ ತಯಾರಾಗಿ ತಿನ್ನಬಲ್ಲೆವು. ಹಾಗಲ್ಲದೆ ಮಾತುಗಳವರೆಗೇ ದೋಸೆಯಾದರೇ ಅದನ್ನು ತಿಂದು ಅನುಭವಿಸಲಾರೆವು. ವೇದಾಂತ ವಿಷಯದಲ್ಲಿ ಕೂಡ ಆಚರಣೆಯಿಲ್ಲದ ಜ್ಞಾನ ಕುಂಬಾರನಮನೆಯ ಸೋರೆ ಮಾತನಾಡಿದಂತೆ ಮಾತನಾಡುವುದಕ್ಕೆ ಕೆಲಸಕ್ಕೆ ಬರುತ್ತದೆ ಹೊರತು ಜೀವನದಿಂದ ವಿಮುಕ್ತಿ ಹೊಂದುವುದಕ್ಕೆ ಕೆಲಸಕ್ಕೆ ಬರುವುದಿಲ್ಲ.

**ಆ ॥ ದಾರುಣಾದಿ ಯೋಗವು ದಾರಿ ಅರಿತಯೋಗಿ**
**ಶಿರಸ್ಸಿನಲ್ಲಿ ಸೇರಿ ಶರೀರ ಮರೆತು**
**ತಾನು ತಾನೆಂದು ಆಲೋಚನೆ ಇಲ್ಲದಂತಿದ್ದು**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಅದ್ವೈತಾದಿ ಮಹಾಮುನಿಗಳು ಶರೀರದಲ್ಲಿ ಇರುವುದು ನಾನು ಒಬ್ಬನೇಯೆಂದು ಹೇಳಿಕೊಳ್ಳುತ್ತಿದ್ದರೂ, ನೀನು ಮಾತ್ರ ಪ್ರತ್ಯೇಕವಾಗಿದ್ದು ಜೀವಿಯ ಕರ್ಮವನ್ನು ಅನುಸರಿಸಿ ಶರೀರವನ್ನು ಕದಲಿಸುತ್ತಾ, ನಡೆಯುವ ಯಾವ ಕರ್ಮಕ್ಕೂ ಜವಾಬ್ದಾರಿಯಲ್ಲದ ಓ ಆತ್ಮಾ! ಕೇಳು. ಶರೀರದಲ್ಲಿನ ಮನಸ್ಸಿಗಿರುವ ತನ್ನ ಎರಡು ವಿಧಗಳ ಕಾರ್ಯಗಳನ್ನು ನಿಲ್ಲಿಸುವಂತೆ ಮಾಡಿ, ಮೂರು

ಯೋಗಗಳಲ್ಲಿ ಬ್ರಹ್ಮಯೋಗವನ್ನು ಚೆನ್ನಾಗಿ ತಿಳಿದವನಾಗಿ ಆಚರಿಸಿ, ಅದರಪ್ರಕಾರ ಶರೀರವನ್ನು ಮರೆತುಹೋದಾಗ ತಲೆಯಲ್ಲಿನ ಬುದ್ಧಿ ಮಾತ್ರ ಕೆಲಸ ಮಾಡುತ್ತಿರುತ್ತದೆ. ಮನಸ್ಸಿನ ಮೂಲಕ ಬರುವ ಹೊರಗಿನ ಇಂದ್ರಿಯ ವಿಷಯಗಳಾಗಲಿ, ಒಳಗಿನಿಂದ ಬರುವ ಗುಣಪರಂಪರೆಗಳಾಗಲಿ, ಇಲ್ಲದಿರುವುದರಿಂದ ಅಸಲು ಶರೀರವೇ ಕೆಲಸ ಮಾಡುವುದಿಲ್ಲ. ಕೆಲಸ ಮಾಡದಿರುವುದರಿಂದ ತನ್ನಿಂದಲೇ ಎಲ್ಲಾ ಕೆಲಸಗಳು ನಡೆಯುತ್ತಿವೆಯೆಂದು ತಾನು ತಾನೆಂದು ಬೋಧಿಸುವ ಅಹಂಗೆ ಕೆಲಸವಿಲ್ಲದೆ ಅದು ಅಡಗಿಹೋಗುತ್ತದೆ. ಆಗ ಬುದ್ಧಿ ಕೇವಲ ಶರೀರದಲ್ಲಿನ ಆತ್ಮವನ್ನು ನೋಡುತ್ತಿದೆ. ಶರೀರವೊಂದರ ಧ್ಯಾಸ ಉಂಟುಮಾಡುವ ಮನಸ್ಸು ಕೆಲಸಮಾಡುತ್ತಿದ್ದರೂ, ತಾನೆನ್ನುವ ಅಹಂ ಕೆಲಸ ಮಾಡುತ್ತಿದ್ದರೂ ತಲೆಯಲ್ಲಿನ ಬುದ್ಧಿಗೆ ಆತ್ಮ ತಿಳಿಯುವುದಿಲ್ಲ.

**ದಾರುಣಾದಿ ಯೋಗ – ಬ್ರಹ್ಮಯೋಗ**

**ಮೇರು ಪರ್ವತ ಸೇರಿ – ಶಿರಸ್ಸಿನಲ್ಲಿನ ಬ್ರಹ್ಮನಾಡಿಯಲ್ಲಿ ಸೇರಿ**

**ತಾನು ತಾನು ಎನ್ನುವ – ನಾನು ನಾನೆಸುವ ಅಹಂ**

**ಮೂರು ಯೋಗಗಳು – ಬ್ರಹ್ಮಯೋಗ, ಕರ್ಮಯೋಗ, ಭಕ್ತಿಯೋಗ**

**ಮನಸ್ಸಿಗಿರುವ ಎರಡು ಕಾರ್ಯಗಳು – ಹೊರಗಿನ ಇಂದ್ರಿಯಗಳ, ಒಳಗಿನ ಗುಣಗಳ ಸಮಾಚಾರವನ್ನು ಬುದ್ಧಿಗೆ ಸೇರಿಸುವುದು.**

**ನಾನು ಮರೆತು – ಶರೀರವನ್ನು ಧ್ಯಾಸದಲ್ಲಿಡುವ ಮನಸ್ಸನ್ನು ಅಡಗಿಸಿ**

**ವಿಶೇಷಾರ್ಥ :–** ಶರೀರದಲ್ಲಿನ ಬೆನ್ನು ಹುರಿ (ಬೆನ್ನುಮೂಳೆ) ಎನ್ನುವ ಮುಖ್ಯ ನರದಲ್ಲಿ ಏಳು ನಾಡಿಕೇಂದ್ರಗಳು ಇವೆ. ತಲೆಯಿಂದ ಕೆಳಗೆ ಗುದಸ್ಥಾನದವರೆಗು ವ್ಯಾಪಿಸಿರುವ ಬೆನ್ನುಮೂಳೆ ಮಧ್ಯದಲ್ಲಿರುವ ಕುಂಡಲಿಯಲ್ಲಿನ ಏಳು ನಾಡಿ ಕೇಂದ್ರಗಳನ್ನು ಆಧ್ಯಾತ್ಮಿಕವಿದ್ಯೆಯಲ್ಲಿ ಏಳು ಪರ್ವತಗಳಾಗಿ ಹೋಲಿಸಿ ಹೇಳಿದ್ದಾರೆ. ಎಲ್ಲವುದಕ್ಕಿಂತ ಮೇಲೆ ತಲೆಯಲ್ಲಿರುವ ನಾಡಿಕೇಂದ್ರವನ್ನು ಮೇರು ಶಿಖರವೆಂದಿದ್ದಾರೆ. ಎಲ್ಲಾ ನಾಡಿಕೇಂದ್ರಗಳಿಗಿಂತ ಎತ್ತರದಲ್ಲಿರುವುದರಿಂದ ಮತ್ತು ಎಲ್ಲವುದಕ್ಕಿಂತ ದೊಡ್ಡನಾಡಿ ಕೇಂದ್ರವಾಗಿರುವುದರಿಂದ, ಪರ್ವತಗಳಲ್ಲಿ

ದೊಡ್ಡದಾದ ಎತ್ತರವಾದ ಮೇರು ಪರ್ವತದೊಂದಿಗೆ ಸಮಾನವಾಗಿ ತಲೆಯಲ್ಲಿನ ಮೆದುಳನ್ನು ಹೋಲಿಸಿ ಹೇಳುವುದಾಗಿದೆ.

**ಆ ॥ ಅಂತಹ ಯೋಗಿ ಪುನಃ ನವನಿ ಜನಿಸುವುದಿಲ್ಲ**
**ಬಟ್ಟೆಬಯಲು ತನಗೆ ಪಟ್ಟವಾಯಿತು**
**ಕೊಳವನ್ನು ಬಿಟ್ಟು ಹಂಸ ಗುಣಿಗೆ ಸೇರುತ್ತದಾ**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಶರೀರದಲ್ಲಿ ಅಣುವಣುವಿನಲ್ಲಿ ವ್ಯಾಪಿಸಿ ವಿಧಿಯನ್ನು ಅನುಸರಿಸಿ ಶಕ್ತಿಕೊಡುವ ಓ ಆತ್ಮಾ! ಕೇಳು. ಮನಸ್ಸನ್ನು ಅಡಗಿಸಿ ಬುದ್ಧಿ ಮೂಲಕ ಆತ್ಮವನ್ನು ತಿಳಿದ ಯೋಗಿಗೆ ಜ್ಞಾನಾಗ್ನಿ ಎನ್ನುವ ಶಕ್ತಿ ಉದ್ಭವಿಸುತ್ತಿದೆ. ಭಗವದ್ಗೀತೆಯಲ್ಲಿ ಹೇಳಿದಂತೆ ಕರ್ಮಗಳನ್ನು ಸುಡುವುದು ಜ್ಞಾನಾಗ್ನಿ. ಆದ್ದರಿಂದ ಬ್ರಹ್ಮಯೋಗದ ಮೂಲಕ ಲಭಿಸುವ ಅಗ್ನಿ. ಯೋಗಿ ಶರೀರದಲ್ಲಿನ ಸಂಚಿತ ಕರ್ಮವನ್ನು ಸುಡುವುದಕ್ಕೆ ಪ್ರಾರಂಭಮಾಡುತ್ತದೆ. ಬ್ರಹ್ಮಯೋಗಿ ಪಟ್ಟು ಬಿಡದಿದ್ದರೆ ತನ್ನ ಸಂಚಿತ ಕರ್ಮವನ್ನೆಲ್ಲ ಸುಟ್ಟುಕೊಂಡು ಕರ್ಮಶೇಷ ಇಲ್ಲದಂತೆ ಮಾಡಿಕೊಳ್ಳ ಬಲ್ಲನು. ಕರ್ಮಶೇಷ ಇಲ್ಲದವನು ಅನುಭವಿಸಬೇಕಾಗಿರುವುದು ಇಲ್ಲ. ಆದ್ದರಿಂದ ಶರೀರದೊಂದಿಗೆ ಹುಟ್ಟಬೇಕಾದ ಕೆಲಸವೇಯಿಲ್ಲ. ಅಂತಹವನು ಜನ್ಮಗಳು, ಮರಣಗಳು ಇಲ್ಲದ ಪರಮಾತ್ಮನಲೈಕ್ಯವಾಗುತ್ತಾನೆ. ಶರೀರದಲ್ಲಿ ಬ್ರಹ್ಮಯೋಗ ತಿಳಿದು ಆತ್ಮವೊಂದರ ಅನುಭವ ಬುದ್ಧಿಗೆ ತಿಳಿದ ನಂತರ, ಪ್ರಪಂಚದಲ್ಲಿನ ಎಲ್ಲಾ ಆನಂದಗಳಿಗಿಂತ ಅತೀತವಾದ ಆನಂದ ಆತ್ಮಾನಂದವೆಂದು ತಿಳಿಯುತ್ತದೆ. ಹಂಸ ಕೊಳವನ್ನು ಬಿಟ್ಟು ಕುಣಿಯಲ್ಲಿ ಸೇರದಹಾಗೆ ಬ್ರಹ್ಮಯೋಗಿ ತನ್ನ ಯೋಗವನ್ನು ಬಿಟ್ಟು ಪ್ರಪಂಚದಲ್ಲಿ ಲಗ್ನವಾಗಬೇಕೆಂದುಕೊಳ್ಳುವುದಿಲ್ಲ. ಆತ್ಮಾನಂದ ತಿಳಿದವನಿಗೆ ಕರ್ಮಮುಗಿದ ನಂತರ ಶರೀರದಲ್ಲಿರುವ ಆತ್ಮವನ್ನು ಕೂಡ ಬಿಟ್ಟು, ಶರೀರದ ಹೊರಗೆ ಬಯಲಿನಲ್ಲಿ ಕೂಡ ಇರುವ ಪರಮಾತ್ಮನಲ್ಲಿ ಐಕ್ಯವಾಗುತ್ತಾನೆ.

**ಆ ॥ ದೇವತೆಗಳೇತಕ್ಕೆ ವೇದಗಳೇತಕ್ಕೆ**
**ಸಾಧನೆ ಇಲ್ಲದ ಓದುಗಳೆಲ್ಲ**
**ಭೇದ ಬಿಡದೆ ಮನಸ್ಸು ಬೇಜಾರಿಯಾಗಿದ್ದು**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಶರೀರದಲ್ಲಿ ಬಾಹ್ಯ ಪ್ರಪಂಚದೊಂದಿಗೆ ಸಂಬಂಧ ಇಟ್ಟುಕೊಂಡು ಎಲ್ಲವೇಳೆಯಲ್ಲಿ ಕೆಲಸಮಾಡುತ್ತಿರುವ ಓ ಆತ್ಮಾ! ಕೇಳು. ಮನುಷ್ಯ ಎಷ್ಟು ಜ್ಞಾನ ತಿಳಿದುಕೊಂಡರೂ, ತಿಳಿದಿರುವುದರ ಪ್ರಕಾರ ನಡೆಯದೆಹೋದರೆ ಏನು ಪ್ರಯೋಜನೆ ಇಲ್ಲ. ಜ್ಞಾನದ ಪ್ರಕಾರ ಆಚರಿಸದ ಮನುಷ್ಯನಿಗೆ ದೇವತೆಗಳೇತಕ್ಕೆ, ವೇದಗಳೇತಕ್ಕೆ? ದೇವತೆಗಳು ವೇದಗಳು ಮನಸ್ಸಿಗೆ ಶಾಂತಿಯನ್ನು ಕೈಗೂಡಿಸುವುದಿಲ್ಲ. ಆಚರಣೆ ಇಲ್ಲದ ಜ್ಞಾನ ಕೂಡ ಮನೋಶಾಂತಿಯನ್ನು ಉಂಟುಮಾಡುವುದಿಲ್ಲ. ಭಗವಂತನು ತಿಳಿಸಿದ ಜ್ಞಾನದ ಪ್ರಕಾರ ಆಚರಿಸದೆ ಕೇಳುವುದನ್ನು, ಹೇಳುವುದನ್ನು ಜ್ಞಾನವೆಂದುಕೊಂಡರೆ ನಮ್ಮಲ್ಲಿನ ಮನಸ್ಸು ಎರಡನ್ನು ಬಿಡುವುದಿಲ್ಲ. ಒಂದು ಖೇದ, ಎರಡನೆಯದು ಭೇದ ಎಂದು ಎರಡು ನಮ್ಮ ಶರೀರದಲ್ಲಿವೆ. ಖೇದ ಎಂದರೇ ಸಂತೋಷವನ್ನುಂಟು ಮಾಡುವುದಕ್ಕೆ ಕಾರಣವಾದವು. ದಾನ, ದಯ, ಔದಾರ್ಯ, ವೈರಾಗ್ಯ, ವಿನಯ, ಪ್ರೇಮಗಳು ಪುಣ್ಯವನ್ನು ತಂದಿಟ್ಟು ಅದರ ಕಾರಣದಿಂದ ಸುಖಗಳು ಸಂತೋಷಗಳು ಉಂಟಾಗುವಂತೆ ಮಾಡುತ್ತವೆ. ಶರೀರದಲ್ಲಿ ಒಳ್ಳೆಯ ಗುಣ ವೊಂದಿದ್ದರೆ ಅದಕ್ಕೆ ವಿಭಿನ್ನವಾಗಿ ಮತ್ತೊಂದು ಗುಣವಿರುತ್ತದೆ. ವಿಭಿನ್ನವಾಗಿರುವು ದನ್ನು ಭೇದ ಎನ್ನುತ್ತೇವೆ. ಒಳ್ಳೆಯದಕ್ಕೆ ಕೆಟ್ಟದು ಬೇಧವಾಗಿರುತ್ತದೆ, ಹಾಗೇ ಕೆಟ್ಟದಕ್ಕೆ ಒಳ್ಳೆಯದು ಭೇದವಾಗಿರುತ್ತದೆ. ಒಂದಕ್ಕೊಂದು ವಿರುದ್ಧದಿಕ್ಕಿನಲ್ಲಿ ಇರುವುದನ್ನು ಭೇದ ಎನ್ನುತ್ತೇವೆ. ಆಸೆಗೆ ಭೇದ ದಾನ, ಕೋಪಕ್ಕೆ ಭೇದ ದಯೆ. ಒಂದಕ್ಕೊಂದು ಭೇದವಾದ ಗುಣಗಳೊಂದರ ಸಂಕಲ್ಪಗಳು ಜ್ಞಾನವನ್ನು ಆಚರಿಸದ ಮನುಷ್ಯನಿಗೆ ತಗಲುತ್ತಲೇ ಇರುತ್ತವೆ. ಅವನ ಮನಸ್ಸು ಗುಣಗಳ ಪ್ರಭಾವಕ್ಕೊಳಗಾಗಿ ಬೇಜಾರಾಗಿ ಹೋಗುತ್ತಿರುತ್ತಾನೆ. ಆದ್ದರಿಂದ ಮನಸ್ಸು ಗುಣಗಳಿಗೆ ಒಳಗಾಗದೆ ಇರಬೇಕೆಂದರೇ, ನಾವು ಕಲಿತುಕೊಂಡ ಜ್ಞಾನವನ್ನು ಅನುಭವಕ್ಕೆ ತಂದುಕೊಂಡಾಗ, ಸುಖಗಳಿಗೆ

ಹಿಗ್ಗದೆ ದುಃಖಗಳಿಗೆ ಕುಗ್ಗದೆ, ಬೇಸರವಿಲ್ಲದೆ ಸಮತುಲ್ಯವಾಗಿ ಇರಬಲ್ಲೆವು. ಈ ಪದ್ಯದಲ್ಲಿ ಭೇದ ಎನ್ನುವ ಪದವನ್ನು ಎಲ್ಲಾ ಗುಣಗಳಿಗೆ ಅನ್ವಯಿಸುವ ಅರ್ಥದೊಂದಿಗೆ ನೋಡಬೇಕು.

**ಆ ॥ ಚರ್ಮದಬೆಟ್ಟ ಇದರ ಒಂಭತ್ತು ನೂರು**
**ಗಂಡು ಹುಲಿಗಳು ಸುತ್ತುವರೆದಿರುತ್ತವೆ**
**ಬೆಟ್ಟದ ಶಿಖರದಲ್ಲಿ ಕೋಮಲಿ ಒಬ್ಬಳಿದ್ದಳು**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಶರೀರದಲ್ಲಿ ಸ್ವಲ್ಪವೂ ನಿದ್ರೆಯಿಲ್ಲದೆ ಯಾವಾಗಲೂ ಎಚ್ಚರದಿಂದ ಕೆಲಸಮಾಡುವ ಓ ಆತ್ಮಾ! ಕೇಳು. ಶರೀರ ಅಗಲ ಎತ್ತರ ಹೊಂದಿ, ಕಾಲುಗಳು ಪೀಠವಾಗಿ ಶಿರಸ್ಸು ಶಿಖರವಾಗಿದೆ. ನಮ್ಮ ಶರೀರ ಒಂದು ವಿಧವಾದ ಬೆಟ್ಟದಂತೆ ಇದೆಯೆಂದು ಹೋಲಿಸಿ ಹೇಳಬಹುದು. ಶರೀರವೆಲ್ಲ ಚರ್ಮವೆಂಬ ಚೀಲದಿಂದ ಮುಚ್ಚಲ್ಪಟ್ಟಿದೆ, ಆದ್ದರಿಂದ ದೇಹವನ್ನು ಚರ್ಮದಬೆಟ್ಟವೆಂದು ಇಲ್ಲಿ ಹೇಳಿದ್ದಾರೆ. ಶರೀರಕ್ಕೆ ಆರು ಜ್ಞಾನೇಂದ್ರಿಯರಂಧ್ರಗಳು, ಮೂರು ಕರ್ಮೇಂದ್ರಿಯಗಳ ರಂಧ್ರಗಳು ಇವೆ. ಆದ್ದರಿಂದ ವೇದಾಂತಿಗಳು ಕೆಲವರು ಚರ್ಮದಚೀಲವಿದು ರಂಧ್ರಗಳು ಒಂಭತ್ತು ತುಸ್ಸೆನ್ನುವುದು ಖಾಯಂ ಎಂದು ಶರೀರವನ್ನು ಕುರಿತು ಹೇಳಿದ್ದಾರೆ. ಇಲ್ಲಿಯೇನೊ ಶರೀರವನ್ನು ಚರ್ಮದಬೆಟ್ಟವೆಂದು, ಅದಕ್ಕಿರುವ ಒಂಭತ್ತು ರಂಧ್ರಗಳ ಸಮಸ್ಯೆಗಳನ್ನು ಒಂಭತ್ತುನೂರು ಗಂಡುಹುಲಿಗಳಾಗಿ ವರ್ಣಿಸಿ ಹೇಳಿದ್ದಾರೆ. ಶರೀರ ಬೆಟ್ಟವಾದಾಗ, ಅದಕ್ಕಿರುವ ರಂಧ್ರಗಳು ನೂರಾರು ಹುಲಿಗಳಾಗಿ, ಶರೀರವೊಂದರ ಶಿರಸ್ಸನ್ನು ಬೆಟ್ಟದ ಶಿಖರವಾಗಿ ವರ್ಣಿಸಿ ಹೇಳಿದ್ದಾರೆ. ತಲೆಯಲ್ಲಿಯೇ ಬ್ರಹ್ಮನಾಡಿವೊಂದರ ಮುಖ್ಯ ಕೇಂದ್ರ ಇರುವುದರಿಂದ, ಆ ಕೇಂದ್ರವೇ ಆತ್ಮ ನಿವಾಸ ಕೇಂದ್ರವಾಗಿರುವುದರಿಂದ, ಆತ್ಮವನ್ನು ಯುವತಿಗೆ ಹೋಲಿಸಿ ಬೆಟ್ಟದಶಿಖರದಲ್ಲಿ ಕೋಮಲಿಯೊಬ್ಬಳಿದ್ದಳು ಎಂದಿದ್ದಾರೆ.

**ಆ ॥ ಕಾಮರೂಪಿ ಅದನ್ನು ಇಷ್ಟಪಟ್ಟ ಜನರೆಲ್ಲ**
**ಬೆಟ್ಟಕ್ಕೆಬಂದು ಹುಲಿಗಳ ಬಾಯಿಗೆ ಬಿದ್ದರು**
**ಧೀರನಾದರೆ ಹುಲಿಗಳಿಂದ ತಪ್ಪಿಸಿಕೊಂಡು ಬೆಟ್ಟವೇರುತ್ತಾನೆ**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಒಂದೊಂದು ಶರೀರದಲ್ಲಿ ಒಂದೊಂದು ಆತ್ಮವಾಗಿ ಜೀವಾತ್ಮಗೆ ಜೊತೆ ಇರುವ ಓ ಆತ್ಮಾ! ಕೇಳು. ಸ್ವಲ್ಪ ಜ್ಞಾನದೃಷ್ಠಿ ಇರುವವರಿಗೆಲ್ಲಾ ಶರೀರ ಶಿಖರದಲ್ಲಿರುವ ಆತ್ಮ ಕಾಮರೂಪಿಯಾಗಿ ತಿಳಿಯುತ್ತದೆ. ಪೂರ್ತಿ ದೃಷ್ಠಿಯಿಲ್ಲದ ವರಿಗೆ ಏನೂ ತಿಳಿಯದಿದ್ದರೂ, ಸ್ವಲ್ಪ ಜ್ಞಾನ ಇರುವವರೆಲ್ಲರು ತಮ್ಮ ಶರೀರದಲ್ಲಿನ ಆತ್ಮವನ್ನು ತಿಳಿಯಬೇಕೆಂದು ಅಂದುಕೊಳ್ಳುತ್ತಾರೆ. ಹೊಂದಬೇಕೆಂದು ಅನಿಸುವ ಆತ್ಮವನ್ನು ಕಾಮರೂಪಿ ಎಂದಿದ್ದಾರೆ. ಆತ್ಮ ಹೊಂದಲುಕೋರಿದ ಜನರನ್ನು ಕಾಮಿಸಿದ ಜನರು ಎಂದಿದ್ದಾರೆ. ಜೀವಾತ್ಮ ಕೋರಿಕೊಂಡ ಆತ್ಮ ಶರೀರಶಿಖರದಲ್ಲಿ ಇದೆ, ಆದ್ದರಿಂದ ಶರೀರದಲ್ಲಿಯೇ ಆತ್ಮವನ್ನು ತಿಳಿಯಬೇಕೆಂದು ಅಂದು ಕೊಂಡವರೆಲ್ಲರು ಶರೀರದಲ್ಲಿ ಶಿರೋಶಿಖರ ದಲ್ಲಿ ತಮ್ಮ ಆತ್ಮವನ್ನು ಹುಡುಕುವುದಕ್ಕೆ ಪ್ರಾರಂಭಮಾಡಿ, ಜ್ಞಾನ ಕರ್ಮೇಂದ್ರಿಗಳ ಬಂದುಹೋಗುವ ವಿಷಯಗಳಿಗೆ ಸಿಕ್ಕಿ, ಆ ವಿಷಯಗಳಲ್ಲಿಯೇ ಸಿಕ್ಕಿಕೊಂಡು ಆತ್ಮವನ್ನು ತಿಳಿಯಲಾರದೆಹೋಗಿದ್ದಾರೆ. ಇಲ್ಲಿ ಇಂದ್ರಿಯ ವಿಷಯಗಳನ್ನು ಹುಲಿಗಳಿಗೆ ಹೋಲಿಸಿ, ಇಷ್ಟಪಟ್ಟ ಜನರೆಲ್ಲ ಬೆಟ್ಟಕ್ಕೆಬಂದು ಹುಲಿಗಳ ಬಾಯಿಗೆಬಿದ್ದರು ಎಂದಿದ್ದಾರೆ. ವಿಷಯೇಂದ್ರಿಯಗಳನ್ನು ಜಯಿಸಿ ಶಿರಸ್ಸಿನಲ್ಲಿ ಮನೋದೃಷ್ಠಿಯನ್ನು ನಿಲ್ಲಿಸಿದವನು ಆತ್ಮವನ್ನು ತಿಳಿಯುತ್ತಾನೆ. ಆದ್ದರಿಂದ ಅಂತಹವನನ್ನು ಕುರಿತು ಧೀರನಾದರೆ ಹುಲಿಗಳಿಂದ ತಪ್ಪಿಸಿಕೊಂಡು ಬೆಟ್ಟವೇರುತ್ತಾನೆ ಎಂದಿದ್ದಾರೆ.

**ಆ ॥ ಜೋಡಿ ಸ್ವರದ ಜಾಡು ತಿಳಿದೂದಿದರೇ**
**ಹುತ್ತದಲ್ಲಿರುವ ಭುಜಗಮವುನು**
**ಪಟ್ಟು ಹಿಡಿದು ಒಳ್ಳೆಯ ಪರಮ ಯೋಗಿಯಾದರೆ**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ:–** ಶರೀರಾಂತರ್ಗತವಾಗಿ ಬಾಹ್ಯ ದೃಷ್ಠಿಗೆ ಕಾಣಿಸದೆ, ಜೀವಾತ್ಮಗಳಾದ ಸ್ವಾಮಿಗಳು, ಮುನಿಗಳು ಕೂಡ ನಾನೇ ಆತ್ಮಯೆಂದು ತಿಳಿಯುವಂತೆ ಮಾಡಿ, ನೀನು ಮಾತ್ರ ಪ್ರತ್ಯೇಕವಾಗಿರುವ ಓ ಆತ್ಮಾ! ಕೇಳು. ಶರೀರವೆನ್ನುವುದು ಒಂಭತ್ತು ರಂಧ್ರಗಳಿರುವ ಹುತ್ತಕ್ಕೆ ಸಮಾನ. ಶರೀರ ಹುತ್ತದಲ್ಲಿ ನಾಗರ ಹಾವಿನಂತಹ ಆತ್ಮ ನಿವಾಸ ಮಾಡುತ್ತಿದೆ. ಹುತ್ತದಲ್ಲಿನ ಹಾವು ಬುಸಗುಟ್ಟಿದಂತೆ ಶರೀರದಲ್ಲಿನ ಆತ್ಮ ಉಚ್ವಾಸ ನಿಚ್ವಾಸ ಎನ್ನುವ ಶ್ವಾಸಗಳ ಮೂಲಕ ಬುಸಗುಟ್ಟುತ್ತಿದೆ. ಹಾವಿನೊಂದರ ಶಬ್ದವನ್ನು ನಾಗಸ್ವರ ಎಂದಿದ್ದಾರೆ. ನಾಗಸ್ವರ ಉಚ್ವಾಸ ನಿಚ್ವಾಸಗಳಲ್ಲಿ ಪ್ರತ್ಯೇಕ ಶಬ್ದಹೊಂದಿದೆ. ಆ ಶಬ್ದಗಳನ್ನೇ "ಸೋಹಂ" ಎಂದು ಕರೆಯುತ್ತಿದ್ದೇವೆ. "ಸೋಹಂ" ಶಬ್ದಕ್ಕೆ ಕಾರಣವೇನೆಂದು ಆ ಶಬ್ದ ಹೊರಡುವ ಜಾಡನ್ನು ತಿಳಿದರೆ, ಕೊನೆಗೆ ಆ ಶಬ್ದ ಮಾಡುವ ಹಾವು ಎನ್ನುವ ಆತ್ಮ ತಿಳಿಯುತ್ತದೆ. ಈ ಪದ್ಯದಲ್ಲಿ ಹಾವನ್ನು ಆತ್ಮ ಎಂದೂ, ಎರಡು ಮೂಗಿನರಂಧ್ರದಲ್ಲಿನ ಶ್ವಾಸಗಳನ್ನು ಜೋಡಿನಾಗಸ್ವರಗಳೆಂದು, ಮೂಗಿನರಂದ್ರಗಳ ಶ್ವಾಸದಿಂದ ಬ್ರಹ್ಮನಾಡಿಯಲ್ಲಿನ ಆತ್ಮವರೆಗು ಆತ್ಮಶಕ್ತಿ ಹೇಗೆ ಪ್ರವಹಿಸುತ್ತಿದೆಯೋ ತಿಳಿಯುವುದನ್ನು ಸ್ವರದ ಜಾಡು ತಿಳಿಯುವುದೆಂದು, ಹಾಗೆ ಶರೀರಾಂತರ್ಗತ ಪರಿಶೋಧನೆ ಮಾಡಿದವನನ್ನು ಪರಮಯೋಗಿಯೆಂದು ಹೇಳುವುದು ನಡೆದಿದೆ.

**ಆ ॥ ಘಂಟನಾದ ಹೃದಯ ಗಗನದ ಮೇಲೆ ಮೊಳಗುವ**
**ಗಗನವಿರುವ ಕಡೆ ಕಾಣಿಸುವುದಿಲ್ಲ**
**ಪರಮ ಗುರುವಿನ ಕರುಣೆ ಇಲ್ಲದೆ ನರರಿಗೆ**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ:–** ಜೀವಾತ್ಮಗು ಪರಮಾತ್ಮಗು ಮಧ್ಯದಲ್ಲಿರುವ ಓ ಆತ್ಮಾ! ಕೇಳು. ಹೃದಯವೆನ್ನುವುದು ನಮ್ಮ ಶರೀರದಲ್ಲಿದೆ. ಹೃದಯವನ್ನು ಶರೀರದಲ್ಲಿನ ಗುಂಡಿಗೆಯಾಗಿ ಕೆಲವರು ಹೇಳಿಕೊಂಡರೂ ಅದು ನಿಜವಲ್ಲ. ಶರೀರ ಮಧ್ಯದಲ್ಲಿರುವ ಬ್ರಹ್ಮನಾಡಿಯೇ ಹೃದಯವೆನ್ನುವ ಹೆಸರಿನಿಂದ ಇದೆ. ಹೃದಯದಲ್ಲಿ ಆತ್ಮವಿದೆ. ಕೆಲವರು ಜೀವಾತ್ಮವಿದೆಯೆಂದು ಕೂಡ ಅಂದು

ಕೊಳ್ಳುತ್ತಿರುತ್ತಾರೆ. ಜೀವಾತ್ಮ ಎಂದಿಗೂ ಹೃದಯದಲ್ಲಿ ಇರುವುದಿಲ್ಲ. ಜೀವಾತ್ಮ ಗುಣಚಕ್ರದಲ್ಲಿ ಇರುತ್ತದೆ. ಆತ್ಮ ಮಾತ್ರ ಹೃದಯದಲ್ಲಿದ್ದು ಶರೀರವೆಲ್ಲವೂ ವ್ಯಾಪಿಸುತ್ತಿದೆ. ಹೃದಯ (ಬ್ರಹ್ಮನಾಡಿ) ಯಲ್ಲಿರುವ ಆತ್ಮ ತನ್ನ ಚೈತನ್ಯವನ್ನು ನರಗಳ ಮೂಲಕ ಶ್ವಾಸಕೋಶಗಳವರೆಗು ವ್ಯಾಪಿಸುವಂತೆ ಮಾಡಿ ಅವುಗಳನ್ನು ಕದಲಿಸುತ್ತಾ ಶ್ವಾಸ ಆಡುವಂತೆ ಮಾಡುತ್ತಿದೆ. ಶ್ವಾಸ ಹೃದಯಗಗನದಿಂದ ಬರುತ್ತಿದೆ. ಗಗನ ಎಂದರೇ ಕಾಣಿಸದ ಶೂನ್ಯವೆಂದು ಅರ್ಥ. ಹೃದಯದಲ್ಲಿರುವ ಆತ್ಮ ಕಾಣಿಸದ ಶೂನ್ಯವಾಗಿದೆ, ಆದ್ದರಿಂದ ಆತ್ಮವನ್ನು ಹೃದಯಗಗನ ಎಂದಿದ್ದಾರೆ. ಆತ್ಮಚೈತನ್ಯದಿಂದ ಬರುವ ಶ್ವಾಸವೊಂದರ ಸೋಹಂ ಶಬ್ದವನ್ನು ಗಂಟಾನಾಧವಾಗಿ ವರ್ಣಿಸಿದ್ದಾರೆ. ಶರೀರದಲ್ಲಿನ ಆತ್ಮ ಜೀವಾತ್ಮಗೆ ತಿಳಿಯಬೇಕೆಂದರೆ, ಕಾಣಿಸುವ ಗುರುಗಳಿಗಿಂತ ಬೇರೆಯಾಗಿರುವ ಪರಮ ಗುರುವಿನ ಕರುಣೆ ಇಲ್ಲದ್ದು ಸಾಧ್ಯವಾಗುವುದಿಲ್ಲ. ಜೀವಾತ್ಮಗೆ ಆತ್ಮ ತಿಳಿಯಬೇಕೆಂದರೆ, ಪರಮಾತ್ಮನ ಕರುಣೆ ಅಗತ್ಯ. ಗುಣಚಕ್ರದಲ್ಲಿನ ಜೀವಿಗೆ ಹೃದಯಾಂತರಾಳದಿಂದ ಶರೀರವೆಲ್ಲ ವ್ಯಾಪಿಸಿರುವ ಆತ್ಮ ತಿಳಿಯಬೇಕೆಂದರೆ, ಶರೀರದೊಳಗೆ, ಶರೀರದ ಹೊರಗೆ ವ್ಯಾಪಿಸಿರುವ ಪರಮಾತ್ಮನ ಕರುಣೆ ಅಗತ್ಯವೆಂದು ನಮ್ಮ ಹಿರಿಯರು ಒತ್ತಿ ಹೇಳಿದ್ದಾರೆ.

**ಆ ॥ ಕಿವಿಗಳು ಮುಚ್ಚಿಕೊಂಡರು ಚತುರತಲವಿ ಗಾವು**
**ಮಾಂಸ ಪಿಂಡ ತನುವು ಮರೆತಂತೆ**
**ಪ್ರಣವ ಮಂತ್ರ ಸಿದ್ಧಿ ಪ್ರಾಪ್ತಿಯನ್ನು ಕಾಣಬೇಕು**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಗಿಡದಲ್ಲಿ ತೇವ ವ್ಯಾಪಿಸಿದಂತೆ ಶರೀರದಲ್ಲಿ ಶಕ್ತಿಯಾಗಿ ವ್ಯಾಪಿಸಿರುವ ಓ ಆತ್ಮಾ! ಕೇಳು. ಪ್ರಸ್ತುತ ಕಾಲದಲ್ಲಿ ದೈವಜ್ಞಾನವನ್ನು ಬೋಧಿಸುವ ಬೋಧಕರೆಷ್ಟೋಜನ ಬಂದಿದ್ದಾರೆ. ಅಂತಹವರು ತಮಗೆ ತಿಳಿದ ಪದ್ಧತಿಯನ್ನು ಅವರ ಶಿಷ್ಯರಿಗೆ ಬೋಧಿಸುತ್ತಿದ್ದಾರೆ. ಹಾಗೆ ಒಳ್ಳೆಯ ಮಾರ್ಗವನ್ನು ಬೋಧಿಸುವುದರಲ್ಲಿ ತಪ್ಪಿಲ್ಲ. ಆದರೆ ತಾವು ಬೋಧಿಸುವ ವಿಧಾನದಲ್ಲಿ ಏನಾದರೂ ಲೋಪವಿದೆಯೋ ಇಲ್ಲವೊಯೆಂದು ಮೊದಲೇ ಯೋಚಿಸದೆ, ತಾವು ಹೇಳುವುದು

ಬ್ರಹ್ಮವಿದ್ಯಾ ಶಾಸ್ತ್ರವಾದ ಭಗವದ್ಗೀತೆಗೆ ವಿಭಿನ್ನವಾಗಿದೆಯೇನೋ ಆಲೋಚಿಸದೆ, ತಮಗೆ ತಿಳಿದಿರುವುದು ಹೇಳುತ್ತಾಹೋದರೆ ಒಂದುವೇಳೆ ತಾವು ಹೇಳುವುದು ಧರ್ಮವಿರುದ್ಧವಾದರೆ ಒಳ್ಳೆಯದಕ್ಕಿಂತ ಕೆಟ್ಟದ್ದೆ ಹೆಚ್ಚಾಗಿ ನಡೆಯುತ್ತದೆ. ಉದಾಹರಣೆಗೆ ಮನಸ್ಸನ್ನು ಏಕಾಂತಪಡಿಸಿಕೊಳ್ಳಿರೆಂದು ಇದೆಯೆಂದುಕೊಳ್ಳಿ, ಅದನ್ನು ಯೋಗವೆನ್ನುತ್ತೇವೆ ಎಂದು ವಿವರಿಸುವುದರಲ್ಲಿ ತಪ್ಪಿಲ್ಲ. ಆ ವಿವರವನ್ನು ಹೇಳುತ್ತಾ ಪ್ರಪಂಚದಲ್ಲಿನ ಎಲ್ಲಾ ವಿಷಯಗಳನ್ನು ಬಿಟ್ಟು ಹಾಕಿ ಅವುಗಳನ್ನು ಮನಸ್ಸಿಗೆ ಸೇರಿಸಬೇಡವೆಂದು, ಪ್ರಪಂಚ ವಿಷಯಗಳು ಮನಸ್ಸಿಗೆ ಸೇರದಂತಿರುವುದಕ್ಕೆ ಮನಸ್ಸೊಂದರ ಧ್ಯಾಸವನ್ನು ಶ್ವಾಸದಮೇಲೆ ಇಡಿರೆಂದೋ, ಅಥವಾ **"ಓಂ ನಮಃ ಶಿವಾಯ"** ಎಂಬ ಪಂಚಾಕ್ಷರಿ ಮಂತ್ರದ ಮೇಲೆ ಇಡಿರೆಂದೋ, ಅಥವಾ **"ಸೋಹಂ"** ಎನ್ನುವ ಮಂತ್ರ ಶ್ವಾಸಕ್ಕೆ ಸೇರಿಸಿ ನೋಡಿರೆಂದೋ, ಯಾವುದೊ ಒಂದು ಕೆಲಸವನ್ನಿಟ್ಟು ಅದೇ ಗುರೂಪದೇಶವೆಂದು, ಅಂತಹ ಸಾಧನೆ ಮಾಡುವುದೇ ಯೋಗವೆಂದು ಹೇಳುವುದು ದೊಡ್ಡ ತಪ್ಪಾಗುತ್ತದೆ. ಕೇಳುವವನಿಗೆ ಮಾರ್ಗಭ್ರಷ್ಟತೆ, ಹೇಳುವವನಿಗೆ ಬ್ರಹ್ಮವಿದ್ಯಾ ಪಾಪ ಲಭಿಸುತ್ತದೆ. ಆದ್ದರಿಂದ ಬೋಧಕರೆಲ್ಲರು ಕಡು ಜಾಗ್ರತೆಯಾಗಿ ಬೋಧಿಸಬೇಕಾಗಿರುತ್ತದೆ.

ಈ ಪದ್ಯದಲ್ಲಿ ಕೂಡ ತಪ್ಪಾಗಿ ಅರ್ಥ ಮಾಡಿಕೊಳ್ಳುವುದಕ್ಕೆ ಅವಕಾಶವಿದೆ. ಯಾವ ಬೋಧಕನು ಅಂತಹ ತಪ್ಪು ಮಾಡದಂತಿರುವುದಕ್ಕೆ ಒಂದು ಸೂತ್ರವಿದೆ. ಅನೇಕ ಎಂದರೇ ಎಷ್ಟೋ ಹೆಚ್ಚು ಸಂಖ್ಯೆ ಎಂದು ಅಥವಾ ಒಂದಕ್ಕಿಂತ ಹೆಚ್ಚು ಎಂದು ಹೇಳಬಹುದು. ಏಕ ಎಂದರೇ ಒಂದು ಎಂದು ಹೇಳಬಹುದು. ಏಕಾಂತ ಎಂದರೇ ಒಂದು ಸಹ ಇಲ್ಲದಿರುವುದು ಶೂನ್ಯವೆಂದು ಹೇಳಬಹುದು. ಅದನ್ನೇ ಏಕಾಗ್ರತೆ ಎಂದು ಕೂಡ ಹೇಳಬಹುದು. ಏಕಾಗ್ರತೆ ಎಂದರೇ ಒಂದರ ಮೇಲೆ ಎಂದು ಅರ್ಥ. ಒಂದರ ಕೆಳಗೆ ಎರಡು ಮೂರು ಮೊದಲುಗೊಂಡು ಎಷ್ಟಾದರೂ ಇರಬಹುದು. ಒಂದರ ಮೇಲೆ ಏನು ಇರುವುದಿಲ್ಲ. ಒಂದರ ಮೇಲೆ ಸೊನ್ನೆ ಇರುತ್ತದೆ ಅಂದರೇ ಏನು ಇಲ್ಲವೆಂದು ಅರ್ಥ. ಒಂದರ ಕೆಳಗೆ ಎರಡರಿಂದ ಎಷ್ಟಾದರೂ ಇರಬಹುದು. ಆಧ್ಯಾತ್ಮಿಕ ವಿದ್ಯೆಯಲ್ಲಿ ಮನಸ್ಸನ್ನು ಏಕಾಂತ ಮಾಡಿಕೊಳ್ಳಿರೆಂದು, ಏಕಾಗ್ರತೆ ಪಡಿಸಿಕೊಳ್ಳಿರೆಂದು, ಹೇಳುತ್ತಿರುತ್ತಾರೆ.

ಮನಸ್ಸಿಗೆ ಏಕಾಂತವೆಂದರೂ, ಏಕಾಗ್ರತೆ ಎಂದರೂ ಯಾವ ಆಲೋಚನೆಗಳು, ಯಾವ ಜ್ಞಾಪಕಗಳು ಇಲ್ಲದಂತೆ ಮಾಡಿಕೊಳ್ಳಿರೆಂದು ಅರ್ಥವಿರುವಾಗ ಕೆಲವರು ಬೋಧಕರು, ಸ್ವಾಮಿಗಳು ಏಕಾಗ್ರತೆ ಎಂದು ಹೇಳುತ್ತಾ ಮನಸ್ಸಿಗೆ ಯಾವುದೋ ಒಂದು ಮಂತ್ರವನ್ನೊ ಅಥವಾ ಧ್ಯಾಸವನ್ನೊ ತಗಲಿಸುವುದು ನ್ಯಾಯವಲ್ಲ, ಧರ್ಮವಲ್ಲ. ಹಾಗೆ ಹೇಳುವವರು ನಾವು ದೊಡ್ಡ ಗುರುಗಳೆಂದು ತಮ್ಮನ್ನು ತಾವು ದೊಡ್ಡದಾಗಿ ಹೇಳಿಕೊಂಡರೂ ದೇವರ ದೃಷ್ಠಿಯಲ್ಲಿ ಮಾತ್ರ ಅವರು ಅಧರ್ಮಪರರಾಗಿಯೇ ಗುರುತಿಸಲ್ಪಡುತ್ತಾರೆ. ಅವರು ಹೇಳುವ ಉಪದೇಶದ ಮೂಲಕ ಸಾಧಕನ ಮನಸ್ಸು ಏಕಾಗ್ರತೆ ಹೊಂದದಿರುವುದಲ್ಲದೆ, ಏಕಕ್ಕೆ ಗಟ್ಟಿಯಾಗಿ ಅಂಟಿಕೊಂಡುಹೋಗುತ್ತಾನೆ. ಅದರ ಮೂಲಕ ಭವಿಷ್ಯತ್ತಿನಲ್ಲಿ ಎಂದಿಗೂ ಏಕಾಗ್ರತೆ ಹೊಂದುವ ಅವಕಾಶವೇ ಇಲ್ಲದೆ ಹೋಗುತ್ತದೆ. ಸಾಧಾರಣ ಮನುಷ್ಯ ಎಂದಿಗಾದರೂ ನಿಜವಾದ ಜ್ಞಾನ ತಿಳಿದು ಮನಸ್ಸನ್ನು ಏಕಾಗ್ರತೆ ಮಾಡಿ ಕೊಳ್ಳುವುದಕ್ಕೆ ಅವಕಾಶವಿರುತ್ತದೆ, ಆದರೆ ಮಂತ್ರೋಪದೇಶ ಹೊಂದಿದವರಿಗೆ ಮಾತ್ರ ಏಕಾಗ್ರತೆ ಹೊಂದುವುದಕ್ಕೆ ಅವಕಾಶವೇ ಇರುವುದಿಲ್ಲ.

ಸಾಧಾರಣ ಮನುಷ್ಯನೊಂದರ ಮನಸ್ಸು ಶರೀರದಲ್ಲಿನ ಗುಣಗಳಿಂದ ಅನೇಕ ಆಲೋಚನೆಗಳನ್ನು ಹೊಂದುತ್ತಿರುತ್ತದೆ. ಮನಸ್ಸು ದಿನದಲ್ಲಿ ಅಥವಾ ಒಂದು ಗಂಟೆಯಲ್ಲಿ ಎಷ್ಟೋ ಆಲೋಚನೆಗಳು ಹೊಂದಿದ್ದರೂ ಸೂತ್ರದ ಪ್ರಕಾರ ಮನಸ್ಸಿಗೆ ಒಂದು ಸಮಯದಲ್ಲಿ, ಒಂದು ಆಲೋಚನೆ ಮಾತ್ರವಿರುತ್ತದೆ. ಒಂದು ಆಲೋಚನೆ ಹೋದನಂತರ ಮತ್ತೊಂದು ಆಲೋಚನೆ ಬರುತ್ತಿರುತ್ತದೆ. ಮನಸ್ಸು ಒಂದರ ನಂತರ ಒಂದನ್ನು ಆಲೋಚಿಸುತ್ತಿರುತ್ತದೆ. ಏಕ ಸಮಯದಲ್ಲಿ ಏಕ ಆಲೋಚನೆ ಮಾಡುವುದು ಮನಸ್ಸಿಗೆ ಸಹಜಕೆಲಸ. ಒಂದು ಸಮಯದಲ್ಲಿ ಒಂದು ಆಲೋಚನೆ ಕೂಡಾ ಮಾಡದಂತೆ ಮಾಡುವುದೇ ನಿಜವಾದ ಸಾಧನೆ ಎನ್ನಲಾಗುತ್ತದೆ. ಅದನ್ನೇ ಏಕಾಗ್ರತೆ ಎಂದುಕೂಡ ಕರೆಯುತ್ತೇವೆ. ಮನಸ್ಸಿಗೆ ಅನೇಕ ವಿಷಯಗಳು ಬದಲಾಗುತ್ತಾ ಒಂದು ವಿಷಯದ ಮೇಲೆ ಸ್ಥಿರತ್ವ ಏರ್ಪಡದಿರುವಾಗ, ಅದನ್ನು ಸಾಧನೆ ಮೂಲಕ ಯಾವ ವಿಷಯದ ಮೇಲೆ ಇಲ್ಲದಂತೆ ಮಾಡಬಹುದು. ಹಾಗಲ್ಲದೆ ಮನಸ್ಸು ಒಂದು ವಿಷಯದ ಮೇಲೆ

ಚೆನ್ನಾಗಿ ಲಗ್ನವಾಗುವುದಕ್ಕೆ ಅಭ್ಯಾಸವಾದಾಗ ಅದರಿಂದ ಏಕಾಗ್ರತೆ ಪಡಿಸುವುದು ಅಂದರೇ ಅದನ್ನು ಕೂಡಾ ಇಲ್ಲದಂತೆ ಮಾಡುವುದು ಸಾಧ್ಯವಾಗದ ಕೆಲಸವಾಗುತ್ತದೆ. ಯಾವುದೇ ಒಂದು ವಿಷಯದ ಮೇಲೆ ಸ್ಥಿರತ್ವ ಇಲ್ಲದ ಮನಸ್ಸನ್ನೇ ಏಕಾಗ್ರತೆ ಪಡಿಸುವುದಕ್ಕೆ ಬಹಳ ಕಷ್ಟವಾದ ಕೆಲಸವಾಗಿರುವಾಗ, ಸಾಧನೆ ಮೂಲಕ ಗುರೂಪದೇಶವೆಂದು ಒಂದು ಮಂತ್ರವೆಂಬ ವಿಷಯವನ್ನು ಮನಸ್ಸಿಗೆ ಅಂಟಿಸಿಕೊಂಡ ನಂತರ, ಅದನ್ನು ಬಿಡಿಸಿ ಮನಸ್ಸಿಗೆ ಏನು ಇಲ್ಲದಂತೆ ಮಾಡುವುದು ಕಷ್ಟವಾದ ಕೆಲಸವಾಗುತ್ತದೆ. ಆದ್ದರಿಂದಲೇ ಭಗವದ್ಗೀತೆಯಲ್ಲಿ ಇಂದ್ರಿಯಾರ್ಥ ವಿಷಯಗಳ ಮೇಲೆ ಮನಸ್ಸನ್ನು ಲಗ್ನ ಮಾಡಬೇಡವೆಂದು ದೇವರು ಹೇಳಿದ್ದಾನೆ. ಇಂದ್ರಿಯಾರ್ಥ ವಿಷಯಗಳೆಂದರೇ ಐದು ಜ್ಞಾನೇಂದ್ರಿಯ ಗಳಿಗೆ ಸಂಬಂಧಿಸಿದ ವಿಷಯಗಳೆಂದು ಅರ್ಥ. ಗುರು ಮೂಲಕ ಉಪದೇಶ ಮಂತ್ರರೂಪದಲ್ಲಿ ಹೇಳಿಸಿಕೊಂಡಾಗ, ಅದು ಕಿವಿ ಎಂಬ ಇಂದ್ರಿಯದ ಮೂಲಕ ಬರುವ ವಿಷಯವಾಗುತ್ತದೆ. ಆದ್ದರಿಂದ ಆ ಗುರೂಪದೇಶ ವಿಷಯ ಕೂಡ ದೇವರಿಗೆ ಸಂಬಂಧವಿಲ್ಲದ ಇಂದ್ರಿಯಾರ್ಥ ವಿಷಯವಾಗುತ್ತದೆ. ಯಾವೊಂದು ಇಂದ್ರಿಯ ವಿಷಯ ಇಲ್ಲದೇ ನಿಜವಾದ ಯೋಗವಾಗುತ್ತದೆ.

ಆ ವಿಷಯವನ್ನು ತಿಳಿಸುವುದೇ ಮೇಲಿನ ಪದ್ಯ. ಈ ಪದ್ಯದಲ್ಲಿ ಕಿವಿಗಳು ಮುಚ್ಚಿಕೊಂಡರು ಚತುರತೆ ಇಲ್ಲ ಎಂದಿದ್ದಾರೆ. ತಾತ್ಕಾಲಿಕವಾಗಿ ಕಿವಿಗಳು ಮುಚ್ಚಿಕೊಂಡರು ಪ್ರಯೋಜನೆ ಇಲ್ಲವೆಂದು, ಅದು ಜ್ಞಾನಸಾಧನೆ ಅಲ್ಲವೆಂದು ತಿಳಿಸಿದ್ದಾರೆ. ಕಿವಿಗಳನ್ನು ಮುಚ್ಚಿಕೊಂಡು ಅದಕ್ಕುಮುನ್ನ ಕೇಳಿದ ವಿಷಯವನ್ನು ಜ್ಞಾಪಕ ಮಾಡಿಕೊಳ್ಳುವುದನ್ನು ಈ ಪದ್ಯದಲ್ಲಿ ಖಂಡಿಸಿದ್ದಾರೆ. ಮೂರು ಗುಣಗಳನ್ನು ಬಿಟ್ಟು ನಾಲ್ಕನೆಯದಾದ ಯೋಗವನ್ನು ಹೊಂದುವುದು ಚತುರತೆ ಎನ್ನುತ್ತಾರೆ. ಕಿವಿಗಳು ಮುಚ್ಚಿಕೊಂಡರು ಚತುರತೆ ಅಲ್ಲವೆನ್ನುವುದು ಅದು ಯೋಗಪದ್ಧತಿ ಅಲ್ಲವೆಂದು ತಿಳಿಸುವುದೇಯೆಂದು ಅರ್ಥಮಾಡಿಕೊಳ್ಳಿ. ಐದು ಇಂದ್ರಿಯಗಳ ವಿಷಯಗಳನ್ನು ಮರೆಯುವುದನ್ನು ಸೂಚಿಸುತ್ತಾ ಮಾಂಸಪಿಂಡ ತನುವನ್ನು ಮರೆತಂತೆ ಎಂದಿದ್ದಾರೆ. ಶರೀರವನ್ನು ಮರೆಯುವುದು

ಎಂದರೇ ಇಂದ್ರಿಯ ಧ್ಯಾಸಗಳೆಲ್ಲ ಮರೆಯುವುದೆಂದು ಅರ್ಥ. ಶ್ವಾಸದ ಮೇಲೆ ಧ್ಯಾಸವಾಗಲಿ ಮೂಗಿನ ಮೇಲೆ ಧ್ಯಾಸವಾಗಲಿ ಅಥವಾ ಮಂತ್ರದ ಮೇಲೆ ಧ್ಯಾಸವಾಗಲಿ ಇಂದ್ರಿಯ ಧ್ಯಾಸಗಳೇ ಆಗುತ್ತವೆ. ಶ್ವಾಸ ಧ್ಯಾಸ ಚರ್ಮಕ್ಕೆ ಸಂಬಂಧಿಸಿದ ಸ್ಪರ್ಶ ಆಗುತ್ತದೆ. ಹಾಗೇ ಮಂತ್ರ ಧ್ಯಾಸ ಕಿವಿಯಿಂದ ಕೇಳಿದ ಶ್ರವಣ ವಿಷಯವಾಗುತ್ತದೆ. ಆದ್ದರಿಂದ ಈ ಧ್ಯಾಸಗಳಿಂದ ಶರೀರವನ್ನು ಮರೆತಂತಲ್ಲ. ಪ್ರಣವ ಮಂತ್ರ ನಮ್ಮ ಶ್ವಾಸದಲ್ಲಿಯೇ ಇದೆಯೆಂದು, ಪ್ರಣವ ಮಂತ್ರವಾದ "ಓಂ" ಸೋ ಕೊನೆಯಲ್ಲಿ "ಓ" ಆಗಿಯು, ಹಂ ಕೊನೆಯಲ್ಲಿ "ಮ್" ಆಗಿಯು ಒಳಗೊಂಡಿದೆಯೆಂದು ತಿಳಿದುಕೊಂಡಿದ್ದೇವೆ. ಪ್ರಣವ ಮಂತ್ರಸಿದ್ಧಿ ಎಂದರೇ ಓಂಕಾರ ಕೂಡಿಕೊಂಡ ಉಚ್ವಾಸ ನಿಚ್ವಾಸಗಳು ಹುಟ್ಟುವ ಸ್ಥಳವೆಂದು ಅರ್ಥ. ಸಿದ್ಧಿ ಎಂದರೆ ಲಭಿಸುವುದೆಂದು, ಪ್ರಣವ ಮಂತ್ರಸಿದ್ಧಿ ಎಂದರೇ ಓಂಕಾರವನ್ನು ಹುಟ್ಟಿಸುವ ಆತ್ಮ ಎಂದು ತಿಳಿಯಬೇಕು. ಪ್ರಣವ ಮಂತ್ರಸಿದ್ಧಿ ಪ್ರಾಪ್ತಿಕಾಣಬೇಕೆಂದರೆ, ಪ್ರಣವ ಮಂತ್ರವಾದ ಓಂಕಾರವನ್ನು ಹುಟ್ಟಿಸುವ ಆತ್ಮವನ್ನು ಹೊಂದಬೇಕೆಂದು ಅರ್ಥ. ಶರೀರದಲ್ಲಿ ಎಲ್ಲದಕ್ಕು ಶಕ್ತಿಕೊಡುವ ಆತ್ಮದಿಂದಲೇ ಶ್ವಾಸಕೋಶಗಳು ಕದಲಿ ಶ್ವಾಸ ಏರ್ಪಟ್ಟು, ಸೋಹಂ ಶಬ್ದವಾಗಿ ತಯಾರಾಗಿ, ಅದರಲ್ಲಿ ಓಂ ತಯಾರಾಗುತ್ತಿದೆ. ಓಂ ನ್ನು ಹುಟ್ಟಿಸುವ ಆತ್ಮವನ್ನು ಹೊಂದಬೇಕೆಂದರೇ ಕಿವಿಗಳು, ಕಣ್ಣುಗಳು ಮುಚ್ಚಿಕೊಂಡರೆ ಜ್ಞಾನವಲ್ಲವೆಂದು, ಶರೀರದಲ್ಲಿನ ಐದು ಜ್ಞಾನೇಂದ್ರಿಗಳನ್ನು ಮರೆತು ಒಳಗಿರುವ ಆತ್ಮವನ್ನು ತಿಳಿಯಬೇಕೆಂದು ಮೇಲಿನ ಪದ್ಯದಲ್ಲಿ ಹೇಳಿದ್ದಾರೆ. ಆದ್ದರಿಂದ ಈಗಲಾದರೂ ಶರೀರದ ಮೇಲೆ, ಮಂತ್ರದ ಮೇಲೆ ಧ್ಯಾಸಗಳು ಬಿಟ್ಟು, ಪ್ರಣವಕ್ಕೆ ಕಾರಣವಾದ ಆತ್ಮವನ್ನು ಶರೀರವನ್ನು ಮರೆತು ತಿಳಿಯಬೇಕು.

**ಆ ॥ ಕಪ್ಪು ತಾವರೆ ಎಲೆ ಮಧ್ಯ ರಂಧ್ರದಲ್ಲಿಯು**
**ಕುಂಡಲಿಯೆನ್ನುವ ಹಾವು ಮೊಟ್ಟೆಯಿಟ್ಟು**
**ಎರಡು ಮರಿಗಳನ್ನಿದು ಹಗಲಿರುಳರಚಿತು**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಕಬ್ಬಿಣದೊಂದಿಗೆ ಬೆರೆತ ಅಗ್ನಿಗು ಕೂಡ ಕೊಲಿಮೆ ಹತ್ತಿರ ಚಮ್ಮಟಿಗೆ ಹೊಡೆತಗಳು ತಪ್ಪುವುದಿಲ್ಲೆನ್ನುವಂತೆ, ಜೀವಿಯೊಂದಿಗೆ ಸೇರಿ ಶರೀರವೆಲ್ಲ ವ್ಯಾಪಿಸಿ ಆಗಾಗ ಹಸಿವಿಗೆ ಶಕ್ತಿ ಹೀನತೆ ಹೊಂದುತ್ತಿರುವ ಓ ಆತ್ಮಾ! ಕೇಳು. ನೀರಿನ ಮೇಲೆ ತಾವರೆಲೆ ಕಾಣಿಸುವಂತೆ, ಮನುಷ್ಯನ ಶರೀರವೊಂದರ ಅಗ್ರಸ್ಥಾನದ ಮೇಲೆ ತಲೆ ಭಾಗದಲ್ಲಿ ಕೂದಲು ಮುಚ್ಚಲ್ಪಟ್ಟು ಕಪ್ಪಗೆ ಕಾಣಿಸುವುದರಿಂದ ತಲೆ ಮೇಲ್ಭಾಗವನ್ನು ಮೇಲಿನ ಪದ್ಯದಲ್ಲಿ ಕಪ್ಪನೆತಾವರೆಲೆ ಎಂದಿದ್ದಾರೆ. ಕೆಲವರು ಮುದುಕರಿಗೆ ಬಿಳಿ ಕೂದಲಿರುತ್ತವೆ ಅಲ್ಲವೇಯೆಂದು ಕೇಳಬಹುದು. ಅಂತಹವರ ತಲೆಗಳನ್ನು ಬಿಳಿತಾವರೆಲೆ ಎನ್ನಬಹುದು. ಹೆಚ್ಚಾಗಿ ಕಪ್ಪು ತಲೆಗಳಿರುವುದರಿಂದ ಕಪ್ಪುತಾವರೆಲೆ ಎಂದು ಹೇಳಿದ್ದಾರೆ. ಪ್ರತಿಯೊಬ್ಬರಿಗೆ ತಲೆ ಮಧ್ಯಭಾಗದಲ್ಲಿ ಬ್ರಹ್ಮನಾಡಿ ಇರುತ್ತದೆ. ಬ್ರಹ್ಮನಾಡಿ ಒಂದರ ಸ್ಥಾನವನ್ನು ನೆತ್ತಿ ಎಂದು ಚಿಕ್ಕ ಮಕ್ಕಳಿರುವಾಗ ಅನ್ನುತ್ತಿರುತ್ತೇವೆ. ತಲೆ ಮಧ್ಯಭಾಗದಲ್ಲಿ ಮೂಳೆಗಳ ಮಧ್ಯದಲ್ಲಿ ಒಂದು ರಂಧ್ರವಿರುವುದು ಶಿಶುದಶೆಯಲ್ಲಿ ಎಲ್ಲರಿಗು ಕಾಣಿಸುವುದು ಸಹಜ. ಅದನ್ನೇ ಕಪ್ಪುತಾವರೆಲೆ ನಡುವೆ ರಂಧ್ರ ಎಂದಿದ್ದಾರೆ. ತಲೆ ಮಧ್ಯಭಾಗದಲ್ಲಿರುವ ಬ್ರಹ್ಮನಾಡಿಯಲ್ಲಿ ಆತ್ಮನಿವಾಸವಾಗಿದ್ದು ಶರೀರಕ್ಕೆ ಚೈತನ್ಯ ಕೊಡುತ್ತಿದೆ. ಅಷ್ಟೇಅಲ್ಲದೆ ಜೀವಿಯು ಶರೀರದಲ್ಲಿ ಸೇರಿದಾಗಿನಿಂದ ಶರೀರವನ್ನು ಬಿಟ್ಟುಹೋಗುವವರೆಗು ಶ್ವಾಸವನ್ನು ಕದಲಿಸುತ್ತಿದೆ. ಬ್ರಹ್ಮನಾಡಿಯಲ್ಲಿನ ಆತ್ಮವನ್ನು ಕುಂಡಲಿ ಎಂದು ಹೆಸರಿಟ್ಟು ಹಾವಿಗೆ ಹೋಲಿಸಿದ್ದಾರೆ. ಕುಂಡಲಿ ಎಂದರೆ ದೊಡ್ಡವರ ಭಾವನೆಯಲ್ಲಿ ಶಕ್ತಿ ಎಂದು ಅರ್ಥ. ಶಕ್ತಿಯನ್ನು ಹಾವಾಗಿ ಹೇಳುವುದರಲ್ಲಿ ಒಂದು ಅರ್ಥವಿದೆ. ಅದೇನೆಂದರೇ! ಶರೀರದಲ್ಲಿನ ಶಕ್ತಿ ಒಂದುಸಲ ಹೆಚ್ಚಾಗಿ ಒಂದುಸಲ ಕಡಿಮೆ ಉಪಯೋಗಪಡುತ್ತಿದೆ. ಉದಾಹರಣೆಗೆ ಹತ್ತುಮೈಲು ನಡೆಯುವವನು ಒಂದು ಸಮಯದಲ್ಲಿ ಒಂದುಮೈಲು ಕೂಡ ನಡೆಯಲಾರನು, ಹಾಗೇ ಒಂದುಮೈಲು ಕೂಡ ನಡೆಯಲಾರದವನು ಒಂದು ಸಮಯದಲ್ಲಿ ಅವಲೀಲವಾಗಿ ಹತ್ತುಮೈಲುಗಳು ನಡೆಯಬಲ್ಲನು. ಈ ವಿಧವಾಗಿ ಶರೀರದಲ್ಲಿನ ಆತ್ಮಶಕ್ತಿ ಉದ್ದವಾಗಿ, ಕುಬ್ಜವಾಗಿ ಉಪಯೋಗಪಡುತ್ತಿದೆ. ಆದ್ದರಿಂದ ಸಿಂಚಿಹಾಕಿ ಕೊಂಡಾಗ ಚಿಕ್ಕವಾಗಿ, ತೆವಳುವಾಗ ಉದ್ದವಾಗಿ ಕಾಣಿಸುವ ಹಾವಿಗೆ ಹೋಲಿಸಿ

ಹೇಳಿದ್ದಾರೆ. ಒಂದುಸಲ ಚಿಕ್ಕದಾಗಿ ಒಂದುಸಲ ದೊಡ್ಡದಾಗಿ ಕಾಣಿಸುವ ಹಾವನ್ನು, ಆ ವಿಧವಾಗಿಯೇ ಉಪಯೋಗಪಡುವ ಆತ್ಮಗೆ ಹೋಲಿಸಿ ಕುಂಡಲಿಯೆನ್ನುವ ಹಾವು ಎಂದಿದ್ದಾರೆ. ತಲೆ ಮಧ್ಯೆ ಭಾಗದಿಂದ ಪ್ರಾರಂಭವಾಗುವ ಬ್ರಹ್ಮನಾಡಿಯಲ್ಲಿ ಆತ್ಮ ನಿವಾಸವಿದೆ. ಆದ್ದರಿಂದ ಕಪ್ಪುತಾವರೆಲೆ ನಡುವೆ ರಂಧ್ರದಲ್ಲಿಯೂ ಕುಂಡಲಿ ಎನ್ನುವ ಹಾವು ಎಂದಿದ್ದಾರೆ. ಬ್ರಹ್ಮನಾಡಿಯಲ್ಲಿನ ಆತ್ಮ ತನ್ನ ಶಕ್ತಿ ಮೂಲಕ ಎರಡು ಮೂಗಿನರಂಧ್ರಗಳಲ್ಲಿ ಶ್ವಾಸವನ್ನು ಎರಡು ಶ್ವಾಸಕೋಶಗಳ ಮೂಲಕ ನಡೆಸುತ್ತಿದೆ. ಆ ವಿಷಯವನ್ನೇ ಪರೋಕ್ಷವಾಗಿ ಹೇಳುತ್ತಾ ಬ್ರಹ್ಮನಾಡಿಯಿಂದ ಶ್ವಾಸಕೋಶಗಳಿಗೆ ಬರುವನಾಡಿಯನ್ನು ಮೊಟ್ಟೆಯಾಗಿ ವರ್ಣಿಸಿ, ಎರಡು ಶ್ವಾಸಕೋಶಗಳನ್ನು ಎರಡು ಮರಿಗಳಾಗಿ ವರ್ಣಿಸಿ, ಇಪ್ಪತ್ನಾಲ್ಕು ಗಂಟೆಗಳು ಯಾವಾಗಲು ಆಡುವ ಶ್ವಾಸದ ಶಬ್ದವನ್ನು ಮಕ್ಕಳ ಅರಚುವುದಕ್ಕೆ ವರ್ಣಿಸಿ, "ಮೊಟ್ಟೆ ಇಟ್ಟು ಎರಡು ಮರಿಗಳನ್ನೀದು ರಾತ್ರಿಹಗಲರಿಚಿತು" ಎಂದಿದ್ದಾರೆ.

**ಆ ॥ ಅಂತಹರೋಧವು ಯಖಿಲ ವೇದಾಂತವು**
**ಸಕಲ ಮುನಿಗಳ ಸುರರ ಸನ್ನುತಂಬು**
**ನಿರತವಾದ ಯೋಗ ನಿಷ್ಠೆಯಿಂದಿರು.**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಶರೀರದಲ್ಲಿ ಬ್ರಹ್ಮನಾಡಿಯನ್ನು ಕೇಂದ್ರವಾಗಿ ಮಾಡಿಕೊಂಡು ಶರೀರವೆಲ್ಲ ವ್ಯಾಪಿಸಿರುವ ಓ ಆತ್ಮಾ! ಕೇಳು. ಬ್ರಹ್ಮನಾಡಿಯಲ್ಲಿ ಪ್ರಾರಂಭವಾಗುವ ಕದಲಿಕೆ ಕೊನೆಗೆ ಶ್ವಾಸರೂಪವಾಗಿ ಹೊರಬೀಳುತ್ತಿದೆ. ಶ್ವಾಸ ಶಬ್ದದೊಂದಿಗೆ ಕೂಡಿಕೊಂಡಿದೆ, ಆದ್ದರಿಂದ ಅದನ್ನು ಎರಡು ಮರಿಗಳ ಕಿರುಚಾಟ ಎಂದಿದ್ದಾರೆ. ಎರಡು ಶ್ವಾಸಗಳು ಮಾಡುವ ಶಬ್ದದಲ್ಲಿ ವಿಶೇಷಾರ್ಥ ಒಳಗೊಂಡಿದೆ. ಸಕಲ ವೇದವಂತವಾದ "ಓಂ" ಅದರಲ್ಲಿ ಒಳಗೊಂಡಿರುವುದರಿಂದ ಆ ಶಬ್ದ ಸಕಲ ಸುರರ ಮುನಿಗಳ ಸನ್ನುತಂಬು ಎಂದಿದ್ದಾರೆ. ಓಂ ಶಬ್ದ ಬರುವ ಮೂಲವನ್ನು ತಿಳಿಯುವುದೇ ನಿಜವಾದ ಬ್ರಹ್ಮಯೋಗವಾಗುತ್ತದೆ. ಸಕಲ ವೇದಾಂತ ಮತ್ತು ಸುರರು ಮುನಿಗಳು ಸಮ್ಮತಿಸುವಂತಹ ಓಂ ಕಾರಮೂಲ, ಶರೀರದಲ್ಲಿನ

ಮಧ್ಯನಾಡಿಯಲ್ಲಿ ಇದೆಯೆಂದು ತಿಳಿದು, ಮನೋದೃಷ್ಠಿಯನ್ನು ಮಧ್ಯನಾಡಿಯಲ್ಲಿ ಸೇರಿಸಿ ಶರೀರದಲ್ಲಿ ಕದಲಿಕೆಗೆ ಕಾರಣವಾದ ಶಕ್ತಿಯನ್ನು ಹುಡುಕುವುದೇ ಮುಖ್ಯ ಯೋಗನಿಷ್ಠೆಯಾಗುತ್ತದೆ.

**ಆ ॥ ಸಾಂಖ್ಯಯೋಗ ಅರಿತು ಸಕಲೇಂದ್ರಿಯಗಳು**
**ಸಂಚರಿಸುತ್ತಿರುವ ಸಂಜ್ಞಾಗಾಂಚಿ**
**ಪಂಚಿ ಎಣಿಸಿ ಮೇಲೆ ಪರಮಾತ್ಮ ಕಾಣಬೇಕು**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಜೀವಾತ್ಮಗೆ ದೊಡ್ಡವನು, ಪರಮಾತ್ಮಗೆ ಚಿಕ್ಕವನಾದ ಓ ಆತ್ಮಾ! ಕೇಳು. ನಾವು ನಿವಾಸಿಸುವ ಶರೀರ ಎಷ್ಟು ಭಾಗಗಳಾಗಿದೆಯೆಂದು ತಿಳಿಯುವುದನ್ನು ಸಾಂಖ್ಯವೆನ್ನುತ್ತೇವೆ. ಶರೀರದಲ್ಲಿ ಜೀವಿಯನ್ನು ಹೊರತುಪಡಿಸಿ ಒಟ್ಟು 24 ಭಾಗಗಳಿವೆಯೆಂದು ತಿಳಿಯುವುದು ಸಾಂಖ್ಯ. ಶರೀರದಲ್ಲಿ ಜೀವಿಯೊಂದಿಗೆ ಸಹ ಎಲ್ಲಾ ಭಾಗಗಳು ಹೇಗೆ ಕೆಲಸಮಾಡುತ್ತಿವೆಯೋ, ಎಲ್ಲಾ ಅವಯವಗಳು ಕದಲುವುದಕ್ಕೆ ಯಾವ ಶಕ್ತಿ ಅಗತ್ಯವೊ ತಿಳಿದು, ಎಲ್ಲದಕ್ಕು ಚೈತನ್ಯವಾಗಿರುವುದು ಆತ್ಮವೇಯೆಂದು, ಆತ್ಮಕದಲಿಕೆಯಿಂದಲೇ ಶರೀರ ಸಜೀವವಾಗಿದೆಯೆಂದು, ಅದು ಇಲ್ಲದಿದ್ದರೆ ಶರೀರದಲ್ಲಿ ಜೀವಿಯು ಕೂಡ ಇರುವುದಕ್ಕೆ ಸಾಧ್ಯವಿಲ್ಲವೆಂದು, ಶರೀರದಲ್ಲಿನ ಎಲ್ಲದಕ್ಕು ಕಾರಣವಾಗಿರುವುದು ಆತ್ಮವೆಂದು, ಅದರಮೇಲೆ ಇರುವುದು ಪರಮಾತ್ಮಯೆಂದು ತಿಳಿಯಬೇಕು. ಶರೀರವನ್ನು ಸಾಂಖ್ಯಸೂತ್ರದ ಪ್ರಕಾರ ವಿಂಗಡಿಸಿ ನೋಡಿ 24 ಇಂದ್ರಿಯಗಳು ಇವೆಯೆಂದು, ಅವುಗಳ ಮೇಲೆ ಜೀವಾತ್ಮ ಇದೆಯೆಂದು, ಅದರಮೇಲೆ ಆತ್ಮವಿದೆಯೆಂದು, ಎಲ್ಲದಕ್ಕಿಂತ ಮೀರಿ ಆತ್ಮದ ಮೇಲೆ ಪರಮಾತ್ಮ ಇದೆಯೆಂದು ತಿಳಿಯಬೇಕು.

**ಆ ॥ ಪಂಚತತ್ತ್ವಗಳನ್ನು ಪಂಚೀಕರಿಸದೆ**
**ಒಳ್ಳೆಯತಿಗಳ ಅನ್ನುವ ಮಾತುಗಣ್ಣಿ**
**ಪುಟ್ಟಿ ಕೆಳಗೆ ಗಜವು ಮೊಟ್ಟೆ ಇಟ್ಟವಿಧವಾಗಿ**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಸಮಸ್ತ ಶರೀರಗಳಲ್ಲಿ ನಾಶವಾಗುವ ಜೀವಾತ್ಮದೊಂದಿಗೆ ಬೆರೆತು ನಿವಾಸ ಮಾಡುತ್ತಿರುವ ನಾಶವಾಗದ ಓ ಆತ್ಮಾ! ಕೇಳು. ಪಂಚಭೂತಗಳಾದ ಆಕಾಶ, ಗಾಳಿ, ಅಗ್ನಿ, ನೀರು, ಭೂಮಿ ಹೇಗೆ ಸೃಷ್ಠಿಸಲ್ಪಟ್ಟಿವೆ, ಅವು ಒಂದೊಂದು ಯಾವ ವಿಧವಾಗಿ ಐದು ಭಾಗಗಳು ವಿಭಜಿಸಲ್ಪಟ್ಟಿವೆ. ಹಾಗೆ ವಿಭಜಿಸಲ್ಪಟ್ಟ 25 ಭಾಗಗಳು ಒಂದರೊಂದಿಗೆ ಮತ್ತೊಂದು ಬೆರೆತು ಹೇಗೆ ಶರೀರ ಭಾಗಗಳು ಏರ್ಪಟ್ಟಿರುವುದು ತಿಳಿಯುವುದೇ ಸಾಂಖ್ಯ ಎನ್ನುತ್ತೇವೆ. ಪಂಚತತ್ತ್ವಗಳನ್ನು ಪಂಚೀಕರಿಸಿ ಸಾಂಖ್ಯವನ್ನು ತಿಳಿಯದವರು ಮತ್ತು ಶರೀರದಲ್ಲಿನ ಆತ್ಮ ತನ್ನ ಶಕ್ತಿಯಿಂದ ಶರೀರ ಭಾಗಗಳನ್ನು ಹೇಗೆ ಕೆಲಸಮಾಡಿಸುತ್ತಿರುವುದು ತಿಳಿಯದೆಯೇ ನಾವು ಜ್ಞಾನಿಗಳೆಂದು ಅಂದುಕೊಂಡರೆ, ಪುಟ್ಟಿ ಕೆಳಗೆ ಆನೆ ಮೊಟ್ಟೆ ಇಟ್ಟಂತಿರುತ್ತದಂತೆ. ಆನೆಯನ್ನು ಕಬ್ಬಿಣದ ಸರಪಳಿಯಿಂದ ಬಂಧಿಸಿ ಪುಟ್ಟಿಕೆಳಗೆ ನಿಲ್ಲಿಸಿದರೂ ಅದು ಮೊಟ್ಟೆ ಇಡುವುದಿಲ್ಲ. ಇದರಿಂದ ಅರ್ಥವಾಗುವುದೇನೆಂದರೆ ಆನೆ ಪುಟ್ಟಿ ಕೆಳಗೆ ಮೊಟ್ಟೆ ಇಡುವುದು ಎಷ್ಟು ಅಸತ್ಯವೊ, ಹಾಗೇ ಶರೀರ ಅವಯವಗಳ ವಿವರ ತಿಳಿಯದವನು ಜ್ಞಾನಿ ಎನ್ನುವುದು ಕೂಡ ಅಷ್ಟೇ ಅಸತ್ಯವಾಗುತ್ತದೆ.

**ಆ ॥ ನಮಗೆ ತಿಳಿದಷ್ಟು ಮರ್ಮವು ಧರೆಯಲ್ಲಿಯು**
**ಮತ್ತು ಇಲ್ಲವೆನ್ನುತ್ತಾ ಮನುಜರೆಲ್ಲ**
**ಒಬ್ಬರೊಂದಿಗೆ ಒಬ್ಬರು ವಾಧಿಸುತ್ತಿದ್ದಾರೆ**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಶರೀರದಲ್ಲಿ ಮಾತ್ರ ಶಕ್ತಿಯಾಗಿರುವ ಓ ಎರಡನೆ ಆತ್ಮಾ! ಕೇಳು. ಪ್ರಸ್ತುತ ಕಾಲದಲ್ಲಿ ಮನುಷ್ಯರು ದೇವರ ವಿಷಯದಲ್ಲಿ ಕೆಲವು ವರ್ಗಗಳಾಗಿ ಸೀಳಿಹೋಗಿ ನಮ್ಮ ವರ್ಗಕ್ಕೇ ದೇವರು ದೇವರ ವಿಷಯಗಳು ತಿಳಿಯುತ್ತವೆಂದು, ಉಳಿದ ಯಾರಿಗೂ ದೇವರು ದೇವರ ವಿಷಯಗಳು ತಿಳಿದಿಲ್ಲವೆಂದು ಹೇಳುತ್ತಿದ್ದಾರೆ, ಒಂದು ವರ್ಗದಿಂದ ಮತ್ತೊಂದು ವರ್ಗದವರು ಈ ವಿಧವಾಗಿ ವಾಧಿಸುತ್ತಾ ದೇವರು ನಮಗೆ ಮಾತ್ರವೆ ತಿಳಿದಿದೆ ಎನ್ನುತ್ತಿದ್ದಾರೆ. ಒಬ್ಬರ

ವಿಧಾನವನ್ನು ಇನ್ನೊಬ್ಬರು ಒಪ್ಪಿಕೊಳ್ಳದೆ ಪೂರ್ತಿ ವಿಭೇದಿಸುವುದರಿಂದ ಕೊನೆಗೆ ಘರ್ಷಣೆಗಳು, ದೊಡ್ಡ ಯುದ್ಧಗಳು ಏರ್ಪಡುತ್ತಿವೆ. ದೇವರ ವಿಷಯದಲ್ಲಿ ವರ್ಗಗಳಾಗಿ ಸೀಳಿಹೋದ ಮನುಷ್ಯರು ಅವರವರ ವರ್ಗಗಳಿಗೆ ಮತಗಳ ಹೆಸರುಗಳು ಇಟ್ಟುಕೊಂಡು, ಮತಗಳ ಮಾಯೆಯಲ್ಲಿ ಬಿದ್ದುಹೋಗಿ ದೇವರ ವಾಸ್ತವಿಕತೆಯನ್ನು ತಿಳಿಯಲಾರದೆ, ಒಂದು ಮತದೊಂದಿಗೆ ಮತ್ತೊಂದು ಮತದವರು ವಾಧಿಸಿಕೊಳ್ಳುತ್ತಿದ್ದಾರೆ.

**ಆ ॥ ತಿಳಿದಿದ್ದೇವೆನ್ನುತ್ತಾ ಸ್ಪಷ್ಟವಾಗಿ ಹೇಳಿದರು**
**ಏನು ತಿಳಿದಿದ್ದಾರೊ ಏತಕ್ಕಾಗಿಯೋ**
**ತರ್ಕ ವಾದಕ್ಕೊ ಧರೆಕೀರ್ತಿ ಗಾಗಿಯೋ**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಶರೀರದಲ್ಲಿ ಕರ್ಮಾನುಸಾರ ಕದಲಿಕೆಕೊಡುತ್ತಾ, ಕರ್ಮಾನುಸಾರ ರೋಗಗಳು ಉಂಟುಮಾಡುತ್ತಾ ಅವುಗಳನ್ನು ಅನುಭವಿಸುವಂತೆ ಮಾಡುವ ಓ ಆತ್ಮಾ! ಕೇಳು. ಭೂಮಿ ಮೇಲೆ ಪ್ರಜೆಗಳಲ್ಲಿ ದೇವರು ದೇವರ ವಿಷಯದಲ್ಲಿ ನಮ್ಮದು ಸರಿಯಾದ ಮಾರ್ಗವೆಂದು ಕೆಲವರು, ನಿಮ್ಮದಲ್ಲ ನಮ್ಮದೇ ಸರಿಯಾದ ಮಾರ್ಗವೆಂದು ಮತ್ತೆ ಕೆಲವರು ವಾದಿಸಿಕೊಳ್ಳುವುದು ನಡೆಯುತ್ತಿದೆ. ಇದೆಲ್ಲವೂ ನೋಡಿದರೆ ಇವರಿಗೆ ದೇವರ ವಿಷಯ ಸ್ವಲ್ಪವಾದರೂ ತಿಳಿದಿದೆಯಾ ಎಂದು ಅನುಮಾನ ಬಾರದೆ ಇರುವುದಿಲ್ಲ. ದೇವರ ಜ್ಞಾನ ತಿಳಿದವರಾದರೆ ಹಾಗೆ ವಾಧಿಸಿಕೊಳ್ಳುವುದಿಲ್ಲ. ಇತರರ ಮಾತುಗಳಲ್ಲಿನ ಸತ್ಯವನ್ನು ಗ್ರಹಿಸುತ್ತಾರೆ. ಒಬ್ಬ ವ್ಯಕ್ತಿ ಮಾತುಗಳಲ್ಲಿನ ಸತ್ಯವನ್ನು ಗ್ರಹಿಸದವರು ಅರ್ಥವಿಲ್ಲದ, ಶಾಸ್ತ್ರಬದ್ಧತೆಯಿಲ್ಲದ ವಾದ ಮಾಡುತ್ತಲೇ ಇರುತ್ತಾರೆ. ಅಂತಹವರು ಭೂಮಿಮೇಲೆ ತಮ್ಮ ದೊಡ್ಡಸ್ತಿಕೆಯನ್ನು ಸಾರಿಕೊಳ್ಳುವುದಕ್ಕೇ ಪ್ರಯತ್ನಿಸುತ್ತಾರೆ ಹೊರತು ಸತ್ಯವನ್ನು ಗ್ರಹಿಸಲಾರರು. ಇತರರ ಮಾತುಗಳಲ್ಲಿನ ಎಂತಹ ದೊಡ್ಡ ಸತ್ಯವನ್ನಾದರು ಗ್ರಹಿಸಲಾರದ ಸ್ಥಿತಿಯಲ್ಲಿ ತಾವು ದೊಡ್ಡವರೆಂದು, ತಮ್ಮ ಮತ ಗ್ರಂಥಗಳೇ ದೊಡ್ಡವೆಂದು, ಗೋಡೆ ಕಟ್ಟಿಕೊಂಡು ಕುಳಿತುಕೊಂಡಿರುತ್ತಾರೆ. ಅಂತಹವರಿಗೆ

ಇನ್ನೊಬ್ಬರು ಏನು ಹೇಳಿದರೂ ಆ ಗೋಡೆದಾಟಿ ಅವರಿಗೆ ಕೇಳಿಸುವುದಿಲ್ಲ ಮತ್ತು ಕಾಣಿಸುವುದಿಲ್ಲ.

**ಆ ॥ ತನ್ನದು ನೆತ್ತಿಮೇಲಿರುವ ಕರ್ಮವು**
**ಕಳೆದುಕೊಳ್ಳುವುದಕ್ಕೆ ಗುರುವನ್ನು ಹುಡುಕಿ ಹುಡುಕಿ**
**ಪೂಜೆ ಮಾಡು ಮುಕ್ತಿ ಹೊಂದುವುದಕ್ಕಾಗಯ್ಯ**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಶರೀರದಲ್ಲಿನ ಮೂರು ಆತ್ಮಗಳಲ್ಲಿ ಮಧ್ಯ ಆತ್ಮವಾಗಿ, ಶರೀರವನ್ನು ನಡೆಸುವ ಶಕ್ತಿ ಹೊಂದಿರುವ ಓ ಆತ್ಮಾ! ಕೇಳು. ನಾವು ಗತ ಜನ್ಮಗಳಲ್ಲಿ ಸಂಪಾದಿಸಿಕೊಂಡ ಆಗಾಮಿಕರ್ಮ ಸಂಚಿತಕರ್ಮವಾಗಿ ತಲೆಯಲ್ಲಿ ನೆಲೆಯಿದ್ದು, ಅದರಲ್ಲಿಂದ ಪ್ರಾರಬ್ಧಕರ್ಮ ಎನ್ನುವ ಹೆಸರಿನಿಂದ ಈ ಜನ್ಮದಲ್ಲಿ ಅನುಭಕ್ಕೆ ಬಂದು, ಅದರಪ್ರಕಾರ ಅನುಭವಿಸುವಂತೆ ಮಾಡುತ್ತಿರುತ್ತದೆ. ಕರ್ಮವನ್ನು ಇಲ್ಲದಂತೆ ಮಾಡಿಕೊಳ್ಳಬೇಕೆಂದರೆ, ಅಥವಾ ಅದರ ಅನುಭವವನ್ನು ಹೊಂದದಂತೆ ಇರಬೇಕೆಂದರೇ, ತಪ್ಪದೆ ಗುರು ಅಗತ್ಯ. ಜನ್ಮಗಳಿಂದ ತಪ್ಪಿಸಿ ಮುಕ್ತಿ ಉಂಟುಮಾಡುವವನು ಗುರು. ಅಂತಹ ಗುರುವಿಗಾಗಿ ಹುಡುಕಬೇಕಾಗಿರುತ್ತದೆ. ಹುಡುಕಬೇಕಾದ ಕೆಲಸವೇನಿದೆ ಗುರುಗಳೇ ನಮ್ಮ ಮನೆಹತ್ತಿರಕ್ಕೆ ಬಂದು ಉಪದೇಶಕೊಟ್ಟು ಹೋಗುತ್ತಾರೆ ಅಲ್ಲವೆ! ಎಂದು ಕೆಲವರಂದುಕೊಳ್ಳಬಹುದು. ಇಲ್ಲಿ ಬಹಳ ಜನರಿಗೆ ತಿಳಿಯದ ತಪ್ಪೊಂದು ಇದೆ. ಅದು ಏನೆಂದರೆ! ಗುರುವನ್ನು ಭೂಮಿ ಮೇಲೆ ಗುರುತಿಸುವುದು ಬಹಳ ಅಪರೂಪವಾದ ಕೆಲಸ. ಗುರುವಿನಂತೆ ಕಾಣಿಸುವ ಬೋಧಕರನ್ನು ಬಹಳ ಜನರನ್ನು ನಾವು ನೋಡಬಲ್ಲೆವು. ಇವರಲ್ಲಿ ಗುರುಯಾರು? ಬೋಧಕನ್ಯಾರು? ಎಂದು ಗುರುತಿಸುವುದು ಕಷ್ಟವಾದ ಕೆಲಸ. ಅದ್ದರಿಂದ ಗುರು ಎಂದರೇ ಅರ್ಥವೇನೋ ತಿಳಿದುಕೊಂಡು ಗುರುವನ್ನು ಹುಡುಕಬೇಕಾಗಿರುತ್ತದೆ. ಪರಮಾತ್ಮ ಅಂಶದಿಂದ ಹುಟ್ಟಿದವನೇ ಗುರು. ಆತನು ಸ್ವತಃವಾಗಿ ಜ್ಞಾನವನ್ನು ಬೋಧಿಸಬಲ್ಲನು. ಗುರು ತಾನು ಎಂದಿಗೂ ಇತರರು ಹೇಳಿದ ಬೋಧನೆಗಳು ಹೇಳುವುದಿಲ್ಲ. ಇತರರು

ಹೇಳಿದವುಗಳನ್ನು ಹೇಳುವವನು ಬೋಧಕನಾಗುತ್ತಾನೆ. ತಾನು ಸ್ವತಃವಾಗಿ ನಿರ್ಣಯಿಸಿದ ಜ್ಞಾನವನ್ನು ತಿಳಿಸುವವನು ಗುರುವಾಗುತ್ತಾನೆ. ಅಂತಹವನು ಅಪರೂಪವಾಗಿ ದೊರೆಯುತ್ತಾನೆ, ಆದ್ದರಿಂದ ಗುರು ಎನ್ನುವವನಿಗಾಗಿ ಹುಡುಕಬೇಕಾಗಿರುತ್ತದೆ. ಕೆಲವು ಮತಗಳಲ್ಲಿ ಗುರು ಅವಶ್ಯಕತೆ ಇಲ್ಲ, ಆತನನ್ನು ಪೂಜಿಸುವುದು ಕೂಡ ಒಳ್ಳೆಯದಲ್ಲ. ನಿನ್ನ ಭಕ್ತಿ ನೇರವಾಗಿ ದೇವರ ಮೇಲೆಯೇ ಇರಬೇಕೆನ್ನುವ ವಾದ ಇದೆ. ಅವರ ವಾದನೆಯಲ್ಲಿ ಸತ್ಯವಿದ್ದರೂ, ಆ ದೇವರೇ ಮನುಷ್ಯನ ರೂಪದಲ್ಲಿ ಬರುತ್ತಾನೆನ್ನುವುದು ಅವರಿಗೆ ತಿಳಿದಿಲ್ಲ. ಸಾಧಾರಣ ಮನುಷ್ಯರನ್ನಾಗಲಿ, ಬೋಧಕರನ್ನಾಗಲಿ ಮುಗಿಯುವುದು ಒಳ್ಳೆಯದಲ್ಲವೆಂದು ನಾವು ಕೂಡ ಹೇಳಬಲ್ಲೆವು, ಆದರೆ ಅಪರೂಪವಾಗಿ ದೇವರೇ ಮನುಷ್ಯನಾದಾಗ ಮನುಷ್ಯನನ್ನು ಗುರುವಾಗಿ ಗುರುತಿಸಿ ಕೈ ಮುಗಿಯುವುದರಲ್ಲಿ ತಪ್ಪಿಲ್ಲ. ದೇವರು ಸರ್ವಶಕ್ತಿಮಯನು. ಆದ್ದರಿಂದ ನಮ್ಮತಲೆ ಮೇಲಿರುವ ಕರ್ಮವನ್ನು ತೆಗೆದುಹಾಕಿ ಮುಕ್ತಿಯನ್ನುಂಟುಮಾಡುವ ಶಕ್ತಿ ಆತನಿಗಿರುತ್ತದೆ. ಆದ್ದರಿಂದಲೇ ಈ ಪದ್ಯದಲ್ಲಿ ಗುರುವನ್ನು ಹುಡುಕಿ ಹುಡುಕಿ ಪೂಜೆಮಾಡುವುದು ಮುಕ್ತಿ ಹೊಂದುವುದಕಯ್ಯ ಎಂದಿದ್ದಾರೆ. ಗುರುಗಳಾದವರು ಅಷ್ಟು ಸುಲಭವಾಗಿ ಗುರುತಿಸಲ್ಪಡುವುದಿಲ್ಲ. ಗುರುತಿಸಲ್ಪಟ್ಟರೂ ಸುಲಭವಾಗಿ ಮುಗಿಸಿಕೊಳ್ಳುವುದಿಲ್ಲ. ಹತ್ತಿರ ಸೇರಿದವರಿಗೆ ಜ್ಞಾನವನ್ನು ತಿಳಿಸದೆಬಿಡುವುದಿಲ್ಲ. ತಮ್ಮಜ್ಞಾನದಿಂದ ಕರ್ಮವನ್ನು ಇಲ್ಲದಂತೆ ಮಾಡದೆ ಬಿಡುವುದಿಲ್ಲ.

**ಆ ॥ ಅದಕ್ಕಾಗಾಗಲಿ ಆತ್ಮಜ್ಞಾನವು**
**ಆಟವಲ್ಲ ಬೊಂಬೆಯಾಟ ವಲ್ಲ**
**ಕೀಲು ತಿಳಿದು ಮಾಯೆ ಮಾತೆಯನ್ನು ದಾಟು**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಶರೀರದಲ್ಲಿ ಯಾರು ಗುರುತಿಸಲಾರದ ವಿಧವಾಗಿ ಶರೀರ ಆಕೃತಿಯನ್ನು ಹೋಲಿರುವ ಓ ಆತ್ಮಾ! ಕೇಳು. ಕೆಲವರು ಗುರು ಎಂದರೇ ನೀಚವೃತ್ತಿಪರನಾಗಿ, ಜ್ಞಾನವನ್ನು ತಿಳಿದವರನ್ನು ಬುದ್ಧಿಹೀನರನ್ನಾಗಿ ಹೋಲಿಸಿ ಕೊಂಡ ಹೇಯಭಾವನೆ ಹೊಂದಿರುತ್ತಾರೆ. ಪ್ರಪಂಚ ವಿಷಯಗಳಲ್ಲಿ ಮುಳುಗಿ

ಧನಾರ್ಜನೆ ಹೊರತು ಏನು ದೊಡ್ಡಕೆಲಸ ಅಲ್ಲವೆಂದು ತಿಳಿದು, ಕೊನೆಯ ಹಂತದಲ್ಲಿ ತಾನು ಸಂಪಾದಿಸಿರುವುದೆಲ್ಲ ಬಿಡಲಾರದೆ, ತಮ್ಮ ಸ್ಥಿತಿ ತಮಗೇ ಅರ್ಥವಾಗದೆ, ಅಗಮ್ಯಗೋಚರ ಪರಿಸ್ಥಿತಿಯಲ್ಲಿ ಮರಣಿಸುವವರಿಗಿಂತ, ಜೀವನಕ್ಕೆ ಒಂದು ಧ್ಯೇಯ ಹೊಂದಿ. ದೇವರೇ ತಮಗೆ ಗಮ್ಯವೆಂದು ತಿಳಿದು, ಒಂದು ಉದ್ದೇಶದಿಂದ ಮರಣಿಸುವವರು ಉತ್ತಮರು ಅಲ್ಲವೆ! ನಮಗೆ ತಿಳಿಯದಂತೆ ಪ್ರಪಂಚದಲ್ಲಿ ಅನೇಕ ಎಡರು ತೊಡರುಗಳನ್ನುಂಟುಮಾಡುವ ಮಾಯೆ ಏನೊ ತಿಳಿದು, ಅದರ ಪರ್ಯವಸಾನೆ ರೂಪಗಳೇ ಗುಣಗಳೆಂದು, ಕಾರ್ಯಗಳೆಂದು, ಸುಖ ದುಃಖಗಳೆಂದು ಗ್ರಹಿಸಿ, ಅವುಗಳನ್ನು ಬಿಟ್ಟು ದೈವವನ್ನು ಸೇರುವುದೇ ಜ್ಞಾನೋಪಾಸನೆ. ಆದು ಕೆಲವರಂದುಕೊಳ್ಳುವಂತೆ ಆಟವಲ್ಲ ಬೊಂಬೆಯಾಟವಲ್ಲ, ಎಷ್ಟೋ ತಿಳುವಳಿಕೆಯಿಂದ ಕೂಡಿಕೊಂಡಕೆಲಸ. ಸರ್ವ ಜನರನ್ನು ಮೂರು ಸೂತ್ರಗಳಿಂದ ಆಡಿಸುವ ಮಾಯೆಯನ್ನು ತಿಳಿದು, ಅದರ ಕೈಗೆ ಸಿಗದಿರುವುದೇ ಜ್ಞಾನೋಪಾಸನೆ. ಈ ಕೆಲಸ ಸಾಧಿಸುವುದಕ್ಕೆ ಜಗತ್ತಿನಲ್ಲಿ ಇಂಜಿನೀಯರುಗಳ ತಿಳುವಳಿಕೆಗಿಂತ, ಡಾಕ್ಟರ್‌ಗಳ ತಿಳುವಳಿಕೆಗಿಂತ, ವಿಜ್ಞಾನ ಪರಿಶೋಧಕರ ತಿಳುವಳಿಕೆಗಿಂತ ಅಧಿಕ ತಿಳುವಳಿಕೆ ಅಗತ್ಯ. ಎಷ್ಟೋ ದೊಡ್ಡ ಪರಿಜ್ಞಾನದಿಂದ ಕೂಡಿಕೊಂಡ ದೈವಾನ್ವೇಷಣೆ ಮಾರ್ಗವನ್ನು ತಿಳುವಳಿಕೆ ಇಲ್ಲದ ಕೆಲಸವಾಗಿ ತಿಳಿಯುವವರಿಗೆ ಎಷ್ಟು ತಿಳುವಳಿಕೆ ಇರುತ್ತದೋ, ಅವರು ಯಾವ ಗುಂಪಿಗೆ ಸೇರಿದವರೊ ನೀವೇ ಆಲೋಚಿಸಿರಿ.

**ಆ ॥ ಅಂತರಾತ್ಮವನ್ನು ಅರಿತು ಆನಂದಹೊಂದದೆ**
**ಭ್ರಾಂತಿ ದೆವ್ವಗಳಿಂದ ಪಟ್ಟು ಹಿಡಿದರೂ**
**ಚಿಂತೆತೀರದಯ್ಯ ಕಲಹ ಬಿಡುವುದಿಲ್ಲವಯ್ಯ**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಶರೀರದಲ್ಲಿನ ಬ್ರಹ್ಮನಾಡಿಯನ್ನು ಸ್ಥಾವರವಾಗಿ ಏರ್ಪಡಿಸಿಕೊಂಡು ಶರೀರವೆಲ್ಲ ನಖ ಶಿಖ ಪರ್ಯಂತವು ವ್ಯಾಪಿಸಿ ಶರೀರಾಕೃತಿಯನ್ನು ಹೋಲಿರುವ ಓ ಆತ್ಮಾ! ಕೇಳು. ಮನುಷ್ಯ ನಾನು ದೈವಜ್ಞಾನ ವಿಷಯಗಳಲ್ಲಿದ್ದೇನೆಂದು

ತಪ್ಪಾಗಿ ತಿಳಿದು. ಮತಗಳ ಭ್ರಮೆಯಲ್ಲಿಯೇ, ದೇವತೆಗಳ ಭ್ರಮೆಯಲ್ಲಿಯೇ ಮುಳುಗಿ ನನ್ನ ದೇವರು ದೊಡ್ಡವನೆಂದೊ, ನನ್ನಮತ ದೊಡ್ಡದೆಂದೊ, ನನ್ನಮಾರ್ಗ ದೊಡ್ಡದೆಂದೊ ವಾದಿಸಿಕೊಳ್ಳುತ್ತಿದ್ದರೂ ಪ್ರಯೋಜನೆಯಿಲ್ಲ. ಜೀವಾತ್ಮ ಆದವನು ತನ್ನಲ್ಲಿನ ಆತ್ಮ ವಿಷಯವನ್ನು ತಿಳಿಯದೆ, ಆತ್ಮವನ್ನು ತಿಳಿದು ಅದರ ಆನಂದವೇನೊ ತಿಳಿಯದೆ ಒಳಗೆ ಗುಣಗಳ ಚಿಂತೆಗಳು ತೀರುವುದಿಲ್ಲ. ಗುಣಗಳ ಚಿಂತೆಗಳು ತೀರದೆ ಕಲಹಗಳ ಬಾಧೆಗಳು ಬಿಡುವುದಿಲ್ಲ. ಆದ್ದರಿಂದ ಯಾವ ಮತಸ್ಥನಾದರೂ ಕೂಡ ಸ್ವಲ್ಪ ಆಲೋಚಿಸಬೇಕಾಗಿದೆ. ದೇವರು ಸರ್ವವ್ಯಾಪ್ತಿ ಆದಾಗ ನಮ್ಮ ಶರೀರದಲ್ಲಿ ಕೂಡ ಇದ್ದಾನೆಂದು, ಶರೀರದಲ್ಲಿಯೇ ದೇವರನ್ನು ತಿಳಿಯಬೇಕಾಗಿದೆಯೆಂದು, ಶರೀರದಲ್ಲಿನ ದೇವರನ್ನು ತಿಳಿಯಬೇಕೆಂದರೇ ದೇವರಿಗು ನಿನಗು ಮಧ್ಯದಲ್ಲಿರುವ ಆತ್ಮವನ್ನು ತಿಳಿಯಬೇ ಕಾಗಿದೆ ಯೆಂದು, ಆತ್ಮವನ್ನು ತಿಳಿಯಬೇಕೆಂದರೇ ಶರೀರದಲ್ಲಿನ ಸ್ಥಿತಿಗತಿಗಳು ತಿಳಿಯಬೇಕೆಂದು, ಶರೀರದಲ್ಲಿನ ಸ್ಥಿತಿ ಗತಿಗಳನ್ನು ತಿಳಿಯದೆ ಮಾಯೆ ಎನ್ನುವ ದೆವ್ವ ಬಿಡುವುದಿಲ್ಲವೆಂದು, ಮಾಯೆ ಎನ್ನುವ ದೆವ್ವ ಸರ್ವೋನ್ನತನಾದ ದೇವರನ್ನು ತಿಳಿಯಲು ಬಿಡುವುದಿಲ್ಲವೆಂದು, ಮಾಯ ವಿವರ ತಿಳಿದು ಅದನ್ನು ಬಿಡಿಸಿಕೊಂಡಾಗಲೇ ಮೊದಲು ಆತ್ಮ, ಆ ನಂತರ ದೈವವಾದ ಪರಮಾತ್ಮ ತಿಳಿಯಬಲ್ಲ ನೆಂದು ಗ್ರಹಿಸಬೇಕು.

**ಆ ॥ ಬಾಹ್ಯದೃಷ್ಠಿ ಬಿಟ್ಟು ಬೈಲಿನಲ್ಲಿ ಲಕ್ಷಿಸಿ**
**ಲಕ್ಷ್ಯದಲ್ಲಿ ಮೂರು ಲಕ್ಷಣಗಳು**
**ತಿಳಿದಂತಹವನು ದೇವರೆನ್ನುತ್ತಾ**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಶರೀರದೊಳಗೆ ನಡೆಯುವ ಸಮಸ್ತ ಕಾರ್ಯಗಳಿಗೆ ಸಾಕ್ಷಿಯಾಗಿರುವ ಓ ಆತ್ಮಾ! ಕೇಳು. ಹೊರಗೆ ಮಾತುಗಳ ರೂಪದಲ್ಲಿ ವಾಧಿಸುವುದು ಬಿಟ್ಟು ಶರೀರದಲ್ಲಿನ ದೇವರನ್ನು ಕಂಡುಕೊಳ್ಳಬೇಕೆಂದರೇ, ಶರೀರದಲ್ಲಿನ ಸ್ಥಿತಿಗತಿಗಳು ತಿಳಿದುಕೊಳ್ಳಬೇಕೆಂದಿದ್ದೇವೆ ಅಲ್ಲವೆ! ಆ ವಿಧವಾಗಿ

ಶರೀರದಲ್ಲಿನ ಅಂತರೇಂದ್ರಿಯಗಳ ವಿಷಯ ತಿಳಿದವನು, ಅಂತರೇಂದ್ರಿಯಗಳಲ್ಲಿನ ಮುಖ್ಯವಾದ ಮನಸ್ಸಿಗೆ ಬಾಹ್ಯಚಿಂತೆಗಳನ್ನು ಸೇರಿಸದೆ, ಮನೋದೃಷ್ಠಿಯನ್ನು ಯಾವ ವಿಷಯದ ಮೇಲೆ ಕೇಂದ್ರೀಕರಿಸದೆ, ಏಕ ಅಂತವಾದ ಶೂನ್ಯದೊಳಗೆ, ಏಕ ಅಗ್ರವಾದ ಸೊನ್ನೆಯೊಳಗೆ, ಏನೂ ಅಲ್ಲದ ಯಾವುದೂ ಅಲ್ಲದ ಖಾಲಿಯೊಳಗೆ ಲಗ್ನ ಮಾಡಿನೋಡಿದರೆ ಕೊನೆಗೆ ಸಾಧ್ಯಪಡುವುದು ಆತ್ಮ. ಮನೋದೃಷ್ಠಿಗೆ ಲಕ್ಷ್ಯವಾಗು ಅಥವಾ ತಿಳಿಯಲ್ಪಡುವ ಆತ್ಮವನ್ನು ಪೂರ್ತಿಯಾಗಿ ಪರಿಶೀಲಿಸಿದರೆ ಒಂದೇ ಆತ್ಮ ಮೊದಲು ಜೀವಾತ್ಮ, ಹಿಂದೆ ಪರಮಾತ್ಮ ಇದೆಯೆಂದು ತಿಳಿಯುತ್ತಿದೆ. ಶರೀರದಲ್ಲಿನ ಮನೋದೃಷ್ಠಿಯನ್ನು ಬಾಹ್ಯದಲ್ಲಿ ಅಲ್ಲದೆ ಒಳಗಿಟ್ಟರೆ ತಿಳಿಯಲ್ಪಡುವ ಆತ್ಮದಿಂದ ಆತ್ಮ ಮೂರು ವಿಧಗಳಾಗಿದೆ ಯೆಂದು ತಿಳಿಯುತ್ತಿದೆ. ಅದೇ ಭಗವದ್ಗೀತೆಯಲ್ಲಿ ಹೇಳಲ್ಪಟ್ಟ ಒಂದು ಕ್ಷರನು, ಎರಡು ಅಕ್ಷರನು, ಮೂರು ಪುರುಶೋತ್ತಮನೆಂದು ತಿಳಿಯಬೇಕು. ಅಕ್ಷರನಾದ ಆತ್ಮವನ್ನು ತಿಳಿಯುವುದರಿಂದ ಅದಕ್ಕಿಂತ ಸ್ವಲ್ಪ ಭೇದಹೊಂದಿದ ಕ್ಷರನಾದ ಜೀವಾತ್ಮ ಒಂದರ ವಿಷಯ ತಿಳಿಯಲ್ಪಡುತ್ತದೆ. ಹಾಗೇ ಅಕ್ಷರನಾದ ಆತ್ಮಗಿಂತ ಎಷ್ಟೋ ಭೇದಹೊಂದಿದ ಪರಮಾತ್ಮನ ಹಿರಿಮೆ ತಿಳಿಯುತ್ತದೆ. ಮನೋನಿ ಗ್ರಹತೆಯಿಂದ ಉಂಟಾಗುವ ಬ್ರಹ್ಮಯೋಗ ಎನ್ನುವ ಸಾಧನೆಯಿಂದ ಆತ್ಮವನ್ನು ತಿಳಿದವನಾಗಿ, ಆತ್ಮಗಿಂತ ಪ್ರತ್ಯೇಕವಾಗಿ ತಾನಾದ ಜೀವಾತ್ಮನಿದ್ದೇನೆಂದು ಗ್ರಹಿಸಿ, ಜೀವಾತ್ಮ ಆತ್ಮಗಳಿಗಿಂತ ಪ್ರತ್ಯೇಕವಾಗಿರುವ ಎಲ್ಲವುಗಳಿಗಿಂತ ದೊಡ್ಡವನಾದ ಪರಮಾತ್ಮನನ್ನು ತಿಳಿಯುವವನು ಮುಕ್ತಿಹೊಂದಿ ದೇವರೊಳಗೆ ಬೆರೆತುಹೋ ಗುತ್ತಾನೆ. ಹಾಗೆ ಐಕ್ಯವಾದವನನ್ನು ದೇವರೆಂದು ಹೇಳಬೇಕಾಗಿದೆ. ಐಕ್ಯವಾದವನು ಶರೀರವನ್ನು ಬಿಟ್ಟು ಪುನಃ ಹುಟ್ಟದೆ ಶೂನ್ಯವಾಗಿ ಬದಲಾಗಿಹೋಗಿದ್ದಾನೆ ಆದ್ದರಿಂದ ಅವನನ್ನು ದೇವರೆಂದೇ ಹೇಳಬೇಕು. ಶರೀರದಲ್ಲಿರುವ ನಾವು ಶರೀರವಿಲ್ಲದೆ ಆಕಾರವಾಗಲಿ, ಹೆಸರಾಗಲಿ ಇಲ್ಲದ ದೇವರೊಳಗೆ ಬೆರೆತುಹೋಗ ಬೇಕೆಂದರೆ, ದೈವವು ಮೂರು ಆತ್ಮಗಳಾಗಿದೆಯೆಂದು, ಅವು ಸೇರಿದರೆ ಒಂದೇ ಪರಮಾತ್ಮವಾಗಿ ಬದಲಾಗಬಲ್ಲದೆಂದು ತಿಳಿಯಬೇಕು.

**ಆ ॥ ವಿಷಯ ಗುಣಗಳೆಲ್ಲ ಬಿಡದ ನರರಿಗೆ**
**ವಿಶದಪಡುವುದಿಲ್ಲ ವಿಮಲ ಮೋಕ್ಷದೃಷ್ಟಿ**
**ವಿಷಯ ಗುಣಗಳಲ್ಲಿ ವಿಷವಿದೆಯೋರಣ್ಣ**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಅಕಾಲ ಮರಣ ಹೊಂದಿದವನಿಗೆ ಶರೀರ ಹೋದರೂ ಅದೇ ಶರೀರಾಕೃತಿ ಹೊಂದಿ ಸೂಕ್ಷ್ಮವಾಗಿ ಕಾಣಿಸದೆ, ಅವನ ಕರ್ಮಾನುಸಾರ ಆಡಿಸುವ ಓ ಆತ್ಮಾ! ಕೇಳು. ಒಳಗಿನ ಅಂತರಾತ್ಮದ ಮೇಲೆ ದೃಷ್ಠಿ ನಿಲ್ಲಿಸದೆ ಹೊರಗಿನ ವಿಷಯಗುಣಗಳ ಮೇಲೆಯೇ ಲಗ್ನವಾಗುವವರಿಗೆ ಜ್ಞಾನವಾಗಲಿ, ದೇವರಾಗಲಿ, ಮೋಕ್ಷವೆನ್ನುವುದಾಗಲಿ ಸ್ವಲ್ಪವೂ ಅರ್ಥವಾಗುವುದಿಲ್ಲ. ಪರಿಶುದ್ಧವಾದ ಆತ್ಮಜ್ಞಾನ ಅವರಿಗೆ ಬೆಲೆ ಇಲ್ಲದ್ದಾಗಿ ಕಾಣಿಸುತ್ತಿರುತ್ತದೆ. ಅಪರಿಶುದ್ಧವಾದ ಕರ್ಮಗಳೊಂದಿಗೆ ಕೂಡಿಕೊಂಡ ಪ್ರಪಂಚ ವಿಷಯಗಳು ಎಷ್ಟೋ ಬೆಲೆಯುಳ್ಳವಾಗಿ ಕಾಣಿಸುತ್ತವೆ. ಕೆಲವರು ಅಜ್ಞಾನಿಗಳಿಗೆ ಬೆಲೆಕೊಟ್ಟು ಅವರೊಂದಿಗೆ ಸಹವಾಸ ಬೆಳೆಸಿಕೊಳ್ಳುವುದು, ಜ್ಞಾನಿಗಳಾದವರಿಗೆ ಬೆಲೆಕೊಡದೆ ಅವರನ್ನು ನೀಚವಾಗಿ ನೋಡುವುದು ಕೂಡ ಪ್ರಪಂಚದಲ್ಲಿ ನಡೆಯುತ್ತಿದೆ. ಹಾಗೆ ಹೊರಗಿನ ಪ್ರಪಂಚದಲ್ಲಿನ ವಿಷಯಗಳಿಗೆ, ತನ್ನ ದೇಹದಲ್ಲಿನ ಗುಣಗಳಿಗೆ ಬೆಲೆಕೊಟ್ಟವನು, ಕೊನೆಗೆ ಅವುಗಳಿಂದ ಬಾಧೆ ಪಡಬೇಕಾಗಿ ಬರುತ್ತದೆ. ಬಾಧೆಗೆ ಪ್ರತಿರೂಪ ವಿಷ. ವಿಷ ಮನುಷ್ಯನನ್ನು ಹಿಂಸಿಸುವುದಕ್ಕೇ ಇದೆಯೆಂದು, ವಿಷ ಎಂದಿಗೂ ಸಂತೋಷ ಕೊಡುವುದಿಲ್ಲ ವೆಂದು, ಬಾಧಿಸುವುದೇ ಅದರ ಸಹಜ ಧರ್ಮವೆಂದು ಹಿರಿಯರು ಹೇಳುತ್ತಿರುತ್ತಾರೆ. ವಿಷದಿಂದ ಹುಟ್ಟಿದ ಪದವೇ ವಿಷಯ, ವಿಷಕ್ಕೆ ಬಹಳ ಹತ್ತಿರ ಹೋಲಿಕೆಗಳಿರುವ ಪದ ವಿಷಯ. ವಿಷಯ ಎನ್ನುವ ಪದದಲ್ಲಿ "ಯ" ತೆಗೆದುಹಾಕಿದರೆ ವಿಷ ಆಗುತ್ತದೆ. ವಿಷ ಮನುಷ್ಯನನ್ನು ಹಿಂಸಿಸಿ ಸಾಯಿಸಬಲ್ಲದು. ವಿಷ (ಯ) ಮನುಷ್ಯನನ್ನು ಸಾಯಿಸದಂತೆ ಹಿಂಸಿಸುತ್ತಲೇ ಇರುತ್ತದೆ. ವಿಷಕ್ಕು, ವಿಷಯಕ್ಕು ಹತ್ತಿರ ಸಂಬಂಧವಿದ್ದು ಸ್ವಲ್ಪಮಟ್ಟಿನ ವ್ಯತ್ಯಾಸವಿದೆ. ವಿಷ ಸಾಯಿಸಬಲ್ಲದು, ವಿಷಯ ಸಾಯಿಸದಂತೆ ಹಿಂಸಿಸಬಲ್ಲದು. ಆದ್ದರಿಂದ ಈ ಪದ್ಯದಲ್ಲಿ ವಿಷಯಗಳನ್ನು ಹತ್ತಿರ ಹೋಲಿಕೆಯಿರುವ ವಿಷಕ್ಕೆ ಸಮಾನವಾಗಿ

ಹೋಲಿಸಿ, ವಿಷಯ ಗುಣಗಳಲ್ಲಿ ವಿಷವಿದೆಯೋಯಣ್ಣಾ ಎಂದಿದ್ದಾರೆ. ಆದ್ದರಿಂದ ವಿಮಲವಾದ ಮೋಕ್ಷ ವಿಶದ ಪಡಿಸಿಕೊಳ್ಳದೆ ವಿಷವಿರುವ ವಿಷಯಗುಣಗಳಲ್ಲಿ ಬೀಳುವವನು, ಜನ್ಮ ಜನ್ಮಗಳಿಗು ಬಾಧೆಪಡಬೇಕಾಗಿರುತ್ತದೆ ಹುಷಾರ್.

**ಆ ॥ ವಿಷಯಭ್ರಮೆಗಳು ಗೆದ್ದು ವಿಜ್ಞಾನವನ್ನು ತಿಳಿದು**
**ಯಸಿ ಪದಾರ್ಥ ಅರಿತು ಯಾತ್ಮ ಬೆರೆತು**
**ಬಸವನಾದ ಹಿಂದೆ ಭಯವೇನು ಯಿದೆ**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಮರಣವಿದ್ದು ನಾಶವಿಲ್ಲದ ಓ ಆತ್ಮಾ! ಕೇಳು. ಪ್ರಪಂಚದಲ್ಲಿನ ವಿಷಯಗಳನ್ನು, ಶರೀರದಲ್ಲಿನ ಗುಣ ವಿವರಗಳನ್ನು ಗ್ರಹಿಸಿ, ಅವುಗಳಿಂದ ಹಾನಿ ಹೊರತು ಒಳ್ಳೆಯದು ನಡೆಯುವುದಿಲ್ಲವೆಂದು ತಿಳಿದು, ತಿಳಿಯಬೇಕಾಗಿರುವುದೇನೊ ಅರ್ಥ ಮಾಡಿಕೊಂಡು, ದೈವಜ್ಞಾನವನ್ನು ಪೂರ್ತಿಯಾಗಿ ತಿಳಿದವನಾಗಿ, ಅದರಿಂದ ತನ್ನಲ್ಲಿನ ಆತ್ಮವನ್ನು ತಿಳಿದು ಕರ್ಮಗಳನ್ನು ಅಂಟದೆ, ಯಾವ ವಿಷಯಕ್ಕು ಚಲಿಸದೆ ಬಸವನಂತೆ ಎಲ್ಲದಕ್ಕು ಸಮಾನತ್ವ ಹೊಂದಿದವನಿಗೆ ಜನ್ಮಗಳ ಕರ್ಮಗಳ ಭಯವಿಲ್ಲದೆಹೋಗುತ್ತದೆ. ದೇವರನ್ನು ತಿಳಿಯುವುದಕ್ಕೆ ಆತನಲ್ಲೈಕ್ಯವಾಗುವುದಕ್ಕೆ ಇರುವ ಬ್ರಹ್ಮ, ಕರ್ಮ ಯೋಗಗಳೆನ್ನಲ್ಪಡುವವುಗಳಲ್ಲಿ ಈ ಪದ್ಯ ಬ್ರಹ್ಮಯೋಗವನ್ನು ಕುರಿತು ಹೇಳಿರುವಂತಾದ್ದೆಂದು ತಿಳಿಯಬೇಕು.

**ಆ ॥ ಪಂಚಬಣ್ಣಗಳಿರುವ ಪಾಪ ಮಧ್ಯದಲ್ಲಿ**
**ಒಳ್ಳೆಯ ಬ್ರಹ್ಮ ಕಳೆ ಹೊಳೆಯುತ್ತಿದೆ**
**ಅರಿತು ಅದರಲ್ಲಿ ಬೆರೆತವನೇ ಶಿವಯೋಗಿ**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಆಕಾಶದಲ್ಲಿರುವ ಸೂರ್ಯನೊಬ್ಬನೇ ಪ್ರಪಂಚವೆಲ್ಲವನ್ನು ತನ್ನ ಬೆಳಕಿನಿಂದ ಪ್ರಕಾಶಿಸುವಂತೆ ಮಾಡಿದಹಾಗೆ ಬ್ರಹ್ಮನಾಡಿಯಲ್ಲಿದ್ದು ಶರೀರವೆಲ್ಲ ಚೈತನ್ಯವಾಗಿ ವ್ಯಾಪಿಸಿರುವ ಓ ಆತ್ಮಾ! ಕೇಳು. ಪಂಚ ಭೂತಗಳಿಂದ ತಯಾರಾದ

ಶರೀರದಲ್ಲಿ ಮಧ್ಯ ಭಾಗದಲ್ಲಿ ಬ್ರಹ್ಮನಾಡಿಯಿದೆ. ಅದರಲ್ಲಿ ಚೈತನ್ಯ ಪ್ರಕಾಶವಾದ ಆತ್ಮವಿದೆ. ಆತ್ಮವನ್ನು ತಿಳಿದು ಅದರಲ್ಲಿ ಲಗ್ನವಾದವನೇ ಶಿವಯೋಗಿ.

**ವಿಶೇಷಾರ್ಥ :–** ನಮ್ಮ ಶರೀರ ಆಕಾಶ, ಅಗ್ನಿ, ನೀರು, ಭೂಮಿ ಎನ್ನುವ ಐದು ಭಾಗಗಳಿಂದ ತಯಾರಾಗಿದೆ. ಶರೀರದಲ್ಲಿ ರಂಧ್ರಗಳಿರುವ ಗೊಟ್ಟಗಳಲ್ಲಿ ಆಕಾಶ, ಶ್ವಾಸದ ಮೂಲಕ ಗಾಳಿ, ಶಾಖದಿಂದ ಅಗ್ನಿ, ಮೂತ್ರ ಬೆವರಿನ ಮೂಲಕ ನೀರು, ಮೂಳೆ ಕಂಡಗಳ ಮೂಲಕ ಭೂಮಿ ಇರುವಂತೆ ಪ್ರತ್ಯಕ್ಷವಾಗಿ ತಿಳಿಯುತ್ತಿದೆ. ಆದ್ದರಿಂದ ಈ ಶರೀರವನ್ನು ಪಂಚಬಣ್ಣಗಳಿರುವ ಪಾಪು ಎಂದು ಹೇಳಿದ್ದಾರೆ. ಶರೀರದ ಮಧ್ಯದಲ್ಲಿ ಬ್ರಹ್ಮನಾಡಿಯಲ್ಲಿ ಆತ್ಮ ನಿವಾಸಿಸುತ್ತಿದೆ. ಆದ್ದರಿಂದ ಆತ್ಮವನ್ನು ಪಾಪು ಮಧ್ಯದಲ್ಲಿ ಬ್ರಹ್ಮಕಳೆಯೆಂದು ಹೇಳಿದ್ದಾರೆ. ಆತ್ಮಶಕ್ತಿ ಚೈತನ್ಯದ ಮೂಲಕ ಶರೀರವೆಲ್ಲ ವ್ಯಾಪಿಸಿದೆ. ಆದ್ದರಿಂದ ಆತ್ಮವನ್ನು ದೀಪಕ್ಕೆ ಹೋಲಿಸಿ ಶರೀರವೆಲ್ಲವೂ ವ್ಯಾಪಿಸಿರುವ ಶಕ್ತಿಯನ್ನು ಕಾಂತಿಗೆ ಹೋಲಿಸಿ, ಹೊಳೆಯುತ್ತಿದೆ ಎಂದಿದ್ದಾರೆ. ಆತ್ಮವನ್ನು ತಿಳಿದುಕೊಂಡು ಅದರಲ್ಲಿಯೇ ಲಗ್ನವಾದವರಿಗು ಆತ್ಮಕ್ಕು ಭೇದವಿರುವಿದಿಲ್ಲ. ಆದ್ದರಿಂದ ಅದರಲ್ಲಿ ಬೆರೆತವನೇ ಶಿವಯೋಗಿ ಎಂದಿದ್ದಾರೆ.

**೨ ॥ ದಿನ ನಿರ್ವಿಕಲ್ಪ ನಿಷ್ಠೆ ಸಮಾಧಿಯಿಂದ**
**ತನದು ಪೂರ್ವಕರ್ಮ ದೊಲಗಿಹೋಗುವುದು**
**ದಾದರೆ ಬೇರೆ ವಿಧದಲ್ಲಿ ಕಾಣಿಸುವುದಿಲ್ಲ ಮೋಕ್ಷ**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಶರೀರಗೃಹದಲ್ಲಿ ಯಜಮಾನನಾದ ಓ ಆತ್ಮಾ! ಕೇಳು. ಪ್ರತಿ ದಿನ ಸ್ವಲ್ಪ ಕಾಲವಾದರು ಸಂಕಲ್ಪಗಳು ಇಲ್ಲದಂತೆ ಯೋಗದಲ್ಲಿದ್ದರೂ ಕರ್ಮ ನಶಿಸಿಹೋಗುತ್ತದೆ. ಜನ್ಮಕ್ಕೆ ಕಾರಣವಾದ ಕರ್ಮ ತೊಲಗಿ ಹೋಗುವುದರಿಂದ ಜನ್ಮಗಳು ಇಲ್ಲದ ಮೋಕ್ಷ ಉಂಟಾಗುತ್ತದೆ. ಹಾಗಲ್ಲದೆ ಬೇರೆ ವಿಧದಲ್ಲಿ ಮೋಕ್ಷ ಲಭಿಸುವುದಿಲ್ಲ.

**ವಿಶೇಷಾರ್ಥ:–** ಮನಸ್ಸು ಎಲ್ಲವೇಳೆಯಲ್ಲಿ ಸಂಕಲ್ಪಗಳು ಉಂಟುಮಾಡುತ್ತಿರುತ್ತದೆ.

ಸಂಕಲ್ಪಗಳು ಉಂಟಾಗುತ್ತಾ ಎಚ್ಚರವಾಗಿ (ಜ್ಞಾಪಕ) ಇರುವ ಸ್ಥಿತಿಯನ್ನು ಜಾಗ್ರತಾವಸ್ಥೆ ಎನ್ನುತ್ತಾರೆ. ಸಂಕಲ್ಪಗಳು ಇಲ್ಲದೇ ಎಚ್ಚರದಲ್ಲಿರುವ ಸ್ಥಿತಿಯನ್ನು ಯೋಗವೆಂದು ಕರೆಯುತ್ತಾರೆ. ನಿಷ್ಠೆ ಎಂದರೇ ಒಂದು ಪದ್ಧತಿಯೆಂಬ ಭಾವನೆ. ಸಮಾಧಿ ಎಂದರೆ ಬುದ್ಧಿಗೆ ಸಮವಾಗಿರುವುದು (ಆತ್ಮ) ಎಂದು ಅರ್ಥ. ಯಾರಾದರೆ ಆಲೋಚನೆಗಳು ಇಲ್ಲದ ಒಂದೇ ಸ್ಥಿತಿಯಲ್ಲಿದ್ದು ಆತ್ಮವನ್ನು ಗ್ರಹಿಸುತ್ತಾ ತನ್ನ ಆತ್ಮ ಬುದ್ದಿಗೆ ಸಮವಾಗಿ ಬದಲಾಗಿರುತ್ತಾನೊ, ಅವನು ಪೂರ್ವಜನ್ಮಗಳಲ್ಲಿ ಸಂಪಾದಿಸಿದ ಕರ್ಮವನ್ನು ಇಲ್ಲದಂತೆ ಮಾಡಿಕೊಳ್ಳುತ್ತಾನೆ. ಯೋಗ ಮಾಡುವ ಸಮಯದಲ್ಲಿ ಯೋಗಶಕ್ತಿ ಲಭಿಸುತ್ತದೆ, ಯೋಗಶಕ್ತಿ ಕರ್ಮವನ್ನು ಸುಡುವ ಪ್ರಭಾವವಿರುವುದು. ಆ ಶಕ್ತಿ ಯೋಗಿ ಶಿರಸ್ಸಿನಲ್ಲಿ ಸೇರಿ ಅಲ್ಲಿ ಕರ್ಮಚಕ್ರದಲ್ಲಿರುವ ಕರ್ಮವನ್ನು ಸುಟ್ಟುಹಾಕುತ್ತದೆ. ಒಂದು ಯೋಗಶಕ್ತಿ ಯಿಂದಲೇ ಕರ್ಮ ಇಲ್ಲದೇ ಹೋಗುತ್ತದೆ. ಬೇರೆ ಯಾವವಿಧವಾಗಿ ಕರ್ಮ ಹೋಗುವುದಿಲ್ಲ. ಕರ್ಮ ಇಲ್ಲದಿರುವಾಗಲೇ ಜೀವಿಯು ಶರೀರದಲ್ಲಿ ಬಂದಿ ಸಲ್ಪಡದೆ ಎಲ್ಲಾಕಡೆ ವ್ಯಾಪಿಸಿ ಹೋಗುವನು. ಯೋಗ ವಿಲ್ಲದೇ ಕರ್ಮ ಹೋಗುವುದಿಲ್ಲ, ಕರ್ಮ ಹೋಗದೆ ಮೋಕ್ಷ ಬರುವುದಿಲ್ಲ. ಆದ್ದರಿಂದ ಬೇರೆ ವಿಧವನ್ನು ಕಾಣಬಾರದು ಮೋಕ್ಷವೆಂದು ಹೇಳಿದ್ದಾರೆ.

**ಆ ॥ ನರನು ಗುರುವನ್ನು ಸೇರಿ ನಾಲ್ಕು ಸೇವೆಗಳು**
**ಮಾಡಿದರೇನೆ ನಿಜವು ಹೇಳುವಯ್ಯ**
**ಹೇಳುತ್ತಲೇ ಮಾಯೆ ಶಬ್ದ ತಣ್ಣಗಾಗುತ್ತದೆ**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಹೃದಿ ಮಧ್ಯದಲ್ಲಿ ನಿವಾಸಮಾಡುತ್ತಾ ಸೂತ್ರದಾರಿಯಾಗಿದ್ದು ಜೀವಿಯನ್ನು ಪಾತ್ರದಾರನನ್ನಾಗಿ ಆಡಿಸುವ ಓ ಆತ್ಮಾ! ಕೇಳು. ನರನು ಗುರುವನ್ನು ಆಶ್ರಯಿಸಿ ಭಕ್ತಿ ಭಾವವಿರುವವನಾಗಿ, ಗುರುವನ್ನು ದೊಡ್ಡದಾಗಿ ಭಾವಿಸಿಕೊಂಡು ಸ್ಥಾನ, ಅಂಗ, ಭಾವ, ಆತ್ಮ ಎನ್ನುವ ನಾಲ್ಕು ವಿಧಗಳ ಸೇವೆಗಳು ಮಾಡುತ್ತಿದ್ದರೆ ಗುರುವು ಆತ್ಮ ಜ್ಞಾನವನ್ನು ಬೋಧಿಸುವನು. ಆತ್ಮಜ್ಞಾನದಿಂದ ಮಾಯಬಲವು ಕಡಿಮೆಯಾಗುತ್ತದೆ.

**ವಿಶೇಷಾರ್ಥ :–** ಮಾನವನು ಬ್ರಹ್ಮವಿದ್ಯಾನ್ವೇಷನಾಗಿ ಆ ವಿದ್ಯೆ ಇರುವ ಗುರುಹತ್ತಿರಕ್ಕೆ ಹೋಗಿ ಶಾಸ್ತ್ರನುಸಾರವಾಗಿ ವಿನಯ ವಿಧೇಯತೆಗಳಿಂದ ನಡೆದುಕೊಳ್ಳುತ್ತಾ, ಸಾಷ್ಟಾಂಗ ದಂಡ ಪ್ರಮಾಣಗಳಾಚರಿಸುತ್ತಾ, ನಾಲ್ಕು ಸೇವೆಗಳು ಮಾಡುತ್ತಿದ್ದರೆ ಆತ್ಮಜ್ಞಾನ ಪ್ರಾಪ್ತಿಸುತ್ತದೆ. ನಾಲ್ಕು ಸೇವೆಗಳು 1) ಸ್ಥಾನ 2) ಅಂಗ 3) ಭಾವ 4) ಆತ್ಮ ಸೇವೆಗಳು.

**1) ಸ್ಥಾನ ಸೇವೆ :–** ಗುರು ನಿವಾಸಿಸುವ ಪ್ರಾಂತವನ್ನು ಶುಭ್ರವಾಗಿಡುತ್ತಾ, ಆ ಸ್ಥಳವನ್ನು ಗುರುವಿನ ಮನಸ್ಸಿಗೆ ಅನುಗುಣವಾಗಿರುವುದಕ್ಕೆ ತಕ್ಕ ಕಾರ್ಯಗಳು ಮಾಡುವುದು ಸ್ಥಾನಸೇವೆಯಾಗುತ್ತದೆ.

**2) ಅಂಗ ಸೇವೆ :–** ಗುರು ಶರೀರಕ್ಕೆ ಸೇವೆಗಳು ಮಾಡುವುದು ಅಂದರೇ ಶರೀರಕ್ಕೆ ಬೇಕಾದ ಆಹಾರ ಪಾನೀಯಗಳು ವಸ್ತ್ರಗಳಿಂದ ಹಿಡಿದು ಶರೀರ ಪೋಷಣೆ, ಶರೀರ ಜೀವನದಲ್ಲಿ ಆರೋಗ್ಯವಾಗಿ ನೋಡುವುದು ಮೊದಲಾದ ಕಾರ್ಯಗಳೆಲ್ಲವನ್ನು ಅಂಗ ಸೇವೆ ಎನ್ನುತ್ತಾರೆ.

**3) ಭಾವ ಸೇವೆ :–** ಗುರುವನ್ನು ತನಗಿಂತ ದೊಡ್ಡವರಾದ, ಪೂಜ್ಯರಾದ ತಾಯಿ, ತಂದೆ ದೈವವಾಗಿ ಭಾವಿಸಿ, ಅವರಿಗೆಕೊಡುವ ಗೌರವವನ್ನೇ ಗುರುವಿಗೆ ಕೊಡುವುದನ್ನು ಭಾವ ಸೇವೆಯೆಂದು ಕರೆಯುತ್ತಾರೆ.

**4) ಆತ್ಮ ಸೇವೆ :–** ಗುರು ಶರೀರದಿಂದ ಬರುವ ಆಜ್ಞೆಗಳನ್ನು ಶಿರಸಾ ಆಚರಿಸುವುದೇ ಆತ್ಮ ಸೇವೆ ಎನ್ನಲಾಗುತ್ತದೆ.

ಸೇವೆಗಳು ಮಾಡುವ ಶಿಷ್ಯರನ್ನು ನೋಡಿ, ಗುರುವು ಅವರ ಬ್ರಹ್ಮವಿದ್ಯಾ ಜಿಜ್ಞಾಸತ್ವವನ್ನು ಪರಿಶೀಲಿಸಿ ಪರಿಪಕ್ವವಾದ ಸಮಯದಲ್ಲಿಯೇ ಗಿಡದಿಂದ ಕಾಯಿಗಳು ಕೊಯ್ದಂತೆ ಸೇವೆಗಳಲ್ಲಿ ಪರಿಪಕ್ವದಶೆಗೆ ಬಂದಿರುವವರಿಗೆ ಆತ್ಮಜ್ಞಾನವನ್ನು ಬೋಧಿಸುತ್ತಾನೆ. ಅದರಿಂದ ಮಾಯೆಯೊಂದರ ವೈಪರಿತ್ಯ ಕಡಿಮೆಯಾಗಿ ಶಿಷ್ಯನು ಮಾಯತೀತನಾಗುತ್ತಾನೆ.

ಈ ಕಾಲದಲ್ಲಿ ಗುರುಗಳೇ ಮೊದಲು ಬೋಧನೆ ಮಾಡಿದರೂ ಶಿಷ್ಯರು ಸೇವೆಗಳು ಮಾಡದಂತಿದ್ದಾರೆ. ಸೇವೆಯಿಲ್ಲದ ಬೋಧನೆ ಗುರುವಿಗೆ ಬಾಕೀ ಇರುವಂತೆಮಾಡುತ್ತದೆ. ಆ ಋಣ ತೀರಿಸುವುದಕ್ಕೆ ಪುನಃ ಜನ್ಮಗಳೆತ್ತಬೇಕಾಗಿ ಬರುತ್ತದೆ. ಆದ್ದರಿಂದ ಸೇವೆಗಳು ಮಾಡದವರಿಗೆ ಜನ್ಮರಾಹಿತ್ಯ ಬಾರದೆ ಜನ್ಮಸಾಹಿತ್ಯ ಉಂಟಾಗುತ್ತದೆ.

ಪೂರ್ವದಲ್ಲಿ ಹಿರಿಯರು ಗುರು ಸೇವೆಗಳು ಎಷ್ಟು ಮಾಡಿದರೂ ತೀರದಿರುವುದೇ ಆಗುತ್ತದೆನ್ನುವ ಭಾವನೆಯಿಂದ ಪ್ರಾಣ, ಧನ, ದೇಹಗಳು ಗುರುವಿಗೆ ಸಮರ್ಪಣೆಯೆಂದು, ಎಲ್ಲವೂ ಗುರುವಿಗೆ ಅರ್ಪಿಸಿ ತಾನು ತನ್ನದೆನ್ನುವ ಭಾವನೆ ಇಲ್ಲದಂತಿರುತ್ತಿದ್ದರು.

**ಆ ॥ ಏನು ಮಾಡಿದರೇನು ಯೇಕಾಗ್ರಚಿತ್ತದಲ್ಲಿ**
**ಮಾಡಿದರೇನು ತನಗೆ ಸಲ್ಲುತ್ತದಯ್ಯ**
**ಸಲ್ಲುತ್ತದನ್ನುತ್ತಾ ದುಷ್ಟ ಕೆಟ್ಟವೃತ್ತಿಗಳು ಮಾಡುತ್ತದಾ**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಸಮಸ್ತ ಜೀವಿಗಳಲ್ಲಿ ಏಕ ಕಾರ್ಯ ಸ್ವರೂಪನಾದ ಓ ಆತ್ಮಾ! ಕೇಳು. ಅರ್ಥ ತಿಳಿಯದ ಮನುಜರು ಈ ಪದ್ಯವನ್ನು ಆಧಾರ ಮಾಡಿಕೊಂಡು ಸದ್ಗುರುಗಳನ್ನು ಕೂಡ ಎದರಿಸಿ ಮಾತನಾಡುತ್ತಿದ್ದಾರೆ. ಆದ್ದರಿಂದ ಈ ಪದ್ಯಕ್ಕೆ ಪೂರ್ತಿ ವಿವರ ತಿಳಿದುಕೊಳ್ಳುವುದು ಪ್ರಾಮುಖ್ಯ.

**"ಅಪಿ ಚೇದಸಿ ಪಾಪೇಭ್ಯ ಸರ್ವೇಭ್ಯ ಪಾಪಕೃತ್ತಮಃ**
**ಸರ್ವಂ ಜ್ಞಾನಪ್ಲವೇನೈವ ವೃಜನಂ ಸಂತರಿಷ್ಯಸಿ"**

"ಪಾಪಾತ್ಮರಲ್ಲಿ ನೀನು ಅಧಮ ಪಾಪಿಯಾದರೂ, ನೀನು ಮಾಡುವ ಸರ್ವ ಕಾರ್ಯಗಳು ಪಾಪಕಾರ್ಯಗಳೇ ಆದರೂ ಎಲ್ಲವನ್ನು ಜ್ಞಾನವೆನ್ನುವ ತೆಪ್ಪದಿಂದ ದಾಟಬಲ್ಲೆ" ಎನ್ನುವ ಗೀತಾ ವಾಕ್ಯದ ಪ್ರಕಾರ ಏನು ಮಾಡಿದರೇನು ಏಕಾಗ್ರಚಿತ್ತವು ಮಾಡಿದರೇನೆ ತನಗೆ ಸಲ್ಲುತಯ್ಯ ಎಂದಿದ್ದಾರೆ. ಏಕಾಗ್ರಚಿತ್ತ

ವೆಂದರೇ ಏಕಕ್ಕೆ ಅಗ್ರದಲ್ಲಿರುವ ಆತ್ಮದಲ್ಲಿ ಚಿತ್ತವನ್ನು ಬೆರೆಸುವುದೆಂದು ಅರ್ಥ. ಅಂದರೇ ಯೋಗವೆಂಬ ಭಾವನೆ. ಯೋಗಿ ಆದವನು ಪೂರ್ವ ಕರ್ಮಗಳನ್ನು ಕೂಡ ಇಲ್ಲದೇ ಮಾಡಿಕೊಳ್ಳುತ್ತಾನೆ. ಕರ್ಮಗಳನ್ನು ನಶಿಸುವಂತೆ ಮಾಡುವ ಶಕ್ತಿ ತನಗಿದೆಯೆಂದು ಯೋಗಿ ಆದವನು ಅದೇ ಕೆಲಸವಾಗಿ ಕೆಟ್ಟ ಕಾರ್ಯಗಳನ್ನು ಮಾಡುವುದಿಲ್ಲ. ಏಕೆಂದರೆ! ಕೆಟ್ಟಕಾರ್ಯಗಳಾದರೂ, ಒಳ್ಳೆಯ ಕಾರ್ಯಗಳಾದರೂ ನಮ್ಮ ಇಷ್ಟಪ್ರಕಾರ ನಡೆಯುವುದಿಲ್ಲವೆಂದು ಯೋಗಿಗೆ ಚೆನ್ನಾಗಿ ತಿಳಿಯುತ್ತದೆ. ಏನು ನಡೆದರೂ ಕರ್ಮ ಪ್ರಕಾರವೇಯೆಂದು ನಿಶ್ಚಯವಾಗಿ ತಿಳಿಯುವನು. ಆದ್ದರಿಂದ ಕರ್ಮಗಳನ್ನು ನಶಿಸುವಂತೆ ಮಾಡುವ ಶಕ್ತಿ ಇದ್ದರೂ ನಡೆಯುವ ಕೆಲಸಗಳು ಮಾತ್ರ ತನ್ನ ಕೈಯಲ್ಲಿ ಇಲ್ಲದಿರುವಾಗ ಅದೇ ಕೆಲಸವಾಗಿ ಕೆಟ್ಟವೃತ್ತಿಗಳು ಹೇಗೆ ಮಾಡುತ್ತಾನೆ.

ಗೀತೆಯಲ್ಲಿ ಕೃಷ್ಣನು ಕೂಡ ಅರ್ಜುನನೊಂದಿಗೆ “ಯಾವ ಕೆಲಸ ನಿನ್ನ ಕೈಯಲ್ಲಿ ಇಲ್ಲ. ನೀನು ಯುದ್ಧ ಮಾಡುವುದಿಲ್ಲವೆಂದು ಪಟ್ಟುಹಿಡಿದರೂ, ನಡೆಯಬೇಕಾಗಿರುವುದಿದ್ದರೆ ತಪ್ಪದೆ ನಡೆದೇ ನಡೆಯುತ್ತದೆ. ನಿನ್ನ ಗುಣಗಳೇ ನಿನ್ನನ್ನು ಪ್ರೇರೇಪಿಸಿ ಯುದ್ಧ ಮಾಡಿಸುತ್ತವೆಂದು ತಿಳಿಸಿದ್ದಾನೆ. ಯೋಗಿಗಳಿಗೆ ಈ ವಿಷಯ ಚೆನ್ನಾಗಿ ತಿಳಿದಿರುತ್ತದೆ. ಪ್ರತಿ ಕೆಲಸಕ್ಕೆ ಕರ್ಮದಿಂದ ಪ್ರೇರೇಪಿತವಾದ ಗುಣಗಳೇ ಕಾರಣವೆಂದು ತಿಳಿದಿರುತ್ತದೆ. ಹಾಗಿರುವಾಗ ಕೆಟ್ಟವೃತ್ತಿಗಳಾಗಲಿ, ಒಳ್ಳೆಯವೃತ್ತಿಗಳಾಗಲಿ ನಾನು ಮಾಡುತ್ತಿದ್ದೇನೆನ್ನುವ ಉದ್ದೇಶದಿಂದ ಮಾಡುವುದಿಲ್ಲ.

ಸದ್ಗುರುಗಳ ಹತ್ತಿರ ಸೇರಿದ ಮೂರ್ಖರು ಯಾವ ತಪ್ಪು ದೊರೆಯುತ್ತದಾಯೆಂದು ಗುರುವನ್ನು ನೋಡುತ್ತಿರುತ್ತಾರೆ. ಚಿಕ್ಕ ತಪ್ಪು ಕಾಣಿಸಿದರೂ ವಿಮರ್ಶಕರಾಗಿ ಹೊಂದಬೇಕಾದ ಜ್ಞಾನಕ್ಕೆ ದೂರವಾಗುತ್ತಾರೆ. ಆದ್ದರಿಂದಲೇ ಕೆಲವರು ಹಿರಿಯರು ಈ ವಿಧವಾಗಿ “ಖ್ಯಾತಿಯಾಗಿ ಸದ್ಗುರುವನ್ನು ಸೇರಿಯೂ ಕೂಡ ಜ್ಯೋತಿಯನ್ನು ಕಾಣಲಾರದೆ, ಬಾಹ್ಯ ಚೋದ್ಯಗಳಿಂದ ಕೋತಿಗಳಂತೆ ಕೆಡಿಸುವ ಪಾತಕಿಗಳಿಗೆ ಹೇಗೆ ತಿಳಿಯುವುದು ಭವ್ಯ ಗುಣಗಳು" ಎಂದಿದ್ದಾರೆ.

ಯೋಗಿಯಾದ ಗುರುವಿಗೆ ಪಾಪಪುಣ್ಯ ವ್ಯತ್ಯಾಸ ಇರುವುದಿಲ್ಲ. ಹಿಂದೆ ಕರ್ಮದಿಂದ ಸಂಭವಿಸುವ ಸಮಸ್ತ ಕಾರ್ಯಗಳನ್ನು ಮಾಡುತ್ತಿರುತ್ತಾನೆ. ತಾವು ಆಚರಿಸುತ್ತಾ ಹಾಗೇ ಕರ್ಮಗಳು ಅಂಟದ ವಿಧಾನವನ್ನು ಶಿಷ್ಯರಿಗೆ ಬೋಧಿಸುತ್ತಾನೆ. ಅದೇ ಕರ್ಮಯೋಗ. ಕರ್ಮಯೋಗ ರಹಸ್ಯ ತಿಳಿಯದ ಶಿಷ್ಯರು ಗುರುವು ಮಾಡುವ ಕೆಲಸಗಳಲ್ಲಿ ಚಿಕ್ಕ ಕೆಟ್ಟ ಕಾರ್ಯ ಕಾಣಿಸಿದ ತಕ್ಷಣ ಹೊರಬಿದ್ದು ಹೋಗುತ್ತಾರೆ. ಗುರುಗಳನ್ನೇ ಹೇಳನವಾಗಿ ಮಾತನಾಡುತ್ತಾರೆ. ಆದರೆ ಕರ್ಮಯೋಗವನ್ನು ಬೋಧಿಸಿದ ಕೃಷ್ಣನ ಗೀತೆಯನ್ನೇ ಆಶ್ರಯಿಸಿ, ನಾವು ಆ ಗುರುವಿಗಿಂತ ದೊಡ್ಡವರೆನ್ನುತ್ತಿರುತ್ತಾರೆ. ಗೀತೆಯನ್ನು ಹೇಳಿದ ಕೃಷ್ಣನು ಎಂತಹವನೆಂದು ಯಾರಾದರು ಕೇಳಿದರೆ ಆತನಿಗೆಲ್ಲಾ ಸಲ್ಲುತ್ತವೆಂದು ಹೇಳುತ್ತಾರೆ. ತನಗೊಂದು ಪದ್ಧತಿ ಪ್ರಜೆಗಳಿಗೊಂದು ಪದ್ಧತಿ ಕೃಷ್ಣನು ಹೇಳಲಿಲ್ಲ ಅಲ್ಲವೆ! ಎಲ್ಲರಿಗು ಒಂದೇ ಸಿದ್ಧಾಂತ ಅಲ್ಲವೆ! ಆತನು ಮಾನವನಾಗಿಯೇ ನಟಿಸಿ ಆ ಸಿದ್ಧಾಂತಗಳ ಮೇಲೆಯೇ ನಡೆದಿದ್ದಾನೆ ಅಲ್ಲವೆ! ಎಂದು ಯಾರಾದರು ವಿವರವಾಗಿ ಕೇಳಿದರೂ ಅರ್ಥ ತಿಳಿಯದ ಮನುಜರು ಆತನು ದೇವರೆಂದು ಸರಿಪಡಿಸಿಕೊಂಡಿದ್ದಾರೆ.

ಗತ ಜನ್ಮ ಕರ್ಮಗಳನ್ನನುಸರಿಸಿಯೇ ಕಾರ್ಯಗಳು ನಡೆಯುತ್ತಿವೆ ಯೆಂದು, ತಾನು ತಲೆಯಲ್ಲಿ ಸಾಕ್ಷಿಯಾಗಿ ನೋಡುತ್ತಿದ್ದೇನೆಂದು, ಯಾವ ಕಾರ್ಯ ಮಾಡಲಿಲ್ಲವೆಂಬ ಭಾವನೆ ಯೋಗಿಗಿರುತ್ತದೆ. ಆದ್ದರಿಂದ ತಾನು ಸ್ವತಃವಾಗಿ ಕಾರ್ಯಗಳನ್ನು ಮಾಡುತ್ತೇನೆಂಬ ಭಾವನೆ ಯೋಗಿಗೆ ಇರುವುದಿಲ್ಲ.

**ಆ ॥ ಅತನು ಬ್ರಹ್ಮ ವಿಷ್ಣು ಆನಂದ ರೂಪನು**
**ಆತನಿಗೇನು ಬಾಧೆ ಯಾತ್ರೆ ಬೋಧ**
**ಸಕಲ ಭೂತಸಾಕ್ಷಿ ಸಂಪನ್ನನಾಗಿರು**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಪುರುಷರಲ್ಲಿ ಎರಡನೆಯವನಾದ ಓ ಅಕ್ಷರ ಪುರುಷನೆ! ಕೇಳು. ಯೋಗಿ ಆದವನು ಬ್ರಹ್ಮ, ವಿಷ್ಣುವು ಅನುಭವಿಸುವ ಆತ್ಮಾನಂದವನ್ನು

ಅನುಭವಿಸುತ್ತಿರುತ್ತಾನೆ. ಆತನಿಗೆ ಪಾಪ ಪುಣ್ಯಗಳ ಬಾಧೆ ಇರುವುದಿಲ್ಲ. ಸುಖ ದುಃಖಗಳಲ್ಲಿ ಚಲಿಸದೆ ಜೀವಿತ ಕಾಲವನ್ನು ಆತ್ಮಬೋಧನೆಗಳಲ್ಲಿಯೇ ಸಮಯವನ್ನು ಕಳೆಯುತ್ತಾನೆ. ಮತ್ತು ಸಕಲ ಜೀವರಾಶಿಗಳ ಶರೀರಗಳಲ್ಲಿ ಸಾಕ್ಷಿಯಾಗಿರುವ ಆತ್ಮನಲ್ಲಿ ಬೆರೆತಿರುತ್ತಾನೆ.

**ವಿಶೇಷಾರ್ಥ :–** ಯೋಗ ಮಾಡುವ ವೇಳೆ ಲಭಿಸುವ ಶಕ್ತಿಯನ್ನನುಸರಿಸಿ ದೇವತೆಗಳ ಪದವಿಗಳು ನಿರ್ಣಯಿಸಲ್ಪಟ್ಟಿವೆ. ದೇವತೆಗಳು ಯೋಗಿಗಳಲ್ಲಿಯೇ ಇದ್ದಾರೆ. ಹೆಚ್ಚಾಗಿ ಯೋಗಶಕ್ತಿ ಇರುವವನನ್ನು ವಿಷ್ಣುವೆಂದು, ಎರಡನೆಯವನನ್ನು ಶಿವನೆಂದು, ಮೂರನೆಯವನನ್ನು ಬ್ರಹ್ಮನೆಂದು ಈ ವಿಧವಾಗಿ ಅವರ ಪದವಿಗಳು ನಿರ್ಣಯಿಸಲ್ಪಟ್ಟಿವೆ. ಮಾನವರಲ್ಲಿಯೇ ದೊಡ್ಡ ಯೋಗಿಗಳಾಗಿರುವವರೇ ತ್ರಿಮೂರ್ತಿಗಳು. ದೊಡ್ಡ ಯೋಗಿಗಳು ಅನುಭವಿಸುವ ಆತ್ಮಾನಂದವನ್ನು ಗುರುವು ಅನುಭವಿಸುತ್ತಿದ್ದಾನೆ. ಆದ್ದರಿಂದ ಬ್ರಹ್ಮ, ವಿಷ್ಣು, ಆನಂದರೂಪನೆಂದು ಯೋಗಿಯಾಗಿರುವ ಗುರುಗಳನ್ನು ಕುರಿತು ಮೇಲಿನ ಪದ್ಯದಲ್ಲಿ ಹೇಳಿದ್ದಾರೆ. ಹಾಗೇ ತನ್ನ ಆತ್ಮವನ್ನು ತಾನು ಅನುಭವ ಹೊಂದುತ್ತಿದ್ದಾನಾದ್ದರಿಂದ ಸಾಕ್ಷಿಯಾದ ಆತ್ಮ ಸಂಪನ್ನನೆಂದಿದ್ದಾರೆ.

**ಆ ॥ ನಾನು ನೀನುಯೆನ್ನುತ್ತಾ ನಿರ್ಣಯ ಬೆಳೆಸುವುದಿಲ್ಲ**
**ಭಾವದಲ್ಲಿ ಬ್ರಹ್ಮ ಭಾವ ಅರಿತು**
**ಸಾವಧಾನಮತಿಯನ್ನು ಸರಿಯಾಗಿ ವಿಹರಿಸು**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಸಮಸ್ತ ಜೀವಿಗಳಲ್ಲಿ ಕದಲಿಕೆ ಶಕ್ತಿ ಕೊಡುವ ಓ ಆತ್ಮಾ! ಕೇಳು. ಯೋಗಿ ಆದವನು ನಾನು ನೀನು ಎನ್ನುವ ಭೇದ ಭಾವವಿಲ್ಲದೆ, ಆತ್ಮ ಎಲ್ಲವುದರಲ್ಲಿ ಒಂದೇ ವಿಧವಾಗಿ ಇದೆಯೆಂಬ ಭಾವನೆಯಿಂದ ಜಾಗ್ರತೆ ಇರುವ ಮನಸ್ಸಿರುವವನಾಗಿ ಬೋಧಿಸುತ್ತಾನೆ.

**ವಿಶೇಷಾರ್ಥ :– “ವಿದ್ಯಾ ವಿನಯ ಸಂಪನ್ನೇ ಬ್ರಹ್ಮಣೇ ಗವಿ ಹಸ್ತಿನಿ, ಶುನಿಚೈವ ಶ್ವಪಾಕೇಚ ಪಂಡಿತಾ ಸ್ಸಮ ದರ್ಶಿನಃ”**

“ವಿದ್ಯೆಯು ವಿನಯಹೊಂದಿದ ಬ್ರಾಹ್ಮಣರಲ್ಲಿ, ಗೋವುಗಳಲ್ಲಿ, ಆನೆಗಳಲ್ಲಿ, ನಾಯಿಗಳಲ್ಲಿ, ನಾಯಿಗಳನ್ನು ತಿನ್ನುವ ಚಂಡಾಲರಲ್ಲಿ ಪಂಡಿತರು ಸಮ ಭಾವನೆಯಲ್ಲಿರುತ್ತಾರೆ” ಎಂದು ಗೀತಾ ವಾಖ್ಯವಿದ್ದಂತೆ ನೀನು ನಾನುಯೆನ್ನುವ ನಿರ್ಣಯವನ್ನು ಬೆಳೆಸುವುದಿಲ್ಲಯೆಂದು ಮೇಲಿನ ಪದ್ಯದಲ್ಲಿ ಹೇಳಲ್ಪಟ್ಟಿದೆ. ಈ ಮಾತನ್ನು ಕೇಳುತ್ತಲೇ ಎಲ್ಲರನ್ನು ಒಂದೇ ವಿಧವಾಗಿ ಗೌರವಿಸಬೇಕೆಂದು, ಒಬ್ಬರನ್ನು ದ್ವೇಷದಿಂದ ಒಬ್ಬರನ್ನು ಪ್ರೀತಿಯಿಂದ ನೋಡಬಾರದೆಂದು, ಒಳ್ಳೆಯವರನ್ನು ಕೆಟ್ಟವರನ್ನು ಒಂದೇ ವಿಧವಾಗಿ ಮಾತನಾಡಿಸಬೇಕೆಂದು ಅಂದುಕೊಳ್ಳುತ್ತಾರೆ. ಮೇಲಿನ ಪದ್ಯದಲ್ಲಾಗಲಿ, ಗೀತೆಯಲ್ಲಾಗಲಿ ಆ ವಿಧಭಾವನೆ ಯಲ್ಲಿ ಹೇಳಿಲ್ಲವೆಂದು ಗ್ರಹಿಸಬೇಕು. ಹಸುವನ್ನು ಗೌರವಿಸಿದಂತೇ ಹುಲಿಯನ್ನು ಗೌರವಿಸಿದರೆ, ಹುಲಿ ಸುಮ್ಮನಿರದೆ ನಮಗೇ ಹಾನಿ ಮಾಡುತ್ತದೆ. ಸತ್ಪುರುಷನ ಹತ್ತಿರಕ್ಕೆ ಸೇರಿದಂತೇ ದುರ್ಮಾರ್ಗನ ಹತ್ತಿರ ಸೇರಿದರೆ, ಅವನು ತಕ್ಷಣ ತನ್ನ ದುಷ್ಟಬುದ್ಧಿಯನ್ನು ಪ್ರಯೋಗಿಸಿ ನಮಗೇ ಕೇಡು ಮಾಡುತ್ತಾನೆ. ಮಿತ್ರನನ್ನು ಗೌರವಿಸಿದಂತೇ ಶತ್ರುವನ್ನು ಗೌರವಿಸಿದರೆ, ಶತ್ರುವು ನಮಗೆ ಪ್ರಾಣಹಾನಿ ಮಾಡುತ್ತಾನೆ. ಆದ್ದರಿಂದ ಸಮಭಾವವೆನ್ನುವುದು ಆತ್ಮಬಗ್ಗೆ ತೋರಿಸಬೇಕು. ಆತ್ಮ ಸಮಾನವಾಗಿದೆಯೆಂದು ತಿಳಿಯುವವನೇ ಪಂಡಿತನೆಂದು ಗೀತೆ ಭಾವವು. ಆತ್ಮ ಎಲ್ಲಾ ಜೀವರಾಶಿಗಳಲ್ಲಿ ಸಮವೇ, ಆದರೂ ಜೀವಿಗಳ ಗುಣಗಳು ಬೇರೆಬೇರೆಯಾಗಿವೆ. ಆದ್ದರಿಂದ ಜೀವಿಗಳನ್ನು ಸಮಾನವಾಗಿ ನೋಡುವುದು ಅವಿವೇಕವಾಗುತ್ತದೆ. ಗೀತೆಯಲ್ಲಿ ಪರಮಾತ್ಮನೇ ಕೆಟ್ಟ ಗುಣಗಳು ಇರುವವರನ್ನು ರಾಕ್ಷಸರನ್ನಾಗಿ ವರ್ಣಿಸಿ, ಅವರಿಗೆ ಅಧೋಗತಿ ಜನ್ಮಗಳು ಉಂಟಾಗುತ್ತವೆಂದು, ತನ್ನನ್ನು ತಿಳಿದುಕೊಳ್ಳುವ ಜ್ಞಾನ ಅವರಿಗೆ ಸ್ವಲ್ಪವೂ ಲಭಿಸುವುದಿಲ್ಲವೆಂದು ತಿಳಿಸಿದ್ದಾನೆ. ಎಲ್ಲಾ ವಿಧಗಳಾಗಿರುವ ಜೀವಿಗಳನ್ನು ಸಮಾನವಾಗಿ ನೋಡದೆ, ಎಲ್ಲಾ ವಿಧಗಳ ಜೀವರಾಶಿಗಳಲ್ಲಿ ಸಮಾನವೃತ್ತಿ ಹೊಂದಿರುವ ಆತ್ಮವನ್ನು ಸಮಾನವಾಗಿ ನೋಡುವವನೇ ಯೋಗಿ, ಪಂಡಿತನೆಂದು ಪದ್ಯದ ಭಾವನೆ. ಆದ್ದರಿಂದಲೇ ಭಾವನೆಯಲ್ಲಿ ಬ್ರಹ್ಮಭಾವ ಅರಿತು ಎಂದು ಹೇಳಲ್ಪಟ್ಟಿದೆ.

ಮತಿ ಎಂದರೇ ಮನಸ್ಸು. ಸಾವಧಾನ ವೆಂದರೇ ಜಾಗ್ರತೆಯೆಂದು ಅರ್ಥ. ಆತ್ಮ ಸಮಾನತ್ವವೆನ್ನುವ ಮನೋಜ್ಞಾಪಕ ಹೊಂದಿ ಬೋಧಿಸುವವನೆ ಸಾವಧಾನಮತಿ ಸರಿಯಾಗಿ ಬೋಧಿಸುವವನೆಂದು ಹೇಳುವುದಾಗಿದೆ.

**ಆ ॥ ಮಂತ್ರ ಸಿದ್ಧನಾತನ ಮಾರ್ಗವು ಮಾರ್ಗವು**
**ಜಗತ್ತಿನಲ್ಲಿ ಆತನ ಜನ್ಮ ಜನ್ಮ**
**ಆತನ ಹಿಂದೆ ತಿರುಗುವ ಅಮಿತ ದೇವಗಣವು**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಮುಂದೆ ನೀನಿದ್ದು ನಿನ್ನಹಿಂದೆ ಜೀವಿಯನ್ನು ಇಟ್ಟುಕೊಂಡ ಓ ಆತ್ಮಾ ಕೇಳು. ಗುರು ಮಹಿಮೆ ಇರುವವನಾಗಿ ಆತನು ನಡೆದ ಜ್ಞಾನಮಾರ್ಗವೇ ಎಲ್ಲಾ ಮಾರ್ಗಗಳಿಗಿಂತ ದೊಡ್ಡದು. ಪ್ರಪಂಚದಲ್ಲಿ ಗುರು ಹುಟ್ಟಿದ ಜನ್ಮವೇ ಎಲ್ಲರ ಜನ್ಮಗಳಿಗಿಂತ ಉತ್ತಮವಾದುದು. ಆತನ ಹಿಂದೆ ದೇವತೆಗಳು ಗುಂಪು ಗುಂಪುಗಳಾಗಿ ತಿರುಗುತ್ತಿರುತ್ತಾರೆ.

**ವಿಶೇಷಾರ್ಥ :– "ದ್ವೌಭೂತ ಸರ್ಗೌ ಲೋಕೇಸ್ಮಿನ್ ದೈವ ಅಸುರ ಏವಚ"** "ದೇವತೆಗಳು ರಾಕ್ಷಸರು ಎನ್ನುವ ಎರಡು ವಿಧಗಳ ಜೀವಿಗಳು ಭೂಮಿ ಮೇಲೆ ಹುಟ್ಟುತ್ತಿದ್ದಾರೆ." ಎನ್ನುವ ಗೀತಾಚಾರ್ಯನ ವಾಕ್ಯದ ಪ್ರಕಾರ ಭೂಮಿ ಮೇಲೆಯೇ ಸಮಸ್ತ ದೇವತೆಗಳು ಇದ್ದಾರೆ. ಯೋಗಿಗಳೆಲ್ಲರನ್ನು ದೇವತಗಳೆಂದೇ ಹೇಳಬಹುದು. ಅವರಿಗಿರುವ ಯೋಗಶಕ್ತಿಯನ್ನು ಅನುಸರಿಸಿ ಅವರಿಗೆ ದೇವತಾಪದವಿಗಳು ನಿರ್ಣಯಿಸಲ್ಪಟ್ಟಿವೆ. ಗುರುಗಳ ಹಿಂದೆ ತಿರುಗುವವರು ಯೋಗಸಾಧಕರು, ಯೋಗಿಗಳಾಗಿರುತ್ತಾರೆ. ಆದ್ದರಿಂದ ಗುರುವಿನ ಹಿಂದಿರುವವ ರನ್ನು ದೇವಗಣಗಳೆನ್ನುತ ಆತನ ಹಿಂದೆ ತಿರುಗುವ ಅಮಿತ ದೇವಗಣವೆಂದು ಪದ್ಯದಲ್ಲಿ ಹೇಳಿದ್ದಾರೆ.

ಶರೀರದಲ್ಲಿ ಉದ್ಭವಿಸುವ "ಓಂ" ಕಾರ ಮಂತ್ರವನ್ನು ಸಿದ್ಧಿ ಹೊಂದಿದವನು ಗುರು. ಮಂತ್ರ ಸಿದ್ಧಿ ಎಂದರೇ "ಓಂ" ಕಾರ ಯಾವ ಶಕ್ತಿಯಿಂದ

ಉದ್ಭವಿಸುತ್ತಿದೆಯೋ ಆ ಶಕ್ತಿಯನ್ನು ಹೊಂದುವುದು, ಅಥವಾ ಆ ಶಕ್ತಿಯಲ್ಲಿ ಐಕ್ಯವಾಗುವುದೆಂದು ಅರ್ಥ. ಶ್ವಾಸಕ್ಕೆ ಮಹಿಮೆಯನ್ನು ಸೇರಿಸುವ ಆತ್ಮಶಕ್ತಿಯಲ್ಲಿ ಐಕ್ಯವಾದ ಗುರುವನ್ನು ಮಂತ್ರಸಿದ್ಧನೆಂದು ಹೇಳುವುದಾಗಿದೆ. ಆತನು ಅನುಸರಿಸುವ ಮಾರ್ಗ ದೊಡ್ಡದು, ಆದ್ದರಿಂದ ಆತನ ಮಾರ್ಗವೇ ಮಾರ್ಗವೆಂದು ಹೇಳುವುದಾಗಿದೆ. ಆತ್ಮವನ್ನು ತಿಳಿದುಕೊಳ್ಳುವುದೇ ಜೀವಿತ ಸಾಫಲ್ಯವಾಗಿರುವ ಆತನ ಜನ್ಮವೇ ಜನ್ಮವೆಂದು ಹೇಳುವುದಾಗಿದೆ.

**ಆ ॥ ಆತನ ದರ್ಶನದಿಂದ ಅರಣ್ಯದಲ್ಲಿ ಜನರಿಗೆ**
**ಪಾಪವೆಲ್ಲ ನಶಿಸಿ ಪರಮಗತಿಗೆ**
**ದಾರಿ ಹುಡುಕುವುದಕ್ಕು ಆಲೋಚನೆ ಮನಸಲ್ಲಿ**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಪರಮಾತ್ಮನನ್ನು ಪಕ್ಕದಲ್ಲಿಟ್ಟುಕೊಂಡು ಜೀವಿಯೊಂದಿಗೆ ಬೆರೆತಿದ್ದು ಶರೀರದೊಂದಿಗೆ ಕೆಲಸಗಳು ಮಾಡುವ ಓ ಆತ್ಮಾ! ಕೇಳು. ಅರಣ್ಯದಲ್ಲಿರುವ ಜನರಿಗಾದರೂ ಗುರು ದರ್ಶನದಿಂದ ಸ್ವಲ್ಪ ಪಾಪ ನಶಿಸಿಹೋಗಿ, ಅವರ ಮನಸ್ಸಿನಲ್ಲಿ ಮೋಕ್ಷ ಹೊಂದುವುದಕ್ಕೆ ತಕ್ಕ ಜ್ಞಾನಮಾರ್ಗ ಹುಡುಕಬೇಕೆನ್ನುವ ಆಲೋಚನೆ ಹುಟ್ಟುತ್ತದೆ.

**ವಿಶೇಷಾರ್ಥ :–** ಗುರುವೊಂದರ ದೃಷ್ಠಿ ಅಜ್ಞಾನಿಗಳ ಮೇಲೆ ಹರಿದಾಗ, ಗುರು ಆಲೋಚನೆಯಿಂದ ಆತನಲ್ಲಿರುವ ಯೋಗಶಕ್ತಿ ಆತನ ದೃಷ್ಠಿಮೂಲಕ ಪ್ರಸಾರವಾಗಿ ಅಜ್ಞಾನಿಗಳ ಕರ್ಮಚಕ್ರದಲ್ಲಿನ ಜ್ಞಾನಮಾರ್ಗದಲ್ಲಿ ಆತಂಕವಾದ ಕರ್ಮವೆಲ್ಲವನ್ನು ಸುಟ್ಟುಹಾಕುವುದರಿಂದ ಅಜ್ಞಾನಿಗಳಲ್ಲಿ ಕೂಡ ಜ್ಞಾನ ಜಿಜ್ಞಾಸೆ ಉಂಟಾಗುತ್ತದೆ. ಗುರು ದರ್ಶನದಿಂದ ಕರ್ಮಗಳು ಹೋಗುತ್ತವೆನ್ನುವ ಭಾವನೆಯಿಂದಲೇ "ಸಾದುದರ್ಶನಮ್ ಪಾಪನಾಶನಮ್" ಎಂದು ಹಿರಿಯರು ಹೇಳಿದ್ದಾರೆ.

**ಆ ॥ ಸಜ್ಜನರನ್ನು ನೋಡಿ ಸಾಷ್ಟಾಂಗ ಬೀಳಲಾರದೆ**
**ಮುಗ್ಗಿ ತಗ್ಗಿ ಕೋಳಿ ಮುದಿಸಿದಂತೆ**
**ಟರ್ರ ಗರ್ರ ದೊಡ್ಡಜಂಬ ಬಡಾಯಿ ತೋರಿಸಿ**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಎಲ್ಲಾ ಜೀವಿಗಳಲ್ಲಿ ಬೇರೆ ಬೇರೆಯಾಗಿ ಬೆರೆತಿರುವ ಓ ಆತ್ಮಾ! ಕೇಳು. ಗುರುಗಳನ್ನು ನೋಡಿ ನಮಸ್ಕರಿಸದೆ, ಕೋಳಿ ಪಂದ್ಯದಲ್ಲಿನ ಕೋಳಿ ಕತ್ತಿನ ಸುತ್ತ ಪುಕ್ಕವೆಲ್ಲವನ್ನು ಮೇಲಕ್ಕೆಬ್ಬಿಸಿ ತಲೆ ಮೇಲಕ್ಕೆ ಕೆಳಗೆ ಆಡಿಸುತ್ತಾ, ದರ್ಪವನ್ನು ತೋರಿಸುವಂತೆ ಮೂರ್ಖರು ಕೂಡ ಗುರುಗಳ ಬಳಿ ತಮ್ಮ ದೊಡ್ಡ ದರ್ಪವನ್ನು ತೋರಿಸುತ್ತಿರುತ್ತಾರೆ. ಅವನು ಕೂಡ ನನ್ನಂತೆ ಮನುಷ್ಯನೇ ಅಲ್ಲವೆ! ನನಗಿಂತ ಅವನೇನು ದೊಡ್ಡವನೆಂದು ದೊಡ್ಡಬಡಾಯಿ ಹೊಂದಿ ಅಸೂಯೆದೃಷ್ಠಿ ತೋರಿಸುತ್ತಿರುತ್ತಾರೆ.

**ಆ ॥ ಬೇಡ ಬೇಡ ಇನ್ನು ಗರ್ವತನಗಳು**
**ಹೊತ್ತುಹೋಗುವ ಜಗತಿ ಕಳೆದು ಹೋಗುತ್ತಿದೆ**
**ಸ್ವಲ್ಪ ಗಡಿಯು ಇದರ ಗುಟ್ಟೆಲ್ಲ ಕೆಟ್ಟುಹೋಯಿತು**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಶರೀರದ ಹೊರಗೆ ಸ್ವಲ್ಪವೂ ಇಲ್ಲದೆ ಒಳಗೆ ಮಾತ್ರ ಚೈತನ್ಯವಾಗಿರುವ ಓ ಆತ್ಮಾ! ಕೇಳು. ನೀನು ಬಿಡುವ ಪ್ರತಿ ಶ್ವಾಸಕ್ಕು ಕಾಲ ಕಳೆದುಹೋಗುತ್ತಿದೆ. ದಿನ ದಿನ ನಿನ್ನ ಆಯುಸ್ಸು ಕಡಿಮೆಯಾಗುತ್ತಿದೆ. ಶರೀರವನ್ನು ಬಿಟ್ಟುಹೋಗುವ ಕಾಲ ಆಸನ್ನವಾಗುತ್ತಿದೆ. ಇನ್ನು ಪ್ರಪಂಚದ ದೊಡ್ಡಸ್ತಿಕೆಗಳನ್ನು ಬಿಟ್ಟು ಆತ್ಮಜ್ಞಾನದಿಂದ ನಿನ್ನನ್ನು ನೀನು ತಿಳಿದುಕೊ. ಆತ್ಮಜ್ಞಾನವೇ ಅತಿರಹಸ್ಯ. ಸ್ವಲ್ಪ ಉಳಿದಿರುವ ಜೀವಿತ ಶೇಷ ಮುಗಿದುಹೋದರೂ, ತಿಳಿಯಬೇಕಾದ ರಹಸ್ಯ ತಿಳಿಯದೆ ಹೋಗುತ್ತದೆ. ಆದ್ದರಿಂದ ನಿನ್ನ ಜೀವನವೇ ವ್ಯರ್ಥವಾಗುತ್ತದೆ. ಈಗಲಾದರೂ ಗರ್ವವನ್ನು ಬಿಟ್ಟು ವಿನಯ ಹೊಂದಿ ಜ್ಞಾನವೊಂದರ ಗುಟ್ಟು ತಿಳಿಯಿರಿ.

**ಆ ॥ ಪರ್ವತಕ್ಕಿಂತ ಭಾರವಾಗಿ ರುತ್ತದೆ**
**ಶುಭಕರವು ಮೋಕ್ಷ ಶೋಭನವು**
**ಗುರುವಿನ ಭಕ್ತಿಯಿಲ್ಲದ ಶಿಷ್ಯರಿಗೆಲ್ಲ**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಅಖಿಲ ಜೀವಿಗಳಲ್ಲಿ ಬೆರೆತಿರುವ ಓ ಆತ್ಮಾ! ಕೇಳು. ಗುರುಭಕ್ತಿ ಇಲ್ಲದ ಶಿಷ್ಯರಿಗೆ ಗುರು ಬೋಧಿಸುವ ಮೋಕ್ಷಮಾರ್ಗ ಬಹಳ ಕಷ್ಟವಾಗಿರುತ್ತದೆ.

**ವಿಶೇಷಾರ್ಥ :–** ಕೆಲವರು ಗುರುಗಳ ಬಳಿ ಸೇರಿಯು ಅವರಿಗಿರುವ ಕಪಟ ಗುಣಗಳನ್ನು ಬಿಡದೆ, ಮನಸ್ಸಿನಲ್ಲಿ ಭಕ್ತಿ ಇಲ್ಲದಿದ್ದರು ಮೇಲ್ನೋಟಕ್ಕೆ ಭಕ್ತಿ ಇರುವಂತೆ ನಟಿಸುತ್ತಾ, ಗುರು ಬೋಧಿಸುವ ನಿಜಮೋಕ್ಷ ಜ್ಞಾನಮಾರ್ಗವನ್ನು ದೊಡ್ಡ ಭಾರವಾಗಿ ಹೊರುತ್ತಿರುತ್ತಾರೆ, ಎಷ್ಟು ದಿನಗಳು ಭಾರವನ್ನು ಹೊರುತ್ತಾರೆ? ಯಾವುದೊ ಒಂದುದಿನ ಕೆಳಗೆ ಹಾಕಬೇಕಾಗಿರುವುದೇ. ಆದ್ದರಿಂದ ಅಂತಹ ಕುತ್ಸಿತಬುದ್ಧಿ ಇರುವ ಭಕ್ತರು ಗುರುವನ್ನು ಬಿಟ್ಟುಹೋಗುವ ಮಾರ್ಗವನ್ನು ಹುಡುಕುತ್ತಿರುತ್ತಾರೆ.

**ಆ ॥ ಅಲ್ಪ ಸಂಶಯಗಳರ್ಥ ವಿರೋಧಗಳು**
**ತನಗೆ ಇಲ್ಲದ ತತ್ತ್ವ ಧರ್ಮಗಳನ್ನು**
**ಕುರಿತು ಪ್ರಶ್ನೆ ಹಾಕುವ ಕುಮತರ ಧರಣಿಯಲ್ಲಿ**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಮೂರು ಗುಣಗಳಿಗೆ ಪ್ರತ್ಯೇಕವಾಗಿರುವ ಓ ಆತ್ಮಾ! ಕೇಳು. ಗುರುಭಕ್ತಿ ಇಲ್ಲದವರು ಗುರು ಹೇಳುವ ವಿಷಯಗಳನ್ನು ಅರ್ಥ ಮಾಡಿಕೊಳ್ಳದೆ ಅಲ್ಪ ಸಂಶಯಗಳಿಂದ ಕೂಡಿಕೊಂಡು ಅವುಗಳನ್ನು ಕುರಿತು ವಿನಯವಾಗಿ ಕೇಳಿ ತಿಳಿದುಕೊಳ್ಳದೆ ವಿರೋಧಭಾವನೆಯಿಂದ ಆಚರಣೆಯಿಲ್ಲದ ಆತ್ಮ ವಿಷಯಗಳನ್ನು ಪ್ರಶ್ನಿಸುತ್ತಿರುತ್ತಾರೆ.

**ವಿಶೇಷಾರ್ಥ :–** ಭಕ್ತಿಯಿಲ್ಲದ ಜನರು ಗುರು ಸಾನ್ನಿಧ್ಯವನ್ನು ಬಂಧನವಾಗಿ ತಿಳಿದು, ಕೇವಲ ಪ್ರಪಂಚ ವಿಷಯಗಳೊಂದಿಗೆ ಗುರುವನ್ನು ಹೋಲಿಸಿಕೊಳ್ಳುತ್ತಾ ಗುರುವಿಗಿಂತ ನಾವುಯಾವುದರಲ್ಲಿ ಕಡಿಮೆ ಇದ್ದೇವೆಂದುಕೊಂಡು, ತನಗೆ ಸಲ್ಲದ ಧರ್ಮಗಳನ್ನು ಕುರಿತು ಪ್ರಶ್ನಿಸುತ್ತಿರುತ್ತಾರೆ. ಗುರು ಹೇಳಿದ ವಿಷಯಗಳು ಸಾಧನೆ ಮೂಲಕ ಅನುಭವಕ್ಕೆ ಬರುತ್ತವೆ. ಆದರೆ ಸಾಧನೆ ಮಾಡದೆಯೆ, ಅನುಭವಕ್ಕೆ ಬಾರದೆಯೇ, ಆ ವಿಷಯಗಳನ್ನು ಕುರಿತು ಪ್ರಶ್ನಿಸುತ್ತಿರುತ್ತಾರೆ.

ಉದಾಹರಣೆಗೆ ಶ್ವಾಸ ಬ್ರಹ್ಮನಾಡಿ ಏಳು ನಾಡಿ ಕೇಂದ್ರಗಳ ಶಕ್ತಿ ಮೂಲಕ ಆಡುತ್ತಿದೆಯೆಂದು, ಒಂದೊಂದು ನಾಡಿಕೇಂದ್ರದಿಂದ ನೂರಾರು ಶ್ವಾಸಗಳು ಆಡುತ್ತಿರುತ್ತವೆಂದು, ಶ್ವಾಸ ಆಡುವುದಕ್ಕೆ ಬ್ರಹ್ಮನಾಡಿಯಲ್ಲಿನ ಶಕ್ತಿ ಏಳು ಭಾಗಗಳಾಗಿದೆಯೆಂದು, ಒಂದೊಂದು ಭಾಗದಲ್ಲಿರುವ ಶಕ್ತಿಯನ್ನನು ಸರಿಸಿ ಶ್ವಾಸಗಳು ಆಡುತ್ತಿರುತ್ತವೆಂದು ಗುರು ಹೇಳಿದ ಆ ವಿಷಯಗಳನ್ನು ಕಪಟ ಭಕ್ತನು ಆಚರಿಸದೆಯೇ, ಅನುಭವವನ್ನು ಹೊಂದದೆಯೇ ಗುರು ಹೇಳಿದ ಮಾತಿನ ಮೇಲೆ ನಂಬಿಕೆ ಇಲ್ಲದವನಾಗಿ, ಅನುಮಾನ ಇರುವವನಾಗಿ ವಿರೋಧ ಭಾವ ಮನಸ್ಸಿನಲ್ಲಿಟ್ಟುಕೊಂಡು ಬ್ರಹ್ಮನಾಡಿಯಲ್ಲಿನ ಶಕ್ತಿ ಮೂಲಕವೇ ಶ್ವಾಸ ಆಡುತ್ತದೆಂದು ಏನು ನಂಬಿಕೆಯೆಂದು ಪ್ರಶ್ನಿಸುತ್ತಾನೆ. ಆ ಪ್ರಶ್ನೆಗೆ ಗುರು ಉತ್ತರ ಹೇಳಿದ್ದಾನೆಂದುಕೊಳ್ಳಿ, ನಂತರ ಏಳು ಕೇಂದ್ರಗಳಲ್ಲಿ ಒಂದೊಂದರಲ್ಲಿ ಕೆಲವು ನೂರಾರು ಶ್ವಾಸಗಳೇ ಎಂದಿದ್ದೀರಲ್ಲ ಅಷ್ಟೇ ಏಕೆ ಆಡಬೇಕೆಂದು ಪ್ರಶ್ನಿಸುತ್ತಾರೆ. ಅದಕ್ಕೆ ಗುರುವು ಸಮಾಧಾನ ಹೇಳಿದರೂ ಪುನಃ ಏಳೇ ಕೇಂದ್ರಗಳಿರುವಂತೆ ನಿನಗೆ ಯಾವ ವಿಧವಾಗಿ ತಿಳಿಯುತ್ತದೆಂದು, ಒಂದು ಕೇಂದ್ರದಲ್ಲಿ ಇಷ್ಟೇ ಶ್ವಾಸಗಳಾಡುವುದಕ್ಕೆ ಆಧಾರವೇನೆಂದು ಪ್ರಶ್ನಿಸುತ್ತಾರೆ. ಈ ವಿಧವಾಗಿ ಅನುಭವಿಸಿದರೆ ಹೊರತು ತಿಳಿಯದ ವಿಷಯಗಳನ್ನು ಆಚರಣೆ ಯಿಲ್ಲದೆಯೇ ಕೇಳುವವನನ್ನು ನೋಡಿ ಗುರು ಏನು ಹೇಳದೆಹೋದರೆ ಕೆಳಗಿನ ವಿಧವಾಗಿ ಅಂದುಕೊಳ್ಳುತ್ತಾರೆ.

**ಆ ॥ ಅಂತಹ ಪ್ರಶ್ನೆಗಳಿಗೆ ಆ ಈಶ್ವರನಾದರು**
**ಹೇಳದೆ ಸುಮ್ಮನಿದ್ದರೆ ಚಪಲರೆಲ್ಲ**
**ಹೇಳುವವನನ್ನು ನೋಡಿ ಚಪ್ಪಾಳೆ ಹೊಡೆಯುತ್ತಾರೆ**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಜೀವಿಗಳ ಪಕ್ಕದಲ್ಲಿಯೇ ಇರುವ ಆತ್ಮಾ! ಕೇಳು. ಹೇಳಿದ ಮಾತಿನ ಮೇಲೆ ನಂಬಿಕೆ ಇಲ್ಲದವರಿಗೆ, ಭಕ್ತಿ ಭಾವ ಇಲ್ಲದವರಿಗೆ, ಸೇವೆಗಳು ಮಾಡದವರಿಗೆ ಆತ್ಮಬೋಧನೆ ಹೇಳಬಾರದೆನ್ನುವ ಭಾವನೆಯಿಂದ, ಕೆಲಸಕ್ಕೆಬಾರದ ಪ್ರಶ್ನೆಗಳು ಕೇಳುವವರಿಗೆ ಆ ಈಶ್ವರನೇ ಸಮಾಧಾನ ಹೇಳದಿದ್ದರೂ, ಚಪಲ ಬುದ್ಧಿ ಇರುವ ಭಕ್ತರು ಹೀನವಾಗಿ ನೋಡಿ ಅವಹೇಳನವಾಗಿ ಮಾತನಾಡುತ್ತಾರೆ. ದೊಡ್ಡ ಗುರುಗಳನ್ನು ಕೂಡ ತಮ್ಮ ನೀಚತ್ವದಿಂದ ಹೀನವಾಗಿ ಪ್ರಚಾರ ಮಾಡುತ್ತಾರೆ.

(ಮೇಲಿನ ಮೂರು ಪದ್ಯಗಳು ಕಪಟ ಶಿಷ್ಯರನ್ನು ಕುರಿತು ಹೇಳಿರುವವು. ಇನ್ನು ಕಪಟ ಗುರುಗಳನ್ನು ಕುರಿತು ಹೇಳುವ ಪದ್ಯ ಕೆಳಗೆ ಇದೆ.)

**ಆ ॥ ದಾಸರ ಧಿಕವಾದರು ದಂಡಗಳೆರಡಾದವು**
**ಕಾಸುಗಳಿಗುಪದೇಶ ಕಾಲವಾಯಿತು**
**ಏನು ಹೇಳುವುದಾಗಿದೆ ಈಶ್ವರ ತತ್ತ್ವಂಬು**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಕಾದ ಕಬ್ಬಿಣದಲ್ಲಿ ಅಗ್ನಿ ಇದ್ದಂತೆ, ಸಮಸ್ತ ಜೀವಿಗಳ ಶರೀರಗಳಲ್ಲಿ ಅಡಗಿರುವ ಓ ಆತ್ಮಾ! ಕೇಳು. ಕೆಲವರು ಕಪಟ ಗುರುಗಳು ಹೊರಟು ಆತ್ಮ ಧರ್ಮ ತಮಗೆ ತಿಳಿಯದಿದ್ದರೂ, ಅವುಗಳನ್ನು ಕುರಿತು ಶಿಷ್ಯರಿಗೆ ಯಾವ ವಿಧವಾಗಿ ತಿಳಿಸದೆಯೇ, ಉಪದೇಶ ಮುಖ್ಯವೆಂದು ಹೇಳುತ್ತಾ, ಉಪದೇಶ ಕೊಡುವುದಕ್ಕೇ ಗುರು ಇದ್ದಾನೆನ್ನುತ್ತಾ, ಆ ಉಪದೇಶಕ್ಕಾಗಿಯೇ ಗುರುಹತ್ತಿರಕ್ಕೆ ಪ್ರಜೆಗಳು ಬರಬೇಕೆಂದು ಬೋಧಿಸುತ್ತಾ, ವ್ಯಾಪಾರ ಮಾಡಿದಂತೆ ಹಣಕ್ಕೆ ಉಪದೇಶ ಕೊಡುವುದು, ಶಿಷ್ಯರ ಸಂಖ್ಯೆ ಬೆಳೆಸಿಕೊಳ್ಳುವುದೇ ತಮ್ಮ ಧ್ಯೇಯ

ಎಂದುಕೊಳ್ಳುವವರಿದ್ದಾರೆ. ಅಂತಹ ಕಪಟ ಗುರು ಕೈಯಲ್ಲಿನ ಬ್ರಹ್ಮಜ್ಞಾನ ಹೀನಸ್ಥಿತಿಗೆ ಬಂದು ಬೆಲೆ ಇಲ್ಲದ್ದಾಗಿ, ಶಾಸ್ತ್ರಬದ್ಧತೆ ಇಲ್ಲದ್ದಾಗಿ ಹೋಗಿದೆ.

**ಆ ॥ ರತ್ನಕಣ್ಣುಗಳಲ್ಲಿ ರಾಜಹಂಸವಿದ್ದಂತೆ**
**ತತ್ತ್ವಜ್ಞ ಆಲೋಚನೆ ಇಲ್ಲದೆ**
**ನಿತ್ಯ ವೊಂದು ರೀತಿ ನಿಜ ಸಮಾಧಿಯಲ್ಲಿದ್ದು**
**ಅಖಿಲ ಜೀವ ಸಂಗ ಆತ್ಮಲಿಂಗ.**

**ಭಾವಾರ್ಥ :–** ಸೂರ್ಯನೊಬ್ಬನು ಈ ಲೋಕವನ್ನು ಪ್ರಕಾಶಿಸುವಂತೆ ಶರೀರವೆಲ್ಲವನ್ನು ನೀನೊಬ್ಬನೇ ಪ್ರಕಾಶಿಸುವಂತೆ ಮಾಡುವ ಓ ಆತ್ಮಾ! ಕೇಳು. ರತ್ನಗಳು ಅಧಿಕವಾಗಿ ಲಭಿಸುವ ಗಣಿಗಳಲ್ಲಿ ರಾಜಹಂಸವಿದ್ದು ರತ್ನವನ್ನೇ ತಿನ್ನುತ್ತಾ ಬೇರೆ ಯಾವ ಪದಾರ್ಥಗಳನ್ನು ತಿನ್ನದಿರುವಂತೆ, ಆತ್ಮವನ್ನು (ತತ್ತ್ವವನ್ನು) ತಿಳಿದುಕೊಂಡವನು ಪಕ್ಕದ ವಿಷಯಗಳ ಆಲೋಚನೆಗಳು ಇಲ್ಲದೇ ಎಂದಿಗೂ ಶರೀರದಲ್ಲಿ ಯೋಗವನ್ನೇ ಅನುಭವಿಸುತ್ತ, ಕರ್ಮ ಅಂಟದ ವಿಧಾನದಲ್ಲಿ ಬುದ್ಧಿಯನ್ನು ಅಹರ್ನಿಶೆಗಳು ಸಮಾನತ್ವ ಹೊಂದಿಸಿರುತ್ತಾನೆ.

**ಆ ॥ ಮಾತು ಗಳಧಿಕವಾಡದ ಮೌನಿಗೆ ಹುಣ್ಣು**
**ಕೋಟೆ ಕೆಟ್ಟ ರಾಜ ಕೋತಿ ಹುಣ್ಣು**
**ಬಡವನ ಬದುಕು ಅನೇಕ ವಿಧಗಳ ಹುಣ್ಣು**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ನಾಶರಹಿತನಾಗಿ ನಾಶವಾಗುವ ಜೀವಾತ್ಮದೊಂದಿಗೆ ಕೂಡಿರುವ ಓ ಆತ್ಮಾ! ಕೇಳು. ಬಡವನ ಬದುಕು ಅನೇಕ ವಿಧಗಳ ನೋವುಗಳಿಂದ ಕೂಡಿರುವಂತೆ, ಕೋತಿಹುಣ್ಣು ವಾಸಿಯಾಗದ ರೀತಿಯಾಗಿ ರಾಜ್ಯ ಹೋದ ರಾಜ ಬಾಧೆ ಬಿದ್ದಂತೆ, ಮೌನ ಹೊಂದಿದ ಯೋಗಿಗೆ ಮನಸ್ಸು ಚಲಿಸುವುದಕ್ಕೆ ಆರಂಭಿಸಿದರೆ ಆತನು ಹೆಚ್ಚಾಗಿ ಬಾಧೆಪಡುತ್ತಾನೆ.

**ವಿಶೇಷಾರ್ಥ :–** ಮನಸ್ಸೊಂದರ ಸಂಕಲ್ಪಗಳಧಿಕವಾಗುವುದನ್ನು ಮಾತಧಿಕ

ವಾಯಿತೆಂದು ಹೇಳಲ್ಪಟ್ಟಿದೆ. ಮನಸ್ಸು ನಿಂತುಹೋಗುವುದನ್ನೇ ಮೌನವೆಂದು ತಿಳಿಯಬೇಕು. ಮನಸ್ಸನ್ನು ನಿಲ್ಲಿಸುವವನೆ ಮೌನಿ (ಯೋಗಿ). ಹೋದ ರಾಜ್ಯವನ್ನು ಕುರಿತು ರಾಜನು ಬಾಧೆಪಟ್ಟಂತೆ, ಬಡವನು ತಾನು ಹೊಂದುತ್ತಿರುವ ಕಷ್ಟಗಳನ್ನು ಸಹಿಸಲಾರದೆ ತನಗೆ ಧನವು ಇಲ್ಲದಾಯಿತೆಂದು ಬಾಧೆಪಟ್ಟಂತೆ, ಯೋಗಿಯಾದವನು ಯೋಗಭ್ರಷ್ಟನಾದರೆ, ಕಳೆದುಕೊಂಡ ತನ್ನ ಯೋಗವನ್ನು ಕುರಿತು ಬಹಳ ಬಾಧೆಪಡುತ್ತಾನೆ.

**ಆ॥ ಗುರುಗಳಲ್ಲಿ ಒಳ್ಳೆಯ ಗುಣವಂತರಲ್ಲಿ**
**ಕೋರದೃಷ್ಟಿ ಮನಸ್ಸು ಕೋಪರೂಪು**
**ಚಪಲನು ಹೀಗಿರುತ್ತಾನೆ ಚಿರವಾನರ ರೀತಿ**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಮಣಿಗಳ ಮಧ್ಯದಲ್ಲಿ ಧಾರವಿರುವಂತೆ, ಜೀವಿಗಳ ಶರೀರ ಮಧ್ಯದಲ್ಲಿ ಶರೀರವೆಲ್ಲದಕ್ಕು ಆಧಾರವಾಗಿರುವ ಓ ಆತ್ಮಾ! ಕೇಳು. ಕೋತಿಮರಿ ಇತರರನ್ನು ಸುಮ್ಮನೆ ಅಣಕಿಸುವಂತೆ, ಚಪಲತತ್ತ್ವವಿರುವ ಮೂಢರು ಗುರುಗಳ ಬಗ್ಗೆ ಮತ್ತು ಒಳ್ಳೆಯ ಗುಣವಂತರ ಬಗ್ಗೆ ಕ್ರೋಧ ಹೊಂದಿರುತ್ತಾರೆ. ಮತ್ತು ಅವರ ಬಗ್ಗೆ ನೀಚವಾಗಿ ಪ್ರವರ್ತಿಸುತ್ತಿರುತ್ತಾರೆ. ಅವರು ಚಪಲ ಚಿತ್ತರಾಗಿದ್ದು ತಮ್ಮಂತೆಯೇ ಎಲ್ಲರನ್ನು ತಿಳಿಯುತ್ತಿರುತ್ತಾರೆ.

**ಆ ॥ ಒಳ್ಳೆಯವರು ಇಲ್ಲ ಮಹಿನೀಸ್ಥಳದಲ್ಲಿ**
**ನಮಗೆ ಬೇಡ ದುಷ್ಟಮತಿಗಳ ಸಂಗ**
**ಒಳ್ಳೆಯದಕ್ಕಾಗಿ ನೀನು ಮೌನವು ಹೊಂದು**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಎಡಬಿಡದೆ ಎಲ್ಲಕಾಲದಲ್ಲಿ ಜೀವಿಯೊಂದಿಗೆ ಬೆರೆತಿರುವ ಓ ಆತ್ಮಾ! ಕೇಳು. ದೈವತ್ವವಿರುವವರು ಭೂಮಿ ಮೇಲೆ ಕಡಿಮೆಯಿದ್ದಾರೆ ರಾಕ್ಷಸತ್ವ ಇರುವವರು ಹೆಚ್ಚಾಗಿದ್ದಾರೆ. ರಾಕ್ಷಸರ ಸಂಗಮಾಡದೆ ದೈವತ್ವಕ್ಕಾಗಿ ನೀನು ಯೋಗಮಾಡು.

**ವಿಶೇಷಾರ್ಥ :–** ಯೋಗ ಮಾಡಿದರೆ ಯೋಗಶಕ್ತಿ ಲಭಿಸುತ್ತದೆ. ಆ ಶಕ್ತಿಯನ್ನನುಸರಿಸಿ ದೈವತ್ವ ನಿರ್ಣಯಿಸಲ್ಪಡುತ್ತದೆ. ವಿಷ್ಣು, ಈಶ್ವರ, ಬ್ರಹ್ಮರಿಂದ ಹಿಡಿದು ಉಳಿದ ದೇವತೆಗಳ ಪದವಿಗಳೆಲ್ಲವು ಆತ್ಮಶಕ್ತಿಯನ್ನು ಅನುಸರಿಸಿ ಇರುತ್ತವೆ. ಆ ಶಕ್ತಿಯೇ ದೈವತ್ವಕ್ಕೆ ಕಾರಣವೆನ್ನುವುದಕ್ಕೆ ದೇವತಾ ಚಿತ್ರಪಟದಲ್ಲಿ ಅವರ ತಲೆಭಾಗದಲ್ಲಿ ಪ್ರಕಾಶಮಾನವಾಗಿ ಆತ್ಮಶಕ್ತಿಯನ್ನು ಚಿತ್ರಿಸಿದ್ದಾರೆ. ದೈವತ್ವವನ್ನು ಹೊಂದುವುದಕ್ಕೆ ಯೋಗ ಮಾಡಬೇಕೆನ್ನುವ ಸಂದೇಶವನ್ನು ತಿಳಿಸುತ್ತಾ ಮೌನವಾಗಿರೆಂದು ಪದ್ಯದಲ್ಲಿ ಹೇಳಿದ್ದಾರೆ.

**ಆ ||   ಮೌನ ಎನ್ನುತ್ತಾ ಭ್ರಮಿಸಿ ಮಾತುಗಳು ಬಿಟ್ಟರು**
**ಮೌನವದು ಅಲ್ಲ ಮಾಯೆ  ಬಿಡುವುದಿಲ್ಲ**
**ಮನಸ್ಸು ಕಲ್ಮಶವನ್ನು ಬಿಟ್ಟ ಮೌನದಲ್ಲಿ**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಚರ ಪ್ರಕೃತಿಯಾದ ಶರೀರವೆಲ್ಲ ವ್ಯಾಪಿಸಿರುವ ಓ ಆತ್ಮಾ! ಕೇಳು. ಮೌನವಾಗಿ ಇರಬೇಕೆಂದು ಕೆಲವರು ಮಾತುಗಳನ್ನು ಬಿಟ್ಟು ನಿಶ್ಶಬ್ದವಾಗಿದ್ದಾರೆ. ಮೌನವೆಂದರೇ ಮಾತುಗಳನ್ನು ಬಿಡುವುದಲ್ಲ. ಮಾತುಗಳು ಬಿಟ್ಟಮಾತ್ರಕ್ಕೆ ಮಾಯೆ ಬಿಡುವುದಿಲ್ಲ. ಮನಸ್ಸು ಗುಣ ಸಂಬಂಧ ವಿಷಯಗಳನ್ನು ಜ್ಞಾಪಕಕ್ಕೆ ತರುತ್ತಲೇ ಇರುತ್ತದೆ. ಗುಣಗಳು ಕಾಳಗ ಮಾಡುತ್ತಲೇ ಇರುತ್ತವೆ. ಆದ್ದರಿಂದ ಮೌನವೆಂದರೇ ಮಾತುಗಳು ಬಿಡುವುದಲ್ಲವೆಂದು, ಮೌನ ಎಂದರೇ ಮನಸ್ಸು ಯಾವ ವಿಷಯಗಳನ್ನು ಜ್ಞಾಪಕಕ್ಕೆ ತರದಂತೆ ಇರುವುದೆಂದು ತಿಳಿಯಬೇಕು.

**ಆ||   ಕಾಯಸಿದ್ಧಿಕೋರಿ ಗಗನಗಳನ್ನು ಸೇರಿ**
**ವಾಯು ಭಕ್ಷನ ಮಾಡಿದರೇನು**
**ಮಾಯೆ ತನುವು ತುದಿಗೆ ಮಣ್ಣುಪಾಲಾಗಿಹೋಗುತ್ತದೆ**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಪಂಚಭೂತ ನಿರ್ಮಾಣವಾದ ಶರೀರಕ್ಕೆ ಆಧಾರವಾಗಿರುವ ಓ ಆತ್ಮಾ! ಕೇಳು. ಸ್ಥಿರಕಾಲ ಬದುಕಬೇಕೆನ್ನುವ ಉದ್ದೇಶದಿಂದ ಗಾಳಿಯನ್ನು ಶ್ವಾಸದ ಮೂಲಕ ಕುಂಬಿಸುತ್ತಾ, ಶರೀರವನ್ನು ಗಾಳಿಯಲ್ಲಿ ತೇಲಿಸುತ್ತಾ, ಇದೇ ದೊಡ್ಡ ಯೋಗವೆನ್ನುವವರು ಇದ್ದಾರೆ. ಎಷ್ಟುಕಾಲ ಬದುಕಿದರೂ ಗುಣಗಳಿಂದ ಕೂಡಿಕೊಂಡ ಶರೀರ ಕೊನೆಗೆ ಮಣ್ಣುಪಾಲಾಗಿ ಹೋಗುತ್ತದೆ.

**ವಿಶೇಷಾರ್ಥ :–** ಶ್ವಾಸವನ್ನು ಕುಂಭಿಸುವುದರಿಂದ ಆಯುಸ್ಸನ್ನು ಹೆಚ್ಚಿಸಬಹುದು. ಆದ್ದರಿಂದ ಕೆಲವರು ಶರೀರವನ್ನು ಬೇಗನೆ ಬಿಡದೇ ಬಹಳಕಾಲ ಬದುಕುವುದಕ್ಕೆ ವಾಯುಭಕ್ಷನೆ ಮಾಡುತ್ತಿದ್ದಾರೆ. ವಾಯುವನ್ನು ಕುಂಭಿಸಿ ಶರೀರವನ್ನು ಭೂಮಿಯಿಂದ 4 ಅಥವಾ 5 ಅಡಿಗಳ ಎತ್ತರಕ್ಕೆ ಆಕಾಶದಲ್ಲಿ ತೇಲುವಂತೆ ಆತ್ಮನಲ್ಲಿ ಆಸಕ್ತಿ ಇಲ್ಲದವರು ಪ್ರಾಣಾಯಾಮ ಮಾಡಿ ಇದು ಒಂದು ಯೋಗವೆನ್ನುತ್ತಿದ್ದಾರೆ.  ವಿದ್ಯೆಕಲಿತು ಗಾಳಿಯನ್ನು ಕುಂಬಿಸಿದರೂ ಮೋಕ್ಷ ಬರುವುದಿಲ್ಲ, ಅದು ಯೋಗವಲ್ಲ, ಹಾಗೆ ಮಾಡುವುದರಿಂದ ಎಷ್ಟುದಿನ ಬದುಕಿದರೂ ಕೊನೆಗೆ "ಜಾತಸ್ಯ ಹಿಧ್ರುವೊ ಮೃತ್ಯು" ಎನ್ನುವ ವಾಕ್ಯದ ಪ್ರಕಾರ ಶರೀರ ಬಿಡುವುದೇ ಆಗುತ್ತದೆ.

**ಆ ॥ ಯೋಗಗಳಲ್ಲಿ ರಾಜಯೋಗ ಮತ್ತಷ್ಟು ಹೆಚ್ಚು**
**ಮಂತ್ರಗಳಲ್ಲಿ ಪ್ರಣವ ಮಂತ್ರವೆಚ್ಚು**
**ಪಂಚಮುದ್ರೆಗಳಲ್ಲಿ ಪರಮ ಶಾಂಭವಿ ಹೆಚ್ಚು**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಪರಮಾತ್ಮವೂ ಅಲ್ಲದೆ, ಜೀವಾತ್ಮವೂ ಅಲ್ಲದೆ, ಕೇವಲ ಆತ್ಮನಾಗಿ ಜೀವಾತ್ಮದೊಂದಿಗೆ ಶರೀರದಲ್ಲಿರುವ ಓ ಆತ್ಮಾ! ಕೇಳು. ದೇವರನ್ನು ತಿಳಿಯುವುದಕ್ಕೆ ಮೋಕ್ಷವನ್ನು ಪಡೆಯುವುದಕ್ಕೆ ಅನೇಕಮಾರ್ಗಗಳಿವೆಯೆಂದು ಎಷ್ಟೋಜನ ಹೇಳುತ್ತಿರುವುದು ಕೇಳಿಯೇ ಇದ್ದೇವೆ. ಈ ಮಾತು ಸತ್ಯವಾ ಎಂದು ನೋಡಿದರೆ ಎಲ್ಲಾ ವಿಧಗಳಲ್ಲಿ ಅಸತ್ಯವಾಗಿಯೇ ಕಾಣಿಸುತ್ತದೆ. ಏಕೆಂದರೇ ಎಲ್ಲದಕ್ಕಿಂತ ಮುಖ್ಯ ಬ್ರಹ್ಮವಿದ್ಯೆಯಲ್ಲಿ ಪ್ರಾಮಾಣಿಕ ಗ್ರಂಥ, ಸ್ವತಃ ದೇವರೇ ತಿಳಿಸಿರುವುದು

ಭಗವದ್ಗೀತೆ ಗ್ರಂಥ. ಅದರಲ್ಲಿ ದೇವರನ್ನು ತಿಳಿಯುವುದಕ್ಕೆ ದೇವರೆ ತಿಳಿಸಿದ ಮಾರ್ಗಗಳು ಮೂರೇ ಮೂರು ಇವೆ. ದೇವರು ಸುಸ್ಪಷ್ಟವಾಗಿ ತಿಳಿಸಿರುವವು ಮೂರು ಮಾರ್ಗಗಳು ಮಾತ್ರ. ಆತನು ತಿಳಿಸಿದ ಮೂರು ಮಾರ್ಗಗಳು ವಿನಹ ಯಾವ ಮತದಲ್ಲಿಯು ಮತ್ತೊಂದು ಮಾರ್ಗವಿಲ್ಲ. ಇಸ್ಲಾಂ, ಕ್ರೈಸ್ತವಮತಗಳಲ್ಲಿ ಕೂಡ ಈ ಮಾರ್ಗಗಳಿಗೆ ವಿನಹ ದೇವರು ಹೇಳಲಿಲ್ಲ. ಗೀತೆಯಲ್ಲಿ ದೇವರು ಹೇಳಿದ ಮೂರು ಮಾರ್ಗಗಳಲ್ಲಿ ಒಂದನೆಯದಾದ ಬ್ರಹ್ಮಯೋಗ, ಎರಡನೆಯದಾದ ರಾಜಯೋಗ ಇಂದೂಮತದಲ್ಲಿ ಹೆಚ್ಚಾಗಿ ಪ್ರಚಾರ ಇರುವಾಗ ಮೂರನೆಯದಾದ ಭಕ್ತಿಯೋಗ ಕ್ರೈಸ್ಥವ, ಇಸ್ಲಾಂಮತಗಳಲ್ಲಿ ಹೆಚ್ಚಾಗಿ ಇದೆ. ಭಗವದ್ಗೀತೆಯನ್ನು ಓದಿದವರಿಗೇ ದೇವರನ್ನು ಸೇರುವುದಕ್ಕೆ ಮೂರು ಮಾರ್ಗಗಳಿವೆಯೆಂದು ತಿಳಿಯದಸ್ಥಿತಿ ಪ್ರಸ್ತುತ ಕಾಲದಲ್ಲಿ ಇದೆ.

ದೇವರನ್ನು ತಿಳಿಯುವುದರಲ್ಲಿ ಅಥವಾ ದೇವರ ಹತ್ತಿರಕ್ಕೆ ಸೇರುವುದರಲ್ಲಿ ರಾಜ ಯೋಗ ಮನುಷ್ಯನಿಗೆ ಬಹಳ ಅವಶ್ಯವಾದುದು. ಮನುಷ್ಯ ನಿತ್ಯ ಜೀವನದಲ್ಲಿ ಕರ್ಮಗಳು ಆಚರಿಸುತ್ತಾ, ಅನುಭವಿಸುತ್ತಾ ಹೊಸಕರ್ಮವನ್ನು ಸಂಪಾದಿಸದಂತೆ ಮಾಡುವುದು ರಾಜಯೋಗ (ಕರ್ಮಯೋಗ). ಆದ್ದರಿಂದ ಮೇಲಿನ ಪದ್ಯದಲ್ಲಿ ಯೋಗಗಳಲ್ಲಿ ರಾಜಯೋಗ ಹೆಚ್ಚು ಎಂದಿದ್ದಾರೆ. ಅದೇ ವಿಧವಾಗಿ ಶಬ್ದದಿಂದ ಕೂಡಿಕೊಂಡ ಮಂತ್ರಗಳು ಕೂಡ ಇವೆ. ಮಂತ್ರಗಳು ದೈವಸಂಬಂಧವಾದವು ಮತ್ತು ಪ್ರಪಂಚ ಸಂಬಂಧವಾದವು ಎರಡು ವಿಧಗಳು ಇವೆ. ಅವುಗಳಲ್ಲಿ ದೈವ ಸಂಬಂಧವಾದ ಮಂತ್ರಗಳಲ್ಲಿ ಎಲ್ಲದಕ್ಕಿಂತ ಮುಖ್ಯವಾದುದು "ಓಂ" ಕಾರ ಶಬ್ದ ಇರುವುದು. ಪ್ರತಿ ಮನುಷ್ಯನೊಂದರ ಶ್ವಾಸದಲ್ಲಿ ಅಡಗಿರುವ ಓಂ ಶಬ್ದವನ್ನು ಪ್ರಣವವೆಂದು ಕರೆಯುತ್ತಿದ್ದಾರೆ. ಈ ಶಬ್ದ ಶರೀರದಲ್ಲಿನ ಆತ್ಮದಿಂದ ಹೇಳಲ್ಪಡುತ್ತಿದೆ. ಆದ್ದರಿಂದ ಪರಮಾತ್ಮನನ್ನು ತಿಳಿಯುವುದಕ್ಕೆ ಮುಖ್ಯವಾದುದು ಓಂ ಕಾರವೆಂದು ಹೇಳಿದ್ದಾರೆ. ಇದು ಮನುಷ್ಯನಾದ ಪ್ರತಿಯೊಬ್ಬರಲ್ಲಿರುವುದು, ಆದ್ದರಿಂದ ಕುಲ ಮತ ಪ್ರಸ್ತಾಪ ಇಲ್ಲದೇ ಇದನ್ನು ಅನುಸರಿಸಬಹುದು. ಆದ್ದರಿಂದಲೇ ಮೇಲಿನ ಪದ್ಯದಲ್ಲಿ ಮಂತ್ರಗಳಲ್ಲಿ ಪ್ರಣವಮಂತ್ರ ಹೆಚ್ಚು ಎಂದಿದ್ದಾರೆ.

ಇಂದೂಮತದಲ್ಲಿ ಪಂಚಮುದ್ರೆಗಳೆಂದು ಕೆಲವರು ಹೆಸರುಗಳು ಇಟ್ಟುಕೊಂಡಿರುವವು ಇವೆ. ಇವು ಯಾವುವು ಭಗವದ್ಗೀತೆಯಲ್ಲಿ ದೈವ ಪ್ರೋಕ್ತಗಳು ಅಲ್ಲ. ಆದ್ದರಿಂದ ಇವುಗಳನ್ನು ಕುರಿತು ಪೂರ್ತಿ ನಮಗೆ ತಿಳಿದಿಲ್ಲ. ಕೆಲವರು ಪ್ರಜೆಗಳ ಭಾವದ ಪ್ರಕಾರ ಖೇಚರಿ, ಭೂಚರಿ, ಮಧ್ಯಲಕ್ಷ್ಮಿ, ಷಣ್ಮುಖಿ, ಶಾಂಭವಿ ಎನ್ನುವ ಐದು ಮುದ್ರೆಗಳಿವೆ. ತಲೆ ಸರಿಯಾಗಿ ಇಟ್ಟುಕೊಂಡು ಕಣ್ಣಿನಲ್ಲಿನ ಕಪ್ಪುಗುಡ್ಡೆಯನ್ನು ಸಾಧ್ಯವಿರುವವರೆಗು ಮೇಲಕ್ಕೆ ತಿರುಗಿಸಿನೋಡುತ್ತಾ ಇದ್ದುಹೋಗುವುದನ್ನು ಖೇಚರಿಮುದ್ರೆ ಎಂದು ಕರೆಯುತ್ತಾರೆ. ಎರಡನೆಯದು ಕಪ್ಪುಗುಡ್ಡೆಯನ್ನು ಪೂರ್ತಿ ಕೆಳಕ್ಕೆ ತಿರುಗಿಸಿ ನೋಡುತ್ತಾ ಕದಲದಂತೆ ಇರುವುದನ್ನು ಭೂಚರಿ ಮುದ್ರೆ ಎನ್ನುತ್ತಾರೆ. ದೃಷ್ಠಿಯನ್ನು ಮೇಲಕ್ಕೆ ಕೆಳಕ್ಕೆ ಅಲ್ಲದೆ ಸಮಾಂತರವಾಗಿ ಮಧ್ಯದಲ್ಲಿಟ್ಟು ನೋಡುತ್ತಿರುವುದನ್ನು ಮಧ್ಯಲಕ್ಷ್ಮಿ ಮುದ್ರೆ ಎನ್ನುತ್ತಾರೆ. ಈ ಮೂರು ವಿಧಗಳಲ್ಲದೆ 1) ಮೇಲಕ್ಕೆ 2) ಕೆಳಕ್ಕೆ 3) ಮಧ್ಯದೊಳಗೆ 4) ಬಲಗಡೆಗೆ 5) ಎಡಗಡೆಗೆ 6) ಪೂರ್ತಿ ಸುತ್ತಲೂ ಕಣ್ಣನ್ನು ತಿರುಗಿಸುತ್ತಿರುವು ದೊಂದರ ಆರು ವಿಧಗಳನ್ನು ಷಣ್ಮುಖಿ ಎನ್ನುತ್ತಾರೆ. ಇವೆಲ್ಲಾ ಅಲ್ಲದೆ ಮೂಗಿನ ಕೊನೆ ಭಾಗವನ್ನು ನೋಡುವುದನ್ನು ಶಾಂಭವಿ ಮುದ್ರೆ ಎನ್ನುತ್ತಾರೆ. ಈ ಐದು ಮುದ್ರೆಗಳಲ್ಲಿ ಶಾಂಭವಿ ಮುಖ್ಯವಾದುದೆಂದು ಕೆಲವರನ್ನುತ್ತಿರುತ್ತಾರೆ. ಇವುಗಳಲ್ಲಿ ಶಾಂಭವಿ ಮುದ್ರೆಗಿಂತ ಬೇರೆ ವಿಧಾನವನ್ನು ಪರಮ ಶಾಂಭವಿ ಎನ್ನುತ್ತಾರೆ. ಪರಮ ಎಂದರೇ ಪ್ರತ್ಯೇಕವಾದುದು, ಪ್ರತ್ಯೇಕವಾಗಿರುವುದೆಂದು ಅರ್ಥ. ಪರಮ ಶಾಂಭವಿ ಎಂದರೇ ಶಾಂಭವಿ ಮುದ್ರೆಗಿಂತ ಬೇರೆಯಾದುದೆಂದು ಅರ್ಥ. ಎಂದರೇ ಐದು ಮುದ್ರೆಗಳು ಅಲ್ಲದಂತಹ ಯೋಗವೆಂದು ಅರ್ಥ. ದೃಷ್ಠಿನಿಲ್ಲಿಸುವ ವಿಧಾನಗಳೆಲ್ಲವುಗಳಿಗಿಂತ ಮನಸ್ಸನ್ನು ನಿಲ್ಲಿಸುವ ಬ್ರಹ್ಮಯೋಗ ಮುಖ್ಯವಾದುದು. ಆದ್ದರಿಂದ ಮುದ್ರೆಗಳಲ್ಲಿ ಪರಮ ಶಾಂಭವಿ ಹೆಚ್ಚು ಎಂದಿದ್ದಾರೆ. ಮುದ್ರೆ ಎಂದರೇ ಕದಲದೆ ಕುಳಿತುಕೊಳ್ಳುವುದೆಂದು ಅರ್ಥ. ಕದಲದೆ ಕುಳಿತುಕೊಂಡು ದೃಷ್ಠಿ ನಿಲ್ಲಿಸುವುದಕ್ಕಿಂತ ಮನಸ್ಸು ನಿಲ್ಲಿಸುವ ಬ್ರಹ್ಮಯೋಗ ಮುಖ್ಯವಾಗುವುದರಿಂದ ಪರಮ ಶಾಂಭವಿ ಹೆಚ್ಚು ಎಂದಿದ್ದಾರೆ.

**ಆ॥ ರಾಜಯೋಗ ಮೋಕ್ಷ ರಾಜ್ಯಾಭಿಷ್ಯಕ್ತನಾಗಿ**
**ತನ್ನ ಗೃಹದಲ್ಲಿರುವ ಧರ್ಮವೆಲ್ಲ**
**ಪಾಲನೆ ಮಾಡಿ ಪರವಶನಾಗಿದ್ದು**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಮೊದಲನೆಯದಾದ ಜೀವಾತ್ಮಗು ಮೂರನೆಯದಾದ ಪರಮಾತ್ಮಗು ಮಧ್ಯೆ ಸಂಧಾನವಾಗಿರುವ ಓ ಎರಡನೆ ಆತ್ಮಾ! ಕೇಳು. ಕದಲದೆ ಕುಳಿತುಕೊಂಡು ಮನಸ್ಸು ನಿಲ್ಲಿಸುವುದು ಬ್ರಹ್ಮಯೋಗವಾಗಿದ್ದು ಅದಕ್ಕಿಂತ ಉತ್ತಮವಾದುದು ಕರ್ಮಯೋಗ. ಈ ಎರಡು ಯೋಗಗಳಲ್ಲಿ ದೊಡ್ಡದು ಶ್ರೇಷ್ಠವಾದುದು ಕರ್ಮಯೋಗ ಆದ್ದರಿಂದ ದೊಡ್ಡತನವನ್ನು ಸೂಚಿಸುವ ರಾಜ ಪದವನ್ನು ಸೇರಿಸಿ ಕರ್ಮಯೋಗವನ್ನು ರಾಜಯೋಗ ಎನ್ನುವುದು ಕೂಡ ನಡೆದಿದೆ. ರಾಜಯೋಗದಲ್ಲಿ ಎಲ್ಲರಂತೆ ಕೆಲಸಗಳು ಮಾಡುತ್ತಾ, ಶರೀರದಲ್ಲಿನ ಹೊರಗಿನ ಅವಯವಗಳ ಕೆಲಸಗಳ ಪ್ರಕಾರ ಕೆಲಸಗಳು ಮಾಡಿಸುತ್ತಾ, ಹಾಗೇ ಒಳಗಿನ ಮನೋ ಬುದ್ಧಿ ಚಿತ್ತಗಳನ್ನು ಅವುಗಳ ಧರ್ಮದ ಪ್ರಕಾರ ಕೆಲಸಗಳು ಮಾಡಿಸುತ್ತ ಅಹಂ ಒಂದರ ಕೆಲಸ ತಿಳಿದವನಾಗಿ ಶರೀರದಲ್ಲಿನ ಅನುಭವಗಳನ್ನು ಅನುಭವಿಸುವುದು ಜೀವಿಯ ಧರ್ಮವೆಂದು ತಿಳಿದು, ಎಲ್ಲದಕ್ಕು ಅತೀತವಾದುದು ಮೋಕ್ಷವೆಂದು, ಅದಕ್ಕಾಗಿ ಶರೀರ ಧರ್ಮಪಾಲನೆ ಮಾಡುವ ರಾಜಯೋಗಿ ತನ್ನ ವಶದಲ್ಲಿರುವುದೇನು ಇಲ್ಲವೆಂದು, ಎಲ್ಲವೂ ಪರವಶವೆಂದು ತಿಳಿದು ಪರವಶನಾಗಿರುತ್ತಾನೆ.

**ಆ ॥ ಐಂಚರಿಂದ್ರಿಯಗಳು ಕೆಲಸಗಳೆಲ್ಲ ಮಾಡಿದರೆ**
**ಮನಸ್ಸು ಮಂತ್ರಿಯಾಗಿ ಮಸಲುತ್ತಿರುತ್ತಾ**
**ತನ್ನನ್ನು ತಾನು ಕಂಡ ತತ್ತ್ವದ ತದ್ರೂಪ**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಕಾದ ಕಬ್ಬಿಣದಲ್ಲಿ ಕಬ್ಬಿಣವೆಲ್ಲ ಅಗ್ನಿ ವ್ಯಾಪಿಸಿದಂತೆ ಶರೀರವೆಲ್ಲ ವ್ಯಾಪಿಸಿರುವ ಓ ಆತ್ಮಾ! ಕೇಳು. ಶರೀರವನ್ನು ಒಂದು ರಾಜ್ಯವಾಗಿ

ಹೋಲಿಸಿಕೊಂಡು ನೋಡಿದಂತಾದರೆ ಇಂದ್ರಿಯಗಳು ಬಂಟರಂತೆ ಕೆಲಸ ಮಾಡುತ್ತಿವೆ. ಮನಸ್ಸು ಮಂತ್ರಿಯಾಗಿ ಕಾರ್ಯಗಳ ಜ್ಞಾಪಕ ಮಾಡುತ್ತಿರುವಾಗ, ಆತ್ಮ ರಾಜನಾಗಿದ್ದು ತನ್ನ ಪರಿವಾರಕ್ಕೆ ಶಕ್ತಿ ಎನ್ನುವ ಜೀತ ಕೊಟ್ಟು ಕೆಲಸ ಮಾಡಿಸುತ್ತಿದೆ. ಕೆಲಸಗಳ ಫಲಿತವನ್ನು ಆತ್ಮ ಎನ್ನುವರಾಜ ಪರಿಪಾಲನೆಯಲ್ಲಿನ ಜೀವಿಯು ಎನ್ನುವ ಪ್ರಜೆಗಳು ಅನುಭವಿಸುತ್ತಿದ್ದಾರೆ. ತನ್ನ ಆತ್ಮವನ್ನು ನೋಡಿಕೊಂಡ ಜೀವಿಯು ಯಥಾರಾಜಾ ತಥಾಪ್ರಜಾ ಎನ್ನುವಂತೆ ತಾನು ಕೂಡ ಆತ್ಮನಂತೆ ಚಿಕ್ಕ ರೂಪವಿರುವ ಜೀವಾತ್ಮನೆಂದು ತಿಳಿಯುತ್ತದೆ. ತಾನು ಕೂಡ ಶರೀರ ರಾಜ್ಯಕ್ಕೆ ಅಧಿಪತಿಯಾಗಿರುವ ಆತ್ಮನಂತೆ ಬದಲಾಗಬೇಕೆಂದು ಪ್ರಯತ್ನಿಸುತ್ತಾನೆ. ಕೊನೆಗೆ ಸಾಮಂತರಾಜನಾದ ಆತ್ಮನಂತೆ ಮತ್ತು ಸಾಮಂತ ರಾಜರಿಗೆ ದೊಡ್ಡವನಾದ ಚಕ್ರವರ್ತಿಯಂತೆ ಬದಲಾಗಬೇಕೆಂದು ಪ್ರಯತ್ನಿಸುತ್ತಾನೆ. ಜೀವಿಗೆ ಚಕ್ರವರ್ತಿಯಾದ ಪರಮಾತ್ಮನಾಗಿ ಬದಲಾಗಬೇಕೆನ್ನುವ ಉದ್ದೇಶ ಉಂಟಾಗಬೇಕೆಂದರೆ ಮೊದಲು ತನ್ನ ರಾಜ್ಯದಲ್ಲಿನ ಸಾಮಂತ ರಾಜನಾದ ಆತ್ಮರಾಜನನ್ನು ನೋಡಿ ರಾಜಕೀಯವೆಂದರೆ ಏನೋ ತಿಳಿಯಬೇಕು.

**ಆ ||** **ಪಂಚವಿಂಶಕ್ಕೆ ಇರುವುದು ಪಾಪದಜೀವಿ**
**ಸಂಚಿ ತಾಗಮಾದಿ ಸಕಲ ಕರ್ಮ**
**ಲೋಲನಾಗಿ ತಿರುಗುತ್ತಾ ಗುರಿತಪ್ಪಿ**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಪರಮಾತ್ಮ ಪಾಲಿಸುವ ವಿಶ್ವವೆನ್ನುವ ಸಾಮ್ರಾಜ್ಯದಲ್ಲಿ ಶರೀರವೆನ್ನುವ ಸಾಮಂತ ರಾಜ್ಯಕ್ಕೆ ರಾಜನಾದ ಓ ಆತ್ಮಾ! ಕೇಳು. ಪಂಚ ಭೂತಗಳಾದ ಆಕಾಶ, ಗಾಳಿ, ಅಗ್ನಿ, ನೀರು, ಭೂಮಿಯಿಂದ ತಯಾರಾದ ಶರೀರದೊಂದಿಗೆ ಕೂಡಿಕೊಂಡ ಜೀವಿಯು ಕರ್ಮತ್ರಯವಾದ ಸಂಚಿತ, ಆಗಮ, ಪ್ರಾರಬ್ಧಕರ್ಮಗಳಿಂದ ತುಂಬಿಕೊಂಡವನಾಗಿ ಪ್ರಾರಬ್ಧವನ್ನು ಅನುಭವಿಸುತ್ತ ಆಗಮಕರ್ಮವನ್ನು ಆಹ್ವಾನಿಸುವವನಾಗಿ ಇದ್ದಾನೆ. ಪ್ರಪಂಚದಲ್ಲಿ ನಿತ್ಯವೂ ಕರ್ಮಲೋಲನಾದ ಜೀವಿಯು ಹೊರಗೆ ಪ್ರಪಂಚ ದೃಷ್ಟಿಹೊಂದಿ ಜೀವನವನ್ನು ಕುರಿತು ಆಲೋಚಿಸುವವನಾಗಿ, ಸಮಯವೆಲ್ಲವನ್ನು ಅದಕ್ಕೇ ವಿನಿಯೋಗಿಸುತ್ತಿದ್ದಾನೆ.

ತನ್ನ ಶರೀರದೊಳಗೆ ಎಲ್ಲಾಕಡೆ ವ್ಯಾಪಿಸಿರುವ ಆತ್ಮವನ್ನು ಕುರಿತಾಗಲಿ, ಶರೀರದ ಹೊರಗೆ ಎಲ್ಲಾಕಡೆ ವ್ಯಾಪಿಸಿರುವ ಪರಮಾತ್ಮವನ್ನು ಕುರಿತಾಗಲಿ, ಯಾವುದೆ ಗಮನವಾಗಲಿ, ಆಲೋಚನೆಯಾಗಲಿ ಇಲ್ಲದವನಾಗಿ ಜೀವನಕ್ಕೆ ಧ್ಯೇಯವೆನ್ನುವುದು ಇಲ್ಲದೆ ತಿರುಗುತ್ತಿದ್ದಾನೆ.

**ಆ ||　ಬೀಜದಿಂದ ಗಿಡ ಹುಟ್ಟಿದ ರೀತಿಯಲ್ಲಿ**
**ಕರ್ಮದಿಂದ ಜನ್ಮ ಉಂಟಾಗುತ್ತಿದೆ**
**ಕರ್ಮ ಭ್ರಾಂತಿ ಬಿಡದು ಕಲಿಯುಗಾತ್ಮರಿಗೆಲ್ಲ**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಪ್ರಪಂಚಕೆಲ್ಲ ಇರುವ ಮೂವರು ಪುರುಷರಲ್ಲಿಯು ಮಧ್ಯ ಪರುಷನಾಗಿ ಅಕ್ಷರ ಪುರುಷನೆಂದು ಹೆಸರುವಾಸಿಯಾಗಿ, ಕ್ಷರಪುರುಷನ ಹತ್ತಿರ ನಿಂತಿರುವ ಓ ಆತ್ಮಾ! ಕೇಳು. ಭೂಮಿಮೇಲೆ ಬೀಜದಿಂದ ಗಿಡ ಹುಟ್ಟುತ್ತಿದೆ. ಅದೇ ವಿಧವಾಗಿ ಕರ್ಮ ಕಾರಣದಿಂದ ಜೀವಿಗೆ ಜನ್ಮ ಉಂಟಾಗುತ್ತಿದೆ. ಇದು ಸರ್ವಥಾ ಸಹಜವಾಗಿ ನಡೆಯುತ್ತಿರುವ ಕೆಲಸ. ಮನುಷ್ಯ ಹುಟ್ಟುತ್ತಿರುವಾಗ ಸಂತೋಷಿಸುವವರು, ಮರಣಿಸುವಾಗ ದುಃಖಪಡುವವರು, ಸಾವು ಹುಟ್ಟುಗಳಿಗೆ ಕಾರಣವಾದುದೊಂದು ಇದೆಯೆಂದು, ಅದೇ ಕರ್ಮ ಎಂದು ತಿಳಿಯದಿದ್ದಾರೆ. ಕಲಿಯುಗಾತ್ಮರಿಗೆ ಕರ್ಮ ಭ್ರಾಂತಿ ಬಿಟ್ಟು ಕರ್ಮವೊಂದರ ನಿಜರೂಪ ತಿಳಿದಾಗ ಮೋಕ್ಷ ಹೊಂದುತ್ತಾನೆ. ಕರ್ಮವೆಂದರೆ ಏನೋ ತಿಳಿಯದೆ ಕರ್ಮವನ್ನು ಬೇರೆ ವಿಧವಾಗಿ ಊಹಿಸಿಕೊಂಡು, ಎಲ್ಲಾ ಕಾರ್ಯಗಳಿಗು ತನ್ನ ನಿರ್ಣಯವೇ ಯೆಂದು ತಾನು ಅಂದುಕೊಂಡಂತೇ ಮಾಡುತ್ತೇನೆಂದು, ಅಂದುಕೊಳ್ಳುವವರಿಗೆ ಭ್ರಾಂತಿ ಬಿಡದು, ಜ್ಞಾನ ಸತ್ಯ ತಿಳಿಯುವುದಿಲ್ಲ, ಮೋಕ್ಷ ಬರುವುದಿಲ್ಲ.

**ಆ ||　ಸಕಲ ಸಂಕಟದಲ್ಲಿ ಸಂಸಾರ ಸಂಕುಲ**
**ಜಂಕ ಡೊಂಕ ವಂಕ ರಂಕು ಬೊಂಕು**
**ಸಾಕಯ್ಯ ಇದರ ಸದ್ದು**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಶರೀರದಲ್ಲಿ ಸಕಲೇಂದ್ರಿಯಗಳಿಗೆ ಶಕ್ತಿಕೊಡುವ ಓ ಆತ್ಮಾ! ಕೇಳು. ಮನುಷ್ಯನಿಗೆ ಎರಡು ವಿಧಗಳ ಸಂಸಾರಗಳು ಇವೆ. ಸಂಸಾರ ಎಂದರೇ ಸಾರ ಇಲ್ಲದಿರುವುದೆಂದು ಹಿರಿಯರು ಹೇಳುತ್ತಿರುತ್ತಾರೆ. ಸಂಸಾರ ಕುಟುಂಬ ದೊಂದಿಗೆ ಕೂಡಿಕೊಂಡಿದೆಯೆಂದು ಕೂಡ ಹೇಳುತ್ತಿರುತ್ತಾರೆ. ಮನುಷ್ಯ ಬದುಕುವುದೇ ಸಂಸಾರವೆಂದು ಕೂಡ ಕೆಲವರನ್ನುತ್ತಿರುತ್ತಾರೆ. ಯಾರೇನೆಂದು ಕೊಂಡರು ನನಗೆ ತಿಳಿದಮಟ್ಟಿಗೆ ಮನುಷ್ಯನಿಗೆ ಹೊರಗಿನ ಸಂಸಾರ ಮತ್ತು ಒಳಗಿನ ಸಂಸಾರವೆಂದು ಎರಡುವಿಧಗಳು ಇವೆ. ಹೊರಗಿನ ಸಂಸಾರ ತನ್ನ ಸುತ್ತಲೂ ಇರುವ ಮನುಷ್ಯರೊಂದಿಗೆ ಕೂಡಿಕೊಂಡಿರುತ್ತದೆ. ಹೊರಗಿನ ಸಂಸಾರ ಹೊರಗಿನ ಪ್ರಜೆಗಳೊಂದಿಗೆ ಕೂಡಿ ಮಾಡುವಕೆಲಸಗಳೊಂದಿಗೆ ಇರುತ್ತದೆ. ವ್ಯಭಿಚಾರ, ಕಳ್ಳತನ. ಅಸತ್ಯ, ಜೂಜು, ಮೋಸ, ನಾನಾ ವಿಧಗಳ ಕೆಲಸಗಳೊಂದಿಗೆ ಕೂಡಿಕೊಂಡಿರುತ್ತದೆ. ಹಾಗೇ ಕೆಲವು ಒಳ್ಳೆಯ ಕೆಲಸಗಳೊಂದಿಗು, ಕೆಲವು ಕೆಟ್ಟ ಕೆಲಸಗಳೊಂದಿಗು, ಎಷ್ಟೋ ಒಡಕುದುಡುಕುಗಳೊಂದಿಗೆ, ಹೊರಗಿನ ಸಂಸಾರ ಇರುವಾಗ, ಒಳಗಿನ ಸಂಸಾರ ಮತ್ತೊಂದು ವಿಧವಾಗಿರುತ್ತದೆ. ಜೀವಿಯು ಶರೀರಗೃಹದಲ್ಲಿ ನಿವಾಸಿಸುತ್ತಾ ಮನಸ್ಸು, ಬುದ್ಧಿ, ಚಿತ್ತ, ಅಹಂ ಎನ್ನುವ ಅಂತಃಕರಣಗಳೊಂದಿಗೂ, ಜ್ಞಾನೇಂದ್ರಿಯ ಕರ್ಮೇಂದ್ರಿಯಗಳೆನ್ನುವ ಅವಯವಗಳೊಂದಿಗೂ, ಬೆರೆತು ಸಂಸಾರ ಮಾಡುವುದೆಂದು ತಿಳಿಯಬೇಕು. ಒಳಗಿನ ಗುಣಗಳನ್ನನುಸರಿಸಿ ಒಳಗಿನ ಇಂದ್ರಿಯಗಳು ಹೊರಗಿನ ಇಂದ್ರಿಯಗಳು ಕೆಲಸ ಮಾಡುತ್ತಿರುವಾಗ, ಪ್ರಪಂಚದಲ್ಲಿ ಅವು ಒಳ್ಳೆಯ ಕೆಟ್ಟ ಕಾರ್ಯಗಳಾಗಿ ಪರಿಗಣಿಸಲ್ಪಟ್ಟಾಗ, ಜೀವಿಯು ಸಾರವಿಲ್ಲದ ಜೀವನವನ್ನು ಕಳೆಯುತ್ತಿದ್ದಾನೆ. ಶರೀರದೊಳಗಿನ ಇಂದ್ರಿಯಗಳೊಂದಿಗು, ಹೊರಗಿನ ಕೆಲಸಗಳೊಂದಿಗು ನಡೆಯಲ್ಪಡುವವು ಎರಡು ವಿಧಗಳ ಸಂಸಾರಗಳು. ಸಂಸಾರದಲ್ಲಿ ಸಾರವಿಲ್ಲ ಎನ್ನುವಂತೆ ಮಾಡುತ್ತಿದ್ದಾನೆ, ಶರೀರದ ಹೊರಗಿರುವ ಸಂಸಾರವನ್ನು ಸತ್ ಸಾರವಾಗಿ ಬದಲಿಸಿಕೊಳ್ಳುವ ವಿಧಾನವಿದೆ. ಶರೀರದೊಳಗೆ ಒಳ್ಳೆಯಸಾರವಾಗಿ ಸಂಸಾರವನ್ನು ಬದಲಿಸಿಕೊಳ್ಳುವುದಕ್ಕೆ ಕೆಳಗೆ ಹೇಳಿದ ಪದ್ಯವನ್ನು ನೋಡೋಣ.

**ಆ ॥ ತ್ರಿಗುಣ ರೂಪವಾಯಿತು ತ್ರಿಪುರಂಬು ಲೆಲ್ಲವು**
**ತ್ರಿಗುಣದಲ್ಲಿ ಜಗವು ತಿರುಗುತ್ತಿದ್ದು**
**ತ್ರಿಗುಣವನ್ನು ಬಿಟ್ಟು ಮುಕ್ತಿ ತೆರವನ್ನು ಕಾಣಬೇಕು**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಬ್ರಹ್ಮ, ಕಾಲ, ಕರ್ಮ, ಗುಣಚಕ್ರಗಳಿಗೆ ಆಧಾರವಾಗಿರುವ ಓ ಆತ್ಮಾ! ಕೇಳು. ಶರೀರದ ಹೊರಗೆ ನಡೆಯುವ ಸಂಸಾರಕ್ಕೆ, ಒಳಗಿರುವ ಸಂಸಾರಕ್ಕೆ ಮೂರು ಗುಣಗಳೇ ಕಾರಣ. ಸಾತ್ತ್ವಿಕ, ರಾಜಸ, ತಾಮಸವೆನ್ನುವ ಮೂರು ಗುಣಗಳ ಪ್ರಭಾವ ಎಲ್ಲರಲ್ಲಿ ತುಂಬಿಹೋಗಿ ಮನುಷ್ಯರನ್ನು ಮೂರು ವಿಧಗಳಾಗಿ ವಿಭಜಿಸಿವೆ. ತ್ರಿಗುಣ ರೂಪವಾದ ಜಗತ್ತೆಲ್ಲವೂ ಮಾಯಾ ಸಂಸಾರವಾಗಿ ಹೋಗಿದೆ. ಮೂರು ಗುಣಗಳಿಂದಲೇ ಶರೀರದೊಳಗಿನ ಇಂದ್ರಿಯಗಳು ಕೆಲಸಮಾಡಿದಾಗ ಹೊರಗೆ ಕಾರ್ಯರೂಪವಾಗಿ ಕೊನೆಗೆ ಜೀವಿಯು ಕರ್ಮ ಬದ್ಧನಾಗುತ್ತಿದ್ದಾನೆ. ಮಾನವನು ಜ್ಞಾನ ತಿಳಿದವನಾಗಿ ಮೂರುಲೋಕಗಳಾಗಿ ಹೇಳಲ್ಪಡುವ ಮೂರು ಗುಣಗಳಿಂದ ಬರುವ ಕರ್ಮಗಳನ್ನು ಅಂಟದಿರುವಾಗ ತ್ರಿಗುಣಸಹಿತ ಸಂಸಾರವನ್ನು ಬಿಟ್ಟು ಸತ್‌ಸಾರವಾದ ಮುಕ್ತಿಯನ್ನು ಹೊಂದಬಲ್ಲನು. ಮೂರು ಗುಣಗಳನ್ನು ಜಯಿಸದೆಹೋದರೆ ಸಂಸಾರ ದುಸ್ಸಾಧ್ಯವಾಗಿಹೋಗುತ್ತದೆ.

**ಆ ॥ ನಾಲ್ಕು ವಿಧಗಳಾಗಿ ನರರೆಲ್ಲರಿಗು**
**ಬೋಧಮಾಡಿದಂತೆ ಬುದಜನರು**
**ಶಾಸ್ತ್ರರೀತಿಯಾಗಿ ಸಾರಿದರು ಕೇಳುವುದಿಲ್ಲವೇನೊ**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಜ್ಞಾನಿಗಳಲ್ಲಿಯು ಅಜ್ಞಾನಿಗಳಲ್ಲಿಯು, ಮೂರ್ಖರಲ್ಲಿಯು ತಿಳುವಳಿಕೆಯುಳ್ಳವರಲ್ಲಿಯು, ಒಳ್ಳೆಯವರಲ್ಲಿಯು ಕೆಟ್ಟವರಲ್ಲಿಯು, ಎಲ್ಲಾ ಮತದವರಲ್ಲಿಯು ಒಂದೇ ಪದ್ಧತಿಹೊಂದಿ ಒಂದೇ ವಿಧವಾಗಿ ರಾಗ (ಪ್ರೇಮ) ವಾಗಲಿ ದ್ವೇಷವಾಗಲಿ ಇಲ್ಲದೇ ವರ್ತಿಸುವ ಓ ಆತ್ಮಾ! ಕೇಳು, ಭೂಮಿ

ಮೇಲೆ ಜ್ಞಾನಿಗಳಾದವರು ಅಜ್ಞಾನಿಗಳಿಗೆ ನಾಲ್ಕು ವಿಧಗಳ ಬೋಧನೆಮಾಡಿ ಮುಕ್ತಿಗಳಾಗುವಂತೆ ಮಾಡಿದ್ದಾರೆ. ಪ್ರತಿ ಕೆಲಸಕ್ಕೆ ಒಂದು ಶಾಸ್ತ್ರಪದ್ಧತಿ ಇರಬೇಕೆಂಬ ಸೂತ್ರದ ಪ್ರಕಾರ ಜ್ಞಾನ ತಿಳಿದು ದೈವವನ್ನು ಹೊಂದುವುದಕ್ಕೆ ನಾಲ್ಕು ವಿಧಾನಗಳು ತಿಳಿಸಿದ್ದಾರೆ. ಅವುಗಳೇ ಕ್ರಮವಾಗಿ 1) ಭಕ್ತಿ 2) ಜ್ಞಾನ 3) ಯೋಗ 4) ಮುಕ್ತಿ ಎಂದಿದ್ದಾರೆ. ಈ ವರಸೆ ವಿಧಾನವನ್ನು ತಿಳಿಯದವರು ಕೆಲವರು ಸ್ವಲ್ಪ ಭಕ್ತಿ ಹೊಂದಿದ ತಕ್ಷಣ ಗುರು ಉಪದೇಶಗಳು ಹೊಂದಿ ಸ್ವಲ್ಪ ಸಾಧನೆ ಮಾಡಿ ಯೋಗಿಗಳೆಂದುಕೊಳ್ಳುತ್ತಿದ್ದಾರೆ. ಜ್ಞಾನ ತಿಳಿಯದೆ ಉಪದೇಶವಾಗಲಿ, ಯೋಗ ಸಾಧನೆ ಯಾಗಲಿ ಕೆಲಸಕ್ಕೆ ಬರುವುದಿಲ್ಲವೆಂದು ತಿಳಿಯದೆ ಜ್ಞಾನದಿಂದ ಕೆಲಸವೇಯಿಲ್ಲ ಸಾಧನೆ ಇದ್ದರೆ ಸಾಕೆನ್ನುತ್ತಿದ್ದಾರೆ. **ಶಾಸ್ತ್ರಪದ್ಧತಿಯಾಗಿ ಜ್ಞಾನ ತಿಳಿಯದ ಸಾಧನೆ ಗಮ್ಯ ತಿಳಿಯದ ಪ್ರಯಾಣದಂತಾದ್ದೆಂದು ತಿಳಿಯದೆ ಹೋಗಿದ್ದಾರೆ**. ಭಗವದ್ಗೀತೆಯಲ್ಲಿ ಭಗವಂತನು ಹೇಳಿದ "ಶ್ರೇಯೋಹಿ ಜ್ಞಾನಮಭ್ಯಾಸಾತ್" ಎನ್ನುವ ಮಾತನ್ನು ಮರೆತುಹೋಗಿ ಶಾಸ್ತ್ರವಿರುದ್ಧವಾಗಿ ಜ್ಞಾನವಿಲ್ಲದ ಸಾಧನೆ ಮಾಡುತ್ತಿದ್ದಾರೆ. ಆ ವಿಧವಾಗಿ ಅಶಾಸ್ತ್ರೀಯ ಪದ್ಧತಿಯಲ್ಲಿ ಎಷ್ಟು ಸಾಧನೆ ಮಾಡಿದರೂ ಕೊನೆಗೆ ಅದು ಯೋಗವಲ್ಲ, ಅದರಿಂದ ಮುಕ್ತಿ ಲಭಿಸುವುದಿಲ್ಲ.

**ಆ ॥ ಮೂರು ತನುಗಳಿಗು ಮೂರವಸ್ತೆಗಳಿಗು**
**ಮುಖ್ಯವಾದ ಸಾಕ್ಷಿ ಮೂರ್ತಿ ಯಾವುದೋ**
**ತಿಳಿಯಲಾರದ ಯೋಗಿ ಘನನೇಗಾದನಯ್ಯ**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಪುರುಷಾಕೃತಿಯಾದ ಈಶ್ವರ ಲಿಂಗದ ಮೇಲೆ ಮೂವರು ಪುರುಷರ ಗುರುತಾಗಿರುವ ಮೂರು ವಿಭೂತಿ ರೇಖೆಗಳಲ್ಲಿ ಮಧ್ಯೆರೇಖೆಯಾಗಿ ಗುರುತುಹೊಂದಿದ ಓ ಆತ್ಮಾ! ಕೇಳು. ನಮ್ಮ ಶರೀರ ಸ್ಥೂಲವಾಗಿ ಮೇಲ್ನೋಟಕ್ಕೆ ಕಾಣಿಸುತ್ತಿದ್ದರೂ ಒಟ್ಟು ಮೂರು ಭಾಗಗಳಾಗಿದೆಯೆಂದು ಕೆಲವರು ಹೇಳುತ್ತಿದ್ದಾರೆ. ಅವುಗಳೇ ಕ್ರಮವಾಗಿ 1) ಸ್ಥೂಲ ಶರೀರ 2) ಸೂಕ್ಷ್ಮ ಶರೀರ 3) ಕಾರಣ ಶರೀರ ಎನ್ನುತ್ತಿದ್ದಾರೆ. ಸ್ಥೂಲಶರೀರ ಐದು ಜ್ಞಾನೇಂದ್ರಿಗಳು, ಐದು

ಕರ್ಮೇಂದ್ರಿಯಗಳಾಗಿ ಮೇಲ್ನೋಟಕ್ಕೆ ಕಾಣಿಸುವುದಾಗಿದೆ. ಸೂಕ್ಷ್ಮ ಶರೀರ ಜೀವಿಯು, ಬುದ್ಧಿ, ಚಿತ್ತ, ಅಹಂ, ಮನಸ್ಸು ಎನ್ನುವ ಐದು ಭಾಗಗಳು, ವ್ಯಾನ, ಉದಾನ, ಸಮಾನ, ಪ್ರಾಣ, ಅಪಾಣ ಎನ್ನುವ ಐದು ವಾಯುಗಳು ದೃಷ್ಠಿ, ಶಬ್ದ, ವಾಸನೆ, ರುಚಿ, ಸ್ಪರ್ಶ ಎನ್ನುವ ಐದು ಇಂದ್ರಿಯ ವಿಷಯಗಳಾಗಿ ಒಟ್ಟು ಹದಿನೈದು ಭಾಗಗಳಾಗಿ ಇದೆ. ಕಾರಣ ಶರೀರವೆಂದರೇ ಜನ್ಮಗಳಿಗೆ ಕಾರಣವಾದ ಪಾಪಪುಣ್ಯಗಳೆಂದು ತಿಳಿಯಬೇಕು.

ಶರೀರದಲ್ಲಿನ ಆತ್ಮ ಶರೀರ ಮಧ್ಯದಲ್ಲಿರುವ ಬ್ರಹ್ಮನಾಡಿಯಲ್ಲಿ ನಿವಾಸಿಸುತ್ತಾ ಶರೀರವನ್ನು ಕದಲಿಸಿ ಕೆಲಸ ಮಾಡಿಸುತ್ತಾ ಶರೀರದ ಕೊನೆಯ ಅಂಚಿನವರೆಗು ವ್ಯಾಪಿಸಿದೆ. ಆದ್ದರಿಂದ ಎಲ್ಲವೇಳೆಯಲ್ಲಿ ಆತ್ಮ ಸ್ಥೂಲಶರೀರಕ್ಕೆ ಸಾಕ್ಷಿಯಾಗಿದೆಯೆಂದು ಹೇಳಬಹುದು. ಅದೇ ವಿಧವಾಗಿ ಸೂಕ್ಷ್ಮಶರೀರದಲ್ಲಿನ ಎಲ್ಲಾ ಭಾಗಗಳಿಗು ಶಕ್ತಿಯನ್ನು ಕೊಟ್ಟು ಕದಲಿಸಿ ಕೆಲಸ ಮಾಡಿಸುವುದರಿಂದ ಆ ಶರೀರಕ್ಕೆ ಕೂಡ ಆತ್ಮ ಸಾಕ್ಷಿಭೂತವಾಗಿದೆ. ಕರ್ಮಚಕ್ರಕ್ಕೆ ಆಧಾರವಾಗಿರುವ ಬ್ರಹ್ಮನಾಡಿಯಲ್ಲಿ ಆತ್ಮ ನಿವಾಸವಾಗಿ ಪ್ರತಿಕರ್ಮವನ್ನು ನೋಡುತ್ತಾ ಸ್ಥೂಲ ಸೂಕ್ಷ್ಮ ಎರಡು ಶರೀರಗಳ ಮೂಲಕ ಅನುಭವಿಸುವಂತೆ ಮಾಡುವುದರಿಂದ ಮೂರನೆಯದಾದ ಕಾರಣಶರೀರಕ್ಕೆ ಕೂಡ ಆತ್ಮ ಸಾಕ್ಷಿಯಾಗಿದೆಯೆಂದು ಹೇಳಬಹುದು. ಈ ವಿಧವಾಗಿ ಮೂರು ಶರೀರಗಳಿಗು ಆತ್ಮ ಸಾಕ್ಷಿಯಾಗಿ ಇರುವುದಲ್ಲದೇ ನಿದ್ರೆ ಎಚ್ಚರ ಸ್ವಪ್ನಗಳೆನ್ನುವ ಮೂರು ಅವಸ್ಥೆಗಳಲ್ಲಿ ಕೂಡ ಆತ್ಮಸಾಕ್ಷಿಯಾಗಿದೆಯೆಂದು ಹೇಳಬಹುದು. ಆತ್ಮ ಜಾಗ್ರತಾವಸ್ಥೆಯಲ್ಲಿ ಮನಸ್ಸಿಗೆ ಚೈತನ್ಯ ಕೊಡುವುದರಿಂದ ಆಗಲೂ ಕೂಡ ಸಾಕ್ಷಿಯಾಗಿದೆಯೆಂದು ಹೇಳಬಹುದು. ಹಾಗೇ ನಿದ್ರೆ ಹೋದಾಗ ಮನಸ್ಸು ಇಲ್ಲದಿದ್ದರು ನಿದ್ರೆಯಲ್ಲಿ ಆಡುವ ಶ್ವಾಸಕ್ಕೆ ಚೈತನ್ಯವನ್ನು ಕೊಡುತ್ತಾ, ಉಳಿದ ಶರೀರದೊಳಗಿನ ಕಾರ್ಯಗಳಿಗು ಕೂಡ ಶಕ್ತಿ ಕೊಡುವುದರಿಂದ, ಆಗಲೂ ಕೂಡ ನಿದ್ರೆಗೆ ಸಾಕ್ಷಿಯಾಗಿ ಆತ್ಮಯಿದೆಯೆಂದು ಹೇಳಬಹುದು. ಸ್ವಪ್ನಾವಸ್ಥೆಯಲ್ಲಿ ನಡೆಯುವ ಸ್ವಪ್ನಗಳಲ್ಲಿ ಮನಸ್ಸನ್ನು ಕೆಲಸಮಾಡಿಸುತ್ತಾ, ಅಲ್ಲಿನ ವಿಷಯಗಳು ಮನಸ್ಸಿನ ಮೂಲಕ ಜೀವಿಯ ಅನುಭವಕ್ಕೆ ತರುತ್ತಿದೆ. ಆದ್ದರಿಂದ ಸ್ವಪ್ನದಲ್ಲಿ ಕೂಡ ಆತ್ಮ ಸಾಕ್ಷಿಯಾಗಿದೆಯೆಂದು

ತಿಳಿಯುತ್ತಿದೆ. ಈ ವಿಧವಾಗಿ ನಮ್ಮಲ್ಲಿರುವ ಮೂರು ಶರೀರಗಳಿಗು, ಮೂರು ಅವಸ್ಥೆಗಳಿಗು, ಆತ್ಮ ಸಾಕ್ಷಿಯಾಗಿದೆಯೆಂದು ತಿಳಿಯದವರು ಜ್ಞಾನಿಗಳೆನಿಸಿ ಕೊಳ್ಳಲಾರರು, ನಂತರ ಯೋಗಿಗಳಾಗಲಾರರು. ಜ್ಞಾನಿ ಅಲ್ಲದವನು ಯೋಗಿ ಆಗುವುದಿಲ್ಲ, ಯೋಗಿ ಅಲ್ಲದವನು ಮುಕ್ತಿ ಹೊಂದಲಾರನು.

**ಆ ||　ಅಂತಹ ಬ್ರಹ್ಮಪಥ ಪಟ್ಟಾಗಿ ಕಂಡಂತಹ**
**ಪರಮ ಯೋಗಿ ಚರಿತೆ ಭಾವವೆಲ್ಲ**
**ನರರಿಗೆ ಶಕ್ಯವಾಗುವುದೇ ಪರಿಶೀಲಿಸಿ ನೋಡಿದಾಗ**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಶರೀರದಲ್ಲಿಯೇ ದೃಷ್ಠಿನಿಲ್ಲಿಸಿ ನಿನ್ನನ್ನು ತಿಳಿಯಬೇಕೆಂದು ಪ್ರಯತ್ನಿಸುವ ಯೋಗಿಗಳಿಗೆ ತಿಳಿಯುವ ಓ ಎರಡನೆ ಆತ್ಮಾ! ಕೇಳು. ಭೂಮಿ ಮೇಲೆ ಮಾನವರ ಜೀವನದಲ್ಲಿ ಎರಡೇ ಮಾರ್ಗಗಗಳು ಇವೆ. ಅವು ಒಂದು ಪ್ರಕೃತಿ ಮಾರ್ಗ ಎರಡನೆಯದು ಪರಮಾತ್ಮ ಮಾರ್ಗ. ನೂರಕ್ಕೆ ತೊಂಭತ್ತೊಂಭತ್ತು ಪಾಲು ಮನುಷ್ಯರು ಪ್ರಕೃತಿ ಮಾರ್ಗದಲ್ಲಿ ನಡೆಯುತ್ತಿದ್ದಾರೆ. ಕೇವಲ ಒಂದು ಭಾಗ ಮಾತ್ರ ದೈವಮಾರ್ಗದಲ್ಲಿ ನಡೆಯಬೇಕೆಂದು ಪ್ರಯತ್ನಿಸುತ್ತಿದ್ದಾರೆ. ಅಂತಹವರನ್ನು ಕೆಲವು ಸಾವಿರಾರು ಜನರನ್ನು ಪರಿಗಣನೆಯೊಳಗೆ ತೆಗೆದುಕೊಂಡರೆ ಅವರಲ್ಲಿ ಯಾರೂ ಒಬ್ಬನು ಅಪರೂಪವಾಗಿ ಬ್ರಹ್ಮಪಥ ಎನ್ನುವ ದೈವಮಾರ್ಗದಲ್ಲಿ ಪಟ್ಟು ಹಿಡಿದು ಮುಂದಕ್ಕೆ ಹೋಗುತ್ತಿದ್ದಾನೆ. ಬ್ರಹ್ಮಪಥದಲ್ಲಿ ಪಟ್ಟು ಹಿಡಿದು ಯೋಗಿಯಾದವನು ತನ್ನಸ್ಥಿತಿ ತನಗೆ ತಿಳಿದವನಾಗಿ ಪ್ರಪಂಚದಲ್ಲಿ ಜೀವನವನ್ನು ಸಾಗಿಸುತ್ತಿರುತ್ತಾನೆ. ಅಂತಹವನ ಪ್ರವರ್ತನೆ ಅಜ್ಞಾನ ನರರಿಗೆ ಸ್ವಲ್ಪವೂ ಅರ್ಥವಾಗುವುದಿಲ್ಲ. ಅಂತಹ ಸಂಪೂರ್ಣಯೋಗಿ ಭಾವನೆಯಲ್ಲಿ ಬೇರೆ ಭಾವನೆ ಹೊಂದಿರುತ್ತಾನೆ. ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ಒಂದು ಮುಖ್ಯವಾದ ಧರ್ಮ ತಿಳಿಸುವುದಲ್ಲದೆ ಆಚರಿಸಿ ತೋರಿಸಿದ್ದಾನೆ. ಆತನು ಸವ್ಯವಾದ ಅಪಸವ್ಯವಾದ ಕೆಲಸಗಳು ಮಾಡಿ ಯೋಗಿಗಳಿಗೆ ನಾನು ಮಾರ್ಗದರ್ಶಕನೆಂದು ತಿಳಿಸಿದ್ದಾನೆ. ಕೆಲಸಗಳು ಮಾಡುತ್ತಿರುವ ನನಗೆ ಯಾವ

ಕರ್ಮಗಳು ಅಂಟುವುದಿಲ್ಲ. ನನ್ನಂತೆ ಕರ್ಮರೀತಿ ಕಾರ್ಯಗಳು ಮಾಡುತ್ತಾ ತಾವರೆ ಎಲೆಗೆ ನೀರಂಟದಂತಿರುವುದು ಯೋಗಿಗಳೊಂದರ ಗುರಿ ಎಂದಿದ್ದಾರೆ. ಪ್ರಾರಬ್ಧಕರ್ಮ ನಮ್ಮ ಇಚ್ಚೆ ಪ್ರಕಾರ ಇರುವುದಿಲ್ಲ. ನಾವೇ ಕರ್ಮ ಅಧೀನದಲ್ಲಿದ್ದು ಅದರ ಪ್ರಕಾರ ನಡೆಯಬೇ ಕಾಗಿರುತ್ತದೆ. ಆದ್ದರಿಂದ ಕರ್ಮ ಆಚರಣೆಯಲ್ಲಿ ಒಳ್ಳೆಯ ಕೆಲಸಗಳು ಬರಬಹುದು. ಅಥವಾ ಕೆಟ್ಟ ಕಾರ್ಯಗಳು ಬರಬಹುದು. ಹಾಗಿರುವಾಗ ಒಂದನ್ನು ಮಾಡುವುದು, ಮತ್ತೊಂದನ್ನು ಬಿಡುವುದು ಸರಿಯಲ್ಲ. ಕರ್ಮ ಅದರ ಇಷ್ಟಪ್ರಕಾರ ಅದು ಆಡಿಸುತ್ತಾ ಹೋಗುತ್ತಿರುತ್ತದೆ. ಕರ್ಮ ಅಧೀನರಾಗಿ ಮಾಡುವ ಕಾರ್ಯಗಳಲ್ಲಿ ಒಳಗಿನ ಭಾವನೆಯಲ್ಲಿ ಬದಲಾವಣೆ ಹೊಂದಿ ಅಹಂನ್ನು ಇಲ್ಲದೇ ಮಾಡಿಕೊಳ್ಳಬೇಕು. ಹಾಗೆ ಮಾಡುವುದರಿಂದ ಕೆಲಸಗಳಲ್ಲಿನ ಪಾಪಪುಣ್ಯಗಳು ಅಂಟುವುದಿಲ್ಲ. ಈ ಸೂತ್ರವನ್ನು ಅನುಸರಿಸಿ ಯುದ್ಧ ಮಾಡು, ಪಾಪಬರುವುದಿಲ್ಲವೆಂದು ಕೃಷ್ಣನು ಅರ್ಜುನನಿಗೆ ಹೇಳಿದ್ದಾನೆ. ನಿಜವಾದ ಯೋಗಿ ಒಳಗಿನ ಭಾವನೆಯಲ್ಲಿ ಬದಲಾವಣೆಹೊಂದಿ ಮಾಡುವಂತಹ ಕೆಲಸಗಳಲ್ಲಿ ಮೇಲಿನ ಕಾರ್ಯಗಳೇ ಕಾಣಿಸುತ್ತವೆ, ಆದರೆ ಒಳಗಿನ ಭಾವನೆ ಕಾಣಿಸುವುದಿಲ್ಲ. ಜ್ಞಾನ ತಿಳಿಯದವರಿಗೆ ಮೇಲಿನ ದೃಷ್ಟಿಯೇ ಇರುತ್ತದೆ. ಆದ್ದರಿಂದ ಯೋಗಿಗಳ ಭಾವನೆ ತಿಳಿಯುವುದಿಲ್ಲವೆಂದು ಈ ಪದ್ಯದಲ್ಲಿ ತಿಳಿಸಿದ್ದಾರೆ.

**ಆ ॥ ಬಾಲಮತ್ತರೀತಿ ಬಲುಪಿಶಾಚ ಭಾತಿ**
**ಭಾವನೆಯಲ್ಲಿ ಭೇದ ಭಾವಬಿಟ್ಟು**
**ತಿರುಗುತ್ತಿರುತ್ತಾರಯ್ಯ ಗುರುಗಳು ಧರಣಿಯಲ್ಲಿ**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಹೂವಿನಮಾಲೆಗೆ ಆಧಾರವಾದ ದಾರದಂತೆ ಶರೀರಕ್ಕೆ ಆಧಾರವಾಗಿರುವ ಓ ಆತ್ಮಾ! ಕೇಳು. ಚಿಕ್ಕ ವಯಸ್ಸಿನಲ್ಲಿನ ಮಕ್ಕಳು ಒಳ್ಳೆಯ ಕೆಟ್ಟಕೆಲಸಗಳು ಮಾಡಿ ನಾನು ಎಂಬ ಅಹಂ ಹೊಂದದಂತಿರುತ್ತಾರೆ. ಲಾಭನಷ್ಟಗಳಿಗೆ ಚಿಂತಿಸದಂತಿರುತ್ತಾರೆ. ಅವರಿಗೆ ಒಳ್ಳೆಯ, ಕೆಟ್ಟ, ಲಾಭನಷ್ಟಗಳೆನ್ನುವ

ಬೇಧ ಇರುವುದಿಲ್ಲ. ಹಾಗೇ ಗುರುಗಳಿಗು ಕೂಡ ಬೇದಭಾವ ಇಲ್ಲದಿರುತ್ತಾರೆ. ಇನ್ನು ದೊಡ್ಡ ಪಿಶಾಚಿ ಆವರಿಸಿದವನು ಏನು ತಿಳಿಯದ ಸ್ಥಿತಿಯಲ್ಲಿ ನಿಂತುಹೋದಂತೆ, ಪಿಶಾಚಿ ಆವರಿಸಿದ ಸಮಯದಲ್ಲಿ ಮಾಡಿದ ಕೆಲಸವನ್ನು ತಾನು ಸ್ವಲ್ಪವೂ ಮಾಡಲಿಲ್ಲವೆನ್ನುವ ಭಾವನೆ ಹೊಂದಿರುವಂತೆ, ಯೋಗಿಗಳಿಗು ಕೂಡಾ ತಾನು ಶರೀರಕ್ಕಿಂತ ಬೇರೆಯೆಂದು, ಶರೀರದಲ್ಲಿ ನಡೆದ ಕೆಲಸಗಳಿಗೆ ತಾನು ಕರ್ತನು ಅಲ್ಲವೆಂಬ ಭಾವನೆಯಿಂದಿರುತ್ತಾನೆ.

**ವಿಶೇಷಾರ್ಥ :–** ಚಿಕ್ಕ ವಯಸ್ಸಿನವರಿಗೆ ಅವರ ಅಂತಃಕರಣಗಳು ಕೂಡ ಚಿಕ್ಕದಾಗಿಯೇ ಇರುತ್ತವೆ. ಜೀವಿಯು ಎಂದಿಗೂ ಒಂದೇ ವಿಧವಾಗಿದ್ದರೂ, ಮರಣದಲ್ಲಿ ಹಳೆ ಅಂತಃಕರಣಗಳು ಹೋಗಿ ಜನ್ಮದಲ್ಲಿ ಹೊಸವು ಬರುತ್ತಿವೆ. ಹೊಸವು ಕೂಡ ಶರೀರದೊಂದಿಗೆ ಬೆಳೆಯುತ್ತಿರುತ್ತವೆ. ಚಿಕ್ಕವಯಸ್ಸಿನವರಿಗೆ ಅಹಂಕಾರ ಕೂಡ ಚಿಕ್ಕದಾಗಿಯೇ ಇರುತ್ತದೆ. ಚಿಕ್ಕವಯಸ್ಸಿನಲ್ಲಿ ನಡೆದ ಕೆಲಸಗಳಿಗೆ ಅಹಂಕಾರ ನಾನೆಂಬ ಭಾವನೆಯನ್ನು ಜೀವಿಗೆ ಬೋಧಿಸುವ ಶಕ್ತಿ ಇಲ್ಲದಂತಿದೆ. ಆ ಕಾಲದಲ್ಲಿ ನಡೆದ ಕೆಲಸಗಳಿಗೆ ಜೀವಿಯು ನಾನು ಮಾಡಿದ್ದೇನೆಂಬ ಭಾವನೆ ಇಲ್ಲದವನಾಗಿರುತ್ತಾನೆ. ಆದ್ದರಿಂದ ಚಿಕ್ಕವಯಸ್ಸಿನವರಿಗೆ ಯಾವ ಕರ್ಮ ಬರುವುದಿಲ್ಲ. ಆದ್ದರಿಂದ ಗುರುಗಳನ್ನು ಚಿಕ್ಕ ಮಕ್ಕಳಿಗೆ ಹೋಲಿಸಿ ಹೇಳುವುದಾಗಿದೆ.

ಪಿಶಾಚಿ ಹಿಡಿದವನು ಆ ಸಮಯದಲ್ಲಿ ಮಾಡಿದ ಕೆಲಸಗಳನ್ನು ಜ್ಞಾಪಕ ಬಂದನಂತರ ನೋಡಿ ಪಿಶಾಚಿ ಬೇರೆಯೆಂದು, ತಾನು ಬೇರೆಯೆಂದು ನಡೆದ ಕೆಲಸಗಳು ಪಿಶಾಚಿಯೇ ಮಾಡಿದೆಯೆಂದು, ನಾನು ಮಾಡಲಿಲ್ಲವೆಂದು ಕೊಂಡಂತೆ, ಗುರುಗಳು ಶರೀರವು ಬೇರೆಯೆಂದು ತಾವು ಬೇರೆಯೆಂದು ಅಂದುಕೊಳ್ಳುತ್ತಾರೆ. ಶರೀರದೊಂದಿಗೆ ನಡೆದ ಕೆಲಸಗಳನ್ನು ನೋಡಿ 24 ಭಾಗಗಳಾಗಿರುವ ಶರೀರವೇ ಆ ಕೆಲಸಗಳಿಗೆ ಕರ್ತಯೆಂದು ನಾನು ಯಾವ ಕೆಲಸವನ್ನು ಮಾಡಲಿಲ್ಲವೆಂದುಕೊಳ್ಳುತ್ತಾನೆ. ಆದ್ದರಿಂದ ಗುರುಗಳು ಯಾವ ಕಾರ್ಯಗಳು ಆಚರಿಸಿದರೂ ಕರ್ಮ ಬೇಧ ಬಿಟ್ಟಿರುತ್ತಾರೆ.

**೮ ॥ ಘಟ ಜಲದಲ್ಲಿ ಗಗನಛಾಯೆ ಇರುವಂತೆ**
**ಕುಟಿಲ ಜಗದಜತೆ ಕೂಡಿರುವ**
**ಅತಿ ವಿಲಕ್ಷನಾರ್ಥಸ್ಥಿತಿಯನ್ನು ತಿಳಿದಂತಾಗುತ್ತದೆ**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಸಕಲ ಶರೀರಗಳಲ್ಲಿ ಮೂರವಸ್ಥೆಗಳಲ್ಲಿ ಚೈತನ್ಯಕೊಡುವ ಓ ಆತ್ಮಾ! ಕೇಳು. ಮೇಲಿರುವ ವಿಶಾಲ ಆಕಾಶ ಮಡಿಕೆನೀರಿನಲ್ಲಿ ಪ್ರತಿಬಿಂಬಿಸಿ ಕಾಣಿಸುವ ರೀತಿಯಲ್ಲಿ ಆತ್ಮನಲ್ಲಿ ಕೂಡಿರುವ ಗುರುಗಳು ಕೂಡ ಮೂರ್ಖದ ಮನುಷ್ಯರಲ್ಲಿರುವಂತೆ ಕಾಣಿಸುತ್ತಾರೆ. ಮಡಿಕೆಯಲ್ಲಿನ ಆಕಾಶ ಕಣ್ಣಿಗೆ ಕಾಣಿಸಿದರೂ ನಿಜವಾಗಲು ಅದು ಮಡಿಕೆಯಲ್ಲಿಲ್ಲದಂತೆ, ಮೂರ್ಖರ ಮಧ್ಯದಲ್ಲಿ ಯೋಗಿಗಳು ಕಾಣಿಸಿದರೂ ನಿಜವಾಗಲು ಅವರು ಬೇರೆ ಭಾವನೆಯಿಂದ ಇರುತ್ತಾರೆ.

**ವಿಶೇಷಾರ್ಥ :–** ಮೇಲಕ್ಕೆ ತಲೆ ಎತ್ತಿ ನೋಡದವನಿಗೆ ಮಡಿಕೆ ನೀರಿನಲ್ಲಿ ಆಕಾಶ ಮತ್ತು ಮೇಘಗಳೆಷ್ಟೋ ಕಾಣಿಸಿದಾಗ ಅವನು ನೋಡುತ್ತಿರುವುದು ಆಕಾಶ ಮೇಘಗಳೆನ್ನುವ ಮಾತು ನಿಜ. ಏಕೆಂದರೇ ಅವನು ನಿಜವಾಗಲು ಕಣ್ಣಿನಿಂದ ನೋಡುತ್ತಿದ್ದಾನೆ. ಆಕಾಶ ಮೇಘವೇಂದರೇ ಮಳೆ ಸುರಿಯುವ ಸ್ವಭಾವವಿದೆ. ಆದರೆ ಕಣ್ಣಿಗೆ ಕಾಣಿಸುವ ಮಡಿಕೆಯಲ್ಲಿನ ಮೇಘವು ಮಳೆ ಸುರಿಯುವ ಸ್ವಭಾವ ಇಲ್ಲದಿರುವುದು. ಹಾಗೇ ಸಾಮಾನ್ಯ ಮನುಷ್ಯನಂತೆ ಮೂರ್ಖರು ಮಾಡುವ ಕೆಲಸಗಳನ್ನೇ ಗುರುಗಳು ಮಾಡುತ್ತಿದ್ದರೂ, ಕಾಣಿಸುವುದನ್ನನುಸರಿಸಿ ಗುರುಗಳನ್ನು ಕೂಡ ಮೂರ್ಖರಾಗಿಯೇ ಲೆಕ್ಕಹಾಕಿದರೂ ಅವರು ಕರ್ಮಗಳನ್ನನುಭವಿಸುವ ಸ್ವಭಾವ ಇಲ್ಲದವರಾಗಿರುತ್ತಾರೆ. ಕರ್ಮವನ್ನು ಭಸ್ಮಿಪಟಲ ಮಾಡುವ ಸ್ವಭಾವ ಇರುವವರಾಗಿರುತ್ತಾರೆ. ಮಳೆ ಸುರಿಸಿದ ಮೇಘವನ್ನು ಮೇಘವೆಂದು, ಕರ್ಮಗಳು ಸುಡುವವರನ್ನು ಗುರುಗಳೆಂದು ಅನುಭವಪೂರ್ವಕವಾಗಿ ತಿಳಿಯಲಾಗುತ್ತದೆ. ಆದರೆ ದೃಷ್ಟಿಯಿಂದ ತಿಳಿಯುವುದು ಅಲ್ಲ. ಬಿಸಿಲು ಕುದುರೆಯಲ್ಲಿ ನೀರಿರುವಂತೆ ಕಣ್ಣಿಗೆ ತಿಳಿಯುತ್ತದೆ. ಆದರೆ ನಿಜವಾಗಿ ಅಲ್ಲಿಗೆಹೋಗಿ ನೋಡಿದರೆ ನೀರಿರುವುದಿಲ್ಲ. ಪ್ರತಿ ಮಾನವನು

ಸತ್ಯಾನ್ವೇಷಣೆ ಮಾಡಿದಾಗ ಸತ್ಯ ತಿಳಿಯುತ್ತದೆ. ಮೇಲ್ನೋಟಕ್ಕೆ ಕಾಣಿಸುವುದು ಸತ್ಯವಲ್ಲ.

ಘಟಜಲಗಳಲ್ಲಿ ಕಾಣಿಸುವ ಆಕಾಶ ಕೈಗೆ ದೊರೆಯುವುದಿಲ್ಲ. ಕೈ ಸ್ಪರ್ಶಕ್ಕೆ ಕಾಣಿಸದೆ ಹೋಗುತ್ತದೆ. ಹಾಗೇ ಗುರುಗಳು ಅಜ್ಞಾನಿಗಳಂತೆ ವರ್ತಿಸುತ್ತಿದ್ದರೂ, ಕರ್ಮ ಅವರನ್ನು ಬಂಧಿಸಲಾರದು. ಕರ್ಮ ಸ್ಪರ್ಶಕ್ಕೆ ಅವರು ದೊರೆಯುವುದಿಲ್ಲ.

**ಆ ॥ ಧ್ವಂಸ ಕವಿಗಳು ಧರೆಯನ್ನು ದಂಡೆತ್ತಿದ್ದಾರೆ.**
**ಖುದುರ ಮೇಲೆ ಯುದ್ಧ ಬುದ್ಧಿ ಹೊಂದಿ**
**ಸಹಿಸಲಾರದ ಭೇದ ವಾಧ ಯುದ್ಧಕ್ಕೆ**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಪಾಪ ಮಾಡುವಾಗ, ಪುಣ್ಯ ಮಾಡುವಾಗ ಒಂದೇ ವಿಧವಾಗಿ ಶರೀರಕ್ಕೆ ಶಕ್ತಿಯನ್ನು ಕೊಟ್ಟು ಯಾವ ಕರ್ಮ ಅಂಟದಂತಿರುವ ಓ ಆತ್ಮಾ! ಕೇಳು. ಪ್ರಪಂಚದಲ್ಲಿ ಕವಿಗಳು ಇದ್ದಾರೆ ಮತ್ತು ಜ್ಞಾನಿಗಳು ಇದ್ದಾರೆ. ಕವಿಗಳು ಊಹಾಜನಿತಗಳಾದ ಎಷ್ಟು ಬರಹಗಳನ್ನಾದರೂ ಬರೆಯಬಲ್ಲರು ಮತ್ತು ಹೇಳಬಲ್ಲರು. ಕವಿಗಳ ಮಾತುಗಳಲ್ಲಿ ಬರಹದಲ್ಲಿ ಮಾತು ಹೊಂದಾಣಿಕೆ, ಬರಹಗಳ ಸೊಂಪು ಇರುತ್ತದೆ. ಜ್ಞಾನಿಗಳಾದವರು ಯಾವ ವಿಷಯವನ್ನು ಊಹೆಗಳಿಂದ ಹೇಳುವುದಿಲ್ಲ. ಜ್ಞಾನಿಗಳು ಹೇಳುವ ಮಾತುಗಳಿಗೆ ಶಾಸ್ತ್ರಬದ್ಧತೆ ಇರುತ್ತದೆ. ಕವಿಗಳು ಕವಿತ್ವವನ್ನುಪಯೋಗಿಸುತ್ತಾ ಜ್ಞಾನಿಗಳರೂಪದಲ್ಲಿ ಇರಬಹುದು ಆದರೆ, ಜ್ಞಾನಿಗಳು ಮಾತ್ರ ಕವಿತ್ವವನ್ನು ಉಪಯೋಗಿಸುವ ಕವಿಗಳಾಗಿ ಇರಲಾರರು. ಕವಿಗಳ ಹತ್ತಿರ ಇಲ್ಲದ ಜ್ಞಾನಶಕ್ತಿ ಜ್ಞಾನಿಗಳ ಹತ್ತಿರ ಇರಬಹುದು. ಆದ್ದರಿಂದ ಜ್ಞಾನಿಗಳ ಮಾತುಗಳನ್ನು, ಬರಹಗಳನ್ನು ಕವಿಗಳು ಭಾಷಾ ದೋಷವೆಂದೋ, ಉಚ್ಛಾಟನೆ ದೋಷವೆಂದೋ ತಪ್ಪುಗಳು ಹಿಡಿಯುತ್ತಿರುತ್ತಾರೆ. ಮುಖ್ಯ ವಿಷಯವೇನೆಂದರೇ ಜ್ಞಾನಿಗಳು ಭಾಷಾಪಂಡಿತರು ಅಲ್ಲ, ಆದ್ದರಿಂದ ಅವರ ಮಾತುಗಳಲ್ಲಿ ಬರಹಗಳಲ್ಲಿ ಚಿಕ್ಕ ಚಿಕ್ಕ ತಪ್ಪುಗಳಿರ ಬಹುದು. ಅವುಗಳನ್ನು ಬಿಟ್ಟು ಭಾವವನ್ನೇ ಮುಖ್ಯವಾಗಿ ನೋಡಬೇಕು.

ಭಾವವನ್ನು ನೋಡದೆ ಸಹಿಸಲಾರದ ಬುದ್ಧಿಹೊಂದಿ ಜ್ಞಾನಿಗಳೊಂದಿಗೆ ವಾಧ ಭೇದವಾಡುತ್ತಾ ಯುದ್ಧ ಬುದ್ಧಿ ಹೊಂದಿರುತ್ತಾರೆ. ಅಂತಹವರಿಗೆ ಜ್ಞಾನ ಎಂದಿಗೂ ಉಂಟಾಗುವುದಿಲ್ಲ. ಕವಿಗಳು ಎಂದಿಗೂ ಜ್ಞಾನಿಗಳೊಂದಿಗೆ ಭಾಷೆಯಲ್ಲಿ ಪೋಟಿ ಬೀಳಬಾರದು, ಭಾವನೆ ತಿಳಿದುಕೊಂಡು ಚೆನ್ನಾಗಿರಬೇಕು.

**ಆ ॥ ಭೂಸಮಾಧಿ ಗಾಗಿ ಭುವಿಯಲ್ಲಿನ ಜನರೆಲ್ಲ**
**ಬುದ್ಧಿಯಲ್ಲಿ ಆಸೆ ಪಡುವವರು**
**ಬುದುಗಳಿಗಿನ್ನು ದಿಕ್ಕು ಹುಟ್ಟುವುದಿಲ್ಲ**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಭೂಮಿಯಲ್ಲಿ ಎಷ್ಟು ಜೀವರಾಶಿಗಳಿವೆಯೋ ಎಲ್ಲವುಗಳಲ್ಲಿ ಎಲ್ಲ ಆತ್ಮಗಳಾಗಿ ವಿಭಜಿಸಲ್ಪಟ್ಟು, ಪರಮಾತ್ಮ ಪ್ರತಿನಿಧಿಯಾಗಿ ಪ್ರಕೃತಿಯಲ್ಲಿ ಬೆರೆತು ಶರೀರದಲ್ಲಿ ಕೆಲಸ ಮಾಡುತ್ತಿರುವ ಓ ಆತ್ಮಾ! ಕೇಳು. ಬದುಕಿರುವಾಗಲೇ ಸಮಾಧಿ ಎಂದು ಭೂಮಿಯಲ್ಲಿ ಹೂತಿಟ್ಟುಕೊಂಡು ಹೆಸರು ತಂದುಕೊಳ್ಳಬೇಕೆಂದು ಕೆಲವರು ಯತ್ನಿಸುತ್ತಿರುತ್ತಾರೆ. ಮತ್ತೆ ಕೆಲವರು ಮರಣಿಸಿದ ನಂತರ ಸಮಾಧಿ ಕಟ್ಟಿಸಿಕೊಂಡು, ಪೂಜೆಗಳು ಮಾಡಿಸಿಕೊಳ್ಳಬೇಕೆಂದು ಆಸೆ ಪಡುವವರು ಇದ್ದಾರೆ. ಸಮಾಧಿ ಎಂದರೇ ಏನೋ ಅರ್ಥ ತಿಳಿಯದವರು, ಸಮಾಧಿ ಒಂದರ ಬೆಲೆಯನ್ನು ತಿಳಿಯದವರು, ಈ ವಿಧವಾಗಿ ಆಸೆ ಇಟ್ಟುಕೊಂಡರೆ ಅದಕ್ಕೆ ಪವಿತ್ರತೆ ಏನು ಇರುತ್ತದೆ. ಜ್ಞಾನಿಗಳಾಗಿ ಯೋಗವಾಚರಿಸಿ, ಯೋಗಶಕ್ತಿ ಹೊಂದಿದವರಿಗೆ ನಿಗಧಿಸಲ್ಪಟ್ಟ ಸಮಾಧಿಗಳ ಮೇಲೆ ಅಜ್ಞಾನಿಗಳು ಆಸೆ ಬೆಳೆಸಿಕೊಂಡಿದ್ದಾರೆ. ಎಲ್ಲರೂ ಸಮಾಧಿಯಾದರೆ ಜ್ಞಾನ ತಿಳಿದ ಯೋಗಿಗಳಿಗೇನು ಪ್ರತ್ಯೇಕತೆ ಇರುತ್ತದೆ. ಅಜ್ಞಾನಿಗಳು ಸಮಾಧಿ ಮಾಡಿಸಿಕೊಳ್ಳುವುದು ಒಳ್ಳೆಯದಲ್ಲ.

**ಆ ॥ ಸಲ್ಲದು ಭೂ ಸಮಾಧಿ ತತ್ತ್ವ ಜ್ಞಾನವಿಲ್ಲದ**
**ನರರು ಕೋರಿದರೆ ನರಕವಾಗುತ್ತದೆ**
**ಬುದುಲ ಗಾಗಿಯದು ಪೂಜ್ಯತೆ ಹೊಂದಿರುವ**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :-** ಯಾವ ವಿಷಯದೊಂದಿಗೆ ಸಂಬಂಧವಿಲ್ಲದೆ ಶರೀರದಲ್ಲಿನ ಕರ್ಮ ಪ್ರಕಾರ ಶರೀರವನ್ನು ನಡೆಸುವ ಓ ಆತ್ಮ! ಕೇಳು. ಸ್ವಲ್ಪವೂ ಆತ್ಮಜ್ಞಾನ ತಿಳಿಯದವರು ಭೂಸಮಾಧಿ ಆಗಬೇಕೆಂದು, ಅದೂ ಜೀವಸಮಾಧಿ ಆಗಬೇಕೆಂದು ಕೋರಿಕೊಂಡರೆ ಅದು ಅವರಿಗೆ ನರಕವೇ ಆಗುತ್ತದೆ. ಭೂಸಮಾಧಿ ತತ್ತ್ವಜ್ಞಾನ ತಿಳಿದು, ಬ್ರಹ್ಮಯೋಗ ಹೊಂದಿ ಶರೀರದೊಂದಿಗೆ ಯಾವ ಕೆಲಸ ಇಲ್ಲದಂತೆ ಯೋಗದಲ್ಲಿ ನಿಂತುಹೋಗುವವರಿಗೆ ಅದು ಅಗತ್ಯ. ಸಮಾಧಿ ಎಂದರೇ ಬುದ್ಧಿಗೆ ಸಮವಾಗಿ ತಿಳಿಯುವುದು ಆತ್ಮವೆಂದು ಅರ್ಥ. ಬ್ರಹ್ಮಯೋಗದಲ್ಲಿ ಮಾತ್ರ ಮನಸ್ಸು ನಿಂತುಹೋಗುವುದರಿಂದ ಬುದ್ಧಿಗೆ ಯಾವ ವಿಷಯ ತಿಳಿಯದೆ, ಅದಕ್ಕೆ ಸಮಾಂತರದಲ್ಲಿ ಎದುರಿಗಿರುವ ಆತ್ಮವೇ ತಿಳಿಯುತ್ತದೆ. ಆ ಸ್ಥಿತಿಯನ್ನೇ ಸಮಾಧಿ ಎಂದು ಕೂಡ ಅನ್ನುತ್ತಾರೆ. ಬ್ರಹ್ಮಯೋಗದಲ್ಲಿ ಬುದ್ಧಿಯಿಂದ ಜೀವಾತ್ಮ ಆತ್ಮವನ್ನು ಅನುಭವಿಸುತ್ತಿದೆ ಆದ್ದರಿಂದ ಅದನ್ನು ಜೀವಸಮಾಧಿ ಎನ್ನುತ್ತಾರೆ. ಜೀವಿಯು ತನಗೆ ಸಮವಾಗಿ ಆತ್ಮವನ್ನು ಅನುಭವಿಸುವುದನ್ನು ಜೀವಸಮಾಧಿ ಎನ್ನಬಹುದು. ಇದೇನೊ ಹೊಸ ನಿರ್ವಚನೆ ಎಂದುಕೊಳ್ಳಬೇಡಿ. ಆನೆ ಬದುಕಿದರೂ ಸಾವಿರ ರೂಪಾಯಿಗಳೇ, ಸತ್ತರೂ ಸಾವಿರ ರೂಪಾಯಿಗಳೇ ಎನ್ನುವಂತೆ, ಬ್ರಹ್ಮಯೋಗಿ ಬದುಕಿದರೂ ಸಮಾಧಿ ಹೊಂದಿದವನೆ ಸತ್ತರೂ ಸಮಾಧಿ ಹೊಂದಿದವನೆ. ಆ ಗುರುತಿಗಾಗಿ ಯೋಗಿಗಳನ್ನು ಭೂಸಮಾಧಿ ಮಾಡಿ ತೋರಿಸಬೇಕಾಗಿದೆ. ಈ ವಿಷಯ ತಿಳಿಯದ ಅಜ್ಞಾನಿಗಳು ಕೆಲವರು ಪ್ರಜೆಗಳಲ್ಲಿ ಸ್ವಲ್ಪ ಗುರುತು ಹೊಂದಿದ ಮಾತ್ರಕ್ಕೆ ಭೂಸಮಾಧಿ ಆಗಬೇಕೆಂದುಕೊಳ್ಳುವುದು ಒಳ್ಳೆಯದಲ್ಲ. ಜೀವಸಮಾಧಿ ಬೇಕೆಂದು, ಅವರ ಗುಂಡಿ ಅವರೇ ತೆಗೆಸಿಕೊಂಡು, ಅದರಲ್ಲಿ ಕುಳಿತುಕೊಂಡು ಮುಚ್ಚಿಸಿಕೊಂಡು, ಪೂಜೆಗಳು ಹೊಂದಬೇಕೆಂದುಕೊಳ್ಳುವುದು ತಪ್ಪು. ಹಾಗೆ ಕುಳಿತುಕೊಂಡರೆ ಮೇಲೆ ಮುಚ್ಚಿಹಾಕಿದ ನಂತರ ಐದು ನಿಮಿಷಗಳಿಗೆ ಪ್ರಾಣವಾಯುವು ಸಿಗದೆ ಊಸಿರಾಡದೆ ನರಕಯಾತನೆ ಅನುಭವಿಸಿ ಇಪ್ಪತ್ತು ನಿಮಿಷಗಳೊಳಗೆ ಮರಣಿಸುತ್ತಾರೆ. ಹೊರಗಾಗಲಿ, ಒಳಗಾಗಲಿ ಶ್ವಾಸದ ಮೇಲೆ ಧ್ಯಾಸವಿಲ್ಲದ, ಶ್ವಾಸದಿಂದ ಕೆಲಸವಿಲ್ಲದ ಬ್ರಹ್ಮಯೋಗಿಗಳೇ ಭೂಸಮಾಧಿಗೆ ಅರ್ಹರು.

**ಆ ॥ ಆತ್ಮ ಜ್ಞಾನವೆನ್ನುವ ಅಗ್ನಿಯಿಂದ ಸುಟ್ಟ**
**ತತ್ತ್ವಜ್ಞ ತನುವು ತಪ್ಪದಂತೆ**
**ಭೂಸಮಾಧಿ ಮಾಡಿ ಪೂಜಿಸಬೇಕು ನರರು**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ:–** ಶರೀರದಲ್ಲಿನ ಬ್ರಹ್ಮನಾಡಿ ಒಂದರ ಏಳು ದ್ವಾರಗಳ ಮೂಲಕ ಮತ್ತು ಗ್ರಂಥಿಗಳೊಂದರ ಏಳು ದ್ವಾರಗಳ ಮೂಲಕ ಶರೀರವನ್ನು ಪಾಲಿಸುವ ಓ ಆತ್ಮಾ! ಕೇಳು. ಯೋಗ ಮಾಡಿ ಜ್ಞಾನಾಗ್ನಿಯನ್ನು ಸಂಪಾದಿಸಿ, ಜ್ಞಾನಾಗ್ನಿಯಿಂದ ಶರೀರದಲ್ಲಿನ ಕರ್ಮಗಳನ್ನು ಸುಟ್ಟುಹಾಕಿದ ತತ್ತ್ವಜ್ಞ(ಯೋಗಿ) ಮರಣಿಸಿದ ನಂತರ, ಆತನ ಶರೀರವನ್ನು ಭೂಸ್ಥಾಪಿತ ಮಾಡಿ ಮಾನವರು ಪೂಜಿಸಬೇಕು.

**ವಿಶೇಷಾರ್ಥ :–** ಯೋಗಿಗಳು ಜ್ಞಾನಾಗ್ನಿ ಸಂಪನ್ನರಾಗಿ ಇರುತ್ತಾರೆ. ಅಂತಹ ಯೋಗಿಗಳು ಬದುಕಿರುವಾಗ ಅವರಿಂದ ಜ್ಞಾನಾಗ್ನಿ ಕಿರಣಗಳು ಹೊರಗೆ ಬರುತ್ತಿರುತ್ತವೆ. ದೊಡ್ಡ ಯೋಗಿಗಳಾದ ಪಕ್ಷದಲ್ಲಿ ಅವರಿಂದಲೇ ಅಲ್ಲದೇ, ಅವರೊಂದರ ಚಿತ್ರಪಟದಿಂದ ಕೂಡ ಶಕ್ತಿ ಕಿರಣಗಳು ಬರುತ್ತಿರುತ್ತವೆ. ಅಂತಹವರು ಮರಣಿಸಿದ ತಕ್ಷಣ ಅವರ ಪಟದಿಂದ ಕಿರಣಗಳು ಬರುವುದು ನಿಂತುಹೋಗುತ್ತವೆ. ಇನ್ನೂ ದೊಡ್ಡ ಯೋಗಿಗಳಾದಲ್ಲಿ ಅವರ ಮರಣಾನಂತರ ಅವರ ಪಟದಿಂದ, ಅವರ ಶರೀರವನ್ನು ಸ್ಥಾಪಿತ ಮಾಡಿದ ಸ್ಥಳದಿಂದ ಕಿರಣಗಳು ಸ್ವಲ್ಪಕಾಲದವರೆಗು ಬರುತ್ತಿರುತ್ತವೆ. ಯೋಗಿಗಳ ಹಿರಿಮೆಯನ್ನು ಅನುಸರಿಸಿ ಮರಣಿಸಿದ ನಂತರ ಕಿರಣಗಳು ಬರುವ ಕಾಲವಿರುತ್ತದೆ. ನಮ್ಮ ಚರಿತ್ರೆಯಲ್ಲಿ 100 ವರ್ಷಗಳ ವರೆಗು ಅವರ ಸಮಾಧಿಗಳಿಂದ ಶಕ್ತಿ ಹೊರಗೆ ಬಂದಿರುವ ಯೋಗಿಗಳಿದ್ದಾರೆ.

ಆತ್ಮಜ್ಞಾನವೆನ್ನುವ ಅಗ್ನಿ ಸಂಪಾದಿಸಿದ ಯೋಗಿಗಳ ಶರೀರಗಳನ್ನು ಭೂಸಮಾಧಿ ಮಾಡಿ ಪೂಜಿಸುತ್ತಿದ್ದರೂ ಅಲ್ಲಿಂದ ಆತ್ಮಕಿರಣಗಳು ಹೊರಟು ಬರುತ್ತಿರುತ್ತವೆ, ಆದ್ದರಿಂದ ಪೂಜಿಸುವವರ ಕರ್ಮಗಳು ಕೂಡ ಸುಟ್ಟು

ಹೋಗುತ್ತವೆ. ಪ್ರತ್ಯಕ್ಷ ಸಾಕ್ಷಿಯಾಗಿ ದೇಶದಲ್ಲಿ ಕೆಲವು ಸಮಾಧಿಗಳ ಹತ್ತಿರ ಕರ್ಮಗಳ ನಿವಾರಣೆ ಇಂದಿಗೂ ನಡೆಯುತ್ತಿದೆ.

**ಆ ॥ ನಿದ್ರೆ ಬಿಟ್ಟು ಕಾದು ಕುಳಿತುಕೊಂಡರೂ**
**ಭದ್ರವೆಂದರು ಮೂಢ ಬದ್ಧ ಜನರು**
**ನಿದ್ರೆಯಲ್ಲಿಯು ಯೋಗ ನಿದ್ರೆಕಾಣದೆ**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಸಮಸ್ತ ಜೀವರಾಶಿಗಳ ಬುದ್ಧಿಗೆ ಸಮಾನವಾಗಿ ಅರ್ಥವಾಗುವ ಓ ಆತ್ಮಾ! ಕೇಳು. ನಿದ್ರೆಯನ್ನು ಜಯಿಸಿದವನು ಯೋಗಿ ಎನ್ನುವಮಾತು ಕೇಳಿ, ಅದರ ಭಾವನೆ ಪೂರ್ತಿ ಅರ್ಥವಾಗದೆ ಕೆಲವರು ನಿದ್ರೆಯಲ್ಲಿನ ಯೋಗವನ್ನು ತಿಳಿದುಕೊಳ್ಳದೆ ನಿದ್ರೆಹೋಗುವುದು ಬಿಟ್ಟು ನಾವು ಯೋಗಿ ಗಳೆನ್ನುತ್ತಿದ್ದಾರೆ.

**ವಿಶೇಷಾರ್ಥ :–** ಯೋಗಿಗಳು ನಿದ್ರೆಯನ್ನು ಜಯಿಸಿದವರು, ನಿದ್ರೆಯನ್ನೆ ನಿದ್ರೆ ಮಾಡಿಸುವವರೆನ್ನುವ ಮಾತುಗಳು ಕೆಲವರು ಕೇಳಿ ನಿದ್ರೆಹೋಗದಂತೆ ಎಚ್ಚರದಿಂದಿರುವುದಕ್ಕೆ ಅಭ್ಯಾಸಪಡುತ್ತಿದ್ದಾರೆ. 12 ಗಂಟೆಗಳು ನಿದ್ರೆಹೋಗುವವನು 6 ಗಂಟೆಗಳು ನಿದ್ರೆಹೋಗಿ, 6 ಗಂಟೆಗಳು ನಿದ್ರೆ ಜಯಿಸಿದ್ದಾನೆಂದುಕೊಳ್ಳೋಣ, ಅವನಿಗೆ ಎಂದಿಗೂ 6 ಗಂಟೆಗಳ ನಿದ್ರೆ ಬರುತ್ತದೆ. 6 ಗಂಟೆಗಳ ನಿದ್ರೆಬರುವುದಿಲ್ಲ. ನಿದ್ರೆಬಾರದಂತೆ ಅಭ್ಯಾಸ ಮಾಡಿಕೊಂಡ ಸಮಯದಲ್ಲಿ, ನಿದ್ರೆಬರಬೇಕೆಂದು ಪ್ರಯತ್ನ ಮಾಡಿದರು ಅಭ್ಯಾಸದ ಪ್ರಕಾರ ನಿದ್ರೆಬರುವುದಿಲ್ಲ. ತನ್ನ ನಿದ್ರೆ ತನ್ನ ಇಷ್ಟದ ಪ್ರಕಾರ ಬಾರದಿರುವಾಗ ನಿದ್ರೆ ತನ್ನಮಾತು ಹೇಗೆ ಕೇಳಿದಂತಾಗುತ್ತದೆ. ಅಂತಹವನಿಗೆ ನಿದ್ರೆ ತನ್ನವಶವಾಗಲಿಲ್ಲವೆಂದು, ನಿದ್ರೆಯನ್ನು ಅವನು ಜಯಿಸಲಿಲ್ಲವೆಂದು ಹೇಳಬಹುದು. ನಿದ್ರೆಯನ್ನು ಜಯಿಸುವುದೆಂದರೇ ನಿದ್ರೆಯನ್ನು ಬಿಟ್ಟುಹಾಕುವುದಲ್ಲ. ನಿದ್ರೆ ಹೋದರೂ ಎಚ್ಚರ ಹೊಂದಿರುವುದೆಂದು ಅರ್ಥ, ನಿದ್ರೆ ಎಂದರೇ ಮನಸ್ಸನ್ನು ಮರೆಸುವುದು. ನಿದ್ರಿಸುವವೇಳೆಯಲ್ಲಿ ಮನಸ್ಸು ಮರೆವಿಗೆ ಹೋಗದೇ, ಜಾಗ್ರತೆಯಾಗಿ ಇರುವುದೇ (ಯೋಗ) ನಿದ್ರೆಯನ್ನು

ಜಯಿಸುವುದು. ಶರೀರ ನಿದ್ರೆಹೋದರೂ ಮನಸ್ಸು ಎಚ್ಚರ ಇರುವುದೇ ಯೋಗ. ಆದ್ದರಿಂದ ಮೇಲಿನ ಪದ್ಯದಲ್ಲಿ ನಿದ್ರೆಯಲ್ಲಿಯು ಯೋಗನಿದ್ರೆಯೆಂದು ಯೋಗವನ್ನು ಸಂಬೋಧಿಸಿದ್ದಾರೆ.

**ಆ ॥ ನಿದ್ರೆಬಿಡಬಾರದು ನಿದ್ರೆ ಮಾಡಿದರೆ ಬಾರದು**
**ನಿದ್ರೆಯಲ್ಲಿಯು ಯೋಗ ನಿದ್ರೆ ತಿಳಿದು**
**ಮುದ್ರೆಯಲ್ಲಿಯು ಬ್ರಹ್ಮಮೂರ್ತಿಯನ್ನು ಕಾಣಯ್ಯ**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಅಯಮಾತ್ಮ ಬ್ರಹ್ಮವೆಂದು ಸಮಸ್ತ ಯೋಗಗಳಿಂದ ಉಚ್ಚರಿಸಲ್ಪಡುವ ಓ ಆತ್ಮಾ! ಕೇಳು. ನಿದ್ರೆಯನ್ನುಬಿಟ್ಟು ಜಾಗ್ರತ್ತಾವಸ್ಥೆಯಲ್ಲಿ ಇರಬಾರದು. ಮತ್ತು ನಿದ್ರೆಹೋದರೂ ನಿದ್ರೆಯಲ್ಲಿಯೇ ಯೋಗನಿದ್ರೆಯಾಗಿ ಇರಬೇಕು. ಯೋಗನಿದ್ರೆ ಸ್ಥಿತಿಯಲ್ಲಿಯೇ ಆತ್ಮವನ್ನು ನೋಡಬೇಕು.

**ವಿಶೇಷಾರ್ಥ:–** ಶರೀರದಲ್ಲಿನ 24 ಭಾಗಗಳಲ್ಲಿ ಮುಖ್ಯವಾದುದು ಮನಸ್ಸು. ಸೂರ್ಯ ಚಂದ್ರ ನಾಡಿಗಳ ಮೇಲೆ ಸಂಚರಿಸುವ ಮನಸ್ಸು, ವಿಷಯಗಳನ್ನು ಜ್ಞಾಪಕ ತರುವ ಮನಸ್ಸು, ಬಾಹ್ಯೇಂದ್ರಿಯಗಳಿಗು ಅಂತರೇಂದ್ರಿಯಗಳಿಗು ಮಧ್ಯವರ್ತಿಯಾಗಿರುವ ಮನಸ್ಸು, ಸೂರ್ಯ ಚಂದ್ರ ನಾಡಿಗಳ ಮೇಲಿದ್ದು ತನ್ನಕೆಲಸ ಮಾಡುವ ಸ್ಥಿತಿಯನ್ನೇ ಜಾಗ್ರತೆಯೆನ್ನುತ್ತಿದ್ದೇವೆ. ಮನಸ್ಸು ಸೂರ್ಯ ಚಂದ್ರ ನಾಡಿಗಳನ್ನು ಬಿಟ್ಟು ಬ್ರಹ್ಮನಾಡಿಯಲ್ಲಿ ತನಗೆ ತಾನಾಗಿ ಸೇರಿಹೋಗುವುದೇ ನಿದ್ರೆಯೆಂದು ಹೇಳುತ್ತೇವೆ. ನಿದ್ರೆ ಸಮಯದಲ್ಲಿ ಮನಸ್ಸು ತನ್ನ ಸಹಜಶಕ್ತಿಯಾದ ಜ್ಞಾಪಕಶಕ್ತಿಯನ್ನು ಕಳೆದುಕೊಂಡು ವಿಶ್ರಾಂತಿಯಾಗಿರುತ್ತದೆ. ಆದ್ದರಿಂದ ನಿದ್ರೆ ಸಮಯದಲ್ಲಿ ಯಾವ ವಿಷಯವನ್ನು ತಿಳಿಯದೆ ಜೀವಿಯು ಅಂಧಕಾರದಲ್ಲಿ ಇರುತ್ತಾನೆ. ಮನಸ್ಸು ಬ್ರಹ್ಮನಾಡಿಯನ್ನು ಬಿಟ್ಟು ಸೂರ್ಯಚಂದ್ರ ನಾಡಿಗಳನ್ನು ಸೇರಿದಾಗ, ಹೊರಗಿನ ಪ್ರಪಂಚ ವಿಷಯಗಳು ಮತ್ತು ಜ್ಞಾಪಕಶಕ್ತಿಯಿಂದ ನಡೆದಿರುವವು ನಡೆಯುವಂತಹ ವಿಷಯಗಳ ಆಲೋಚನೆಗಳು ಜೀವಿಗೆ ತಿಳಿಸುತ್ತಿರುತ್ತದೆ. ಈ ಸ್ಥಿತಿಯನ್ನೇ ಜಾಗ್ರತ್ತಾವಸ್ಥೆಯೆಂದು ಹೇಳುತ್ತಾರೆ. ಮನಸ್ಸು

ಬ್ರಹ್ಮನಾಡಿಯನ್ನು ಸೇರಿ ಅಲ್ಲಿ ಕೂಡ ಎಚ್ಚರ ಹೊಂದಿದ್ದು ಬ್ರಹ್ಮನಾಡಿಯಲ್ಲಿನ ಆತ್ಮವನ್ನು ಜೀವಿಗೆ ತಿಳಿಸುವುದೇ ಯೋಗ. ಆಗ ಜೀವಿಯು ಆತ್ಮಾನುಭವದಲ್ಲಿ ಇರುತ್ತಾನೆ. ಮನಸ್ಸು ಬ್ರಹ್ಮನಾಡಿಯಲ್ಲಿದ್ದೂ ಎಚ್ಚರ ಹೊಂದಿದೆ, ಆದ್ದರಿಂದ ಆ ಸ್ಥಿತಿಯನ್ನು ನಿದ್ರೆಯೆನ್ನಬಾರದು. ಮನಸ್ಸು ಎಚ್ಚರವಿದ್ದು ಬ್ರಹ್ಮನಾಡಿಯನ್ನು ಸೇರಿರುವುದು ಯೋಗನಿದ್ರೆಯೆಂದು ಕರೆಯುತ್ತಾರೆ. ಮನಸ್ಸು ಸೂರ್ಯ ಚಂದ್ರನಾಡಿಗಳಲ್ಲಿ ಇರುವುದು ಯೋಗವಲ್ಲ. ಆದ್ದರಿಂದ ಮೇಲಿನ ಪದ್ಯದಲ್ಲಿ ನಿದ್ರೆ ಮಾಡದಿದ್ದರು ಬರುವುದಿಲ್ಲ ಎಂದಿದ್ದಾರೆ. ಮನಸ್ಸು ಬ್ರಹ್ಮನಾಡಿಯಲ್ಲಿ ಎಚ್ಚರವಿಲ್ಲದೇ ಇರುವುದು ಯೋಗವಲ್ಲ. ಆದ್ದರಿಂದ ನಿದ್ರೆ ಮಾಡಿದರೆ ಬಾರದೆಂದಿದ್ದಾರೆ. ಮನಸ್ಸು ಬ್ರಹ್ಮನಾಡಿಯಲ್ಲಿ ಕೂಡ ಜ್ಞಾಪಕ ಹೊಂದಿರುವುದೇ ಯೋಗ. ಆದ್ದರಿಂದಲೇ ನಿದ್ರೆಯಲ್ಲಿಯು ಯೋಗಮುದ್ರೆ ತಿಳಿದು ಎಂದಿದ್ದಾರೆ. ಯೋಗನಿದ್ರೆ ಸಮಯದಲ್ಲಿಯೇ ಆತ್ಮ ತಿಳಿಯುತ್ತದೆ. ಆದ್ದರಿಂದ ಮುದ್ರೆಯಲ್ಲಿಯು ಬ್ರಹ್ಮಮೂರ್ತಿಯನ್ನು ನೋಡಿರಿ ಎಂದಿದ್ದಾರೆ.

**ಆ ॥ ಯೋಗಮುದ್ರಗನ್ನು ಯೋಗೀಂದ್ರ ಅತಿ ಗಾಢ**
**ನಿದ್ರೆಯಿದ್ದರು ನೇನು ನಿಶ್ಚಲವಿರುತ್ತದೆ**
**ನಿದ್ರೆಯಲ್ಲ ಯದಿಯೇ ನಿರ್ವಿಕಲ್ಪ ಸಮಾಧಿ**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಜಾಗ್ರತೆ, ಸ್ವಪ್ನ, ನಿದ್ರೆಯೆನ್ನುವ ಮೂರವಸ್ಥೆಗಳಿಗು ಸಾಕ್ಷಿಯಾಗಿರುವ ಓ ಆತ್ಮಾ! ಕೇಳು. ಯೋಗನಿದ್ರೆಯನ್ನು ತಿಳಿದ ಯೋಗಿ ಅತಿಗಾಢ ನಿದ್ರೆಯಲ್ಲಿದ್ದರೂ ಯೋಗದಲ್ಲಿ ಮುಳುಗಿರುತ್ತಾನೆ. ಹೊರಗೆ ನೋಡುವವರಿಗೆ ನಿದ್ರೆಯೇ ಕಾಣಿಸಿದರೂ ಒಳಗೆ ಮನಸ್ಸು ಆತ್ಮನಲ್ಲಿ ಎಚ್ಚರದಿಂದಿರುತ್ತದೆ. ಆದ್ದರಿಂದ ಅದನ್ನು ನಿರ್ವಿಕಲ್ಪ ಸಮಾಧಿಯೆಂದು ಹೇಳಬಹುದು.

**ಆ ॥ ಮಾಯ ಮಬ್ಬು ಮುಚ್ಚಿ ಮೇಲೆ ಕತ್ತಲಾಗಿ ಹೋಯಿತು**
**ಕತ್ತಲಲ್ಲಿ ಜಗವು ಸಿಕ್ಕಿ ಹೋಗಿ**
**ಏನು ತೋಚದಾಯಿತು ಜ್ಞಾಪಕಕ್ಕೆ ಮರೆವಾಯಿತು**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ:–** ಮೂರು ಆತ್ಮಗಳಲ್ಲಿ ಮಧ್ಯ ಆತ್ಮವಾಗಿ ಸಮಸ್ತ ಯೋಗಿಗಳಿಂದ ಆರಾಧಿಸಲ್ಪಡುವ ಓ ಆತ್ಮಾ! ಕೇಳು. ಮೂರು ಗುಣಗಳ ಪ್ರಭಾವದಿಂದ ತಮ್ಮಲ್ಲಿನ ಆತ್ಮ ಸ್ವಲ್ಪವೂ ತಿಳಿಯದಿದೆ. ಮೂರು ಗುಣಗಳ ಪ್ರಭಾವದಲ್ಲಿಯೇ ಜೀವಿಗಳೆಲ್ಲರು ಸಿಲುಕಿಕೊಂಡಿದ್ದಾರೆ. ಗುಣಗಳಲ್ಲಿ ಸಿಲುಕಿಕೊಂಡ ಮೊದಲ ಆತ್ಮನಾದ ಜೀವಾತ್ಮಗೆ ಎರಡನೆಯದಾದ ಆತ್ಮ ಏನು ತಿಳಿಯುತ್ತಿಲ್ಲ.

**ವಿಶೇಷಾರ್ಥ:–** ತಾಮಸ, ರಾಜಸ, ಸಾತ್ತ್ವಿಕವೆನ್ನುವ ಮೂರು ಗುಣಗಳನ್ನೇ "ಮಾಯೆ" ಎಂದು ಹಿರಿಯರು ಹೇಳುತ್ತಿದ್ದಾರೆ. "ಗುಣಮಯಿ ಮಮ ಮಾಯ" ಗುಣಗಳ ಕೂಡಿಕೆಯೇ ನಾ ಮಾಯೆ ಎಂದು ಗೀತೆಯಲ್ಲಿ ದೇವರು ಕೂಡ ಹೇಳಿದ್ದಾನೆ. ಆ ಗುಣಭಾಗದಲ್ಲಿ ಒಳಗೊಂಡಿರುವ ಕಾಮ, ಕ್ರೋಧ, ಮೋಹ, ಮಧ ಮಾತ್ಸರ್ಯಗಳೆನ್ನುವ ಗುಣಗಳನ್ನೇ ಮಾಯೆ ಎನ್ನುವ ಕತ್ತಲಾಗಿ ಹೇಳಿದ್ದಾರೆ. ಮೂರು ಗುಣಭಾಗಗಳಲ್ಲಿಯೇ ಜಗದಲ್ಲಿನ ಜೀವಿಗಳೆಲ್ಲರು ಸಿಕ್ಕಿಕೊಂಡಿದ್ದಾರೆ. ಆದ್ದರಿಂದ ಕತ್ತಲಲ್ಲಿ ಜಗವು ಸಿಕ್ಕಿಹೋಯಿತೆಯೆಂದು ಹೇಳಿದ್ದಾರೆ. ಗುಣಗಳಲ್ಲಿ ಸಿಲುಕಿಕೊಂಡ ಜೀವಿಯು ಆತ್ಮವನ್ನು ತಿಳಿದುಕೊಳ್ಳದಿದ್ದಾನೆ. ಆದ್ದರಿಂದ ಏನು ತೋಚದಾಯಿತೇ ಎಂದಿದ್ದಾರೆ. ಜ್ಞಾಪಕಶಕ್ತಿಯಾದ ಮನಸ್ಸು ಬ್ರಹ್ಮನಾಡಿಯಲ್ಲಿ ನಿದ್ರಾವಸ್ಥೆಯಾಗಿರುವಾಗ ಜ್ಞಾಪಕಶಕ್ತಿಯನ್ನು ಕಳೆದುಕೊಳ್ಳುತ್ತಿದೆ. ಆದ್ದರಿಂದ ಜ್ಞಾಪಕ ಮರೆವಾಯಿತು ಎಂದು ಹೇಳಿದ್ದಾರೆ.

**ಆ ॥ ಹಗ್ಗ ಭುಜಗ ಭ್ರಾಂತಿ ದಾರುಚೋರಭ್ರಾಂತಿ**
**ಗಗನದಲ್ಲಿ ಕುಸುಮ ಗಟ್ಟಿಭ್ರಾಂತಿ**
**ಕಾಣಿಸಿದಂತೆ ಜಗವು ಕಾಣಿಸುತ್ತಾ ತೊಲಗುತ್ತದೆ**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಶರೀರದಲ್ಲಿನ 25 ಭಾಗಗಳಿಗು ಅತೀತವಾಗಿದ್ದು ಶರೀರವೆಲ್ಲದಕ್ಕು ಶಕ್ತಿ ಕೊಡುವ ಓ ಆತ್ಮಾ! ಕೇಳು. ಕತ್ತಲಲ್ಲಿ ಹಗ್ಗ ಹಾವಾಗಿ ಕಾಣಿಸಿದಂತೆ, ದಾರಿ ಪಕ್ಕದಲ್ಲಿರುವ ಮೇಲ್ನೋಟಕ್ಕೆ ಹೊಡೆದು ಹಾಕಲ್ಪಟ್ಟ ಮರ ಮೊದಲು ಮೊದ್ದು ಕಳ್ಳನಹಾಗೆ ಕಾಣಿಸಿದಂತೆ, ಆಕಾಶದಲ್ಲಿನ ಹೊಗೆರೂಪವಾದ ಮೇಘ

ಗಟ್ಟಿಯಾಗಿ (ಘನಪದಾರ್ಥವಾಗಿ) ಕಾಣಿಸುವಂತೆ, ಜೀವಿಯು ಯೋಗ ಹೊಂದದ ಸಮಯದಲ್ಲಿ, ಆತ್ಮವನ್ನು ತಿಳಿಯದ ಕಾಲದಲ್ಲಿ, ಜಗವನ್ನು ಅರ್ಥ ಮಾಡಿಕೊಳ್ಳಲಾರದೆ ಜೀವಿಯೇ ಶರೀರವಾಗಿದ್ದಾನೆಂದುಕೊಳ್ಳುತ್ತಾನೆ. ಆತ್ಮವನ್ನು ತಿಳಿದ ನಂತರ ಜಗವೊಂದರ ನಿಜಸ್ವಭಾವ ತಿಳಿದವನಾಗಿ, ಜೀವಿಯು ಚೈತನ್ಯ ಇಲ್ಲದವನೆಂದು, ಎಲ್ಲದಕ್ಕು ಆತ್ಮವೇ ಚೈತನ್ಯವಾಗಿದೆಯೆಂದು ತಿಳಿದುಕೊಳ್ಳುತ್ತಾನೆ.

**ಆ ॥ ಬರೀ ಸಂಶಯ ಬಂದಿದೆ ಬಂದಿದೆ**
**ಮೊಟ್ಟಮೊದಲು ಇಲ್ಲದ ಮೂರ್ಖತನ**
**ಹಿಡಿದು ನೋಡಲು ಹೋದರೆ ನಿಗದೆ ಹೋಯಿತಯ್ಯಾ**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಪರಮಾತ್ಮನಿಗಿಂತ ಕಡಿಮೆಯವನಾಗಿ, ಜೀವಾತ್ಮಗಿಂತ ಹೆಚ್ಚಿನವನಾಗಿರುವ ಓ ಆತ್ಮಾ! ಕೇಳು. ಪ್ರಕೃತಿ, ಪರಮಾತ್ಮ ಎರಡು ಇವೆಯೆಂದು ಮೊದಲೇ ತಿಳಿದುಕೊಂಡಿದ್ದೇವೆ. ಪ್ರಕೃತಿ ಪರಮಾತ್ಮರಿಂದ ಸೃಷ್ಟಿಸಲ್ಪಟ್ಟಿರುವುದೇ, ಹೊರತು ಸ್ವತಃವಾಗಿ ಹುಟ್ಟಿರುವುದಲ್ಲ. ಪ್ರಕೃತಿ ಪರಮಾತ್ಮನನ್ನು ಆಧಾರವಾಗಿ ಮಾಡಿಕೊಂಡು ತಿರುಗುತ್ತಿದೆ, ಆದರೆ ಅದು ಸ್ವತಃವಾಗಿ ಚಲಾವಣೆ ಆಗುತ್ತಿಲ್ಲ. ಇಲ್ಲಿ ವಿಚಿತ್ರವೇನೆಂದರೇ ಪ್ರಕೃತಿ ಕಾಣಿಸುತ್ತಿದೆ, ಕೇಳಿಸುತ್ತದೆ ಮತ್ತು ಎಲ್ಲಾ ಇಂದ್ರಿಯಗಳಿಗು ಗೋಚರವಾಗುತ್ತಿದೆ. ಪರಮಾತ್ಮ ಯಾರಿಗು ಕಾಣಿಸುವುದು, ಕೇಳಿಸುವುದು ಅಲ್ಲ ಮತ್ತು ಇಂದ್ರಿಯಾಗೋಚರವಾದುದು. ಪರಮಾತ್ಮ ಶಾಶ್ವತವಾದುದು, ಪ್ರಕೃತಿ ಅಶಾಶ್ವತವಾದುದು. ಇರುವ ಸತ್ಯವಿದಾದರೆ ಭೂಮಿ ಮೇಲೆ ಮನುಷ್ಯನಿಗೆ ಇರುವುದು ಇಲ್ಲದಂತೆ, ಇಲ್ಲದಿರುವುದು ಇದ್ದಂತೆ ತಿಳಿಹೇಳುವ ದೊಡ್ಡ ಸಂಶಯ ಏರ್ಪಟ್ಟಿದೆ. ಆ ಸಂಶಯವೇ ದೇವರಿದ್ದಾನಾ ಎನ್ನುವ ಪ್ರಶ್ನೆ. ಇಲ್ಲದ ಪ್ರಕೃತಿಯನ್ನು ಇರುವಂತೆ, ಇರುವ ಪರಮಾತ್ಮನನ್ನು ಇಲ್ಲದಂತೆ ತಿಳಿಯುವುದೇ ಮಾನವನ ಮೂರ್ಖತ್ವವಾಗಿದೆ. ಆದಿಯಲ್ಲಿ ಎಲ್ಲರೂ ಜ್ಞಾನಿಗಳಾಗಿ ಇರುತ್ತಿದ್ದರು, ಆಗ ಸಂಶಯವಿಲ್ಲದೆ ನಿಜ ಜ್ಞಾನ ತಿಳಿದಿರುತ್ತಿದ್ದರು. ಕಾಲಕ್ರಮವಾಗಿ ಜ್ಞಾನ ಇಲ್ಲದಂತೆ ಹೋಗಿ ಮೊದಲು ಇಲ್ಲದ ಮೂರ್ಖತ್ವ

ಮನುಷ್ಯನಲ್ಲಿ ಏರ್ಪಟ್ಟಿದೆ. ಕತ್ತಲಲ್ಲಿ ಹಗ್ಗವನ್ನು ಹಾವಾಗಿ ಊಹಿಸಿದಂತೆ, ಮಾಯೆ ಕತ್ತಲಲ್ಲಿ ಪ್ರಕೃತಿಯೇ ದೈವವಾಗಿ ಮನುಷ್ಯನಿಗೆ ಕಾಣಿಸುತ್ತಿದೆ. ಭ್ರಮೆಯಿಂದ ಪ್ರಕೃತಿಯನ್ನು ಪ್ರಾಮುಖ್ಯವಾಗಿ ಇಟ್ಟುಕೊಂಡು ಪರಮಾತ್ಮನನ್ನು ವಿಸ್ಮರಿಸಿದವರಿಗೆ ಎಷ್ಟು ಕಾಲ ಕಳೆದರೂ ಪ್ರಕೃತಿ ಮಾರ್ಗದಲ್ಲಿ ಶಾಂತಿ ದೊರೆಯುವುದಿಲ್ಲ. ಪ್ರಕೃತಿಗೆ ಆಧಾರವಾದ ಪರಮಾತ್ಮವೇ ನಿಜವಾದ ಸಾರಾಂಶ ಇರುವವನೆಂದು ತಿಳಿಯುವವರೆಗು, ಪ್ರಕೃತಿಯನ್ನು ಆರಾಧಿಸುವವರೆಗು ಮಾಯೆ ಪ್ರಭಾವ ಬಿಡುವುದಿಲ್ಲ.

**ಆ ॥ ಮಾಯೆ ತಿಳಿಯಲ್ಪಟ್ಟು ಮರ್ದಿಸದಂತಹ**
**ಮಾನವರಿಗೆ ಯೋಗಮಾರ್ಗಗಳನ್ನು**
**ಹೇಳಿದ್ದೇನೆ ಇದರಲ್ಲಿ ಚಿತ್ರಂಬುವಾಗಿ ಮೊದಲು**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಮನೆಯಲ್ಲಿ ವಿದ್ಯುಶ್ಚಕ್ತಿಯಂತೆ ಶರೀರದಲ್ಲಿ ಚೈತನ್ಯ ಶಕ್ತಿಯಾಗಿರುವ ಓ ಆತ್ಮಾ! ಕೇಳು. ಮಾಯೆ ಎನ್ನುವ ಪದವನ್ನು ಎಲ್ಲರೂ ಕೇಳಿಯೇ ಇರುತ್ತೇವೆ. ನೀನು ಮಾಯೆಯಲ್ಲಿ ಬಿದ್ದಿದ್ದೀಯಾ ಎನ್ನುತ್ತಾರೆ. ಮಾಯೆ ಎಂದರೆ ಏನು? ಮಾಯೆ ಎಲ್ಲಿದೆ? ಮಾಯೆಯಲ್ಲಿ ಎಲ್ಲಿ ಬೀಳುತ್ತಿದ್ದೇವೆ? ಎಂದು ಪ್ರಶ್ನಿಸಿಕೊಂಡು ನೋಡಿದರೆ, ಮಾಯೆ ಎಂದರೇ ಗುಣಗಳ ಸಮೂಹವೇ ಎಂದು ತಿಳಿಯುತ್ತಿದೆ. ಗುಣಗಳಾದ ಮಾಯೆ ನಮ್ಮತಲೆಯಲ್ಲಿಯೇ ಇದೆ. ಗುಣಗಳ ಮಧ್ಯದಲ್ಲಿ ಯಾವಾಗಲೂ ಜೀವಿ ಇರುವುದರಿಂದ ಮಾಯೆಯಲ್ಲಿ ಪ್ರತ್ಯೇಕಿಸಿ ಬೀಳುವುದು ಏನುಯಿಲ್ಲ, ಪ್ರತಿ ಮನುಷ್ಯ ತನ್ನ ತಲೆಯೊಳಗೇ ಮಾಯೆಯಲ್ಲಿ ಬಿದ್ದು ಇದ್ದಾನೆಂದೇ ಹೇಳಬಹುದು. ಜನ್ಮಿಸಿದಾಗಿನಿಂದ ತಲೆಯಲ್ಲಿನ ಮಾಯೆಯಲ್ಲಿ ಮುಳುಗಿರುವ ಮಾನವರಿಗೆ ಮತ್ತು ಗುಣರೂಪದಲ್ಲಿರುವ ಮಾಯೆಯನ್ನು ಸ್ವಲ್ಪಮಟ್ಟಿಗಾದರು ತಿಳಿದುಕೊಳ್ಳದ ಮಾನವರಿಗೆ, ಮಾಯೆಯನ್ನು ಜಯಿಸಲಾರದೆ ಹೋಗುತ್ತಿರುವ ಮನುಷ್ಯರಿಗೆ, ಎಷ್ಟೋ ಚಿತ್ರವಾಗಿ ಯೋಗಮಾರ್ಗಗಳು ಅರ್ಥವಾಗುವಂತೆ ತಿಳಿಸಿದ್ದೇನೆ. ಯೋಗಮಾರ್ಗ ಅರ್ಥವಾಗಿಹೋಗಿ ಮಾಯೆಯನ್ನು ಜಯಿಸುವು ದಕ್ಕೆ ಸಾಧ್ಯವಾಗುವಂತೆ ಬೋಧಿಸಿದ್ದೇವೆ.

**ಆ ॥ ಚಿತ್ತ ಶುದ್ಧಿ ಇಲ್ಲದ ಚಂಚಲ ಮತಿಗಳಿಗೆ**
**ಭಕ್ತಿ ಯೋಗ ಜ್ಞಾನ ಭಾವವೆಲ್ಲ**
**ಹೇಳಬೇಕು ಹೀಗೆ ಹೇಳದೆ ತೀರದು**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಯೋಗಿಗಳಲ್ಲಿ ಭೋಗಿಗಳಲ್ಲಿ ಸಮಾನ ವೃತ್ತಿ ಹೊಂದಿರುವ ಓ ಆತ್ಮಾ! ಕೇಳು. ಯಾವಾಗಲು ಮಾಯಾ ಗುಣಗಳಲ್ಲಿ ಸಿಕ್ಕಿಬಿದ್ದು, ಪ್ರಪಂಚ ಕೆಲಸಗಳಲ್ಲೇ ಲಗ್ನವಾಗಿ, ಅವುಗಳಲ್ಲಿ ಯಾವ ತೃಪ್ತಿಯಿಲ್ಲದೆ, ಚಿತ್ತ ಶುದ್ಧಿಯಿಲ್ಲದೆ, ಚಂಚಲ ಮತಿಯಿಂದ ಜೀವನ ಸಾಗಿಸುವ ಅಜ್ಞಾನ ಪ್ರಜೆಗಳಿಗೆ, ಅವರು ಮಾಯೆಯಿಂದ ಪಾರಾಗುವುದಕ್ಕೆ ಭಕ್ತಿ, ಜ್ಞಾನ, ಯೋಗಗಳನ್ನು ಬೋಧಿಸಬೇಕು. ಮನುಷ್ಯ ಮಾಯೆಯಿಂದ ಹೊರಬೀಳುವುದಕ್ಕೆ ಬೇಕಾದ ಮುಖ್ಯಪರಿಕರಗಳು ಭಕ್ತಿ, ಜ್ಞಾನ ಯೋಗಗಳು. ಭಕ್ತಿ ಎಂದರೇ ಎಷ್ಟೋ ವಿಧಗಳಲ್ಲಿ ಇದೆ. ಪ್ರಕೃತಿ ಮೇಲಿರುವ ಭಕ್ತಿಯನ್ನು, ದೇವತೆಗಳ ಮೇಲಿರುವ ಭಕ್ತಿಯಲ್ಲದೆ, ದೇವ ದೇವನಾದ ಪರಮಾತ್ಮನ ಮೇಲೆ ಭಕ್ತಿಯನ್ನು ಏರ್ಪಡಿಸಬೇಕು. ನಂತರ ಪರಮಾತ್ಮ ಜ್ಞಾನವೇ ತಿಳಿಸಬೇಕಾಗಿರುತ್ತದೆ. ಭಕ್ತಿ, ಜ್ಞಾನಗಳಲ್ಲಿ ಪರಿಪಕ್ವನಾದವನಿಗೆ ಯೋಗವನ್ನು ಕುರಿತು ಹೇಳಬೇಕಾಗಿರುತ್ತದೆ. ಈ ವರಸೆ ಕ್ರಮವಲ್ಲದೆ ಭಕ್ತಿಬಾರದೆ ಜ್ಞಾನ ಬೋಧಿಸಿದರೂ ಪ್ರಯೋಜನವಿಲ್ಲ. ಹಾಗೆಯೇ ಜ್ಞಾನವನ್ನು ತಿಳಿಯದೆಯೇ ಯೋಗವನ್ನು ಬೋಧಿಸಿದರೂ ಪ್ರಯೋಜನೆ ಇಲ್ಲ. ಆದ್ದರಿಂದ ಅಜ್ಞಾನಿಗಳನ್ನು ಜ್ಞಾನಪಥದಲ್ಲಿ ನಡೆಸಬೇಕೆಂದುಕೊಂಡಾಗ, ಮೊದಲು ದೇವತೆಗಳ ದೇವರಾದ ಪರಮಾತ್ಮ ವಿಷಯ ಸ್ವಲ್ಪ ತಿಳಿಸಿ, ಆತನ ಮೇಲೆ ಭಕ್ತಿ ಹುಟ್ಟುವಂತೆ ಮಾಡಬೇಕು. ಪ್ರಾಥಮಿಕವಾಗಿ ಭಕ್ತಿಯನ್ನು ಏರ್ಪಡಿಸುವುದರಲ್ಲಿಯೇ ಸ್ವಲ್ಪ ಕಷ್ಟವಿರುತ್ತದೆ. ಏಕೆಂದರೇ ಮೊದಲೇ ಪ್ರತಿ ಮನುಷ್ಯ ಯಾವುದೊ ಸ್ವಲ್ಪ ಭಕ್ತಿಹೊಂದಿ ಆ ಭಕ್ತಿಯನ್ನು ದೇವತೆಗಳ ಮೇಲೆಯೋ ಪ್ರಕೃತಿ ಶಕ್ತಿಗಳ ಮೇಲೆಯೋ ತೋರಿ ಸುತ್ತಿರುತ್ತಾರೆ. ಭಕ್ತಿ ಕೋರಿಕೆಗಳ ಸಲುವಾಗಿಯೇ ಎಂದು ಅವರ ಹೃದಯಗಳಲ್ಲಿ ನಾಟಿಕೊಂಡು ಹೋಗಿರುತ್ತದೆ. ಅಂತಹ ಭಕ್ತಿಯನ್ನು ಇಲ್ಲದಂತೆ ಮಾಡಿ ಪರಮಾತ್ಮನ ಮೇಲೆ ಭಕ್ತಿ ಉಂಟುಮಾಡುವುದು ಬಹಳ ಕಷ್ಟ. ಒಂದುವೇಳೆ

ಅಸಲಾದ ಭಕ್ತಿಹೊಂದಿದ ನಂತರ ಜ್ಞಾನ ಇಲ್ಲದೆಯೇ ಯೋಗ ಮಾಡುತ್ತೇವೆನ್ನು ವವರು ಬಹಳಜನ ಇರುತ್ತಾರೆ. ಅದು ಕೂಡ ಒಳ್ಳೆಯದಲ್ಲವೆಂದು, ಮೊದಲು ತಿಳಿಯಬೇಕಾಗಿರುವುದು ಜ್ಞಾನವೆಂದು, ಪೂರ್ತಿಯಾಗಿ ಜ್ಞಾನವನ್ನು ತಿಳಿದ ನಂತರ ಯೋಗವಾಚರಿಸುವಂತೆ ಮಾಡಬೇಕು. ಈ ಪದ್ಧತಿ ಪ್ರಕಾರವಾದರೆ ಅಜ್ಞಾನಿಗಳು ಕೂಡ ಮುಕ್ತಿ ಹೊಂದಬಹುದು.

**ಆ ॥ ಕಲ್ಲಿನ ನೆಲದಲ್ಲಿ ಗಿಡ ರಸಹೀನವಾದಂತೆ**
**ಕಠಿಣ ಚಿತ್ತವಿರುತ್ತದೆ ಕಾರಕರಿಗೆ**
**ಅಚಲ ಬೋಧ ತರವಲ್ಲ ಆರ್ಯರು ಹೇಳುವುದಿಲ್ಲ.**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಶರೀರದಲ್ಲಿ ಅಣುವಣುವಿನಲ್ಲಿ ವ್ಯಾಪಿಸಿ ಶರೀರಾಂತರ್ಗತ ಕೆಲಸಗಳಿಗೆ ಕಾರಣಶಕ್ತಿಯಾಗಿರುವ ಓ ಆತ್ಮಾ! ಕೇಳು. ಕಲ್ಲಿನ ನೆಲದಲ್ಲಿ ಮಳೆ ನೀರಿಂಗುವುದಿಲ್ಲ ತೇವ ಇರುವುದಿಲ್ಲ. ಅಂತಹ ನೆಲದಲ್ಲಿ ಬೀಜವನ್ನು ಹಾಕಿದರೂ ಅದು ಮೊಳಕೆ ಬರುವುದಿಲ್ಲ. ಒಂದುವೇಳೆ ಮೊಳಕೆ ಬಂದರೂ ಅದಕ್ಕೆ ತೇವ ದೊರೆಯದೆ ಬಲಹೀನವಾಗಿ ಕೊನೆಗೆ ಒಣಗಿಹೋಗುತ್ತದೆ. ಮೊದಲನೆಯದಾದ ಭಕ್ತಿ ಭಾವವಿಲ್ಲದ ಕಠಿಣಾತ್ಮರಿಗೆ, ಯಾವಾಗಲೂ ವಿಮರ್ಶನಾದೃಷ್ಠಿಯಿಂದ ನೋಡುವ ಅವಿಶ್ವಾಸಿಗಳಿಗೆ, ಪರಮಾತ್ಮ ಬೋಧನೆ ಹಿಡಿಸುವುದಿಲ್ಲ. ಅಂತಹವರಿಗೆ ದೈವಜ್ಞಾನ ಹೇಳಿದರೂ, ಅದನ್ನು ಅರ್ಥ ಮಾಡಿಕೊಳ್ಳದೆ, ವಿಪರೀತಾರ್ಥ ಭಾವನೆಯಿಂದ ನೋಡಿಕೊಳ್ಳುತ್ತಾ, ಹೇಳುವವರನ್ನೇ ಹೇಳನವಾಗಿ ಮಾತ ನಾಡುತ್ತಾರೆ. ಆದ್ದರಿಂದ ಗುರುಗಳಾದವರು ಅಂತಹ ಕಲ್ಲಿನ ನೆಲಕ್ಕೆ ಸಮಾನವಾದ ಮೂರ್ಖರಿಗೆ ನಿರ್ವಿಕಾರವಾದ ಅಚೇಲ ಬೋಧನೆ ಹೇಳುವುದಿಲ್ಲ.

**ಆ ॥ ಹುಳುಕ ಬೀಜವನ್ನು ಭೂಮಿಯಲ್ಲಿ ಹಾಕಿದರೂ**
**ಸಾಯುತ್ತದೆ ಆದರೆ ಮೊಳಕೆ ಬಾರದೆಂದು**
**ಕುಚ್ಚಿತಾತ್ಮರಿಗೆ ಕುದುರುವುದಿಲ್ಲ ತತ್ತ್ವವು**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಅಂಡಜ, ಪಿಂಡಜ, ಉದ್ಭಿಜಗಳಾದ ಮೂರು ವಿಧಗಳ ಜೀವರಾಶಿಗಳಲ್ಲಿ ಯಾವ ಜೀವರಾಶಿಯಲ್ಲಾದರೂ ಒಂದೇ ಸಿದ್ಧಾಂತ, ಒಂದೇ ನಿರ್ಣಯವಾಗಿ, ಒಂದೇ ಪದ್ಧತಿಯಾಗಿ ಕೆಲಸ ಮಾಡುವ ಓ ಆತ್ಮಾ! ಕೇಳು. ಬೀಜವನ್ನು ಹಾಕುವಂತಹ ನೆಲ ಸಾರ ಇಲ್ಲದಿರುವುದಾಗಲಿ, ಕಲ್ಲಿನನೆಲವಾಗಲಿ, ತೇವ ಇಲ್ಲದಿರುವುದಾಗಲಿ ಆದರೆ ಹಾಕಲ್ಪಟ್ಟ ಒಳ್ಳೆಯ ಬೀಜ ಕೂಡ ವ್ಯರ್ಥವಾಗುತ್ತದೆ. ಹಾಗೇ ಬೋಧನೆಯನ್ನು ಗ್ರಹಿಸಲಾರದ ಮೂರ್ಖನಿಗೆ ಎಷ್ಟು ಒಳ್ಳೆಯ ಬೋಧನೆ ಹೇಳಿದರೂ ಅದು ವ್ಯರ್ಥವೇ ಆಗುತ್ತದೆ. ಒಂದುವೇಳೆ ಭೂಮಿ ಒಳ್ಳೆಯ ಸಾರವಂತಾದ್ದಾಗಿ, ತೇವ ಇರುವುದಾದರೂ ಅದರಲ್ಲಿ ಒಳ್ಳೆಯ ಬೀಜ ಬೀಳದೆ ಹುಳುಕಾದ ಬೀಜ ಬಿದ್ದರೆ ಅದು ಮೊಳಕೆಬರುವುದಿಲ್ಲ. ಹಾಗೆಯೇ ಬೋಧನೆಯನ್ನು ತಿಳಿಯುವವನು ಒಳ್ಳೆಯ ಭಕ್ತಿ ವಿಶ್ವಾಸಗಳಿದ್ದು, ಗ್ರಹಿಸಿಕೊಳ್ಳುವ ಶಕ್ತಿ ಹೊಂದಿದ್ದರೂ, ಬೋಧನೆಯನ್ನು ಹೇಳುವ ಬೋಧಕನು ಸರಿಯಾದ ಬೋಧನೆಯನ್ನು ಹೇಳಲಾರದೆ ಹೋದರೆ, ಆ ಬೋಧನೆ ಅವನನ್ನು ಮುಕ್ತಿ ಮಾರ್ಗದಲ್ಲಿ ನಡೆಸುವುದಿಲ್ಲ. ಆದ್ದರಿಂದ ಬೋಧನೆ ಹೇಳಿಸಿಕೊಳ್ಳುವ ವನಾಗಲಿ, ಬೋಧನೆಯನ್ನು ಹೇಳುವವನಾಗಲಿ, ಇಬ್ಬರು ಸಕ್ರಮವಾಗಿ ಇದ್ದಾಗಲೇ ಭೂಮಿ, ಬೀಜ ಎರಡು ಚೆನ್ನಾಗಿದ್ದು ಬೆಳೆ ಬೆಳೆದಂತೆ ಮೋಕ್ಷ ಲಭಿಸಬಲ್ಲದು. ಆದ್ದರಿಂದ ಕೇಳುವವರೆಲ್ಲರೂ ಶಿಷ್ಯರಲ್ಲ, ಹೇಳುವ ವರೆಲ್ಲರೂ ಗುರುಗಳಲ್ಲವೆಂದು ಕೆಲವರು ಹೇಳಿದ್ದಾರೆ.

**ಆ ||** **ನಿಜ ಹೇಳಿದರೆ ನಿಷ್ಠೂರಬರುತ್ತದೆ**
**ಹೇಳಬಾರದು ನಿಜವು ಜಗತಿ ರೊಷ್ಟು**
**ಅಧಿಕ ಪರಮ ರಹಸ್ಯಮಚಲ ಸಿದ್ಧಾಂತಂಬು**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಜೀವಾತ್ಮ ಯಾವ ಶರೀರದಲ್ಲಿ ಪ್ರವೇಶಿಸಿದರೂ, ಅದರಹಿಂದೆ ಆ ಶರೀರದಲ್ಲಿ ಪ್ರವೇಶಿಸಿ, ಅಲ್ಲಿ ಕರ್ಮರೀತಿ ಏನು ನಡೆಯಬೇಕೊ ಆ ಕೆಲಸಗಳನ್ನು ಶರೀರದ ಮೂಲಕ ಮಾಡಿಸುವ ಓ ಆತ್ಮಾ! ಕೇಳು. ಪ್ರಪಂಚದಲ್ಲಿ ನಿಜವನ್ನು ಬೇಗನೆ ಅರ್ಥಮಾಡಿಕೊಳ್ಳುವವರು ಬಹಳ ಕಡಿಮೆ. ಅವರಿಗೆ

ಅರ್ಥವಾಗದಿರುವಾಗ ಸತ್ಯ ಹೇಳಿದವನನ್ನು ನಿಷ್ಟೂರವಾಗಿ ನೋಡುತ್ತಾರೆ. ಪ್ರಪಂಚ ವಿಷಯಗಳಲ್ಲಿ ಹೇಗೆ ಹೇಳಿದರೂ ಫರವಾಗಿಲ್ಲ ಆದರೆ, ಜ್ಞಾನ ಬೋಧನೆಗಳಲ್ಲಿ ಮಾತ್ರ ನಿಜವೇ ಹೇಳಬೇಕಾಗಿದೆ. ನಿಜ ಹೇಳಿದರೆ ಅರ್ಥ ವಾಗದವರಿಗೆ ವಿರೋಧಿಯಾಗಿ ನಿಷ್ಠೂರವಾಗಿ ಇರಬೇಕಾದ ಕೆಲಸ ಏರ್ಪಡುತ್ತದೆ. ಆದ್ದರಿಂದ ಯಾಥಾರ್ಥವನ್ನು ಅರ್ಥ ಮಾಡಿಕೊಳ್ಳುವ ಸಾಮರ್ಥ್ಯವಿರುವ ಮನುಷ್ಯರು ದೊರೆಯುವವರೆಗು ಪರಮ ರಹಸ್ಯವಾದ ಬಟ್ಟೆಬಯಲು (ಅಚೇಲ) ಸಿದ್ಧಾಂತವನ್ನು ಹೇಳಬಾರದು.

**ಆ ॥ ಅಚಲವೆಂದರೆ ಕೆಲವರತಿ ಕೋಪಗೊಳ್ಳುತ್ತಾರೆ.**
**ಅದರಲ್ಲಿ ಪರಮವನ್ನು ತಿಳಿಯದೆ**
**ಅಂಧಕಾರ ಬಂದುರಾತ್ಮರಾಗಿ ಇರುತ್ತಾರೆ**
**ಅಖಿಲ ಜೀವಸಂಗ ಆತ್ಮಲಿಂಗ**

**ಭಾವಾರ್ಥ :–** ಶರೀರದಲ್ಲಿ ನೀನು ಕೆಲಸ ಮಾಡಿ, ಫಲಿತವನ್ನು ಜೀವಾತ್ಮಗೆ ನೀಡುವ ಓ ಆತ್ಮಾ! ಕೇಳು. ಪ್ರಪಂಚದಲ್ಲಿನ ಮನುಜರೆಲ್ಲರು ನಮಗೆ ಭಕ್ತಿ ಇದೆಯೆಂದು ಯಾವುದೊ ಒಂದು ಪೂಜೆ ಮಾಡುತ್ತಾ, ತಮ್ಮನ್ನು ತಾವು ದೊಡ್ಡ ಭಕ್ತರನ್ನಾಗಿ ತಿಳಿಯುತ್ತಿರುತ್ತಾರೆ. ಸ್ವಲ್ಪವೂ ಆತ್ಮಜ್ಞಾನ ಇಲ್ಲದವನು ಬೆಳಗ್ಗೆ ಸ್ನಾನಮಾಡಿ ಮುಖಕ್ಕೆ ಬೊಟ್ಟಿಟ್ಟುಕೊಂಡು, ಮನೆಯಲ್ಲಿ ಯಾವುದೊ ಒಂದು ದೇವರ ಚಿತ್ರದ ಮುಂದೆ ಅಗರ್‌ಬತ್ತಿ ಹೊತ್ತಿಸಿ ನಮಸ್ಕರಿಸಿ, ನನಗೆಷ್ಟೋ ಭಕ್ತಿ ಇದೆಯೆಂದು ನಿತ್ಯ ಪೂಜೆ ಮಾಡದೆ ಹೊರಗೆ ಹೋಗುವುದಿಲ್ಲವೆಂದು ಅಂದುಕೊಳ್ಳುತ್ತಿರುತ್ತಾನೆ. ಅಂತಹವನು ದೊಡ್ಡ ಬ್ರಹ್ಮಜ್ಞಾನಿಗಳನ್ನು ಸಹಿತ ನಿಂದಿಸುವ ಸ್ವಭಾವ ಹೊಂದಿರುತ್ತಾನೆ. ತಾನು ಮುಗಿಯುತ್ತಿರುವುದು ದೇವರನ್ನೊ, ದೈವವನ್ನೊ ತಿಳಿಯದವನು, ನೇರವಾಗಿ ಬ್ರಹ್ಮ ಜ್ಞಾನ ತಿಳಿದ ಶಕ್ತಿವಂತರನ್ನು ಸಹಿತವು ಲೆಕ್ಕಮಾಡದ ಸ್ಥಿತಿಯಲ್ಲಿ ಇರುತ್ತಾನೆ. ಅಂತಹವರಿಗೆ ತಾವು ಮಾಡುವ ಪೂಜೆಗಿಂತ ಉಳಿದಿರುವುದ್ಯಾವುದು ದೊಡ್ಡದಾಗಿರುವುದಿಲ್ಲ. ಆದ್ದರಿಂದ ಪರಬ್ರಹ್ಮ ಸ್ವರೂಪ, ಪರಿಪೂರ್ಣ, ನಿರ್ವಿಕಾರವಾದ ಅಚೇಲವನ್ನು ಕುರಿತು ಹೇಳಿದರೆ, ಅದರ ದೊಡ್ಡತನವಾಗಲಿ, ವಿವರವಾಗಲಿ ತಿಳಿಯದ ಅಂಧಕಾರಬಂದುರಾತ್ಮರಾದ

ಅವರು ಕೋಪಿಸಿಕೊಳ್ಳುತ್ತಾರೆ. ಬಟ್ಟೆಬಯಲನ್ನು ಕುರಿತು ತಿಳಿಸಬೇಕೆಂದುಕೊಂಡರೆ ಹೇಳುವವರು ಅವರಿಗೆ ಭೂಟಾಟಿಕೆ ಮನುಷ್ಯರಂತೆ ಕಾಣಿಸುತ್ತಾರೆ.

**ಆ ॥ ಸಾಧನೆಯಿಂದ ಸಾಧ್ಯವಾಗದಿರುವುದು**
**ಹಿಡಿಯಲು ಸಾಧ್ಯವಾಗದ ಬಟ್ಟೆಬಯಲು**
**ಹಿಡಿದಿದ್ದೇವೆಂದು ಹೇಳಿದರು ಕೆಲವರು**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಶರೀರದಲ್ಲಿನ ಪ್ರಾಣಕ್ಕೆ ಆಧಾರವಾಗಿ ಆಡಿಸುತ್ತಿರುವ ಓ ಆತ್ಮಾ! ಕೇಳು. ನೀನು ಶರೀರವನ್ನು ನಡೆಸುವ ಎರಡನೆ ಆತ್ಮವು. ನಿನ್ನೊಂದಿಗೆ ಶರೀರದಲ್ಲಿ ಜೀವಾತ್ಮ ಇದೆ. ಜ್ಞಾನವಾಗಲಿ, ಅಜ್ಞಾನವಾಗಲಿ ಎರಡನೆಯವನಾದ ನಿನಗೆ ಅಗತ್ಯವಿಲ್ಲ. ಬೇಕಾಗಿರುವುದೆಲ್ಲ ಜೀವಾತ್ಮಗೆ. ಜೀವಾತ್ಮ ಎರಡನೆಯವನಾದ ಆತ್ಮ ಸಹಕಾರದಿಂದ ಮೂರನೆಯವನಾದ ಪರಮಾತ್ಮನೊಳಗೆ ಸೇರುವುದನ್ನು ಮುಕ್ತಿ ಎನ್ನುತ್ತೇವೆ. ಮೂರನೆ ಪುರುಷನಾದ ಪರಮಾತ್ಮನೊಳಗೆ ಸೇರಿದಾಗಲೇ, ಅದೇನೊ ಹೇಗಿರುತ್ತದೊ ಜೀವಿಯ ಅನುಭವಕ್ಕೆ ಬರುತ್ತದೆ. ಜೀವಿಯು ಶರೀರವನ್ನು ಬಿಟ್ಟು, ಎಷ್ಟೋ ಜನ್ಮಗಳಿಂದ ಹಿಂದೆಬರುವ ಆತ್ಮವನ್ನು ಕೂಡ ಬಿಟ್ಟು, ಪರಮಾತ್ಮನೊಳಗೆ ಸೇರಿದಾಗಲೇ ಪರಮಾತ್ಮ ಏನೊ ತಿಳಿಯುತ್ತದೆ. ಬದುಕಿರುವಾಗ ಎಷ್ಟು ಸಾಧನೆ ಮಾಡಿದರು ಅದು ಎರಡನೆ ಆತ್ಮವನ್ನು ತಿಳಿಯುವುದಕ್ಕೆ ಮತ್ತು ತನ್ನ ಕರ್ಮವನ್ನು ಕಳೆದುಕೊಳ್ಳುವುದಕ್ಕೆ ಉಪಯೋಗ ಪಡುತ್ತದಾಗಲಿ ಪರಮಾತ್ಮ ಏನೊ ತಿಳಿಯದು. ಸಾಧನೆ ಎಲ್ಲವೂ ಕರ್ಮವನ್ನು ಇಲ್ಲದಂತೆ ಮಾಡಿ ಮುಕ್ತಿ ಮಾರ್ಗವನ್ನು ಏರ್ಪಡಿಸುವುದೇ, ಆದರೆ ಸಾಧನೆಯಿಂದ ಪರಮಾತ್ಮ ತಿಳಿಯುವುದಿಲ್ಲ. ಸಾಧನೆಪರನು ತನ್ನ ಸಾಧನೆಯಲ್ಲಿ ಉತ್ಪನ್ನವಾಗುವ ಜ್ಞಾನಾಗ್ನಿಯಿಂದ ಕರ್ಮವೆಲ್ಲವನ್ನು ಸುಟ್ಟುಹಾಕಿ, ಕರ್ಮಶೇಷ ಇಲ್ಲದವನಾದಾಗ ಮರಣಹೊಂದಿ, ಆ ಮರಣದ ನಂತರ ಜನ್ಮಕ್ಕೆ ಹೋಗದಂತೆ ಪರಮಾತ್ಮನಲ್ಲೈಕ್ಯವಾಗುತ್ತಾನೆ. ಹಾಗೆ ಕರ್ಮ ಇಲ್ಲದವನಾಗಿ ಮರಣ ಹೊಂದಿದರೆ, ಆಗ ದೇವರ್‍ಯಾರೋ ತಿಳಿಯುತ್ತದೆ. ಅಲ್ಲಿಯವರೆಗು ಸಜೀವ ವಾಗಿರುವವನಿಗೆ

ಎಷ್ಟು ಯೋಗಿಯಾದರೂ, ಎಷ್ಟು ಸಾಧಕನಾದರೂ, ಯಾವ ಪದ್ಧತಿ ಅನುಸರಿಸಿದರೂ, ಕೊನೆಗೆ ಬ್ರಹ್ಮರ್ಷಿಯಾದ ಪರಮಾತ್ಮ ಎಂತಾದ್ದೋ ಯಾರಿಗು ತಿಳಿದಿಲ್ಲ. ಸಾಧನೆಯಿಂದ ಸಾಧ್ಯವಾಗದ ಬಯಲಾದ ಪರಮಾತ್ಮನನ್ನು ತಿಳಿದಿದ್ದೇವೆಂದು ಕೆಲವರನ್ನುವುದು ಹಾಸ್ಯಾಸ್ಪದವಾಗಿರುತ್ತದೆ. ಬದುಕಿದ್ದು ನಾವು ದೇವರನ್ನು ತಿಳಿದಿದ್ದೇವೆಂದರೇ, ಅವರ ಅಜ್ಞಾನವನ್ನು ಅವರ ಅಮಾಯಕತ್ವವನ್ನು ನೋಡಿ ದೇವರೇ ನಗುತ್ತಾನೆ. ಸಾಧನೆಗಳಿಂದ, ಬ್ರಹ್ಮಯೋಗದಿಂದ ಶರೀರದಲ್ಲಿನ ಆತ್ಮ ಜೀವಾತ್ಮಗೆ ತಿಳಿಯಬಲ್ಲದು. ಅಷ್ಟೇಹೊರತು ಸಜೀವವಾಗಿರುವ ಜೀವಾತ್ಮಗು ಪರಮಾತ್ಮನನ್ನು ತಿಳಿಸುವ ಸಾಧನೆಯಾಗಲಿ, ಪದ್ಧತಿಯಾಗಲಿ ಯಾವುದು ಭೂಮಿಮೇಲೆ ಇಲ್ಲ.

**ಆ ॥ ನಾಮರೂಪ ವಿಲ್ಲ ನಾನಾರ್ಥಗಳಲ್ಲ**
**ಕಾಮ ಲೋಭ ಮೋಹ ಕಾಂಕ್ಷವಲ್ಲ**
**ಪಂಚ ಕಲೆಗಳಲ್ಲ ಪಂಚಾಕ್ಷರಿಯೂ ಅಲ್ಲ**
**ಅಖಿಲ ಜೀವಸಂಗ ಆತ್ಮಲಿಂಗ.**

**ಬಾವಾರ್ಥ :–** ನಾನು ಹುಟ್ಟಿದಾಗಿನಿಂದ ನನ್ನಲ್ಲಿ ಎಲ್ಲಾ ಕೆಲಸಗಳಿಗೆ ಸಾಕ್ಷಿ ಯಾಗಿದ್ದು ಪ್ರಾರಬ್ಧವನ್ನು ನನ್ನಿಂದ ಅನುಭವಿಸುವಂತೆ ಮಾಡುವ ಓ ಆತ್ಮಾ! ಕೇಳು. ಭೂಮಿ ಮೇಲೆ ನಾಸ್ತಿಕರು, ಆಸ್ತಿಕರು ಎರಡು ವಿಧಗಳು ಇದ್ದಾರೆ. ಒಂದು ವಿಧವಾಗಿ ಆಸ್ತಿಕರಿಗಿಂತ ನಾಸ್ತಿಕರೇ ಮೇಲೇನೊ ಎನಿಸುತ್ತದೆ. ಏಕೆಂದರೇ ಆಸ್ತಿಕರು ದೇವರ್‍ಯಾರೋ ತಿಳಿದುಕೊಳ್ಳದೆ ದೆವ್ವಗಳನ್ನು ಪೂಜಿಸುತ್ತಿದ್ದಾರೆ. ಅವರು ನಿಜದೈವವಾದ ಪರಮಾತ್ಮ ಮಾರ್ಗದೊಳಗೆ ಬರುತ್ತಾರೆನ್ನುವ ನಂಬಿಕೆಯಿಲ್ಲ. ನಾಸ್ತಿಕರು ಎಂದಿಗಾದರು ಬದಲಾದರೆ ಪರಮಾತ್ಮ ಮಾರ್ಗದೊಳಗೆ ಬರ ಬಹುದೆನ್ನುವ ನಂಬಿಕೆಯಿದೆ. ನಾಸ್ತಿಕರು, ಹೇತುವಾದಿಗಳು ಶಾಸ್ತ್ರಬದ್ಧವಾದ ಪರಮಾತ್ಮನನ್ನು ಹೊರತು ಚಿಕ್ಕ ದೇವತೆಗಳನ್ನು ವಿಶ್ವಾಸಿಸುವುದಿಲ್ಲ. ಪ್ರಜೆಗಳು ವಿಶ್ವಾಸಿಸುವ ದೇವತೆಗಳೆಲ್ಲರು ದೇವದೇವನಾದ ಪರಮಾತ್ಮಗೆ ಸಾಟಿಯಾಗುವು ದಿಲ್ಲ. ಉಳಿದ ದೇವತೆಗಳೆಲ್ಲರು ಪರಮಾತ್ಮ ಸೃಷ್ಠಿಯೊಳಗಿನವರೇ. ದೇವರಿಂದ

ಹುಟ್ಟಿಸಲ್ಪಟ್ಟಿರುವುದು ಏನಾದರು ರೂಪ ಹೆಸರು ಹೊಂದಿರುತ್ತದೆ. ಅಷ್ಟೇಅಲ್ಲದೆ ದೈವಸೃಷ್ಠಿಯಲ್ಲಿನ ಸಜೀವ ಪ್ರಜೆಗಳಲ್ಲಾಗಲಿ, ಪ್ರಾಣಿಗಳಲ್ಲಾಗಲಿ, ಕಾಮ, ಕ್ರೋಧ, ಲೋಭ, ಮೋಹಾದಿ ಗುಣಗಳು ಕೂಡ ತಯಾರು ಮಾಡಲ್ಪಟ್ಟಿವೆ. ಮಾನವ ರೊಂದಿಗೆ ಕೂಡ ಎಷ್ಟೋ ಲೆಕ್ಕವಿಲ್ಲದಷ್ಟು ಅನುಸಂಧಾನವಾಗಿ ಸೃಷ್ಠಿಸಲ್ಪಟ್ಟಿವೆ. ಸೃಷ್ಠಿಸಿದವನು ಬೇರೆ, ಸೃಷ್ಠಿಸಲ್ಪಟ್ಟ ವಸ್ತುಗಳು ಪದಾರ್ಥಗಳು ಬೇರೆ. ಆದ್ದರಿಂದ ಮೇಲಿನ ಪದ್ಯದಲ್ಲಿ ಪರಮಾತ್ಮನನ್ನು ಕುರಿತು ಹೇಳುತ್ತಾ ಅದಕ್ಕೆ ನಾಮ ರೂಪ ಇಲ್ಲ ಎಂದಿದ್ದಾರೆ. ಅದಕ್ಕೆ ಇತರೆ ಅರ್ಥಗಳು ಇಲ್ಲವೇ ಇಲ್ಲ ಎಂದಿದ್ದಾರೆ. ಸೃಷ್ಠಿಸಲ್ಪಟ್ಟ ಗುಣಗಳಾಗಲಿ, ಕಲೆಗಳಾಗಲಿ, ಪಂಚಾಕ್ಷರಿಯಾದ ಪರಮಾತ್ಮಶಕ್ತಿ ಯಾಗಲಿ ಅಲ್ಲವೇ ಅಲ್ಲವೆಂದಿದ್ದಾರೆ. ಎಲ್ಲದಕ್ಕು ಅತೀತವಾದುದು ಪರಮಾತ್ಮ ಪರಮಾತ್ಮ ಎನ್ನುವುದು ಹೆಸರಲ್ಲ. ಆತ್ಮಗಿಂತ ಪರವಾಗಿರುವುದೆಂದು, ಆತ್ಮ ಕೂಡ ಅಲ್ಲವೆಂದು, ಪರವಾಗಿದೆಯೆಂದು ಪರಮಾತ್ಮ ಎಂದಿದ್ದಾರೆ. ಹೆಸರು ಆಕಾರ ಇಲ್ಲದ ದೈವ ಇನ್ನೂ ಹೇಗಿದೆಯೋ ಕೆಳಗಿನ ಪದ್ಯಗಳಲ್ಲಿ ನೋಡೋಣ.

**ಆ ॥ ಆದಿ ಇಲ್ಲ ಅದಕ್ಕಾ ಧಾರಯಾರೋ**
**ಮಧ್ಯವಿಲ್ಲ ಅದರ ನಾಮವೇನೊ**
**ತುದಿಯು ಇಲ್ಲ ಮೊದಲು ಇಲ್ಲ ಮೂರ್ತಿಯಂತಾ ಸ್ಥಿತಿ ಅಲ್ಲ**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ:–** ಶರೀರವೆನ್ನುವ ರಥಕ್ಕೆ ಸಾರಥಿಯಾಗಿದ್ದು, ಇಂದ್ರಿಯಗಳೆನ್ನುವ ಕುದುರೆಗಳನ್ನು ನಡೆಸುವ ಸಾರಥಿಯಾಗಿ, ಶರೀರ ರಥವನ್ನು ಅದಿಷ್ಠಿಸಿರುವ ಜೀವಿಗೆ ಸುಖದುಃಖಗಳೆನ್ನುವ ಅನೇಕ ಪ್ರದೇಶಗಳನ್ನು ತೋರಿಸುತ್ತಿರುವ ಓ ಆತ್ಮಾ! ಕೇಳು. ಪರಮಾತ್ಮಗಿಂತ ಮೊದಲು ಏನೂ ಇಲ್ಲ. ಅದನ್ನು ಹುಟ್ಟಿಸಿರುವುದು ಮತ್ತ್ಯಾವುದು ಇಲ್ಲ. ಅದು ಅಗಮ್ಯಗೋಚರವಾದುದು, ಅದನ್ನು ಸ್ವಯಂಭು ಎಂದು ಹೇಳುವುದಕ್ಕೆ ಕೂಡ ಅವಕಾಶವಿಲ್ಲ. ಏಕೆಂದರೇ ಒಂದುಸಮಯದಲ್ಲಿ ಇಲ್ಲದಂತಿದ್ದು ನಂತರ ತನಗೆ ತಾನಾಗಿ ಹುಟ್ಟಿರುವುದು ಕೂಡಾ ಅಲ್ಲ. ಅದಕ್ಕೆ ಜನ್ಮವೇ ಇಲ್ಲ, ಮೊದಲು ಎಂದಾಗಲಿ, ಮಧ್ಯ ಎಂದಾಗಲಿ, ತುದಿಯೆಂದಾಗಲಿ ಯಾವ ಸ್ವರೂಪ ಇಲ್ಲ. ಅದಕ್ಕೆ ಆಧಾರ ಆದಿ ಇಲ್ಲದಿರುವುದು, ತನಗೆ ತಾನು

ಆಧಾರವಾದುದು. ಮನುಷ್ಯರಿಗಿರುವ ನಿದ್ರೆ ಎಚ್ಚರ ಸ್ವಪ್ನವಲ್ಲದೆ ತುರಿಯವೆನ್ನುವ ಮೂರ್ಚೆಯಂತಹ ಸ್ಥಿತಿಯು ಅಲ್ಲ ಮತ್ತು ಯಾವ ಯೋಗವು ಅಲ್ಲ. ಏನೂ ಅಲ್ಲದ ಸ್ಥಿತಿ ಎಂದರೂ ಆ ಸ್ಥಿತಿಯು ಅಲ್ಲ, ಮಾತುಗಳಿಂದ ಹೇಳುವುದಕ್ಕೆ ಭಾಷೆಯೇ ಇಲ್ಲದಿರುವುದು, ಸಮಾಚಾರ ಇಲ್ಲದಿರುವುದು ಮತ್ತು ಸಂಚಾರ ಇಲ್ಲದಿರುವುದು ಇನ್ನೂ ಹೇಗಿದೆ ಎಂದರೇ!

**ಆ ॥ ಗಾಢ ನಿದ್ರೆಯು ಅಲ್ಲ ಘನ ಜ್ಞಾಪಕವು ಅಲ್ಲ**
**ಸುಮ್ಮನಿರುವುದಲ್ಲ ಊಹೆಯಲ್ಲ**
**ಹಗಲಿರುಳಲ್ಲ ಪರಮಾತ್ಮ ರೂಪವು**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಗಿಡಕ್ಕೆ ತೊಗಟೆ ಅನುಬಂಧವಾಗಿರುವಂತೆ, ಶರೀರದಲ್ಲಿನ ಜೀವಾತ್ಮಗೆ ಶಕ್ತಿ ರೂಪದಲ್ಲಿ ಅನುಬಂಧವಾಗಿರುವ ಓ ಆತ್ಮಾ! ಕೇಳು. ಮೂರನೆ ಆತ್ಮವಾದ ಪರಮಾತ್ಮನನ್ನು ನಿದ್ರೆಯೊಂದಿಗೆ ಹೋಲಿಸಿ ನೋಡಿದರೆ ಗಾಢನಿದ್ರೆಯು ಅಲ್ಲ, ಎಚ್ಚರಕ್ಕೆ ಹೋಲಿಸಿ ನೋಡಿದರೆ ಘನ ಜ್ಞಾಪಕವೂ ಅಲ್ಲ. ಏನು ಮಾಡದೆ ಸುಮ್ಮನಿರುವುದೇನೊ ಎಂದು ಸುಮ್ಮನಿದ್ದರು ಅದೂ ಅಲ್ಲ. ಮಾಡಿದರೆ ಕೆಲಸವು ಅಲ್ಲ. ಮನಸ್ಸು ಅಲ್ಲ, ಮನೋ ಊಹೆ ಎಂದುಕೊಳ್ಳುವುದಕ್ಕೆ ಊಹೆಯು ಅಲ್ಲ. ಕಾಲವನ್ನು ಅಳೆಯುವ ಹಗಲು ಇರುಳಿಗೆ ಹೋಲಿಸಿ ನೋಡಿದಂತಾದರೆ ಹಗಲು ಅಲ್ಲ, ಇರುಳು ಅಲ್ಲ. ಪರಮಾತ್ಮ ಇಂತಹದ್ದೆಂದು ಹೇಳುವುದಕ್ಕೆ ಯಾವುದಕ್ಕು ಹೋಲಿಕೆ ಇಲ್ಲದಿರುವುದಾಗಿ, ಎಂತಹ ನಮೂನೆಗಳಿಗು ಊಹೆಗಳಿಗು ಸಿಗದಿರುವುದಾಗಿದೆ. ಇನ್ನೂ ವಿವರವಾಗಿ ನೋಡಿದಂತಾದರೆ ಕೆಳಗಿನ ಪದ್ಯ ಗಮನಿಸೋಣ.

**ಆ ॥ ಆದಿ ವಿರಾಟವು ಅಲ್ಲ ಯಾನಂದವು ಅಲ್ಲ**
**ಆತ್ಮವಲ್ಲ ಅಂತರಾತ್ಮವಲ್ಲ**
**ಚಿಂತೆಯೊಂದಲ್ಲ ಚಿತ್ಕಳತ್ವವು ಅಲ್ಲ**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಸಂಸಾರವೆನ್ನುವ ನಾಟಕಕ್ಕೆ ಪರಮಾತ್ಮ ಸೂತ್ರದಾರಿ ಆಗಿದ್ದು, ನಾಟಕವನ್ನು ವೀಕ್ಷಿಸುತ್ತಾ ನಾಟಕದಲ್ಲಿನ ಭಾವನೆಗಳನ್ನು ಅನುಭವಿಸುವ ಪ್ರೇಕ್ಷಕನು ಜೀವಿಯಾಗಿದ್ದು, ನಾಟಕವನ್ನು ಆಡುವ ಓ ಆತ್ಮಾ! ಕೇಳು. ಸೃಷ್ಠಿಕರ್ತನಾದ ದೇವರು ಎಂತಹವನೊ ಎಂದು ಯಾವ ವಿಧವಾಗಿ ಬಿಡಿಸಿ ನೋಡಿದರೂ ಏನೂ ಅಲ್ಲದ ಅಗಮ್ಯಗೋಚರನಾಗಿ ಇದ್ದಾನೆ. ಆದಿ ವಿರಾಟನೆಂದು ಕೆಲವರನ್ನುತ್ತಿದ್ದಾರೆ, ಆ ಮಾತು ನಿಜವೇನೊ ಎಂದು ನೋಡಿದರು ಅದೂ ನಿಜವಲ್ಲ. ಆನಂದ ಸ್ವರೂಪನೆಂದು ಕೆಲವರು ವರ್ಣಿಸಿದ್ದಾರೆ, ಆ ಮಾತು ಸತ್ಯವಾ ಎಂದು ನೋಡಿದರೆ ಅದು ನಿಜವಲ್ಲ. ಕೆಲವರು ಅಂತರಾತ್ಮಯೆಂದು ಆತ್ಮಯೆಂದು ಅನೇಕ ವಿಧಗಳಾಗಿ ಹೇಳುವುದು ನಡೆದಿದೆ, ಆ ಮಾತುಗಳು ನಿಜವೇನೊ ಎಂದು ಪರಿಶೀಲಿಸಿ ನೋಡಿದಂತಾದರೆ ಅದೂ ನಿಜವಲ್ಲ. ಕೆಲವರು ಚಿಂತೆಯೆಂದು ಚಿತ್ಕಳಯೆಂದು ಹೇಳಿದ್ದಾರೆ, ಆದರೆ ಅದರಲ್ಲಿವಾಸ್ತವ ಇದೆಯಾ ಎಂದುಕೊಂಡರೆ ಚಿಂತೆಯು ಅಲ್ಲ ಚಿತ್ಕಳವು ಅಲ್ಲ. ಪರಮಾತ್ಮ ಇದೆಯೆಂದು ಹೇಳುವುದಕ್ಕೆ ಯಾವ ಪ್ರಮಾಣವು ತೋರಿಸಲಾರೆವು, ಹಾಗೇ ಇಲ್ಲವೆಂದು ಹೇಳುವುದಕ್ಕೆ ಕೂಡ ಆಧಾರ ಹೇಳಲಾರೆವು. ಆದಿ ವಿರಾಟವಾಗಲಿ ಆನಂದವಾಗಲಿ ಆತ್ಮವಾಗಲಿ ಅಂತರಾತ್ಮನಾದ ಜೀವಿಯಾಗಲಿ ಮನೋಚಿಂತೆ ಯಾಗಲಿ ಮನೋದೃಷ್ಠಿ ಒಂದರ ಚಿತ್ಕಳವಾಗಲಿ ಪರಮಾತ್ಮವನ್ನು ಕುರಿತು ಹೇಳುವುದಕ್ಕೆ ನಮ್ಮಿಂದ ಸಾಧ್ಯವಿಲ್ಲ. ಮಾನವರಾದ ನಮ್ಮಿಂದ ಆಗುವು ದಿಲ್ಲ. ಹಾಗೇ ಉಳಿದ ಯಾವುದರಿಂದಾದರೂ, ಯಾರಿಂದಾಗಲಿ ಅಲ್ಲವೆಂದು ಕೆಳಗೆ ಹೇಳುತ್ತಿದ್ದಾರೆ.

**ಆ ॥ ಶ್ರುತುಗಳು ಮೂರ್ಚನೊಂದೆ ಚಿಂತಿಸಿ ಚಿಂತಿಸಿ**
**ವ್ಯಥೆ ಹೊಂದಿದರಯ್ಯ ದೇವತೆಗಳೆಲ್ಲ**
**ಘನ ಸನಾತನಾತ್ಮ ಗಾನವಾಗಿ ಇಲ್ಲದೇ**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಶರೀರದಲ್ಲಿ ಆತ್ಮ ಮಾಡುತ್ತಿದ್ದರೂ ಜೀವಾತ್ಮ ತಾನು ಮಾಡಿದಂತೆ ತಿಳಿದರೆ, ಆ ಕೆಲಸದಲ್ಲಿನ ಕರ್ಮವನ್ನು ಜೀವಿಗೆ ಅಂಟಿಸುವ ಓ ಆತ್ಮಾ!

ಕೇಳು. ಪರಮಾತ್ಮನನ್ನು ತಿಳಿಯುವುದಕ್ಕೆ ಮನುಷ್ಯರೇ ಅಲ್ಲದೆ ದೇವತೆಗಳು ಕೂಡ ಪ್ರಯತ್ನ ಮಾಡಿ, ಅವರಿಗು ಕೂಡ ಸ್ವಲ್ಪವೂ ಅರ್ಥವಾಗದೆ ವ್ಯಥೆಪಟ್ಟು ಸುಮ್ಮನಿದ್ದಾರೆ. ಶ್ರುತುಗಳು ಕೂಡ ದೈವವನ್ನು ಕುರಿತು ಪರಿಶೋಧಿಸಿ ಪರಮಾತ್ಮ ವಿಷಯದಲ್ಲಿ ಏನು ತಿಳಿಸಲಾರದೆ ಹೋಗಿವೆ. ಆದ್ದರಿಂದ ಪರಮಾತ್ಮನನ್ನು ತಿಳಿಯುವುದಕ್ಕೆ ಶ್ರತುಗಳನ್ನು ಆಶ್ರಯಿಸಿದರೂ, ದೇವತೆಗಳನ್ನು ಆಶ್ರಯಿಸಿದರೂ, ಏನು ಪ್ರಯೋಜನೆಯಿಲ್ಲ. ಎಲ್ಲದಕ್ಕು ಅತೀತವಾಗಿ ಯಾರಿಗೂ ತಿಳಿಯದ, ಏನೂ ಅಲ್ಲದ ಪರಮಾತ್ಮನನ್ನು ತಿಳಿದಿದ್ದೇವೆಯೆಂದು ಕೆಲವರು ಬಹಿರಂಗವಾಗಿ ಹೇಳಿಕೊಳ್ಳುವುದು ನಗುವಂತಹ ವಿಷಯವೇ ಅಲ್ಲವೆ!

**ಆ ॥ ತನುವಿನಲ್ಲಿ ಪಂಚ ತನ್ಮಾತ್ರಗಳಿರುವಂತ**
**ಬಾಗಿಲಿಲ್ಲ ಸಾಕ್ಷಿ ತಾನಲ್ಲ**
**ತನ್ನನ್ನು ತಾನು ತಿಳಿಯದು ತಾನೇನು ತಿಳಿಯಲಾರದು**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಶರೀರದಲ್ಲಿ ಪ್ರಾರಬ್ಧಕರ್ಮ ಪ್ರಕಾರ ಸುಖದುಃಖಗಳಲ್ಲಿ ಆಡಿಸಲ್ಪಡುತ್ತಾ, ಅಹಂ ಹೊಂದಿದ ಜೀವಾತ್ಮ ಪಾಲಿಗೆ ಚಿತ್ರಗುಪ್ತನಾಗಿ ಆಗಾಮಿಕರ್ಮವನ್ನು ಅಂಟಿಸುವ ಓ ಆತ್ಮಾ! ಕೇಳು. ಪರಮಾತ್ಮ ನಮ್ಮ ಶರೀರದಲ್ಲಿ ಇದೆಯೆಂದುಕೊಂಡರೆ ಶರೀರದ ಹೊರಗು ಕೂಡ ಇದೆ. ಪಂಚಭೂತಗಳಲ್ಲಿದೆ ಯೆಂದುಕೊಂಡರೆ ಪಂಚಭೂತಗಳು ಇಲ್ಲದ ಕಡೆ ಕೂಡ ಇದೆ. ಎಲ್ಲದಕ್ಕು ಸಾಕ್ಷಿಯಾಗಿ ಇದೆಯೆಂದುಕೊಂಡರೆ ಅದಕ್ಕೆ ಅಕ್ಷಿಯು ಇಲ್ಲ. ಇತರರನ್ನು ನೋಡುವುದಿಲ್ಲ, ತನ್ನನ್ನುತಾನು ನೋಡಿಕೊಳ್ಳುವುದಿಲ್ಲ. ಪರಮಾತ್ಮಗೆ ತನವು ಇಲ್ಲ ಮತ್ತು ಬಾಗಿಲು ಇಲ್ಲ, ಅದೊಂದು ಪರಿಕರವು ಅಲ್ಲ, ಅದಕ್ಕೆ ಪರಿಮಿತಿ ಇಲ್ಲ, ಪರಿಮಾಣವಿರುವ ಶಕ್ತಿಯು ಅಲ್ಲ, ಪ್ರಪಂಚದೊಳಗಿರುವುದು ಅಲ್ಲ. ತಾನು ಎನ್ನುವ ಭಾವವಿಲ್ಲ, ತಾನೇನೋ ಯಾರಿಗು ತಿಳಿದಿಲ್ಲ. ಪರಮಾತ್ಮ ಅಂಚುಗಳು ಇಲ್ಲದಿರುವುದು, ಅಂದಾಜಿಗೆ ಸಿಗದಿರುವುದು. ಬದುಕಿರುವ ಮಹಾರ್ಷಿಗಳಿಗಾಗಲಿ, ರಾಜರ್ಷಿಗಳಿಗಾಗಲೀ, ದೇವರ್ಷಿಗಳಿಗಾಗಲಿ, ಬ್ರಹ್ಮರ್ಷಿ

ಗಳಿಗಾಗಲಿ, ಬ್ರಹ್ಮಯೋಗಿಗಳಿಗಾಗಲಿ, ಕರ್ಮಯೋಗಿಗಳಿಗಾಗಲಿ ತಿಳಿಯದಿರುವುದು. ಎಲ್ಲರಿಂದ ಇದೆಯೆಂದು ಹೇಳಿಸಿಕೊಳ್ಳುವುದು ಪರಮಾತ್ಮ.

**ಆ ॥ ಮೂರ್ಛೆಹೊಂದುವುದಿಲ್ಲ ಮೂರ್ಖರಿಗೆ ಸಿಗದು**
**ಸಾಧನೆಯಲ್ಲ ಕಷ್ಟಸಾಧನೆಯು ಅಲ್ಲ**
**ಪಟ್ಟು ಬಿಡುವಿಲ್ಲದ ಪರಿಪೂರ್ಣ ಯೋಗಂಬು**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ:–** ಒಳ್ಳೆಯ ಕೆಟ್ಟ ಕರ್ಮಗಳೆನ್ನುವ ತಾರತಮ್ಯ ಇಲ್ಲದೇ ಆಚರಿಸುತ್ತಾ ಪಾಪ ಪುಣ್ಯಗಳಿಗೆ ಸಂಬಂಧವಿಲ್ಲದ ಓ ಆತ್ಮಾ! ಕೇಳು. ಪರಮಾತ್ಮ ಒಂದು ಜೀವವಿರುವ ಪದಾರ್ಥವಲ್ಲ, ಆದ್ದರಿಂದ ಅದು ಮೂರ್ಛೆಹೋಗುತ್ತದೆಂದು ಹೇಳುವುದಕ್ಕೆ ಅವಕಾಶವೇ ಇಲ್ಲ. ತಿಳಿಯುವುದಕ್ಕೆ ಸಾಧನೆಯು ಅಲ್ಲ, ಕಷ್ಟಸಾಧನೆಯು ಅಲ್ಲ. ಹಿಡಿತ ಇಲ್ಲದಿರುವುದು ಕೈಯಿಗೆ ಸಿಗದಿರುವುದು ಮತ್ತು ಯಾವ ರುಚಿಯಿಲ್ಲದ್ದು ಏನು ಅಲ್ಲದ ಪರಮಾತ್ಮನನ್ನು ಏನೆಂದು ಹೇಳಬೇಕೊ ಯಾರಿಗೂ ಅರ್ಥವಾಗದೆ ಆತ್ಮಗಿಂತ ಪ್ರತ್ಯೇಕವಾಗಿ ಇದೆಯೆಂದು ಪರಮಾತ್ಮ ಎಂದಿದ್ದಾರೆ. ಹಾಗೇ ಪುರುಷರಿಗಿಂತ ಬೇರೆಯಾದುದೆಂದು ಮತ್ತು ಉತ್ತಮವಾದುದೆಂದು ಪುರುಷೋತ್ತಮನೆಂದಿದ್ದಾರೆ. ಕರ್ಮನಾಶವಾದ ನಂತರ ಜೀವಿಯು ಜನ್ಮಗಳನ್ನು ಹೊಂದದೆ ಬಿಡುಗಡೆಯಾಗಿ ಹೊಂದುವುದು ವಿಮುಕ್ತಿ, ಮೋಕ್ಷ ಎಂದಿದ್ದಾರೆ. ಪರಮಾತ್ಮ ಎಂದರೆ ಏನೋ, ಏನಲ್ಲವೋ ಕೆಳಗಿನ ಪದ್ಯದಲ್ಲಿ ಕೂಡ ನೋಡೋಣ.

**ಆ ॥ ವಿಷ್ಣು ಶಿವನು ಅಲ್ಲ ವೀರ ವೈಷ್ಣವವಲ್ಲ**
**ಬ್ರಹ್ಮನಿಷ್ಠೆ ಅಲ್ಲ ಭಕ್ತಿಯಲ್ಲ**
**ಪ್ರಾಣ ರೂಪವಲ್ಲ ಪ್ರಜ್ಞಾನವದು ಅಲ್ಲ**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಅಜ್ಞಾನಿಗಳಲ್ಲಿ ಪ್ರಾರಬ್ಧವನ್ನು ಅನುಭವಿಸುವಂತೆ ಮಾಡುತ್ತಾ ಆಗಾಮಿಕರ್ಮವನ್ನು ಅಂಟಿಸುತ್ತಾ, ಜ್ಞಾನ ತಿಳಿದ ಯೋಗಿಗಳಲ್ಲಿ ಪ್ರಾರಬ್ಧವನ್ನು

ಅನುಭವಿಸುವಂತೆ ಮಾಡುತ್ತಾ, ಆಗಾಮಿಕರ್ಮವನ್ನು ಅಂತ್ಯಮಾಡುತ್ತಿರುವ ಓ ಆತ್ಮಾ! ಕೇಳು. ದೇವತೆಗಳಲ್ಲಿ ದೊಡ್ಡವನಾದ ವಿಷ್ಣುವನ್ನಾಗಲಿ, ಶಿವನನ್ನಾಗಲಿ, ಹೇಳುವುದಕ್ಕೆ ಒಬ್ಬರಿಗೆ ಹುಟ್ಟಿದವನಲ್ಲ. ಹೆಸರು ಹೊಂದಿದವನು ಅಲ್ಲ, ವಿಷ್ಣುವು ಈಶ್ವರರಂತೆ ದೇವರಲ್ಲ. ಒಂದುಸಲ ಅದು ಎಂದು ಮತ್ತೊಂದುಸಲ ಅವನು ಎಂದು ಕರೆಯಲ್ಪಡುವ ಪರಮಾತ್ಮನನ್ನು ಪುರುಷನೆಂದು ಹೇಳಲಾರೆವು. ಸ್ತ್ರೀ ಎಂದು ಕೂಡ ಹೇಳಲಾರೆವು. ಭಕ್ತಿಯೇ ಪರಮಾತ್ಮ ಎಂದುಕೊಳ್ಳುವುದಕ್ಕೆ ಭಕ್ತಿಯು ಅಲ್ಲ, ಭಕ್ತಿಯಿಂದ ಏರ್ಪಡುವ ಬ್ರಹ್ಮನಿಷ್ಠೆಯು ಅಲ್ಲವೆಂದು ತಿಳಿಸಿದ್ದಾರೆ. ಜ್ಞಾನವೇ ದೈವಸ್ವರೂಪವೆಂದು ಹೇಳುವುದಕ್ಕೆ ಸಾಧ್ಯವಿಲ್ಲ. ಜ್ಞಾನವಾಗಲಿ, ಪ್ರಜ್ಞಾನವಾಗಲಿ ದೇವರಲ್ಲವೆಂದೇ ಹೇಳಬಹುದು. ಇಂತಹದ್ದೆಂದು ಹೇಳುವುದಕ್ಕೆ ಯಾವದಾರಿ ಇಲ್ಲದ ಪರಮಾತ್ಮನನ್ನು ಕುರಿತು ಕೆಲವರು ಏನೆಂದಿದ್ದಾರೆಂದರೇ.

**೩ ॥ ಪರಮ ಶಿವ ಕಳೆಗಳನ್ನುತ್ತಾ ಹೇಳಿದರು ಕೆಲವರು**
**ಮುಕ್ತಿ ಕಾಂತಯೆನ್ನುತ್ತಾ ಮುಗಿದು ಕಾಂತ**
**ಹುಡುಕಿ ಕಾಣಲಾರದೆ ಬೇಸರಗೊಂಡರು ಕೆಲವರು**
**ಅಖಿಲ ಜೀವಸಂಗ ಆತ್ಮಲಲಿಂಗ.**

**ಭಾವಾರ್ಥ :–** ಶರೀರಯಂತ್ರಾಂಗದಲ್ಲಿ 24 ಭಾಗಗಳನ್ನು ಒಬ್ಬ ಜೀವಿಗಾಗಿ ನಡೆಸುತ್ತಾ, ಪರಮಾತ್ಮಗೆ ಬಂಟನಾಗಿ ನಿಂತಿರುವ ಓ ಆತ್ಮಾ! ಕೇಳು. ಪರಮಾತ್ಮ ಇದುಯೆಂದು ನಿರ್ಣಯಿಸಲಾರದೆ ಎಷ್ಟೋಜನ ಎಷ್ಟು ವಿಧಗಳಾಗಿಯೋ ಹೇಳಿಕೊಂಡಿದ್ದಾರೆ. ಆ ವಿಧವಾಗಿ ಹೇಳಿಕೊಳ್ಳುವುದರಲ್ಲಿ ಪರಮಶಿವ ಕಳೆಯೆಂದು ಕೆಲವರು ಜ್ಞಾನಿಗಳು ಹೇಳಿದಾಗ, ಮತ್ತೆಕೆಲವರು ಮುಕ್ತಿಕಾಂತಯೆಂದು ಮುಗಿದಿದ್ದಾರೆ. ಇನ್ನೂ ಸ್ವಲ್ಪಜನ ದೇವರ ಮೇಲೆ ಎಷ್ಟೋ ಪರಿಶೋಧನೆಗಳು ಮಾಡಿ ಕೊನೆಗೆ ಏನು ನಿರ್ಣಯವಾಗದೆ ಬೇಸರವಾಗಿ ಹೋಗಿದ್ದಾರೆ. ಪರಮಾತ್ಮ ಬದುಕಿರುವ ಶರೀರಧರರಿಗೆ ತಿಳಿಯುವುದಿಲ್ಲ ಎನ್ನುವ ಸೂತ್ರ ತಿಳಿಯದೆ, ಎಷ್ಟುಜನ ಯಾವ ವಿಧವಾಗಿ ಹೇಳಿಕೊಂಡರೂ ಅನ್ವೇಷಿಸಿದರೂ ಕೊನೆಗೆ ಹೇಳಿಕೊಂಡವರ ಮಾತುಗಳು, ಅನ್ವೇಷಿಸಿದವರ ಅನ್ವೇಷಣೆ ವೃಥಾ ಆಗುತ್ತಿದೆ.

**ಆ ॥ ಜಪ ತಪವು ಮಾಡಿ ಜಡೆಗಳು ಮುಡಿಹಾಕಿದರೂ**
**ಜಾಡು ತಿಳಿಯುವುದಿಲ್ಲ ಜಪ ತಪಿಸುವವರಿಗೆ**
**ನೋಡಲಾಗುವುದಿಲ್ಲ ಸುಖದುಃಖವು ಅಲ್ಲ**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಶರೀರಿದಲ್ಲಿ ನೀನು ಏನು ಮಾಡುತ್ತಿರುವುದು ಯಾರಿಗು ತಿಳಿಸದಂತೆ ನಿದ್ರಿಸುವ ಸಮಯದಲ್ಲಿ ಕೂಡ ಶ್ವಾಸವನ್ನು ನಡೆಸುತ್ತಿದ್ದೀಯಾ. ಅಂತಹ ನಿನ್ನ ಇರುವಿಕೆಯನ್ನು ತಿಳಿಯದೆ ಎಲ್ಲಾ ನಾನೇ ಮಾಡುತ್ತಿದ್ದೇನೆಂದು ಜೀವಿಯು ಭ್ರಮಿಸುತ್ತಿದ್ದರೂ, ಯಾವ ಕೆಲಸವನ್ನು ಜೀವಿಗೆ ಬಿಡದೆ ಎಲ್ಲಾ ಕೆಲಸಗಳನ್ನು ಎಷ್ಟೋ ಸಹನೆಯಿಂದ ಮಾಡುತ್ತಿರುವ ಓ ಆತ್ಮಾ! ಕೇಳು. ಭೂಮಿ ಮೇಲೆ ಸಜೀವಿಗಳಾದವರು ದೇವರನ್ನು ತಿಳಿಯಬೇಕೆಂದು ತಲೆಯಲ್ಲಿನ ಕೂದಲು ಜಡೆಗಳಾಗಿ ಬದಲಾದ ಅವುಗಳನ್ನು ಮುಡಿಹಾಕಿ, ಜಪ ತಪ ಮಾಡಿ ವಯಸ್ಸೆಲ್ಲವೂ ಹುಡುಕುವುದರಲ್ಲಿಯೇ ಖರ್ಚುಮಾಡಿ, ಕೊನೆಯ ವೃದ್ಧಾಪ್ಯದಲ್ಲಿ ಕೂಡ ಪರಮಾತ್ಮ ಜಾಡು ತಿಳಿಯದೆ ಆ ಮಾತು ಹೊರಗೆ ಹೇಳಿದರೆ ಉಳಿದವರು ಬೆಲೆಕೊಡುವುದಿಲ್ಲವೆಂದು, ನಾವು ತಪ ಮಾಡಿ ದೇವರನ್ನು ತಿಳಿದು ಕೊಂಡಿದ್ದೇವೆಂದು ಬೊಂಕುತ್ತಿದ್ದಾರೆ. ತಾವು ಅಷ್ಟು ಶ್ರಮ ಪಟ್ಟಿದ್ದೇವೆನ್ನುವುದಕ್ಕೆ ನಿದರ್ಶನಕ್ಕಾಗಿ ತಲೆಗೆ ಭಾರವಾದ ಜಡೆಗಳನ್ನು ಮಾತ್ರ ಕತ್ತರಿಸದೆ ಹಾಗೇ ಹೊರುತ್ತಿದ್ದಾರೆ. ನನಗೆ ಪ್ರಕಾಶವಂತವಾಗಿ ಕಣ್ಣುಗಳು ನೋಡಲಾರದಷ್ಟು ಕಾಂತಿಯಾಗಿ ದೇವರು ಕಾಣಿಸಿದ್ದಾನೆಂದು ಕೆಲವರು, ಪರಮಾತ್ಮನನ್ನು ತಾವು ತಾಕಿ ಬಂದಿದ್ದೇವೆ ಹತ್ತಿಗಿಂತ ಮೃದುವಾಗಿ ಇದ್ದಾನೆಂದು ಕೆಲವರು, ನಮಗೆ ಆಕಾಶದಲ್ಲಿ ಬೆಳ್ಳಗೆ ಕಾಣಿಸಿದ್ದಾನೆಂದು ಕೆಲವರು, ತಿಳಿಯದ ಪ್ರಜೆಗಳಿಗೆ ಏನು ಹೇಳಿದರು ತಮ್ಮ ಆಕಾರವನ್ನು ನೋಡಿ ನಂಬುತ್ತಾರೆಂದು ತಿಳಿದು ಎಲ್ಲರಿಗು ನಂಬಲು ಹೇಳುತ್ತಿದ್ದಾರೆ. ಕೆಲವರು ಅವರು ಹೇಳುವ ಮಾತುಗಳು ನಿಜವೇನೊಯೆಂದು ನಂಬಿದರೂ, ಪರಮಾತ್ಮ ಮಾತ್ರ ಯಾರಿಗು ಕಾಣಿಸುವವನಲ್ಲ, ಕೇಳಿಸುವವನಲ್ಲ. ಯಾರು ಏನು ಹೇಳಿದರೂ ಅದಕ್ಕೆ ಸ್ವಲ್ಪ ದೂರವಾಗಿಯೇ ಇದೆಯೆಂದು, ಅವರು ಹೇಳುವುದು ಸರಿಯಲ್ಲವೆಂದು

ತಿಳಿಯಬೇಕು. ಅಷ್ಟು ಅಗಮ್ಯಗೋಚರವಾದ ಪರಮಾತ್ಮನನ್ನು ಕುರಿತು ಬದುಕಿರುವವರು ತಿಳಿಯಲಾರರೆನ್ನುವ ಸೂತ್ರ ತಿಳಿಯದೆ ತಮ್ಮ ದೊಡ್ಡತನವನ್ನು ಸಾರಿಕೊಳ್ಳುವುದಕ್ಕೆ ದೇವರನ್ನು ನೋಡಿದ್ದೇವೆಂದು, ನೋಡುತ್ತಿದ್ದೇವೆಂದು ಹೇಳುವುದು ವಿಚಿತ್ರ.

**ಆ ॥ ಜಲಗಳಿಂಗಿ ಹೋದರು ಜಗಗಳು ಕುಗ್ಗಿದರೂ**
**ಜಡಿಯಹೋಗದು ಅದರ ಜನತೆಯೇನೊ**
**ಬದುಕು ಸಾವುಗಳೆನ್ನುವ ಭ್ರಾಂತಿಗಳು ಇಲ್ಲದ್ದು**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಶರೀರದಲ್ಲಿ ಹೊರತು ಹೊರಗೆ ಎಲ್ಲಿಯೂ ಯಾವ ವಸ್ತುವಿನಲ್ಲಿಯು ಇಲ್ಲದ ಓ ಆತ್ಮಾ! ಕೇಳು. ಪ್ರಪಂಚದಲ್ಲಿನ ಸಮುದ್ರಗಳೆಲ್ಲವು ಇಂಗಿಹೋದರೂ, ಜಗಗಳೆಲ್ಲವು ಕುಗ್ಗಿಹೋಗಿ ಇಲ್ಲದಂತೆ ಹೋದರೂ, ಪ್ರಪಂಚವೆಲ್ಲದಕ್ಕು ಪ್ರಳಯವೇ ಬಂದರೂ, ಇರುವ ಸಮಸ್ತವು ಇಲ್ಲದಂತೆ ಹೋದರೂ, ಜೀವಾತ್ಮ ನಾಶವಾದರೂ, ಆತ್ಮ ಇರುವಿಕೆ ಕಾಣಿಸದಂತೆ ಹೋದರೂ, ಪರಮಾತ್ಮ ಮಾತ್ರ ಯಾವಾಗಲೂ ಇರುವಂತೆ ಇರುತ್ತಾನೆ. ಪರಮಾತ್ಮಗೆ ಸಾವು ಬದುಕು ಎನ್ನುವ ಎರಡು ಸಂಘಟನೆಗಳು ಇಲ್ಲ. ಯಾವುದಕ್ಕು ಪರಮಾತ್ಮ ಬಯಪಡುವುದಲ್ಲ. ಎಲ್ಲಾಕಡೆ ವಿಸ್ತರಿಸಿ, ಎಲ್ಲಾ ತಾನಾಗಿ ಎಲ್ಲವುಗಳಲ್ಲಿ ಅಣುವಣುವು ವ್ಯಾಪಿಸಿರುವ ಪರಮಾತ್ಮನನ್ನು ಯಾರಾಗಲಿ, ಯಾವ ಪ್ರಳಯವಾಗಲಿ ಏನು ಮಾಡಲಾರವು. ಎಲ್ಲವುಗಳಿಗು ಆದಿಕರ್ತ ಎಲ್ಲರಿಗು ಸೂತ್ರದಾರಿಯಾದ ಪರಮಾತ್ಮ ಸಾಯುವುದಲ್ಲ ಹುಟ್ಟುವುದು ಅಲ್ಲ. ತ್ರಿಮೂರ್ತಿಗಳಿಗಾಗಲಿ, ಇಂದ್ರಾದಿ ದೇವತೆಗಳಿಗಾಗಲಿ ಪರಮಾತ್ಮ ತಿಳಿಯುವವ ನಲ್ಲ.

**ಆ ॥ ನಾಲ್ಕಾಶ್ರಮಗಳು ನಾಲ್ಕು ಯೋಗಗಳ್**
**ನಂಬಿ ಮಾಡಿದಂತಹ ನರರಿಗೆಲ್ಲ**
**ಅಚಲ ಬಿಡುವುದಿಲ್ಲ ಅವುಗಳ ನಂಬರು ಚಪಲರು**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಶರೀರದಲ್ಲಿ ಬುದ್ಧಿಗೆ ತಿಳಿಯದ ವಿದ್ಯೆಗಳಾದರೂ ಪ್ರಾಣಿ ಚಿಕ್ಕಂದಿನಲ್ಲಿಯೇ ನೀರಿನಲ್ಲಿ ಈಜುವುದನ್ನು, ಕರು ಹಾಲಿನ ಕೆಚ್ಚಲನ್ನು ಗುರುತಿಸುವುದನ್ನು, ಐದು ವರ್ಷಗಳ ಚಿಕ್ಕವಯಸ್ಸು ಮನುಷ್ಯನಿಗೆ ಪಾಂಡಿತ್ಯ ಉಂಟಾಗುವುದು ಮೊದಲಾದವುಗಳನ್ನು ತಿಳಿಸುತ್ತಾ ಏನು ತಿಳಿಯದಂತಿರುವ ಓ ಆತ್ಮಾ! ಕೇಳು. ಮನುಷ್ಯ ತನ್ನ ಜೀವನದಲ್ಲಿ ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ, ಸನ್ಯಾಸಾಶ್ರಮಗಳೆನ್ನುವ ನಾಲ್ಕು ಆಶ್ರಮಗಳ ಧರ್ಮಗಳನ್ನು ಸರಿಯಾಗಿ ನಿರ್ವಹಿಸಿ. ಆ ನಾಲ್ಕು ಆಶ್ರಮಗಳಲ್ಲಿ ನಾಲ್ಕು ಯೋಗಗಳನ್ನು ನಂಬಿದಂತಹ ನರರಿಗೆ ಅಚೇಲವೆಂದರೆ ಏನೋ ತಿಳಿದಿಲ್ಲ. (ಇಲ್ಲಿ ನಾಲ್ಕು ಧರ್ಮಗಳಲ್ಲಿ ಲಗ್ನವಾಗುವುದೇ ನಾಲ್ಕು ವಿಧಗಳ ಯೋಗಗಳಾಗಲಿ ದೈವ ಜ್ಞಾನಕ್ಕೆ ಸಂಬಂಧಿಸಿದ ಬ್ರಹ್ಮ, ಕರ್ಮ, ಭಕ್ತಿ ಯೋಗಗಳು ಅಲ್ಲವೆಂದು ತಿಳಿಯಬೇಕು.) ಯೋಗಗಳು ಎರಡು ವಿಧಗಳೆಂದು, ಪ್ರಪಂಚ ಸಂಬಂಧವಾದ ಜೀವನ ದಶೆಗಳಿಗೆ ಸಂಬಂಧಿಸಿದ ನಾಲ್ಕು ಯೋಗಗಳು ಒಂದುವಿಧವೆಂದು, ಪರಮಾತ್ಮನನ್ನು ತಿಳಿಯುವುದಕ್ಕೆ ಮಾರ್ಗಗಳಾದ ಮೂರು ಎರಡನೆ ವಿಧವೆಂದು ತಿಳಿಯಬೇಕು. ನಾಲ್ಕು ಆಶ್ರಮ ಧರ್ಮಗಳ ಪ್ರಕಾರ ನಾಲ್ಕು ಯೋಗಗಳು ಹೊಂದಿದವರಿಗೇ ಪರಮಾತ್ಮ ಎಂದರೆ ಏನೋ ಅದರ ಧರ್ಮಗಳೆಂದರೆ ಏನೋ ತಿಳಿದಿಲ್ಲ. ಅಂತಹವರಿಗೇ ತಿಳಿಯದಿರುವುದು ಚಪಲ ಚಿತ್ತರಾದ ಮನುಷ್ಯರಿಗೆ ಸ್ವಲ್ಪವೂ ತಿಳಿಯುವುದಿಲ್ಲ ಮತ್ತು ಅವರಿಗೆ ನಂಬಿಕೆ ಇರುವುದಿಲ್ಲ. ಎಷ್ಟೋ ದೊಡ್ಡವರಿಗೇ ತಿಳಿಯದ ಪರಮಾತ್ಮ ಸಾಧಾರಣ ಮನುಷ್ಯರಿಗೆ ಅದೊಂದು ಇದೆಯೆಂದು ಕೂಡ ತಿಳಿದಿಲ್ಲ

**ಆ ॥ ಕಾರಣಂಬು ಶಿವನು ಕಾರ್ಯಂಬು ಜೀವಿಯು**
**ಕಾರ್ಯ ಕಾರಣಂಬು ಅಲ್ಲದ ಬಯಲು**
**ಕಾಣಲಾರರು ಜನರು ಘನ ಗುರು ಕೃಪೆಯಿಲ್ಲದೆ**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಜೀವಿಯು ಧರಿಸಿದ ಶರೀರ ಎಷ್ಟು ಪರಿಮಾಣವಿರುತ್ತದೋ ಅಷ್ಟೇ ದಪ್ಪ ಅಷ್ಟೇ ಎತ್ತರ ಹೊಂದಿ ಆ ಶರೀರ ಆಕೃತಿಯನ್ನು ಹೊಂದಿರುವ

ಓ ಆತ್ಮಾ! ಕೇಳು. ಬದುಕಿರುವಾಗ ತಿಳಿಯಲಾರದ ಮನುಷ್ಯರು ಮರಣಿಸಿದ ನಂತರ ಪರಮಾತ್ಮನನ್ನು ತಿಳಿಯುವುದಕ್ಕೆ ಒಂದು ಅವಕಾಶವಿದೆ. ಸತ್ತವನು ಪುನಃ ಹುಟ್ಟುತ್ತನೆನ್ನುವ ಭಗವದ್ಗೀತೆ ವಾಕ್ಕು ಪ್ರಕಾರ ಜೀವಿಯು ತಕ್ಷಣ ಮತ್ತೊಂದು ಜಾಗಾದಲ್ಲಿ ಹುಟ್ಟುತ್ತಿರುವಾಗ, ಮರಣಿಸಿದ ನಂತರ ಪರಮಾತ್ಮನನ್ನು ಹೇಗೆ ತಿಳಿಯುತ್ತೇವೆಂದು ಪ್ರಶ್ನೆಬಾರದೆ ಇರುವುದಿಲ್ಲ. ಅದಕ್ಕೆ ಸಮಾಧಾನ ಏನೆಂದರೆ! ಬದುಕಿರುವಾಗಲೇ ಮನುಷ್ಯ ತನ್ನ ಕರ್ಮವನ್ನು ಇಲ್ಲದಂತೆ ಮಾಡಿಕೊಳ್ಳುವುದಕ್ಕೆ ಪ್ರಾರಂಭ ಮಾಡಿದರೆ ಸ್ವಲ್ಪಕಾಲಕ್ಕಾದರೂ ಅಥವಾ ಕೆಲವು ಜನ್ಮಗಳಿಗಾದರು ಕರ್ಮವಿಲ್ಲದ ಮರಣ ಏರ್ಪಡುತ್ತದೆ. ಆಗ ಪುನಃ ಜನ್ಮಿಸಬೇಕಾದ ಅವಶ್ಯಕತೆಯಿಲ್ಲದೆ ಪರಮಾತ್ಮನೊಳಗೆ ಐಕ್ಯವಾಗುತ್ತಾನೆ. ಐಕ್ಯವಾದಾಗ ಪರಮಾತ್ಮೆಂದರೇ ಏನೊ ತಿಳಿಯಬಲ್ಲದು. ಅದಕ್ಕಾಗಿ ಈಗಿನಿಂದ ಕರ್ಮವನ್ನು ಇಲ್ಲದಂತೆ ಮಾಡಿಕೊಳ್ಳುವುದಕ್ಕೆ ಪ್ರಯತ್ನಿಸಬೇಕು. ಕರ್ಮವನ್ನು ಇಲ್ಲದಂತೆ ಮಾಡಿಕೊಳ್ಳುವ ಪದ್ಧತಿ ಒಬ್ಬ ಗುರು ಮಾತ್ರ ತಿಳಿಸಬಲ್ಲನು. ಗುರು ಸಾಧಾರಣ ವ್ಯಕ್ತಿಯಲ್ಲದಿರು ವಾಗಲೇ ಅಸಲಾದ ಬೋಧನೆಗಳು ತಿಳಿಸಿ ಅಸಲಾದ ಮಾರ್ಗದಲ್ಲಿ ನಡೆಸಬಲ್ಲನು.

ಕೆಲಸಗಳಲ್ಲಿ ಕರ್ಮ ಹುಟ್ಟಿಬರುತ್ತಿದೆ. ಕರ್ಮವೇ ಕೆಲಸಗಳಿಗೆ ಕಾರಣ ವಾಗುತ್ತಿದೆ. ಕೆಲಸಕ್ಕೆ ಕಾರಣವಾದ ಕರ್ಮವನ್ನು ಆತ್ಮ ಆಚರಿಸುತ್ತ ಅನುಭವಿಸುವಂತೆ ಮಾಡುತ್ತಿರುವಾಗ ಕಾರ್ಯವನ್ನು ಜೀವಿಯು ಅನುಭವಿ ಸುತ್ತಿದ್ದಾನೆ. ಈ ಅಸಲು ರಹಸ್ಯ ಘನ ಗುರುವು ಹೊರತು ಯಾರು ತಿಳಿಸಲಾರರು. ಯಾರು ತಿಳಿಸಿದರೂ ಮಂತ್ರ ಜಪಗಳನ್ನೊ, ವಿಗ್ರಹ ಪೂಜೆಗಳನ್ನೊ ತಿಳಿಸುತ್ತಿರುತ್ತಾರೆ. ಆ ಕೆಲಸಗಳಲ್ಲಿ ಸಿಲುಕಿಕೊಂಡರು ಕರ್ಮ ಬಿಡುವುದಿಲ್ಲ, ಪರಮಾತ್ಮ ಮಾರ್ಗ ಲಭಿಸುವುದಿಲ್ಲ. ಮನುಷ್ಯ ನಂಬಿದ ಎಲ್ಲಾ ಪ್ರಕೃತಿ ಕೆಲಸಗಳನ್ನು ಬಿಡಿಸಿ ಜ್ಞಾನಾಗ್ನಿಯಿಂದ ಕರ್ಮವನ್ನು ಸುಟ್ಟುಹಾಕಿಸುವ ಶಕ್ತಿ ಒಬ್ಬನೇ ಒಬ್ಬ ಗುರುವಿಗೆ ಇರುತ್ತದೆಂದು ಮರೆಯಬಾರದು. **ಬೋಧಕರೆಲ್ಲರು ಗುರುಗಳಲ್ಲ** ಎನ್ನುವ ಸೂತ್ರದ ಪ್ರಕಾರ ಗುರುವನ್ನು ಜಾಗ್ರತೆಯಾಗಿ ಗುರುತಿಸಬೇಕು.

**ಆ ॥ ಪೂರ್ಣ ಬೋಧನೆಗಾಗಿ ಪುರುಷನಿರುತ್ತಾನೆ ಬಹುಜನ್ಮ**
**ಪುಣ್ಯವಶದಿಂದ ಹುಟ್ಟಬೇಕು.**
**ಹಾಗಲ್ಲದೆ ಹೋದರೆ ಅತಿ ಕಷ್ಟ ಸಾಧ್ಯವು**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಶರೀರದಲ್ಲಿ ಎಲ್ಲಾ ಕಡೆ ವ್ಯಾಪಿಸಿದ್ದು ಕರ್ಮವಿದ್ದರೆ ಕೈಯಲ್ಲಿಯೋ, ಕಾಲಿನಲ್ಲಿಯೋ ಶಕ್ತಿ ಇಲ್ಲದಂತೆ ಮಾಡಿ, ಅಂಗವಿಕಲನಂತೆ ಕಾಣಿಸುವಂತೆ ಮಾಡುತ್ತಾ ಜೀವಿಯಿಂದ ಕರ್ಮವನ್ನು ಅನುಭವಿಸುವಂತೆ ಮಾಡುವ ಓ ಆತ್ಮಾ! ಕೇಳು. ಭೂಮಿ ಮೇಲೆ ದೇವತೆಗಳ ಭಕ್ತಿಯಾಗಲಿ, ಮಂತ್ರಗಳ ಜಪಗಳ ಧ್ಯಾಸವಾಗಲಿ ಇಲ್ಲದೇ ಹೋಗಬೇಕೆಂದರೆ, ಪರಮಾತ್ಮನನ್ನು ಹೊಂದುವ ಮಾರ್ಗ ತಿಳಿಯಬೇಕೆಂದರೇ ಸಂಪೂರ್ಣವಾದ ಬೋಧನೆ ದೊರೆಯಬೇಕು. ಅಸಲುಸಿಸಲಾದ ಬೋಧನೆ ತಿಳಿಯಬೇಕೆಂದರೇ ಮಾನವನು ಎಷ್ಟೋ ಜನ್ಮಗಳಿಂದ ಜ್ಞಾನದ ಮೇಲೆ ಅಭಿಲಾಷೆಹೊಂದಿ, ಜ್ಞಾನ ಸಂಸ್ಕಾರವಾದ ಜನ್ಮಗಳನ್ನು ಹೊಂದುತ್ತಾ ಬಂದರೆ, ಎಷ್ಟೋ ಜನ್ಮಗಳ ಕೊನೆಗೆ ಪೂರ್ಣಬೋಧ ಲಭ್ಯವಾಗುವುದಕ್ಕೆ ಬೇಕಾದ ಗುರು ದೊರೆಯುತ್ತಾನೆ. ಹಾಗೆ ಜ್ಞಾನ ಸಂಸ್ಕಾರ ಇಲ್ಲದವರಿಗೆ ಪರಮಾತ್ಮನನ್ನು ಸೇರುವುದಕ್ಕೆ ಉಪಯೋಗ ಪಡುವ ಬೋಧನೆ ದೊರೆಯುವುದು ಬಹಳ ದುರ್ಲಭವಾಗುತ್ತದೆ. ಅಂತಹವರಿಗೆ ಅವರ ಸಂಸ್ಕಾರಕ್ಕೆ ತಕ್ಕಂತೆ ಗುರುಗಳು ಲಭಿಸುತ್ತಾರೆ. ಅವರು ಹೇಳುವ ಬೋಧನೆಗಳೇ ದೊಡ್ಡದಾಗಿ ಕಾಣಿಸುತ್ತವೆ.

**ಆ ॥ ಬಾಧೆಯಿಲ್ಲದ ಬೋಧನೆ ಬದುಕಿದಷ್ಟು ದಿನಗಳು ಯಿ**
**ಭಾವವರಿತು ತಿರುಗು ಭಾಗ್ಯಶಾಲಿ**
**ಹರಿ ಹರಾದಿಗಳಿಗು ಅಧಿಕನಾಗಿ ತಾನಯಾ**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಶರೀರದಲ್ಲಿ ಪ್ರಾರಬ್ಧಕರ್ಮವನ್ನು ಜೀವಿಯಿಂದ ಅನುಭವಿಸುವಂತೆ ಮಾಡುವ ಯಮಧರ್ಮರಾಜನಾಗಿ, ಅಹಂ ಇರುವವನಿಗೆ ಆಗಾಮಿ ಕರ್ಮವನ್ನು

ತಲೆಗೇರಿಸುವುದರಲ್ಲಿ ಚಿತ್ರಗುಪ್ತನಾಗಿ ಚಲಾವಣಿ ಆಗುವ ಓ ಆತ್ಮಾ! ಕೇಳು. ಕರ್ಮಬಾಧೆಗಳನ್ನು ಇಲ್ಲದೇ ಮಾಡುವ ಕರ್ಮರಾಹಿತ್ಯ ಬೋಧನೆಯನ್ನು ತಿಳಿದವನು ಅದೇ ಭಾವನೆಯಲ್ಲಿ ತನ್ನ ಜೀವನವೆಲ್ಲ ಕಳೆಯುತ್ತಾನೆ. ಜೀವನವೆಲ್ಲಾ ಗುರುವಿನ ಮೂಲಕ ತಿಳಿದುಕೊಂಡ ಪರಮಾತ್ಮ ಮಾರ್ಗವನ್ನು ಅನುಸರಿಸುವು ದರಿಂದ ಕರ್ಮವೆಲ್ಲವೂ ನಶಿಸಿಹೋಗಿ ಕೊನೆಗೆ ಮರಣ ಹೊಂದುತ್ತಾನೆ. ನಂತರ ಅವನು ಹುಟ್ಟವುದಿಲ್ಲ ಆದ್ದರಿಂದ ಅದೇ ಅವನಿಗೆ ಕೊನೆಯ ಮರಣ ಆಗುತ್ತದೆ. ಕೊನೆಯ ಮರಣಹೊಂದಿ ಅವನು ಆಗ ಪರಮಾತ್ಮನೊಳಗೆ ಐಕ್ಯವಾಗಿಹೋಗುತ್ತಾನೆ. ಆಗ ಪರಮಾತ್ಮ ಏನೊ ಹೇಗಿದೆಯೋ ಅದರ ಭಾವನೆ ಏನೊ ತಿಳಿಯುತ್ತದೆ. ಪರಮಾತ್ಮನೊಳಗೆ ಸೇರುವವರೆಗು ಯಾರಿಗೂ ಪರಮಾತ್ಮ ಏನೋ ತಿಳಿಯದೆಂದುಕೊಂಡಿದ್ದೇವೆ ಅಲ್ಲವೇ! ಪರಮಾತ್ಮ ಮಾರ್ಗ ಕೂಡ ಒಬ್ಬ ಗುರುವಿಗೆ ಹೊರತು ಉಳಿದ ಬೋಧಕರಿಗೆ ತಿಳಿದಿಲ್ಲ ಎಂದಿದ್ದೇವೆ. ಉಳಿದ ಬೋಧಕರು ಗುರುಗಳಂತೆ ನಟಿಸಬೇಕೆಂದುಕೊಂಡರೂ, ಅವರ ಬಾಯಿಂದ ಸ್ವಚ್ಛವಾದ ಪರಮಾತ್ಮ ಜ್ಞಾನ ಬಾರದೆ ದೇವತೆಗಳಿಗೆ ಸಂಬಂಧಿಸಿರು ವುದು ಮತ್ತು ಪುರಾಣಗಳಿಗೆ ಸಂಬಂಧಿಸಿದ ಜ್ಞಾನ, ಮತಗಳಿಗು ಸಂಬಂಧಿಸಿರು ವುದು ಮೊದಲಾದ ವಿಷಯಗಳೇ ಬರುತ್ತಿರುತ್ತವೆ. ಗುರುಹತ್ತಿರ ಅಂತಹ ವಿಷಯಗಳಲ್ಲದೆ ಜೀವಿಯು ಪಕ್ಕದ ಮಾರ್ಗವನ್ನು ನೋಡದಂಥ ಬೋಧನೆಗಳಿರುತ್ತವೆ. ಅಂತಹ ದೇವತಾತೀತ ಬೋಧನೆಗಳು ತಿಳಿದವನು ದೇವತೆಗಳಿಗಿಂತ ಅಧಿಕನಾಗಿ ಹರಿ ಹರಾದಿಗಳನ್ನು ಮೀರಿ ಇರುತ್ತಾನೆ.

**ಆ ॥ ಜನನ ಮರಣವೆನ್ನುವ ಜಾಡ್ಯವನ್ನು ಗುಣಪಡಿಸಲು**
**ಔಷಧಿ ಇದಕ್ಕಿಂತ ಮತ್ತೆ ಇಲ್ಲ**
**ತಿಂದವರಿಗೆಲ್ಲ ತೀರುತ್ತದೆ ರೋಗವು**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಮರಣದಲ್ಲಿಯು ಹುಟ್ಟುವುದರಲ್ಲಿಯು ಜೀವಿಯ ಹಿಂದಿದ್ದು, ಮರಣದಿಂದ ಹುಟ್ಟುವವರೆಗು ಗುಣಗಳನ್ನು, ಜೀವಿಯನ್ನು, ಕರ್ಮಸಮುದಾಯ

ವನ್ನು ತೆಗೆದುಕೊಂಡು ಬರುತ್ತಿರುವ ಓ ಆತ್ಮಾ! ಕೇಳು. ಜನನ ಮರಣವೆನ್ನುವ ಕರ್ಮತಂತ್ರ ರೋಗವನ್ನು ಗುಣಪಡಿಸುವುದಕ್ಕೆ ಸದ್ಗುರು ಬೋಧನೆಯೇ ಶರಣ್ಯ. ಪ್ರಪಂಚಕೋರಿಕೆಗಳಿಂದ ತುಂಬಿಕೊಂಡ ದೇವತಾರಾಧನೆಗಳನ್ನು ಬಿಡಿಸಿ, ಕೋರಿಕೆಗಳಿಗೆ ಅತೀತವಾದ ಮತ್ತು ದೇವತೆಗಳ ಭಕ್ತಿಗೆ ಅತೀತವಾದ ಕರ್ಮ ನಿವಾರಣೆ ಬೋಧನೆಯನ್ನು ಮೀರಿರುವುದು ಇಲ್ಲವೆಂದು ಹೇಳುವ ಗುರು ಬೋಧನೆಯನ್ನು ಮೀರಿರುವುದು ಇಲ್ಲ. ಏನು ಯಾವುದೂ ಅಲ್ಲದ ಪರಮಾತ್ಮನನ್ನು ತಿಳಿಯುವುದಕ್ಕೆ ಮಾರ್ಗವನ್ನು ಏರ್ಪಡಿಸುವುದು ಸದ್ಗುರು ಒಂದರ ಕರ್ಮನಿವಾರಣೆ ಬೋಧನೆಯೆಂದು ತಿಳಿಯಬೇಕು. ಇಲ್ಲಿಯವರೆಗಿರುವ ಎಲ್ಲಾ ಆರಾಧನೆಗಳನ್ನು ಬಿಟ್ಟು, ಎಲ್ಲಾ ಪ್ರಕೃತಿ ಜ್ಞಾನಗಳನ್ನು ಬಿಟ್ಟು, ಯಾರಿಗು ತಿಳಿಯದ ಪರಮಾತ್ಮನನ್ನು ತಿಳಿಯುವುದಕ್ಕೆ ಅಗತ್ಯವಾದ ಸದ್ಗುರು ಬೋಧನೆಯನ್ನು ತಿಳಿಯುವುದರಿಂದ ಸಾವು ಹುಟ್ಟುಗಳೆನ್ನುವ ರೋಗ ಇಲ್ಲದಂತೆ ಹೋಗಿ ಪರಮಾತ್ಮನೊಳಗೆ ಬೆರೆತುಹೋಗುತ್ತಾರೆ.

**ಆ ||  ಸದ್ಗುರು ಎನ್ನುವ ಒಳ್ಳೆಯ ವೈದ್ಯನನ್ನು ಸೇರಿ**
**ಪರಮ ಭಕ್ತಿ ಯೆನ್ನುವ ಪತ್ಯವಿದ್ದು**
**ದೀಕ್ಷೆಯೆನ್ನುವ ಔಷಧಿಯನ್ನು ತಿನ್ನಬೇಕು ಮನುಷ್ಯನಿರುತ್ತಾನೆ**
**ಅಖಿಲ ಜೀವಸಂಗ ಆತ್ಮಲಿಂಗ.**

**.ಭಾವಾರ್ಥ :–** ಶರೀರದಲ್ಲಿ ಎಲ್ಲಾ ಕೆಲಸಗಳು ಮಾಡುತ್ತಾ, ಯಾವ ಒಂದು ಕೆಲಸವನ್ನು ಕೂಡ ನಾನು ಮಾಡಿದ್ದೇನೆಂದು ಹೊರಗೆ ತಿಳಿಸಿದೆ ಎಷ್ಟೋ ವಿಜ್ಞಾನ ಪರಿಕರಗಳನ್ನು ಕಂಡುಹಿಡಿಸುವ ಯೋಚನೆಯನ್ನು ಕೊಟ್ಟರೂ, ಏನು ತಿಳಿಯದ ಜೀವಿಯು ನಾನು ಕಂಡುಹಿಡಿದಿದ್ದೇನೆಂದು ಹೇಳಿಕೊಳ್ಳುತ್ತಿದ್ದರು, ಸುಮ್ಮನೆ ನೋಡುತ್ತಿರುವ ಓ ಆತ್ಮಾ! ಕೇಳು. ಪ್ರಜೆಗಳಲ್ಲಿ ಸ್ವಲ್ಪ ಆಧ್ಯಾತ್ಮಿಕ ಚಿಂತನೆ ಇರುವವರು ಜ್ಞಾನವನ್ನು ತಿಳಿದುಕೊಳ್ಳಬೇಕೆಂದು ಗುರುಗಳನ್ನು ಆಶ್ರಯಿಸುತ್ತಿದ್ದಾರೆ. ಮುಖ್ಯವಾದ ಘಟ್ಟ ಇಲ್ಲಿಯೇ ಶುರುವಾಗುತ್ತದೆ. ಗುರು

ಎಂದರೇ ಬೋಧನೆಗಳು ಹೇಳುವವನೆಂದು ಮಾತ್ರ ಪ್ರಜೆಗಳಿಗೆ ತಿಳಿಯುವುದರಿಂದ ಯಾರು ಬೋಧನೆಗಳು ಹೇಳಿದರು ಅವರನ್ನು ಗುರುವಾಗಿಯೇ ನಂಬುತ್ತಿದ್ದಾರೆ. ರಾಮಾಯಣ, ಭಾರತಗಳನ್ನು ಓದಿ ಹೇಳುವವನು ಕೂಡ ಗುರುವಾಗಿಯೇ ಲೆಕ್ಕಿಸಲ್ಪಡುತ್ತಿದ್ದಾನೆ. ತಮಗೇನು ತಿಳಿಯದಿದ್ದರು ಇತರೆ ಪುಸ್ತಕಗಳಲ್ಲಿನ ವಿಷಯಗಳನ್ನು ಹೇಳುವವರು ಕೂಡ ಗುರುಗಳಾಗಿಯೇ ಲೆಕ್ಕಿಸಲ್ಪಡುತ್ತಿದ್ದಾರೆ. ಈ ದೇವರಿಗೆ ಹೀಗೆ ಪೂಜೆ ಮಾಡಬೇಕೆಂದು ನಿಯಮ ಹೇಳುವವನು ಕೂಡ ಗುರುವೇ ಆಗುತ್ತಿದ್ದಾನೆ. ಕೆಲವರು ತಲೆಕೂದಲುಗಳು ಗಡ್ಡ ಬೆಳೆಸಿದಷ್ಟುಮಾತ್ರಕ್ಕೆ ಗುರುಗಳಾಗುತ್ತಿದ್ದಾರೆ. ಕೆಲವರೇನೊ ಕಾಷಾಯ (ಕಾವಿ) ವಸ್ತ್ರಗಳು ಧರಿಸಿ ಆಶ್ರಮಗಳು ಕಟ್ಟಿಸಿಕೊಂಡರೆ ಗುರುಗಳಾಗಿ ಹೋಗುತ್ತಿದ್ದಾರೆ. ಮತ್ತೆ ಕೆಲವರು ಹೆಸರಿದ್ದು ಮರಣಿಸಿದ ವೀರಬ್ರಹ್ಮಯ್ಯನವರ ಫೋಟೋ ಇಟ್ಟುಕೊಂಡು ಆತನ ಹೆಸರಿನಿಂದ ಗುರುಗಳಾಗಿ ಹೋದವರು ಕೂಡ ಇದ್ದಾರೆ. ಜ್ಯೋತಿಷ್ಯ ಹೇಳುವವರು, ಬಾವಿಯಲ್ಲಿ ನೀರನ್ನು ಕುರಿತು ಹೇಳುವವರು, ಕೊನೆಗೆ ಇಲ್ಲದ ವಾಸ್ತುವನ್ನು ಕುರಿತು ಹೇಳುವವರು ಕೂಡ ಗುರುಗಳಾಗಿ ಚಲಾವಣೆ ಆಗುತ್ತಿರುವ ಈ ಕಾಲದಲ್ಲಿ ನಿಜ ಗುರು ಯಾರೆನ್ನುವ ವಿಷಯ ಪ್ರಶ್ನಾರ್ಥಕ. ನಿಜ ಗುರುವನ್ನು ಹುಡುಕಿರಿ ಎಂದು ಹೇಳಿದರೂ, ನಮಗೆ ಮನೆ ಹತ್ತಿರವಿರುವ ಗುರುವನ್ನು ಬಿಟ್ಟು ಎಲ್ಲಿಯೋ ಇರುವ ಗುರುವಿನೊಂದಿಗೆ ನಮಗೇನು ಕೆಲಸ ಎನ್ನುವವರು ಕೂಡ ಇದ್ದಾರೆ. ನಾವು ಕೇಳುವ ಬೋಧನೆ ಏನು, ಯಾವ ಗುಂಪಿಗೆ ಸೇರಿರುವುದೆಂದು ಆಲೋಚಿಸದೆ, ಆಗಿನ ಅನುಕೂಲತೆಯನ್ನು ನೋಡಿ ಕೊಳ್ಳುವವರು ಕೂಡ ಇದ್ದಾರೆ. ಎಲ್ಲವನ್ನು ಮೀರಿ ಪ್ರಪಂಚ ವಿಷಯಗಳಲ್ಲಿ ಲಾಭಬರುವಂತೆ, ಕೋರಿಕೆಗಳು ನೆರವೇರುವಂತೆ, ಮಂತ್ರವೋ ತಂತ್ರವೋ ಹೇಳುವವರನ್ನು ದೊಡ್ಡ ಗುರುಗಳಾಗಿ ಆರಾಧಿಸುವುದು ಈದಿನ ನೋಡುತ್ತಲೇ ಇದ್ದೇವೆ. ಬಾಬಾಗಳ ಹತ್ತಿರಕ್ಕೆ ಹೋಗುತ್ತಲೇ ನಮ್ಮ ಸಂಸಾರಗಳು ಚೆನ್ನಾಗಿರುತ್ತಿವೆ, ಆತನನ್ನು ಮೀರಿದ ಗುರುವೇ ಇಲ್ಲಹೋಗು ಅನ್ನುವವರಿರು ವುದು ಕೂಡ ನೋಡುತ್ತಲೇ ಇದ್ದೇವೆ. ಇಷ್ಟುಜನ ಗುರುಗಳಲ್ಲಿ ಯಾವ ಪ್ರಪಂಚಲಾಭವನ್ನು

ಕುರಿತು ಹೇಳದ ನಿಜ ಗುರುವನ್ನು ಯಾರು ಲೆಕ್ಕಿಸುತ್ತಾರೆ. ಎಲ್ಲರ ಗುರುಗಳ ಮಾರ್ಗಗಳಿಗು ಅನ್ಯಮಾರ್ಗವಾದ ನಿಜಗುರು ಬೋಧನೆ ಯಾರಿಗೆ ರುಚಿಸುತ್ತದೆ. ಅದೂ ಅಲ್ಲದೆ ಉಳಿದ ಗುರುಗಳು ಖಾಲಿ ಇಲ್ಲದೇ ಭೂಮಿಮೇಲೆ ಎಲ್ಲಾ ವೇಳೆಯಲ್ಲಿ ಎಲ್ಲಾ ಕಾಲಗಳಲ್ಲಿ ಇರುತ್ತಾರೆ. ಆದರೆ ನಿಜ ಗುರುವು ಹಾಗಲ್ಲದೆ ಕೆಲವು ಸಾವಿರಾರು ವರ್ಷಗಳಿಗೆ ಒಂದುಸಲ ಜನ್ಮ ತೆಗೆದುಕೊಂಡು ಬರುತ್ತಾನೆ. ಯಾವ ಕಾಲದಲ್ಲಿಯೋ ಒಂದುಸಲ ಭೂಮಿಮೇಲಕ್ಕೆ ಬಂದು ತನ್ನ ಯಥಾರ್ಥಬೋಧನೆ ತಿಳಿಸಿದರೂ, ಮೊದಲಿನಿಂದ ಪರಂಪರೆಗಳಾಗಿ ಬೇರೂರಿದ ಬೋಧನೆಗಳ ಮುಂದೆ ಅದು ದೊಡ್ಡದಾಗಿ ಪ್ರಚಾರದೊಳಗೆ ಬರುವುದಿಲ್ಲ. ಒಂದುವೇಳೆ ತಿಳಿದರೂ ಎಷ್ಟೋಜನ ಗುರುಗಳು ಹೇಳಿರುವುದು ಅಲ್ಲವೆಂದು ಈತನು ಬೇರೆ ಮಾರ್ಗದಲ್ಲಿ ಹೇಳುತ್ತಿದ್ದಾನೆ, ಈತನ ಬೋಧನೆ ಯಾರು ಕೇಳಬೇಡಿರಿ, ಓದಬೇಡಿರೆಂದು ಹೇಳಿಕೊಳ್ಳುತ್ತಾರೆ. ಸ್ವಾರ್ಥಗುರುಗಳು ನಿಜಗುರು ವೊಂದರ ಬೋಧನೆಗಳನ್ನು ಹೊರಗೆ ಬಾರದಂತೆ ಜಾಗ್ರತೆಯಿಂದಿರುತ್ತಾರೆ. ಅವುಗಳನ್ನು ಕುರಿತು ದುಷ್ಪ್ರಚಾರ ಕೂಡ ಮಾಡುತ್ತಾರೆ. ಎಲ್ಲಾ ವಿಧಗಳಲ್ಲಿ ಯಾರು ಸಮರ್ಥಿಸದ ನಿಜ ಗುರುವೊಂದರ ಬೋಧನೆಗಳ ಮೇಲೆ ಆಸಕ್ತಿ ಬೆಳೆಸಿಕೊಂಡು ಅವುಗಳನ್ನು ತಿಳಿದುಕೊಳ್ಳುವವನು ಧನ್ಯನಾಗುತ್ತಾನೆ. ಸದ್ಗುರು ಒಂದರ ಬೋಧನೆಗಳೆನ್ನುವ ದೈವ ವಿಷಯಗಳನ್ನು ಭಕ್ತಿಹೊಂದಿ ಛಲದಿಂದ ತಿಳಿಯುವುದರಿಂದ ಏನು ಅಲ್ಲದ ಪರಮಾತ್ಮನನ್ನು ಸೇರುವುದಕ್ಕೆ ಮಾರ್ಗ ಏರ್ಪಡುತ್ತದೆ. ದೇವರನ್ನು ತಿಳಿದುಕೊಳ್ಳಬೇಕೆಂದು ಜ್ಞಾನವನ್ನು ತಿಳಿದುಕೊಂಡು ಆ ಮಾರ್ಗದಲ್ಲಿ ನಾವಿದ್ದೇವೆಂದುಕೊಳ್ಳುವವರೆಲ್ಲ ಆಶ್ರಯಿಸಿರುವುದು ಗುರುವನ್ನಾ ಅಥವಾ ಬೋಧಕನನ್ನಾ ಎಂದು ಒಂದುಸಲ ತಿರುಗಿ ನೋಡಿಕೊಳ್ಳಬೇಕು. ಕರ್ಮಗಳನ್ನು ನಾಶ ಮಾಡುವ ವಿಧಾನ ತಮ್ಮ ಮಾರ್ಗದಲ್ಲಿ ಇದೆಯೋ ಇಲ್ಲವೋ ಆಲೋಚಿಸಿಕೊಳ್ಳಬೇಕು. ಪ್ರಪಂಚ ಕೋರಿಕೆಗಳು ಆಯುಸ್ಸಿರುವವರೆಗೇ ಯೆಂದು, ಅವುಗಳಿಂದ ಸುಖ ಹೊರತು ಮೋಕ್ಷ ಬರುವುದಿಲ್ಲವೆಂದು, ದೇವರು ತಿಳಿಯುವುದಿಲ್ಲವೆಂದು ತಿಳಿದು ನಿಜಗುರುವಿಗಾಗಿ ಅನ್ವೇಷಣೆ ಮಾಡಬೇಕು.

**ಆ ॥ ದಿನ ದಿನ ತಿಂದವರಿಗೆಲ್ಲ**
**ಜನ್ಮಗಳ ರೋಗ ಹೋಗಿ**
**ಕಪಟ ಜನ್ಮ ವ್ಯಾದಿ ಕಾಣಿಸದಂತೆ ಮಾಡುತ್ತದೆ**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಸಾವಿನಲ್ಲಿಯು ಹುಟ್ಟುವುದರಲ್ಲಿಯು ಸಾಕ್ಷಿಭೂತನಾಗಿ, ಆ ಸಮಯದಲ್ಲಿ ಏನು ನಡೆಯುತ್ತಿದೆಯೋ ಯಾರಿಗೂ ತಿಳಿಯದ ರಹಸ್ಯವನ್ನು ತಿಳಿದ ಓ ಆತ್ಮಾ! ಕೇಳು. ಬಟ್ಟೆಬಯಲಾಗಿ ಕೂಡ ಯಾರಿಗೂ ತಿಳಿಯದ ಪರಮಾತ್ಮ ಬೋಧನೆಯನ್ನು ಕುರಿತು ಪ್ರತ್ಯೇಕವಾಗಿ ಲೋಕದೊಳಗೆ ಬಂದಿರುವ ಗುರು ಮಾತ್ರವೇ ತಿಳಿಸುತ್ತಾನೆ. ಹೇಳುವವನು ಸಾಮಾನ್ಯನು ಅಲ್ಲ, ಹೇಳಲ್ಪಡುವುದು ಕೂಡಾ ಸಾಮಾನ್ಯವಾದುದು ಅಲ್ಲ. ಬೋಧನೆಯನ್ನನುಸರಿಸಿ ಬೋಧಿಸುವವನ್ಯಾರೋ ತಿಳಿಯಬಹುದು. ಪರಮಾತ್ಮ ಅಂಶದಿಂದ ಬಂದವನು ವೇಷದಲ್ಲಾಗಲಿ, ಬೋಧನೆಯಲ್ಲಾಗಲಿ ಉಳಿದ ಯಾವ ಗುರುವನ್ನು ಹೋಲಿರುವುದಿಲ್ಲ. ಆತನ ಬೋಧನೆಯನ್ನು ಗ್ರಹಿಸಿ ಎಲ್ಲರ ಗುರುಬೋಧನೆಗಳಂತೆ ಒಂದುಸಲ ಉಪದೇಶ ಕೊಡಿಸಿಕೊಂಡಷ್ಟು ಮಾತ್ರಕ್ಕೆ ಸರಿಹೋಗುವುದಿಲ್ಲವೆಂದು ತಿಳಿದು, ಪ್ರತಿ ದಿನ ಜ್ಞಾನ ತಿಳಿದುಕೊಳ್ಳುತ್ತಾ ಕೆಲವು ವರ್ಷಗಳು ಹೊಸ ಜ್ಞಾನವನ್ನು ತಿಳಿದುಕೊಂಡು ಅದನ್ನು ಮೆಲಕು ಹಾಕಿಕೊಳ್ಳುತ್ತಾ ಜೊತೆಯಾಗಿ ಬಂದ, ನಮಗಿರುವ ಜನ್ಮಗಳ ವ್ಯಾಧಿ ಹೋಗಿ ಮೋಕ್ಷವೆನ್ನುವ ಆರೋಗ್ಯ ಉಂಟಾಗುತ್ತದೆ. ಅದೇ ಪರಮ ರಹಸ್ಯವಾದ ಅಚೇಲ, ಅದೇ ಯಾರಿಗೂ ತಿಳಿಯದ ಬಟ್ಟೆಬಯಲು, ಅದೇ ಜೀವಿಯ ಗಮ್ಯಸ್ಥಾನ. ಪರಮಪದವೆನ್ನುವ ಗಮ್ಯವನ್ನು ಸೇರುವವರೆಗು ಜನನ ಮರಣಗಳೆನ್ನುವ ಪ್ರಯಾಣ ತಪ್ಪುವು ದಿಲ್ಲವೆಂದು ತಿಳಿಯಬೇಕು.

**ಅ ॥ ಇಂತಹ ಪರಮ ಗೌಪ್ಯ ಯಾರು ಅರಿಯರು**
**ಅರಿತಂತವರು ಪುನಃ ಬರುವುದಿಲ್ಲ**
**ತಿರುಗಿ ಬಾರದ ಮರೆಯು ತಿಳಿಯುವುದು ಕಷ್ಟ**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಗಿಡದಲ್ಲಿ ಗಿಡದ ಆಕೃತಿಯನ್ನು ಹೋಲಿದ್ದು, ಪ್ರಾಣಿಗಳಲ್ಲಿ ಪ್ರಾಣಿ ಆಕೃತಿಯನ್ನು ಹೋಲಿದ್ದು, ಮನುಷ್ಯನಲ್ಲಿ ಮನುಷ್ಯನ ಆಕೃತಿಯನ್ನು ಹೋಲಿದ್ದು ಅನೇಕ ಶರೀರಗಳಲ್ಲಿ ಆ ಶರೀರಗಳಂತೆ ಅನೇಕ ಆಕಾರಗಳು ಹೊಂದಿರುವ ಓ ಆತ್ಮಾ! ಕೇಳು. ಪ್ರಪಂಚ ಸಂಬಂಧ ಇಲ್ಲದೆ ಪರಮಾತ್ಮನನ್ನು ತಿಳಿಯುವಂತಹ ಬೋಧನೆ ತಿಳಿಸುವ ಗುರು ದೊರೆಯುವುದು ದುರ್ಲಭ. ಒಂದುವೇಳೆ ದೊರೆತರೂ ನಾವು ತಿಳಿದುಕೊಳ್ಳುವುದು ಮತ್ತಷ್ಟು ದುರ್ಲಭ. ಏಕೆಂದರೇ ಮಾಯೆ ಹೆಜ್ಜೆಹೆಜ್ಜೆಗು ಅಡ್ಡ ತಗುಲಿ ಆ ಬೋಧನೆಗಳಿಗೆ ದೂರ ಮಾಡುವ ಪ್ರಮಾಧವಿದೆ. ಎಷ್ಟೋ ಪರಮಗೋಪ್ಯವಾದಂತಹ ದುರ್ಲಭವಾದ ಅತಿ ಕಷ್ಟವಾದ ಬೋಧನೆಯನ್ನು ಸಾಮಾನ್ಯವಾಗಿ ಯಾರು ತಿಳಿಯಲಾರರು. ತಿಳಿದವರು ಮರುಜನ್ಮವಿಲ್ಲದೆ ಪುನಃ ಹುಟ್ಟುವುದಿಲ್ಲ. ಪುನಃ ಜನ್ಮಿಸದೆ ಪರಮಾತ್ಮನೊಳಗೆ ಐಕ್ಯವಾಗುವುದಕ್ಕೆ ಬೇಕಾದ ರಹಸ್ಯ ತಿಳಿಯುವುದು ನದಿಗೆ ಎದುರೀಜುವಂಥಾದ್ದು. ಆದರೂ ಛಲದಿಂದ ತಿಳಿದವನು ಜೀವಾತ್ಮ, ಆತ್ಮ, ಪರಮಾತ್ಮ ಎನ್ನುವ ತ್ರೈತವನ್ನು ಬಿಟ್ಟು ಪರಮಾತ್ಮ ಎನ್ನುವ ಏಕವಾಗಿ ಬದಲಾಗಿಹೋಗುತ್ತಾನೆ.

**ಆ ॥ ಮಂಗಳ ನಿಮಗೆ ಮದ್ಗುರು ಚಂದ್ರಮಾ**
**ಮಂಗಳ ನಿಮಗೆ ಮಹಿ ಪ್ರಕಾಶ**
**ಮಂಗಳ ಮಾಡಿ ಮತ್ತೆಮತ್ತೆ ಮುಗಿಯುತ್ತೇನೆ**
**ಅಖಿಲ ಜೀವಸಂಗ ಆತ್ಮಲಿಂಗ.**

**ಭಾವಾರ್ಥ :–** ಒಂದನೇ ಆತ್ಮನಾದ ಜೀವಾತ್ಮನು ನಾನು, ಲೆಕ್ಕಕ್ಕೆ ಮೂರನೆ ಆತ್ಮವಾದ ಪರಮಾತ್ಮನನ್ನು ತಿಳಿಯುವುದಕ್ಕೆ, ಎರಡನೆ ಆತ್ಮವಾದ ನಿನ್ನನ್ನು ಅಡ್ಡ ಇಟ್ಟುಕೊಂಡು ಪ್ರತಿ ಭಾವದ ಮೊದಲಿನಲ್ಲಿ ಓ ಆತ್ಮಾ! ಎಂದು ಸಂಬೋಧಿಸಿ ಹೇಳುವುದು ಒಂದು ವಿಧವಾಗಿ ಒಳ್ಳೆಯದು ಅಲ್ಲದಿದ್ದರು ತಪ್ಪಿಲ್ಲ. ಅದಕ್ಕೆ ಕ್ಷಮಿಸಿ ಈಗ ಕೊನೆಯಲ್ಲಿ ಕೂಡ ನಿನಗೇ ಹೇಳುವ ವಿಷಯ ಕೇಳು. ನೀನು

ನಿನ್ನಹೃದಯದಲ್ಲಿ ಜ್ಞಾನ ಪ್ರಕಾಶವನ್ನು ಹೊಂದಿದ ಚಂದ್ರನಾಗಿ ಎಲ್ಲಾ ವಿಷಯಗಳನ್ನು ನೀನೇ ಹೇಳಿ ನನ್ನಿಂದ ಬರೆಯಿಸಿ, ನನ್ನಲ್ಲಿ ಗುರುವಾಗಿದ್ದು ಜೀವಿಯಾದ ನನ್ನನ್ನು ಶಿಷ್ಯನನ್ನಾಗಿ ಮಾಡಿಕೊಂಡ ನನ್ನ ಗುರುವನ್ನು ನಾನು ಶುಭಕರವಾದ ಕೊನೆಯ ಸ್ಥಿತಿಯನ್ನು, ಮಂಗಳಕರವಾದ ಮೋಕ್ಷವನ್ನು ಕೋರುತ್ತಿದ್ದೇನೆ. ಕರ್ಪೂರ ಹಾರತಿಗೆ ಮಂಗಳ ಹಾರತಿ ಎನ್ನುತ್ತಿದ್ದಾರೆ. ಕರ್ಪೂರ ಅಗ್ನಿಗೆ ಕರಗಿಹೋದಂತೆ ನನ್ನ ಕರ್ಮ ಜ್ಞಾನಾಗ್ನಿಗೆ ಕರಗಿಹೋಗಿ ನಾನು ಶೂನ್ಯವಾಗಿ ಹೋಗುವಂತೆ ಆಶೀರ್ವದಿಸೆಂದು ಮಂಗಳ ಮದ್ಗುರು ಚಂದ್ರಮಾ ಎನ್ನುತ್ತಿದ್ದೇನೆ. ಶುಭಕರ, ಮಂಗಳಕರ, ಶ್ರೀಯುತ ಎಂದು ಹೋಲಿಸಲ್ಪಡುವ ಪರಮಾತ್ಮಾ! ನನ್ನನ್ನು ನಿನ್ನಲ್ಲಿ ಸೇರಿಸಿಕೊಳ್ಳುವುದಕ್ಕೆ ಈ ಬರಹಗಳು ಉಪಯೋಗ ಪಡಬೇಕೆಂದು ಕೊನೆಯದಾಗಿ ಮಂಗಳ ಹೇಳಿ ಮತ್ತೆ ಮತ್ತೆ ಮುಗಿಯುತ್ತಾ ಮುಗಿಸುತ್ತಿದ್ದೇನೆ.

# ಸಮಾಪ್ತಿ

**ಅಸತ್ಯವನ್ನು ಸಾವಿರಮಂದಿ ಹೇಳಿದರೂ ಅದು ಸತ್ಯವಲ್ಲ,**
**ಸತ್ಯವನ್ನು ಸಾವಿರ ಮಂದಿ ಅಲ್ಲಗಳೆದರೂ ಅದು ಅಸತ್ಯವಲ್ಲ.**